# ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ

(ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕನ್ನು ಪರಿಗಣಿಸಿ)

# Nomadic Kadu Gollas : A Development Study

(With Special Reference to Sira Taluk of Tumukur District)

(ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ವಿಷಯದ ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕ

ಜಯರಾಮ ಕೆ.

ಮಾರ್ಗದರ್ಶಕ

ಡಾ. ಕೆ.ಎಂ. ಮೇತ್ರಿ

ಪ್ರಾಧ್ಯಾಪಕರು





ಬುಡಕಟ್ಟು ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

# ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ

(ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕನ್ನು ಪರಿಗಣಿಸಿ)

# Nomadic Kadu Gollas : A Development Study

(With Special Reference to Sira Taluk of Tumukur District)

(ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ವಿಷಯದ ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕ

ಜಯರಾಮ ಕೆ.

ಮಾರ್ಗದರ್ಶಕ

ಡಾ. ಕೆ.ಎಂ. ಮೇತ್ರಿ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

# ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ

(ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕನ್ನು ಪರಿಗಣಿಸಿ)

## Nomadic Kadu Gollas : A Development Study

(With Special Reference to Sira Taluk of Tumukur District)

(ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ವಿಷಯದ ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)



ಬುಡಕಟ್ಟು ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

## ದೃಢೀಕರಣ ಪತ್ರ

ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ (ತುಮಕೂರು ಜಿಲ್ಲೆ, ಶಿರಾ ತಾಲ್ಲೂಕನ್ನು ಪರಿಗಣಿಸಿ) ಎಂಬ ನಿಬಂಧವನ್ನು ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ವಿಷಯದ ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಶ್ರೀ ಜಯರಾಮ ಕೆ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಕೆ.ಎಂ. ಮೇತ್ರಿ
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೧. ೧೦. ೨೦೦೫

# ಪ್ರಮಾಣ ಪತ್ರ

ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ (ತುಮಕೂರು ಜಿಲ್ಲೆ, ಶಿರಾ ತಾಲ್ಲೂಕನ್ನು ಪರಿಗಣಿಸಿ) ಎಂಬ ನಿಬಂಧವನ್ನು ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ವಿಷಯದ ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಡಾ. ಕೆ.ಎಂ.ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಜಯರಾಮು ಕೆ.

( ಜಯರಾಮು ಕೆ. )
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ :

# ಪರಿವಿಡಿ

# ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಎಂ.ಫಿಲ್. ಅಧ್ಯಯನ ಮಾಡಲು ಅನುವು ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಮತ್ತು ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗಬಾಬು ಅವರಿಗೆ,

ನನ್ನ ಪ್ರಬಂಧದ ವಿಷಯವನ್ನು ಸೂಚಿಸಿ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವಂತೆ ಹಲವಾರು ವಿಷಯಗಳನ್ನು ತಿಳಿಸುವುದರ ಜೊತೆಗೆ ನನ್ನ ಸಂಶೋಧನೆಯನ್ನು ಯಶಸ್ವಿಯಾಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ ನನ್ನ ಪ್ರೀತಿಯ ಮಾರ್ಗದರ್ಶಕರಾದ ಡಾ.ಕೆ.ಎಂ.ಮೇತ್ರಿ ಅವರಿಗೆ,

ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಚಲುವರಾಜು, ಪ್ರತಿ ಹಂತದಲ್ಲೂ ಸಂಶೋಧನೆಗೆ ಸಹಕಾರ ನೀಡಿದ ಡಾ.ಕೇಶವನ್ ಪ್ರಸಾದ್, ಡಾ.ಎ.ಎಸ್.ಪ್ರಭಾಕರ್, ಡಾ.ಗಂಗಾಧರ ದೈವಜ್ಞ ಹಾಗೂ ನನ್ನ ಎಲ್ಲ ಬೋಧಕೇತರ ವರ್ಗದವರಿಗೆ, ಸಂಶೋಧನೆಯ ಸಮಯದಲ್ಲಿ ಪುಸ್ತಕ ಗಳನ್ನು ದೊರಕಿಸಿಕೊಟ್ಟ ಅಕ್ಷರ ಗ್ರಂಥಾಲಯ, ಸಿರಿಗನ್ನಡ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೆ,

ನನ್ನ ಅಧ್ಯಯನಕ್ಕೆ ಪ್ರಮುಖ ರೂವಾರಿಗಳಾದ ಅಭಿವೃದ್ಧಿ ಅಧ್ಯಯನ ವಿಭಾಗದ ಡಾ.ಸಿದ್ಧಗಂಗಮ್ಮ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಡಿ.ಡಿ.ಎಂ.ವಿಭಾಗದ ಡಾ.ಕೆ.ರಾಮಕೃಷ್ಣಯ್ಯ, ಕನ್ನಡ ಅಧ್ಯಯನ ಕೇಂದ್ರದ ಡಾ.ಚಿತ್ತಯ್ಯ ಪೂಜಾರ್ ಹಾಗೂ ಸಂಶೋಧನಾ ಸಮಯದಲ್ಲಿ ವಿವಿಧ ರೀತಿಯಲ್ಲಿ ಸಹಕಾರ ನೀಡಿದ ಪಿಎಚ್.ಡಿ.ವಿದ್ಯಾರ್ಥಿಗಳಾದ ಜಗದೀಶ್, ಸವಿತಾ, ಬಸವರಾಜ ಎ.ಡಿ., ಹುಲಗಪ್ಪ, ಮಾಣಿಕಪ್ಪ ಅವರಿಗೆ,

ಎಂ.ಫಿಲ್. ಅಧ್ಯಯನದ ಪ್ರಮುಖ ಆಕರ ನನ್ನ ಸಮುದಾಯ. ತಮ್ಮ ಅಲೆಮಾರಿ ಜೀವನದ ಪ್ರತಿ ಹೆಜ್ಜೆಯನ್ನು ಆತಂಕದಲ್ಲೇ ಕಳೆಯುತ್ತಿರುವ ಇವರು ಪ್ರೀತಿಯಿಂದ ಹತ್ತಿರ ಕರೆದು ಸಂಶೋಧನೆಗೆ ಅಗತ್ಯ ಮಾಹಿತಿ ನೀಡಿದ ಎಲ್ಲಾ ಅಲೆಮಾರಿ ಕುರಿಗಾರರಿಗೆ ಹಾಗೂ ಶಿರಾ ತಾಲ್ಲೂಕಿನ ೧೪೮ ಕಾಡುಗೊಲ್ಲರಹಟ್ಟಿಯ ಎಲ್ಲಾ ಹಿರಿಯರಿಗೆ, ಊರಿನ ಮುಖಂಡರಿಗೆ, ಮಹಿಳೆಯರಿಗೆ, ಹಾಗೂ ವಿಶೇಷವಾಗಿ ಮುದ್ದೇನಹಳ್ಳಿ ಗೊಲ್ಲರಹಟ್ಟಿಯ ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ಕಾಳಪ್ಪನವರಿಗೆ, ದೊಡ್ಡಬಾಣಗೆರೆ ರಂಗನಾಥ ಹೊಸಕೋಟೆ ಗೊಲ್ಲರಹಟ್ಟಿಯ ಮಹಾಲಿಂಗಪ್ಪ,

ಶೆಟ್ಟಿಗಾನಹಳ್ಳಿ ಗೊಲ್ಲರಹಟ್ಟಿಯ ತಿಮ್ಮರಾಯಪ್ಪ, ದೇವರಹಟ್ಟಿ ಚಿಕ್ಕಣ್ಣ, ಡಿ.ಎಂ.ಕರಿಯಪ್ಪ, ಹುಲಿಕುಂಟೆ ಜನಾರ್ಧನಗೌಡ, ಹೊನ್ನಗೊಂಡನಹಳ್ಳಿ ಗೊಲ್ಲರಹಟ್ಟಿಯ ಚಿಕ್ಕಣ್ಣ ಮಾರಜ್ಜನಹಟ್ಟಿಯ ಶ್ರೀನಿವಾಸ, ಬಂಗಾರಿಹಟ್ಟಿಯ ಪುಟ್ಟೀರಯ್ಯ, ಬೇವಿನಹಳ್ಳಿ ಪೂಜಾರ್ ಚಿತ್ತಯ್ಯನ, ನಾಗರಾಜ್, ಆಶ್ರಮ ಶಾಲೆ ಶಿಕ್ಷಕರಾದ ನಾಗರಾಜ್ ಅವರಿಗೆ ಹಾಗೂ ತಾಲ್ಲೂಕಿನ ಶೈಕ್ಷಣಿಕ ಅಂಕಿ ಅಂಶಗಳನ್ನು ಸಂಗ್ರಹಿಸುವಲ್ಲಿ ಎಲ್ಲಾ ರೀತಿಯ ಸಹಕಾರ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಕ್ಷೇತ್ರ ಸಂಪನ್ಮೂಲನಾಧಿಕಾರಿಗಳಾದ ಕಲ್ಲಪ್ಪ, ಗೋಪಾಲ ಮತ್ತು ಯೋಗನರಸಿಂಹ, ಬಿದರಕೆರೆ ಅವರಿಗೆ,

ಕಾಡುಗೊಲ್ಲ ಸಮುದಾಯ ಜಾನಪದದ ಗಣಿ ಎಂದೇ ನಂಬಿ ಇವರ ಕಲೆಯನ್ನು ದೇಶಕ್ಕೆ ಪರಿಚಯಿಸಿದ ಮತ್ತು ಪ್ರೀತಿಯಿಂದ ನನ್ನ ಸಂಶೋಧನೆಗೆ ಸೂಕ್ತ ಮಾಹಿತಿ ನೀಡಿದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಅವರಿಗೆ,

ಎರಡು ತಿಂಗಳ ಕಾಲ ನನ್ನ ಜೊತೆ ಕ್ಷೇತ್ರಕಾರ್ಯದಲ್ಲಿ ಹೆಜ್ಜೆ ಹೆಜ್ಜೆಗೂ ನನಗೆ ಸಹಕಾರ ನೀಡಿ ಕ್ಷೇತ್ರಕಾರ್ಯ ಯಶಸ್ವಿಯಾಗಲು ಕಾರಣನಾದ ಸಹೋದರ ಎಂ.ಎಸ್.ಈರಣ್ಣನಿಗೆ, ಸಣ್ಣೀರಯ್ಯ, ಚಿತ್ತಮ್ಮ, ಹಗಲೆಲ್ಲ ಕ್ಷೇತ್ರಕಾರ್ಯ ಮಾಡಿ ದಣಿದ ಮನಕ್ಕೆ ಮುದ ನೀಡಿದ ಅಳಿಯ ಸೇವಂತ ಕುಮಾರ್‌ಗೆ ಮತ್ತು ಮೇಣಿಗನಹಟ್ಟಿಯ ದಾಸಪ್ಪ ದ್ಯಾವರನಾಗಣ್ಣ ಉತ್ತಣ್ಣ ಅವರುಗಳಿಗೆ,

ತಾಲ್ಲೂಕಿನ ಎಲ್ಲಾ ಅಂಗನವಾಡಿ ಕೇಂದ್ರಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಲು ನೆರವು ನೀಡಿದ ಸಮಗ್ರ ಶಿಶು ಅಭಿವೃದ್ಧಿ ಅಧಿಕಾರಿಗಳು, ಇದೇ ಕಚೇರಿಯ ಪ್ರಥಮ ದರ್ಜೆ ಸಹಾಯಕರಾದ ಸಿದ್ಧೇಶ್ ಅವರಿಗೆ ಮತ್ತು ಇತರೆ ಸಹುದ್ಯೋಗಿಗಳಿಗೆ, ಅರಣ್ಯ ಇಲಾಖೆ, ಪಶುವೈದ್ಯ ಇಲಾಖೆ, ಆರಕ್ಷಕ ಠಾಣೆ, ಸಮುದಾಯದ ಎಲ್ಲಾ ಪೂಜಾರಪ್ಪನವರಿಗೆ, ಬೆಂಗಳೂರು ಸಂಶೋಧನಾ ವಿದ್ಯಾರ್ಥಿಗಳಾದ ಎಂ.ಮಲ್ಲೇಶ್, ನವೀನ ಕುಮಾರ್, ಆರ್.ಶಿವರಾಜ್, ಅನಿಕೇತನ ವಿದ್ಯಾರ್ಥಿ ನಿಲಯದ ಕುಪ್ಪೇರಾವ್, ಉತ್ತಂಗಿ ವೀರೇಶ, ಶೇಖರಾಚಾರಿ, ರಾಘುವೇಂದ್ರ, ಸಂಗಪ್ಪ ತೆಲಿಗಿ, ಹಂದ್ರಾಳ್, ಜಯಶಂಕರ್, ಜೋಗಣ್ಣ, ದೂರಣ್ಣ ಸಾರ್ ಅವರುಗಳಿಗೆ,

ತಾಲ್ಲೂಕಿನ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ, ಕಿರಿಯ ಹಿರಿಯ ಪ್ರೌಢಶಾಲೆ ಶಿಕ್ಷಕರಿಗೆ ಪದವಿಪೂರ್ವ, ಪದವಿ ಕಾಲೇಜುಗಳ ಪ್ರಾಚಾರ್ಯರಿಗೆ ಮತ್ತು ಅಧ್ಯಾಪಕರಿಗೆ, ಸಹನೆಯಿಂದ ಅಂದವಾಗಿ ಡಿ.ಟಿ.ಪಿ.ಮಾಡಿಕೊಟ್ಟ ಬಿ.ರಶ್ಮಿಕೃಪಾಶಂಕರ್ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

**ಜಯರಾಮ ಕೆ.**

## ಅಧ್ಯಾಯ ೧

# ಅಧ್ಯಯನ ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪೀಠಿಕೆ

೧.೨. ಅಧ್ಯಯನದ ಸ್ವರೂಪ

೧.೩. ಅಧ್ಯಯನದ ಉದ್ದೇಶ

೧.೪. ಅಧ್ಯಯನದ ಪ್ರಾಮುಖ್ಯತೆ

೧.೫. ಅಧ್ಯಯನದ ವಿಧಾನ

೧.೬. ಇದುವರೆಗಿನ ಅಧ್ಯಯನಗಳು

# ೧

# ಅಧ್ಯಯನ ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

## ೧.೧. ಪೀಠಿಕೆ

ಮಾನವ ಭೂಮಿಯ ಮೇಲೆ ಜನಿಸಿದ ಆರಂಭದಲ್ಲಿ ಪೂರ್ಣಪ್ರಮಾಣದ ಜೀವನವನ್ನು ಕಾಡುಗಳಲ್ಲಿಯೆ ಆರಂಭಿಸಿದ. ಪ್ರಕೃತಿಯಲ್ಲಿ ದೊರೆಯುತ್ತಿದ್ದ ಗೆಡ್ಡೆಗೆಣಸು, ಹಣ್ಣು ಹಂಪಲು, ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಬದುಕುತ್ತಿದ್ದ. ಕಾಲಾನಂತರ ಜನಸಂಖ್ಯೆ ಹೆಚ್ಚುತ್ತಾ ಹೋಯಿತು. ಆಹಾರ ಸಾಲದಾಯಿತು. ಆಗ ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡಲು ಆರಂಭಿಸಿದ. ಪ್ರಕೃತಿಯ ವಿಕೋಪಗಳನ್ನು ತಪ್ಪಿಸಿಕೊಳ್ಳಲು ಗುಹೆ ಮರದ ಪೊಟರೆಗಳ ಆಶ್ರಯವನ್ನು ಪಡೆದನು. ಒಟ್ಟಾರೆ ಪ್ರಕೃತಿಯೆ ಅಂದಿನ ಮಾನವನ ಜೀವಾಳವಾಗಿತ್ತು. ಆದರೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದ. ಆದಿಮಾನವ ಪ್ರಕೃತಿಯಲ್ಲಾಗುವ ಏರು ಪೇರುಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ಆ ಕಾರಣದಿಂದ ಅವುಗಳನ್ನು ಎದುರಿಸಲು ಅನೇಕ ಉಪಾಯಗಳನ್ನು ಕಂಡುಕೊಂಡಿದ್ದನು. ಬೇಟೆಯ ಸಂಸ್ಕೃತಿಯ ಕಾಲಘಟ್ಟದಲ್ಲಿ ಪ್ರಾಣಿಗಳ ಮಾಂಸವೆ ಆಹಾರವಾಯಿತು. ಪ್ರಾಣಿಗಳ ಚರ್ಮ ಅವನ ಹೊದಿಕೆಯಾಯಿತು. ಅಲೆಮಾರಿ ಜೀವನದಿಂದ ನೆಲೆನಿಂತು ಜೀವನ ಆರಂಭಿಸಿದ. ಮಾನವ ಕಾಡಿನಲ್ಲಿ ಕಂಡ ಕಂಡ ಪ್ರಾಣಿಗಳನ್ನು ಬೇಟೆಯಾಡಿ ತರುವ ಬದಲು ತನ್ನ ಬುದ್ಧಿವಂತಿಕೆಯಿಂದ ಅವನನ್ನು ಹಿಡಿದು ಪಳಗಿಸಿದ. ನಂತರ ಅವುಗಳೇ ಅವನ ಸಾಕು ಪ್ರಾಣಿಗಳಾದವು. ಜೊತೆಗೆ ಮಾನವ ಭೌತಿಕವಾಗಿ ವಿಕಾಸವಾದಂತೆ ಬದುಕಿಗೆ ನೆಲೆಯನ್ನು ಕಂಡುಕೊಂಡನು. ಕಾಲಾನಂತರದಲ್ಲಿ ಬೌದ್ಧಿಕವಾಗಿ ವಿಕಾಸವಾದಂತೆ ಕೃಷಿ ಸಂಸ್ಕೃತಿಯನ್ನು ಕಂಡುಕೊಂಡನು. ಜೀವನದ ಮೂಲಭೂತ ಅವಶ್ಯಕತೆಗಳನ್ನು ತಿಳಿದುಕೊಂಡು ಅಲೆಮಾರಿ ಜೀವನದ ಬದಲಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಗೊಳ್ಳಲು ಆರಂಭಿಸಿದನು. ತನ್ನ ವಾಸಕ್ಕಾಗಿ ಗುಹೆಗಳಿಂದ ಹೊರ ಬಂದು ತನ್ನದೆ ಆದ ಯೋಗ್ಯ ಸ್ಥಳಗಳನ್ನು ಆಯ್ಕೆಮಾಡಿಕೊಂಡು ಹಟ್ಟಿಗಳನ್ನು ನಿರ್ಮಿಸಿಕೊಂಡನು. ಪರಿಣಾಮವಾಗಿ ಕೃಷಿಪದ್ಧತಿಯು ಅಸ್ತಿತ್ವಕ್ಕೆ ಬಂದಿತು. ಹಟ್ಟಿಗಳು ಗ್ರಾಮಗಳಾಗಿ ರೂಪಾಂತರವಾದವು. ಹಾಗೂ ವೈವಿಧ್ಯಮಯ ಬದುಕು ಹಲವು ಶೋಧನೆಗಳಿಗೆ ಪ್ರೇರಣೆಯಾಯಿತು.

ಕೃಷಿ ಮತ್ತು ಪಶುಪಾಲನೆಯು ಮಾನವ ಮೂಲ ವೃತ್ತಿಗಳಾದವು. ಇವು ಪ್ರಕೃತಿಯೊಡನೆ ನೇರ ಸಂಬಂಧ ಹೊಂದಿರುವ ವೃತ್ತಿಗಳಾದವು. ಈ ಮೂಲ ವೃತ್ತಿಗಳನ್ನು ಅವಲಂಬಿಸಿಕೊಂಡ ಇತರೆ ವೃತ್ತಿಗಳು ಬೆಳೆದವು. ಬೇಟೆಯ ವೃತ್ತಿಯಿಂದ ಹೊರಬಂದ ನಂತರ ಕೃಷಿಯು ಮಾನವನ ಪ್ರಪ್ರಥಮ ಕೈಗೊಂಡ ವೃತ್ತಿಯಾಗಿದೆ. ತನಗೆ ಅವಶ್ಯವಾದಂತಹ ಆಹಾರ, ವಸತಿ, ಬಟ್ಟೆ ಇವುಗಳನ್ನು ಪೂರೈಸಿ ಕೊಳ್ಳುವುದಕ್ಕಾಗಿ ಕೆಲಸ ಮೂಲ ವೃತ್ತಿಯಾಗಿದೆ. ಸಾಮಾನ್ಯವಾಗಿ ಮೂಲ ವೃತ್ತಿ ಅಥವಾ ಪ್ರಥಮ ವೃತ್ತಿಯು ಮಾನವನಿಗೂ ಪ್ರಕೃತಿಗೂ ನೇರ ಸಂಬಂಧವನ್ನು ಕಲ್ಪಿಸುತ್ತದೆ. ಕೃಷಿಯು ಪಶುಪಾಲನೆಯನ್ನು ಒಳಗೊಂಡಿರುವುದರಿಂದ ಒಂದನ್ನು ಬಿಟ್ಟು ಒಂದು ಉಳಿಯಲಾರವು. ಈ ರೀತಿಯ ಸಂಬಂಧಗಳಿಗೆ ಭಾರತದ ನಿಸರ್ಗವೆ ಕಾರಣವೆಂದು ಹೇಳಬಹುದು. ಆದಿಮಾನವನ ಸಾಕು ಪ್ರಾಣಿಗಳಾದ ಕುರಿ ಮತ್ತು ಮೇಕೆಗಳನ್ನು ಸಂಗೋಪನೆ ಮಾಡುತ್ತಾ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದ. ಪ್ರಸ್ತುತ ಕಾಲದಲ್ಲಿಯೂ ಅಲೆಮಾರಿ, ಅರೆ ಅಲೆಮಾರಿ ಹಾಗೂ ಸ್ಥಾನಿಕ ವಿಧಾನಗಳನ್ನು ಅನುಸರಿಸಿ ಕುರಿ ಸಂಗೋಪನೆ ಮಾಡುತ್ತಾ ಬಂದಿದ್ದಾನೆ. ನಿಸರ್ಗದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತಾ ತಾನು ಬದುಕುತ್ತಿದ್ದಾನೆ(ಮೇತ್ರಿ ಕೆ.ಎಂ., ೨೦೦೦:೮-೯). ಈ ಅಧ್ಯಯನವು ಸಹ ಅಲೆಮಾರಿ ಜೀವನ ವಿಧಾನವನ್ನು ಅನುಸರಿಸಿ ಕುರಿಸಂಗೋಪನೆ ಮಾಡುವ ಅಲೆಮಾರಿ ಕಾಡುಗೊಲ್ಲ ಸಮುದಾಯದ ಪರಧಿಗೆ ಬರುವ ಅಧ್ಯಯನವಾಗಿದೆ.

ಜೀವನ ನಿರ್ವಹಣೆಗೋಸ್ಕರ ಕುಟುಂಬ ಸಮೇತ ವಲಸೆ ಬಂದು, ಕುರಿಗಳಿಗೆ ಮೇವು ನೀರು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವರ್ಷವಿಡಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುವವರನ್ನ ಅಲೆಮಾರಿ ಕಾಡುಗೊಲ್ಲರೆಂದು, ವಲಸಿಗ ಕುರಿಗಾರರೆಂದು ಕರೆಯುತ್ತಾರೆ. ಕುರಿ ಸಂಗೋಪನೆಗೆಂದು ಬಂದ ಇವರು ತಮಗೆ ಅನುಕೂಲವೆನಿಸಿದ ಭೂಪ್ರದೇಶಕ್ಕಿಂತ ಕುರಿಗಳಿಗೆ ಎಲ್ಲಿಯ ವಾಯುಗುಣ ಹೊಂದಿಕೊಳ್ಳುತ್ತದೆಯೊ, ಎಲ್ಲಿ ನೀರು ಮೇವು ಸಮೃದ್ಧವಾಗಿ ದೊರೆಯುತ್ತದೆಯೂ ಅಂತಹ ಪ್ರದೇಶಗಳಲ್ಲಿ ಇವರು ಜೀವನ ಸಾಗಿಸುತ್ತಾರೆ. ಅಲೆಮಾರಿ ಕಾಡುಗೊಲ್ಲರು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಾದ್ಯಾಂತ ಕಾಣಸಿಗುತ್ತಾರೆ. ಅವುಗಳೆಂದರೆ, ದೇವರಹಳ್ಳಿ, ಚಂಗಾವರ, ಗೊಲ್ಲಹಳ್ಳಿ, ಪಟ್ಟನಾಯಕನಹಳ್ಳಿ, ಬಾಣಗೆರೆ, ಕಾರ್ಪೆಹಳ್ಳಿ, ಮುದ್ದೇನಹಳ್ಳಿ, ಹಿಂಗದಕಟ್ಟೆ, ಬೇವಿನಹಳ್ಳಿ ಈ ಗ್ರಾಮಗಳಲ್ಲಿ ಸುಮಾರು ಒಂದು ಲಕ್ಷ ಕುರಿಗಳನ್ನು ಕಾಣಬಹುದು. ಇಲ್ಲಿ ಇವರದೇ ಆದ ಸ್ವಂತ ಮನೆಗಳನ್ನು ಸಹ ಕಾಣಬಹುದಾಗಿದೆ. ಆ ಮನೆಗಳಲ್ಲಿ ವಯಸ್ಸಾದ ಕುಟುಂಬದ ಹಿರಿಯರು, ಬಾಣಂತಿ ಯರು, ಚಿಕ್ಕಪುಟ್ಟ ಮಕ್ಕಳು ವಾಸಿಸುತ್ತಾರೆ. ಇಲ್ಲವಾದರೆ ಮನೆಗಳಿಗೆ ಬೀಗ ಹಾಕಿರುತ್ತಾರೆ. ಕುಟುಂಬದ ಸದಸ್ಯರೆಲ್ಲರೂ ಕುರಿ ಸಂಗೋಪನೆಯಲ್ಲಿ ತೊಡಗಿರುತ್ತಾರೆ. ಆದರೆ ಧಾರ್ಮಿಕ ಹಾಗೂ ಜೀವನಾವರ್ಥಕ ಆಚರಣೆಗಳೆಲ್ಲವೂ ಸ್ವಗ್ರಾಮದಲ್ಲಿಯೆ ಜರುಗುತ್ತವೆ.

ಇವರಲ್ಲಿ ಕೆಲವರಿಗೆ ಅಲ್ಪಸ್ವಲ್ಪ ಭೂಮಿ ಇದ್ದರೂ ಅದನ್ನು ಬೀಳು ಬಿಟ್ಟಿರುತ್ತಾರೆ. ಇಲ್ಲವೆ ವರ್ಷಕ್ಕಿಷ್ಟು ಎಂಬ ಕರಾರಿನ ಮೇಲೆ ಯಾರಿಗಾದರೂ ಕೆಲವು ವರ್ಷಗಳಿಗೆ ಉಳುಮೆ ಮಾಡಲು ನೀಡಿರುತ್ತಾರೆ. ಇವರು ಜೀವನಕ್ಕೆ ಕುರಿಗಳನ್ನೆ ನಂಬಿ ಅವುಗಳ ಸಂಗೋಪನೆಗಾಗಿ ಬೆಟ್ಟ ಗುಡ್ಡ, ಹೊಲ ಗದ್ದೆ, ನದಿ, ತೊರೆ, ಕೆರೆ ಕಾಲುವೆ ದಂಡೆಗಳಲ್ಲಿ ಗುಡಾರಗಳನ್ನು ಹೂಡಿರುತ್ತಾರೆ. ಅಲ್ಲಿ ನೀರು ಮೇವು ದೊರೆಯುವವರೆಗೆ ಮಾತ್ರ ನೆಲಿಸಿದ್ದು ನಂತರ ಗುಡಾರ ಬದಲಿಸುತ್ತಾರೆ. ಇಲ್ಲಿ ಸರಕು ಸರಂಜಾಮುಗಳನ್ನು ಹೊತ್ತಯ್ಯುಲು ಕತ್ತೆ, ಹಸುಗಳನ್ನು ಹಾಗೂ ಕಾಡು ಪ್ರಾಣಿಗಳಿಂದ ಕಳ್ಳ ಕಾಕರಿಂದ ಕುರಿಗಳನ್ನು ರಕ್ಷಿಸಲು ನಾಯಿಗಳನ್ನು ಸಾಕಿರುತ್ತಾರೆ. ಇವರು ಹಬ್ಬ ಜಾತ್ರೆ, ಮದುವೆ, ದೈವಾಚಾರಣೆ ಇತ್ಯಾದಿ ಸಂದರ್ಭಗಳಲ್ಲಿ ಕುಟುಂಬದ ಹಿರಿಯರು ಅಥವಾ ಹೊಗಲೆ ಬೇಕಾದಂತವರು ಮಾತ್ರ ತಮ್ಮ ಸ್ವಗ್ರಾಮಗಳಿಗೆ ಒಂದೆರಡು ದಿನಗಳ ಮಟ್ಟಿಗೆ ಹೋಗಿ ಬರುತ್ತಾರೆ. ಕುರಿ ಮೇಕೆಗಳನ್ನು ಯಾವುದೆ ಕಾರಣಗಳಿಗೂ ಸ್ವಗ್ರಾಮಗಳಿಗೆ ಹಿಂದಿರುಗಿಸುವುದಿಲ್ಲ. ಆದರೆ ವರ್ಷಗಳಿಗೊಮ್ಮೆ ನಡೆಯುವ ಜಾತ್ರೆ, ದೇವರ ಉತ್ಸವಗಳಿಗೆ ಹಾಗೂ ಊರ ದೇವರು ಜಲ್ದಿಗೆ ಹೋಗುವಂತಹ ಸಮಯಗಳಲ್ಲಿ ದೇವರ ವಿಶೇಷ ಪೂಜೆ ಮಾಡಿಸಲು ಸಾಮಾನ್ಯವಾಗಿ ಬರುತ್ತಾರೆ. ನಾಗರಿಕತೆಯ ಸ್ಪರ್ಶ ಇಂದಿಗೂ ಸಹ ಕಾಣದೆ ಇರುವುದು, ಅಲ್ಲದೆ ಮತದಾನದ ಪ್ರಜ್ಞೆಯು ಇರದ ಸಾಮಾಜಿಕ ಮತ್ತು ಆರ್ಥಿಕವಾಗಿ ತೀರ ಹಿಂದುಳಿದ ವಿಶಿಷ್ಟ ಅಲೆಮಾರಿ ಸಮುದಾಯವಾಗಿದೆ. ಈ ಸಮುದಾಯವನ್ನು ಪ್ರಸ್ತುತ ಸಮಾಜಕ್ಕೆ ಪರಿಚಯಿಸುವುದರ ಜೊತೆಗೆ ಸರ್ಕಾರದ ಗಮನ ಸೆಳೆಯಬೇಕಿದೆ. ಆದ್ದರಿಂದ ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿಯ ಅಂಶಗಳಿಗೆ ಮಹತ್ವ ನೀಡುವುದರ ಜೊತೆಗೆ ಅವರ ಅಲೆಮಾರಿ ಬದುಕನ್ನು ಹಾಗೂ ಸಾಮಾಜಿಕ ಜೀವನವನ್ನು ಅನಾವರಣಗೊಳಿಸುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ತುಮಕೂರು ಜಿಲ್ಲೆಯು ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆ. ಇದು ೧೦೫೪೭ ಸಾವಿರ ಚದುರ ಕಿ.ಮೀ. ಇದ್ದು ಒಟ್ಟು ೨೫.೮೦ ಲಕ್ಷ ಜನ ಸಂಖ್ಯೆಯನ್ನು ಹೊಂದಿದೆ(http:/en.wikipedia.org/wiki/sira).

ತುಮಕೂರು ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳಿದ್ದು, ಇದರಲ್ಲಿ ಒಕ್ಕಲಿಗ, ಲಿಂಗಾಯತ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಹಾಗೂ ಜಿಲ್ಲೆಯ ಉತ್ತರ ಭಾಗದಲ್ಲಿ ಹೆಚ್ಚು ಕಾಡುಗೊಲ್ಲ ಸಮುದಾಯದವರೇ ನೆಲೆಸಿದ್ದಾರೆ. ಇವರನ್ನು ಹಿಂದುಳಿದ ಬುಡಕಟ್ಟು(Backward Tribe) ಪಟ್ಟಿಗೆ ಸೇರಿಸಿದ್ದಾರೆ. ಇವರು ಪಶುಪಾಲನಾ ಸಂಸ್ಕೃತಿಯ ಪ್ರತ್ಯೇಕವಾದ ಸಮುದಾಯವಾಗಿದೆ. ಇವರಲ್ಲಿ ಇಂದಿಗೂ ಅಲೆಮಾರಿ, ಅರೆ ಅಲೆಮಾರಿ ಜೀವನವನ್ನು ನಡೆಸುತ್ತಿದ್ದಾರೆ. ಆದಕಾರಣ ಶಿರಾ ತಾಲ್ಲೂಕಿನ ಭೌಗಳಿಕ ಹಿನ್ನೆಲೆಯಲ್ಲಿ ಈ ಅಧ್ಯಯನ ಸಾಗಿದೆ.

ಕುಂತು ಕುಣಿಗಲ್ ಗೆದ್ದ | ನಿಂತು ಮಗುದವ ಗೆದ್ದ |
ಮಾತಿನಲಿ ಗೆದ್ದ ಮಧುಗಿರಿ | ತುಂಬಿಯ ಹೂವಿನಲಿ |
ಗೆದ್ದ ತುಮಕೂರು

ಇದು ತುಮಕೂರಿನ ಹಿರಿಮೆ ಗರಿಮೆಯನ್ನು ಸಾರುವ ಪುಟ್ಟ ಪದ್ಯ, ರಾಜಮಹಾರಾಜರು, ವೀರಯೋಧರು, ಸಾದುಸಂತರು ಬಾಳಿ ಬೆಳಗಿದ ಹಿರಿಮೆ ತುಮಕೂರಿಗಿದೆ. ಶೌರ್ಯ, ಪರಾಕ್ರಮ, ತ್ಯಾಗ ಬಲಿದಾನಗಳ ರೋಚಕ ಚಿತ್ರ ತುಮಕೂರಿನ ಇತಿಹಾಸದಲ್ಲಿ ಹಾಸು ಹೊಕ್ಕಾಗಿದೆ. ಅಪೂರ್ವ ಜಾನಪದ ಸಂಸ್ಕೃತಿ, ಅನನ್ಯ ಕವಿ ಪರಂಪರೆ, ಮೈನವಿರೇಳಿಸುವ ಗುಡಿ ಗೋಪುರಗಳು, ಸರ್ವಧರ್ಮ ಸಹಿಷ್ಣುತೆಗಳಿಂದ ತುಮಕೂರು ಭಾರತೀಯ ಸಂಸ್ಕೃತಿಯಲ್ಲೂ ಅನನ್ಯತೆ ಗಳಿಸಿದೆ. ಜಾನಪದ ಸಾಹಿತ್ಯ, ಹಾಡು ಕುಣಿತ, ಉಡುಗೆ ತೊಡುಗೆಗಳಿಂದ ತುಮಕೂರು ಸಂಸ್ಕೃತಿಯ ಆಗರವಾಗಿದೆ (ಯಣ್ಣೆಕಟ್ಟೆ ಚಿಕ್ಕಣ್ಣ ೨೦೦೩:೧).

ಜಾತ್ರೆ ಹಾಗೂ ವಿಶೇಷ ದಿವಸಗಳಲ್ಲಿ ನಡೆಯುವ ಬಗೆ ಬಗೆಯ ಕಲಾ ಪ್ರದರ್ಶನ ತುಮಕೂರು ಸೀಮೆಯ ಸಾಂಸ್ಕೃತಿಕ ಹಿರಿಮೆಗೆ ಸಾಕ್ಷಿಯಾಗಿವೆ. ಒಟ್ಟಾರೆ ಹಲವು ಭಾಷೆ, ಧರ್ಮ, ಜಾತಿಗಳ ಒಡಲೊಳಗೆ ತರತರನಾದ ಭಾವಗಳಿದ್ದರೂ ಜಾತ್ರೆಯ ಕಾಲದಲ್ಲಿ ತೋರುವ ಶ್ರದ್ಧೆ, ನಂಬಿಕೆ, ನಡಾವಳಿ ಗಳಿಂದ ಭಾವೈಕ್ಯತೆಗೆ ಕಾರಣವಾಗಿವೆ. ಗಂಡಿಹಳ್ಳಿ ಮಠದ ಬುಡೇನ್ ದತ್ತಾತ್ರೇಯ ಜಾತ್ರೆ, ಚಿಕ್ಕನಾಯಕನ ಹಳ್ಳಿಯ ತಾತಯ್ಯನ ಜಾತ್ರೆ, "ಹಾಲಪ್ಪನ ಗುಡ್ಡಯ ಮಸೀದಿ" ಮೊದಲೂರು ಗ್ರಾಮದ ಬಾಬಯ್ಯನ ಹಬ್ಬ, ಹೀಗೆ ತಾಲ್ಲೂಕಿನ ಹಿಂದೂ ಮುಸ್ಲಿಂ ಜನಾಂಗದ ಭಾವೈಕ್ಯತೆಗೆ ಹಾಗೂ ಧರ್ಮ ಸಹಿಷ್ಣುತೆಗೆ ಮಾದರಿಗಳಾಗಿವೆ. ಈ ಎಲ್ಲಾ ಜಾತ್ರೆಗಳ ಕಾಲದಲ್ಲಿ ಕಲಾ ಜರುಗುವ ಪ್ರದರ್ಶನ, ದೇಶಿ ಕಲಾಸಂಸ್ಕೃತಿಗಳ ಪ್ರದರ್ಶನಕ್ಕೆ ಆಸ್ಪದವಾಗುತ್ತಿವೆ. ಜಾತ್ರೆಯ ಮೂಲಕ ಜನಪದ ಕಲೆಗಳ ಉಳಿಯುವಿಕೆಗೂ ಕಾರಣವಾಗುತ್ತಿವೆ.

## ಶಿರಾ ತಾಲ್ಲೂಕಿನ ಒಂದು ಸ್ಥೂಲ ಪರಿಚಯ

ಶಿರಾ ಪಟ್ಟಣವು ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ತುಮಕೂರಿನಿಂದ ಚಿತ್ರದುರ್ಗಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ೪(ಬಾಂಬೆ-ಚೆನ್ನೈ)ರಲ್ಲಿ ೫೦ ಕಿ.ಮೀ. ಸಾಗಿದರೆ, ಶಿರಾ ಪಟ್ಟಣ ಸಿಗುತ್ತದೆ. ಇದು ೧.೫೪೯ ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು, ಇದರಲ್ಲಿ ಐದು ಹೋಬಳಿಗಳು ಇವೆ. ೨೦೧೧ರ ಜನಗಣತಿಯ ಪ್ರಕಾರ ೧,೭೪,೭೦೨ ಜನಸಂಖ್ಯೆಯನ್ನು ಹೊಂದಿದ್ದು, ಇದರ ಒಟ್ಟು ಜನಸಂಖ್ಯೆಯಲ್ಲೂ ಶೇ.೫೦.೦೫೬ರಷ್ಟು, ಪುರುಷರು ಶೇ.೫೨ರಷ್ಟು, ಶೇ.೪೮ರಷ್ಟು ಮಹಿಳೆಯರನ್ನು ಹೊಂದಿದೆ. ಒಟ್ಟಾರೆ ಜನಸಂಖ್ಯೆಯಲ್ಲಿ ಸಾಕ್ಷರತೆಯ ಮಟ್ಟ ಶೇ.೬೭ರಷ್ಟು. ಇದು ರಾಷ್ಟ್ರೀಯ ಸಾಕ್ಷರತೆಗೆ ಹೋಲಿಸಿದಾಗ ಶೇ.೫೯.೫ರಷ್ಟು ಮಾತ್ರ. ಇದರಲ್ಲಿ ಪುರುಷರ ಸಾಕ್ಷರತೆಯ ಮಟ್ಟ ಶೇ.೭೨ರಷ್ಟು, ಮಹಿಳೆಯರದ್ದು ಶೇ.೬೨ರಷ್ಟು. ಶಿರಾ ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಆರು ವರ್ಷದ ಒಳಗಿನ ಮಕ್ಕಳು ಶೇ.೧೩ರಷ್ಟು ಕಾಣಬಹುದು(http:/en.wikipedia.org/wiki/sira).

ಶಿರಾ ತಾಲ್ಲೂಕಿನ ಪೂರ್ವಕ್ಕೆ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳಿದ್ದು, ಈಶಾನ್ಯ ಮತ್ತು ಪೂರ್ವಕ್ಕೆ ಪಾವಗಡ ಹಾಗೂ ಆಂಧ್ರ ಪ್ರದೇಶವೂ, ಆಗ್ನೇಯಕ್ಕೆ ತುಮಕೂರು ತಾಲ್ಲೂಕು, ದಕ್ಷಿಣಕ್ಕೆ ಗುಬ್ಬಿ ತಾಲ್ಲೂಕು, ನೈರುತ್ಯಕ್ಕೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ವಾಯುವ್ಯ ಮತ್ತು ಪಶ್ಚಿಮಕ್ಕೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕುಗಳು ಇವೆ.

ಈ ತಾಲ್ಲೂಕಿನಲ್ಲಿ ೧೧,೪೩,೯೨೭ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದ್ದು, ಇದನ್ನೆ ೧೫ ಭಾಗಗಳಾಗಿ ವಿಂಗಡಿಸಿದೆ. ಅರಣ್ಯ ಪ್ರದೇಶ ಅಥವಾ ಕಾವಲು ಮತ್ತು ಕಾಯ್ದಿಟ್ಟ ಅರಣ್ಯ ಪ್ರದೇಶಗಳಾಗಿ ವಿಂಗಡಿಸಿದ್ದಾರೆ. ಜಾಲಿ, ಹೊಂಗೆ, ಬೇವು, ಆಲ, ಅರಳಿ, ಕಮರ, ಬೇಟೆ, ಹೊನ್ನೆಯಂತಹ ಬೆಲೆ ಬಾಳುವ ಮರಗಳನ್ನು ಸಹ ಕಾಣಬಹುದಾಗಿದೆ. ಮರಳು ಮಿಶ್ರಿತ ಕೆಂಪುಮಣ್ಣು, ಕಪ್ಪುಮಣ್ಣು, ಮರಳು ಮಿಶ್ರಿತ ಜೇಡಿಮಣ್ಣನ್ನು ಹೊಂದಿರುವ ತಾಲ್ಲೂಕಿನಲ್ಲಿ ನೆಲಗಡಲೆ (ಶೇಂಗಾ) ಪ್ರಮುಖ ವಾಣಿಜ್ಯ ಬೆಳೆಯನ್ನು ಬೆಳೆಯಲಾಗುತ್ತಿದೆ. ಇದರೊಂದಿಗೆ ಭತ್ತ, ರಾಗಿ, ನವಣೆ, ಹುರಳಿ, ಅವರೆ, ಹೆಸರು, ತೊಗರಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಸುವರ್ಣಮುಖಿ. ಈ ಪ್ರದೇಶದ ಮುಖ್ಯನದಿ ಇದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ(ಮಾಹಿತಿ : ಅರಣ್ಯ ಇಲಾಖೆ, ಶಿರಾ).

ಈ ತಾಲ್ಲೂಕಿನ ಜನ ವ್ಯವಸಾಯದೊಂದಿಗೆ ಪ್ರಮುಖ ಕಸುಬು ಪಶುಪಾಲನೆಯಾಗಿದೆ. ಹೀಗಾಗಿ ಹೈನು ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಆಗುತ್ತದೆ. ಇದರ ಜೊತೆ ಜೊತೆಯಲ್ಲೂ ಪ್ರಮುಖವಾದ ಸ್ವಯಂ ಉದ್ಯೋಗವೆಂದರೆ ಬೀಡಿ ಸುತ್ತುವುದು, ಕಂಬಳಿ ನೇಯುವುದು, ಪ್ರಮುಖ ಗೃಹಕೈಗಾರಿಕೆಗಳಾಗಿವೆ. ಕಾಡುಗೊಲ್ಲರು, ಒಕ್ಕಲಿಗರು, ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಶಿರಾ ಪಟ್ಟಣದಲ್ಲಿ ಮುಸ್ಲಿಂ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿನ ಮತ್ತೊಂದು ವಿಶೇಷ ಅಂಶವೆಂದರೆ ಹಿಂದೂ ಮುಸ್ಲಿಂರ ಭಾವೈಕ್ಯತೆ. ಈ ಭಾವೈಕ್ಯತೆಗೆ ಎರಡು ಉದಾಹರಣೆಗಳೆಂದರೆ, ಗಂಡಿಹಳ್ಳಿಮಠ : ಕರ್ನಾಟಕದಲ್ಲಿ ದತ್ತ ಪಾದುಕೆಗೆ ಪೂಜೆಯನ್ನು ಬಾಬಬುಡನ್ ಗಿರಿಯಲ್ಲಿ ಪೂಜೆ ಮಾಡಿದಂತೆ, ಗಂಡಿಹಳ್ಳಿಮಠದಲ್ಲಿ ಒಬ್ಬ ಕಾಡುಗೊಲ್ಲ ಸಮುದಾಯದವರು ಒಂದು ಶತಮಾನಕ್ಕಿಂತ ಹಿಂದಿನಿಂದಲೂ ಪೂಜಿಸುತ್ತಾ ಬಂದಿದ್ದಾರೆ. ಪ್ರತಿ ವರ್ಷ ಫೆಬ್ರವರಿ-ಮಾರ್ಚ್ ತಿಂಗಳಲ್ಲೂ ವಿಜ್ರಂಭಣೆಯಿಂದ ಆಚರಿಸುತ್ತಾರೆ. ಸುತ್ತಮುತ್ತಲಿನವರಲ್ಲದೆ, ಆಂಧ್ರಪ್ರದೇಶದ ಹಿಂದೂಪುರ, ಮಡಕಶಿರಾ ತಾಲ್ಲೂಕಿನಿಂದಲೂ ಬಂದು ಹರಕೆ ತೀರಿಸುತ್ತಾರೆ. ತಮ್ಮ ಬೇಡಿಕೆಗಳು ಈಡೇರಲು ಗುಡಿಯಲ್ಲಿ ಒಂದು ರಾತ್ರಿ ನಿದ್ದೆ ಮಾಡಬೇಕೆಂಬ ನಿಯಮ ಇರುವುದರಿಂದ ಹಲವಾರು ಭಕ್ತರು ಗುಡಿಯಲ್ಲಿಯೆ ವಾಸಮಾಡುತ್ತಿದ್ದಾರೆ. ಇದೇ ರೀತಿ ಮೊದಲೂರುನಲ್ಲಿ ಪ್ರತಿ ವರ್ಷ ಆಚರಿಸುವ ಬಾಬಯ್ಯನ ಹಬ್ಬದಲ್ಲಿ ಆ ಊರಿನ ಎಲ್ಲಾ ಜಾತಿಯ ಜನರು ಶ್ರದ್ಧಾಭಕ್ತಿಗಳಿಂದ ಪೂಜೆ ಮಾಡುವುದು ವಿಶೇಷ.

## ಶಿರಾ ಹೆಸರಿನ ಹಿನ್ನೆಲೆ

ಶಿರಾ ಹಿಂದೆ ಸಿರ್ಯಾ, ಸಿರಾ ಎಂದು, ಇಂದು ಸಹ 'ಸಿರಾ' ಎಂದೇ ಕರೆಯಲಾಗುತ್ತಿದೆ. ಇಲ್ಲಿನ ಕೆರೆಯ ಮುಂಭಾಗದಲ್ಲಿ ಹಲ್ಕೂರು ಎಂಬ ಗ್ರಾಮವು ಇದ್ದು, ಇದು ಹಾಲಿಸಿಂದ ಸಮೃದ್ಧಿಯಾಗಿದ್ದರಿಂದ ಹೆಚ್ಚು ಹೆಚ್ಚು ಹೈನುಗಾರಿಕೆಗೆ ಖ್ಯಾತಿಯನ್ನು ಪಡೆದಿತ್ತು. ಹಲ್ಕೂರು, ಹಾಲು ಕರೆಯುವ ಊರು ಎಂಬ ನಾಮಗಳನ್ನು ಹೊಂದಿರುವ ಈ ಗ್ರಾಮದಲ್ಲಿ 'ಸಿರಿಯಣ್ಣ' ಎಂಬ 'ಕಾಡುಗೊಲ್ಲ' ಸಮುದಾಯದ ಪಶುಪಾಲಕನಿದ್ದ. ಅವನು ಪ್ರತಿದಿನ ತನ್ನ ಪಶುಗಳೊಂದಿಗೆ ಮೇಯಿಸಲು ಕೆರೆಯ ಅಂಗಳಕ್ಕೆ ಬರುತ್ತಿದ್ದು, ಒಂದು ದಿವಸ ಅವನ ಆಲೋಚನೆ ಮಾಡಿ ಆ ಕೆರೆಯ ಸುತ್ತಮುತ್ತ ಹುಲ್ಲು-ನೀರು ಯಥೇಚ್ಛವಾಗಿ ಸಿಗುತ್ತಿದ್ದರಿಂದ ತಾತ್ಕಾಲಿಕವಾಗಿ ಒಂದು ಹುಲ್ಲಿನ ಗುಡಿಸಲನ್ನು ನಿರ್ಮಿಸಿಕೊಂಡು ವಾಸ ಮಾಡಲಾರಂಭಿಸಿದನು. ಅನಂತರ ಒಂದಕ್ಕೊಂದು ಕುಟುಂಬಗಳು ಹೆಚ್ಚಾಗಿ ಆ ಪ್ರದೇಶಕ್ಕೆ ಸಿರಿಯಣ್ಣ ಗುಡಿಸ್ಲು ಅಥವಾ ಸಿರಿಯ, ಸಿರ್ಯಾ, ಸಿರಾ ಈಗ ಶಿರಾ ಆಗಿದೆ. ಇಂದು ನಮ್ಮ ಭಾರತೀಯ ಜನಪದ ಐತಿಹ್ಯದಲ್ಲಿ ಹೆಸರಿನ ಮೂಲದ ಊರುಗಳನ್ನು ಇಂದಿಗೂ ಕಾಣಬಹುದಾಗಿದೆ. ಶಿರಾ ಪಟ್ಟಣದಲ್ಲಿ 'ನಾಗಜ್ಜಿ ಗುಡಿಸಲು' ಇಂದು ಎನ್.ರಂಗನಾಥಪುರ, ಇದೇ ರೀತಿ ರಾಯಣ್ಣನ ದುರ್ಗ, ದೇವರಾಯನ ದುರ್ಗ, ಬೊಮ್ಮನಕುಂಟೆ, ಜಂಗಮರಹಳ್ಳಿ, ಕಾಮನಹಟ್ಟಿ, ಹೀಗೆ ಹಲವಾರು ಹೆಸರುಗಳನ್ನು ಇಂದಿಗೂ ಕಾಣಬಹುದಾಗಿದೆ. ಹಾಗೂ ಕೆಲವೊಂದು ಹೇಳಿಕೆಗಳ ಪ್ರಕಾರ ಈ ಪಟ್ಟಣವು ಪಾಳೆಗಾರರ ಆಳ್ವಿಕೆಗಿಂತ ಮುಂಚೆ ಕಸ್ತೂರಿ ರಂಗಪ್ಪ ನಾಯಕ, ಪ್ರದೇಶಗಳನ್ನೆ ಹರಸುತ್ತಾ ಹೋಗುತ್ತಿರುವಾಗ ಪಶುಗಳನ್ನು ಕೆರೆಯ ಅಂಗಳದಲ್ಲಿ ಮೇಯುಸುತ್ತಿದ್ದ ಸಿರಿಯಣ್ಣನನ್ನು ಕುರಿತು ಇಲ್ಲಿ ಒಂದು ಕೋಟೆಯನ್ನು ನಿರ್ಮಿಸುತ್ತೇವೆ. ಅನುಮತಿ ಕೊಡು ಎಂದು ಹೇಳಿದಾಗ, ಅವನು ಆಯಿತು ಜಾಗ ನೀಡುತ್ತೇನೆ. ಆದರೆ ಆ ಪ್ರದೇಶಕ್ಕೆ ನನ್ನ ಹೆಸರನ್ನೆ 'ಸಿರಿಯಾ' ಎಂದು ನಾಮಕರಣ ಮಾಡಬೇಕೆಂದು ಕೇಳಿಕೊಂಡಿದ್ದರಿಂದ ಆ ಪ್ರದೇಶಕ್ಕೆ ಸಿರಾ, ಸಿರ್ಯಾ, ಶಿರಾ ಎಂಬ ಹೆಸರು ಬಂತು. ಈ ಬಗೆಯ ಹೇಳಿಕೆಗಳು ತಾಲ್ಲೂಕಿನಲ್ಲಿ ಮೌಖಿಕ ಇತಿಹಾಸಗಳಾಗಿ ಪ್ರಚಲಿತದಲ್ಲಿ ಇವೆ. ಆದರೆ ಇವೆಲ್ಲ ಸತ್ಯಕ್ಕೆ ದೂರವಾದ ಮಾತು ಎಂಬ ಅಭಿಪ್ರಾಯವನ್ನು ವಿದ್ವಾಂಸರು, ಸಂಶೋಧಕರು, ಬುದ್ಧಿಜೀವಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಶಿರಾದ ಮೂಲಪುರುಷ ಹಲ್ಕೂರು ಗ್ರಾಮದ ಕಾಡುಗೊಲ್ಲನಾದ ಸಿರಿಯಣ್ಣನೆ ಎಂಬುದು ಇವರ ಪ್ರಮುಖ ವಾದವಾಗಿದೆ. ಅಲ್ಲದೆ ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲಿಗೆ ಶಿರಾದಲ್ಲಿ ಮುಸ್ಲಿಂರ ಆಳ್ವಿಕೆ ಆರಂಭಿಸಿದ್ದು ೧೬ನೇ ಶತಮಾದ ನಂತರ ಪಾಳೆಗಾರರ ಆಳ್ವಿಕೆ ಆರಂಭವಾದುದ್ದು. ಆದ್ದರಿಂದ ಅದಕ್ಕಿಂತಲೂ ಹಿಂದೆ ಸಿರಾ ಅಥವಾ ಶಿರಾ ಪಟ್ಟಣ ಇತ್ತು ಎಂಬುದಕ್ಕೆ ದಾಖಲೆಗಳು ಇವೆ. ಆದ್ದರಿಂದ ಮೂಲ ಪುರುಷ 'ಸಿರಿಯಣ್ಣ'ನೆ ಎಂಬುದು ಸತ್ಯಕ್ಕೆ ಹತ್ತಿರವಾದುದು. ಜನಪದದಲ್ಲಿ ವ್ಯಕ್ತಿಯ ಹೆಸರಿನ

ಮೇಲೆ ಊರುಗಳು ನಿರ್ಮಾಣವಾಗಿರುವುದು ಹೊಸದೇನಲ್ಲ, ಆದ್ದರಿಂದ ಶಿರಾದ ಮೂಲಪುರುಷ ಸಿರಿಯಣ್ಣನೆಂದು ಹೇಳಬಹುದಾಗಿದೆ(ಮಾಹಿತಿ: ಚಿಕ್ಕಣ್ಣಯಣ್ಣೆಕಟ್ಟೆ, ೩೦.೦೭.೨೦೦೮).

ಶಿರಾ ಇತಿಹಾಸ ಪ್ರಸಿದ್ಧವಾದ ನಗರ. ಈ ನಗರದ ರಕ್ಷಣೆಗಾಗಿ ಸುಭದ್ರವಾದ ಕೋಟೆ ಇದೆ. ಈ ಕೋಟೆಯನ್ನು ಶಿರಾ ನಗರದ ಪಾಳೆಗಾರನಾದ ರತ್ನಗಿರಿಯ ರಂಗಪ್ಪ ನಾಯಕನು ಕಟ್ಟಿಸಿದನು. ಕೋಟೆ ಪೂರ್ಣಗೊಳ್ಳುವುದಕ್ಕೆ ಮುಂಚೆಯೆ ಬಿಜಾಪುರದ ದಂಡನಾಯಕ ರಣದುಲ್ಲಾಖಾನನು ವಶಪಡಿಸಿಕೊಂಡನು. ಅನಂತರ ರಾಜ್ಯಪಾಲನಾಗಿ ನಿಯುಕ್ತನಾಗಿದ್ದ ಸುಬೇದಾರ ಮಲ್ಲಿಕ್‌ಹುಸೇನ್ ಕೋಟೆಯನ್ನು ಪೂರ್ಣಗೊಳಿಸಿದ. ಕ್ರಿ.ಶ.೧೬೩೮ ರಿಂದ ೧೬೫೦ರವರೆಗೆ ಮಲ್ಲಿಕ್ ಹುಸೇನನು ಸುಬೇದಾರನಾಗಿದ್ದನು.

ನಂತರ ಕ್ರಿ.ಶ.೧೬೮೭ರಲ್ಲಿ ಔರಂಗಜೇಬನು ವಿಜಾಪುರವನ್ನು ವಶಪಡಿಸಿಕೊಂಡು, ಶಿರಾ ಪ್ರಾಂತ್ಯವನ್ನು ಗೆದ್ದು, ಮುಂದೆ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಇದು ಮೊಘಲರ ಮೆಚ್ಚಿನ ಸ್ಥಳವಾಯಿತು. ದಿಲ್‌ವರ್‌ಖಾನನ ಕಾಲದಲ್ಲಿ ೫೦.೦೦೦ ಮನೆಗಳು ಶಿರಾ ನಗರದಲ್ಲಿದ್ದುವು. ಅಲ್ಲಿ ಬೆಂಗಳೂರು ಮತ್ತು ಶ್ರೀರಂಗಪಟ್ಟಣದ ಅರಮನೆಗಳ ಮಾದರಿಯಲ್ಲಿ ಅರಮನೆಯೊಂದನ್ನು ಕಟ್ಟಲಾಗಿದ್ದು, ಇಂದು ಅದರ ಅವಶೇಷವನ್ನು ಮಾತ್ರ ಉಳಿದಿದೆ.

೧೭೫೭ರಲ್ಲಿ ಮರಾಠರು ಶಿರಾವನ್ನು ಆಕ್ರಮಿಸಿಕೊಂಡರು. ಇವರು ಆಳಿದ್ದು ಕೆಲವೆ ವರ್ಷಗಳು ಮಾತ್ರ. ಮುಂದೆ ೧೭೬೧ರಲ್ಲಿ ಹೈದರ್ ಈ ಪ್ರದೇಶವನ್ನು ಗೆದ್ದನು. ಅನಂತರ ಮೈಸೂರು ರಾಜ್ಯಕ್ಕೆ ಸೇರಿ ಹೋಯಿತು. ಹೈದರನಿಗೆ 'ಶಿರಾದ ನವಾಬ'ನೆಂಬ ಬಿರುದು ಇದ್ದುದನ್ನು ನೆನಪಿಸಿಕೊಳ್ಳಬಹುದು.

ಒಟ್ಟಿನಲ್ಲಿ ರತ್ನಗಿರಿಯ ರಂಗಪ್ಪನಾಯಕನಿಂದ ನಿರ್ಮಾಣಗೊಂಡ ಶಿರಾ ಪಟ್ಟಣ ಮೊಘಲರು, ಮರಾಠರು ಮುಂತಾದವರ ಆಳ್ವಿಕೆಗೆ ಒಳಪಟ್ಟಿತು. ಹೀಗಾಗಿ ಇಂದಿಗೂ ಹಿಂದೂಗಳು ಮತ್ತು ಮುಸ್ಲಿಂಮರು ನಗರದಲ್ಲಿ ಸಹಬಾಳ್ವೆ ನಡೆಸುತ್ತಿದ್ದಾರೆ. ಇಲ್ಲಿನ ಜಾಮಾ ಮಸೀದಿ, ಮಲ್ಲಿಕ್ ರಿಹಾನನ ದರ್ಗಾಗಳಲ್ಲಿ ನಡೆಯುವ ಮುಸಲ್ಮಾನರ ಧಾರ್ಮಿಕ ಉತ್ಸವಗಳಲ್ಲಿ ಹಿಂದೂಗಳು ಹಾಗೂ ದುರ್ಗಾಂಬೆ, ಮಾರಮ್ಮನ ಜಾತ್ರೆ ಮುಂತಾದ ಹಿಂದೂ ಉತ್ಸವಗಳಲ್ಲಿ ಮುಸ್ಲಿಂಮರು ಪರಸ್ಪರ ಭಾಗವಹಿಸುತ್ತಾ ಸೌಹಾರ್ದಯುತವಾಗಿ ಬಾಳುತ್ತಿದ್ದಾರೆ. ತಾಲ್ಲೂಕಿನಲ್ಲೆಲ್ಲಾ ಇಂತಹ ಸಹಬಾಳ್ವೆಯ ಬದುಕು ಕಂಡುಬರುತ್ತದೆ.

ಕರ್ನಾಟಕದಲ್ಲಿ ಅನೇಕ ಬುಡಕಟ್ಟು ಸಮುದಾಯಗಳಿವೆ. ಅವುಗಳಲ್ಲಿ ಕಾಡುಗೊಲ್ಲ ಸಮುದಾಯವೂ ಒಂದಾಗಿದೆ. ಈ ಸಮುದಾಯವನ್ನು ವಿವಿಧ ಹೆಸರುಗಳಿಂದ ಕರೆಯುವರು. ಅವುಗಳೆಂದರೆ ಗೊಲ್ಲ, ಅಡವಿ/ಕಾಡುಗೊಲ್ಲ, ಗೊಲ್ಲಗೌಡ, ಗೊಲ್ರನು ಇತ್ತೀಚೆಗೆ ಹಲವು ಸಂಸ್ಕೃತಿಯ ಪ್ರಭಾವದಿಂದ ಯಾದವ ಎನ್ನುವ ಹೆಸರುಗಳಿಂದ ಗುರುತಿಸುತ್ತಾರೆ. ಇವರು ತಮ್ಮ ಅಚಾರ-ವಿಚಾರ, ಸಂಪ್ರದಾಯ, ಪರಂಪರೆ, ಜನನ ಮದುವೆ, ಸಂಸ್ಕಾರ, ನಂಬಿಕೆ, ವೃತ್ತಿ ಹೀಗೆ ಹಲವಾರು ಜನಪದೀಯ ಅಂಶಗಳನ್ನು

ಪ್ರತ್ಯಕವಾಗಿಯೆ ಕಾಯ್ದುಕೊಂಡು ಬಂದವರಾಗಿದ್ದಾರೆ. ಯಾವುದೆ ಒಂದು ಸಮುದಾಯದ ಸಂಸ್ಕೃತಿಯು ನಿಂತ ನೀರಲ್ಲ, ಅದು ಹರಿಯುತ್ತಿರುವ ನೀರಿನಂತೆ, ನಿತ್ಯ ಪರಿವರ್ತನಶೀಲವಾಗಿದೆ. ಆದರೂ ಕೂಡ ಬೇರಾವ ಅನ್ಯ ಸಂಸ್ಕೃತಿಗಳಿಗೆ ಮಾರು ಹೋಗದೆ ತನ್ನದೆ ಆದ ರೂಢಿ, ಸಂಪ್ರದಾಯ, ಆಚರಣೆಗಳನ್ನು ಉಳಿಸಿ, ಬಳಸಿಕೊಂಡು ಬಂದಿರುವ ಕಾಡುಗೊಲ್ಲರ ಸಮುದಾಯದಲ್ಲಿನ ಅಲೆಮಾರಿತನವನ್ನು ಇಂದಿಗೂ ಸಮಗ್ರವಾಗಿ ಅಧ್ಯಯನ ಮಾಡದೆ ಇರುವುದು ದುರದೃಷ್ಟಕರವೆಂದು ಹೇಳಬಹುದು. ಜನಾಂಗೀಯವಾಗಿ ಅಧ್ಯಯನದ ಮಾಡುವ ಉದ್ದೇಶವೆಂದರೆ ಕಾಲ, ಪರಿಸ್ಥಿತಿಗಳಿಗೆ ಅನುಗುಣವಾಗಿ ಇಂತಹ ಸಮುದಾಯದಲ್ಲಿ ಸಂಸ್ಕೃತಿಯ ಕುರುಹುಗಳು ಕಾಲಗರ್ಭದಲ್ಲಿ ಮರೆಯಾಗುತ್ತಿರುವುದರಿಂದ ಜನಾಂಗೀಕ ಅಧ್ಯಯನವು ಬಹಳ ಪ್ರಾಮುಖ್ಯತೆವಾದುದಾಗಿದೆ. ಅವುಗಳನ್ನು ಗ್ರಂಥ ರೂಪದಲ್ಲಿ ಹಿಡಿದಿರುವುದು ಪ್ರಮುಖವಾಗಿದೆ.

ಭಾರತೀಯ ಸಂಸ್ಕೃತಿಯ ಮೂಲ, ಬುಡಕಟ್ಟು ಸಂಸ್ಕೃತಿ, ಇದು ಅನಾದಿಯಾದದ್ದು, ಈ ಕ್ಷೇತ್ರದಲ್ಲಿ ಅನೇಕ ವಿದ್ವಾಂಸರು ಸಂಶೋಧನೆಯನ್ನು ಕೈಗೊಂಡಿದ್ದಾರೆ. ಹರಿಯುವ ಒಸುವಲ್ಲಿ ಬ್ರಹ್ಮಾಂಡವೆ ಹುದುಗಿರುವಂತೆ ಬುಡಕಟ್ಟು ಸಂಸ್ಕೃತಿಯಲ್ಲಿ ಜಗತ್ತೆಲ್ಲ ಹುದುಗಿದೆ. ಪ್ರಾಚೀನ ಅರ್ವಾಚೀನಗಳೆರೆಡೂ ಅದರಲ್ಲಿ ಸ್ಪಂದಿಸಿ ಪರಸ್ಪರ ಕೈಕುಲುತ್ತವೆ. ಅದಕ್ಕಾಗಿ ಆದಿ, ಅಂತ್ಯಗಳಲ್ಲಿ ಅದಕ್ಕೆ ಸಾವಿಲ್ಲ, ಆಧುನಿಕ ಮಾನವನಲ್ಲಿ ಆದಿ ಮಾನವನ ಚೇತನವೆ ಗುಪ್ತಗಾಮಿನಿಯಾಗಿ ಪ್ರವಹಿಸುವಂತೆ, ಬೀಜದಲ್ಲಿ ವೃಕ್ಷ ಅಡಗಿರುವಂತೆ ಆಧುನಿಕ ಕಲೆ, ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳಲ್ಲಿ ಬುಡಕಟ್ಟು ಸಂಸ್ಕೃತಿ ಸುಪ್ತವಾಗಿದೆ. ಈ ಬುಡಕಟ್ಟು ಸಂಸ್ಕೃತಿಯ ಆಯಾ ಸಮುದಾಯದ ನಡವಳಿಕೆಯ ಒಟ್ಟು ಮೊತ್ತವಾಗಿದೆ.

ಒಂದು ಸಮುದಾಯದ ಸಂಸ್ಕೃತಿಯನ್ನು ಸರ್ವತೋಮುಖವಾಗಿ ಅಧ್ಯಯನ ಮಾಡುವಾಗ ಯಾವುದೇ ಸಮುದಾಯದ ಜೀವನ ವಿಧಾನ ಪದ್ಧತಿಗಳಲ್ಲಿ ಆರಂಭದಿಂದ ಇಂದಿನವರೆಗೂ ಎಲ್ಲಾ ದೇಶಗಳಲ್ಲಿಯೂ ಕಾಲ ಕಾಲಕ್ಕೆ ಸಮುದಾಯಗಳಲ್ಲಿ ಪರಿವರ್ತನೆ ಉಂಟಾಗಿ ಹೊಸ ರೂಪ, ನೀತಿ-ರೀತಿಗಳು ರೂಪಿತಗೊಂಡಿವೆ. ಅದಕ್ಕೆ ತಕ್ಕಂತೆ ಮಾನವ ಜನಾಂಗದ ತನ್ನದೆ ಆದ ವೈಶಿಷ್ಟ್ಯತೆಯೊಂದಿಗೆ ದಿಕ್ಕು ದಿಸೆಗಳನ್ನು ಕಂಡುಕೊಳ್ಳುತ್ತಾ ಸಾಗುತ್ತಿವೆ. ಜನ ಸಮೂಹಗಳು ಬೆಳೆದು ಸಮುದಾಯವಾಗಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹೋಗಿ ನಿಂತರೂ, ಮಾನವತೆ ಎಂಬುದನ್ನು ಮರೆಯುವಂತಿಲ್ಲ. ಅವರ ಆಹಾರ ಪಾನೀಯ, ವೇಷ-ಭೂಷಣಗಳಲ್ಲಿ ವ್ಯತ್ಯಾಸ ಕಂಡುಬಂದರೂ ಮಾನವ ಸಮುದಾಯಗಳ ಆಶಯ ಒಲವು, ನಿಲುವು, ವೃತ್ತ, ಪ್ರವೃತ್ತಿಗಳಿರುವುದು, ಸಾಮಾನ್ಯವಾಗಿರುವುದನ್ನು ಎತ್ತಿ ತೋರಿಸುವ ಮಾನವ ಜನಾಂಗದ ಮಹತ್ವದ ಕಾರ್ಯ ಮಾಡುತ್ತಿದೆ, ಈ ಬುಡಕಟ್ಟು ಅಧ್ಯಯನ.

ಯಾವುದೆ ಒಂದು ಸಮುದಾಯದ ಅಧ್ಯಯನವೆಂದರೆ ಆ ಸಮುದಾಯದ ಜನರು ವಾಸಿಸುವ ಪ್ರದೇಶ ಅವರ ಮೌಖಿಕ ಪರಂಪರೆ, ಸಂಪ್ರದಾಯ ಆಚರಣೆ, ರೀತಿ-ನೀತಿ, ನಂಬಿಕೆ, ಜನನ-ಮದುವೆ-

ಮರಣ, ಕೌಟುಂಬಿಕ ಜೀವನ ಸಾಮಾಜಿಕ ಜೀವನ, ಅವರ ನಾಗರೀಕತೆ ವೇಷ ಭೂಷಣಗಳು ಅವರು ಅನುಸರಿಸುತ್ತಾ ಬಂದ ವೃತ್ತಿ ವೈವಿಧ್ಯಗಳು, ಆಹಾರ-ಪಾನೀಯ ಇತ್ಯಾದಿ ಅಂಶಗಳನ್ನು ಕೂಲಂಕಷವಾಗಿ ಗಮನಿಸಬೇಕಾಗುತ್ತದೆ.

## ೧.೨. ಅಧ್ಯಯನದ ಸ್ವರೂಪ

ಕಾಡುಗೊಲ್ಲ ಸಮುದಾಯದ ಅಲೆಮಾರಿತನದ ಸ್ವರೂಪವನ್ನು ಅರಿಯಲು ಶಿರಾ ತಾಲ್ಲೂಕಿನ ಅಲೆಮಾರಿ ಕಾಡುಗೊಲ್ಲರ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಇದು ಅಧ್ಯಯನದ ವ್ಯಾಪ್ತಿಯೂ ಹೌದು, ಮಿತಿಯೂ ಹೌದು. ಕಾಡುಗೊಲ್ಲರ ಸಮುದಾಯದವರು ನೆಲೆಸಿರುವ ಎಲ್ಲಾ ಭಾಗಗಳಲ್ಲಿರುವ ಸಮುದಾಯದವರೊಂದಿಗೆ ತೌಲನಿಕ ಕ್ಷೇತ್ರ ಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದ ವಿಷಯವು ಪೂರ್ಣ ಕ್ಷೇತ್ರಕಾರ್ಯವನ್ನು ಬಯಸುವಂತಾದದ್ದು, ಕೇವಲ ಅಲೆಮಾರಿ ಕಾಡುಗೊಲ್ಲ ಸಮುದಾಯದವರಿಗೆ ಮಾತ್ರ ಸೀಮಿತವಾಗಿದೆ. ಲಿಂಗ, ವಯಸ್ಸು, ಶಿಕ್ಷಣ, ವೃತ್ತಿ ಮುಂತಾದ ಅಂಶಗಳನ್ನು ಗಮನಿಸಿ ವಿಷಯವನ್ನು ಕ್ರೋಢೀಕರಿಸಲಾಗಿದೆ. ಕ್ಷೇತ್ರಕಾರ್ಯದ ಮುಖಾಂತರ ಸಾಕ್ಷರತೆಯ ಬಗ್ಗೆ, ಸಮುದಾಯದ ಹಿರಿಯರಿಂದ ಮಹಿಳೆಯರಿಂದ, ವಿದ್ಯಾರ್ಥಿನಿಯರಿಂದ ಜಾನಪದ ಕಲಾವಿದರಿಂದ, ಶಿಕ್ಷಕರಿಂದ, ಅಂಗನವಾಡಿ ಕಾರ್ಯಕರ್ತೆಯರಿಂದ ಹಟ್ಟಿಗಳಲ್ಲಿ ದೇವಾಲಯದ ಕಟ್ಟೆಯ ಮೇಲೆ, ಹೊರಗಡೆ, ರಸ್ತೆಯ ಬದಿಯಲ್ಲಿ ನಿಂತು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಭಾಷಣೆಯನ್ನು ಧ್ವನಿ ಮುದ್ರಿಕೆಯಿಂದ, ಛಾಯಾ ಚಿತ್ರ ಮುದ್ರಿಕೆ(Video)ಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವ ಪೂರ್ಣವಾಗಿದೆ.

## ೧.೩. ಅಧ್ಯಯನದ ಉದ್ದೇಶ

ಮಾನವ ಸಮಾಜವು ಹಲವಾರು ಹಂತಗಳಲ್ಲಿ ಮಾರ್ಪಾಡುತ್ತಾ ಬಂದಿದೆ. ಮೊದಲನೆಯ ಹಂತದಲ್ಲಿ ಮಾನವ ತನ್ನ ನಿತ್ಯದ ಆಹಾರಕ್ಕಾಗಿ ಗುಡ್ಡ ಗಾಡಿನಲ್ಲಿ, ಗುಹೆಗಳಲ್ಲಿದ್ದು, ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಆಹಾರವನ್ನು ತಯಾರಿಸಿಕೊಂಡು ಅಲೆಮಾರಿ ಜೀವನ ನಡೆಸಿಕೊಂಡು ಬದುಕುತ್ತಿದ್ದನು.

ಎರಡನೆಯ ಹಂತದಲ್ಲಿ ಅವನು ಗುಹೆ, ಗುಡ್ಡಗಾಡು ಪ್ರದೇಶವನ್ನು ಬಿಟ್ಟು ಅರಣ್ಯ/ಹುಲ್ಲುಗಾವಲುಗಳ ಪ್ರದೇಶ ಆರಿಸಿಕೊಂಡು ದನ, ಕರುಗಳನ್ನು ಸಾಕಲಾರಂಭಿಸಿದನು. ಮೂರನೇ ಹಂತದಲ್ಲಿ ಪಶುಗಳ ಜೊತೆಯಲ್ಲಿ ಅಲೆಮಾರಿ ಜೀವನದ ಜೊತೆಗೆ ಕುರಿಸಂಗೋಪನೆಯಲ್ಲಿ ತೊಡದನು. ಹೀಗೆ ಹಂತ ಹಂತವಾಗಿ ಬದುಕಲ್ಲಿ ಬದಲಾವಣೆಯನ್ನು ಹೊಂದುತ್ತಾ ಜೀವನ ನಡೆಸುತ್ತಿರುವ ಕಾಡುಗೊಲ್ಲ ಸಮುದಾಯ ಅಲ್ಪಸ್ವಲ್ಪ ಬೇಸಾಯವನ್ನು ಮನೆಯಲ್ಲಿ ಉಳಿದಿರುವವರು ನಿರ್ವಹಿಸುತ್ತಾರೆ. ಭೂಮಿ ಇಲ್ಲದಿರುವವರು ಕೂಲಿ, ನಾಲಿಯನ್ನು ಮಾಡಿಕೊಂಡು ಬದುಕುತ್ತಿದ್ದಾರೆ. ಉಳಿದಂತೆ ತಮ್ಮ

ಅಲೆಮಾರಿ ಜೀವನವನ್ನು ಚಿಕ್ಕಮಂಗಳೂರು, ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶಾದ್ಯಂತ, ಹಾಗೂ ಮೈಸೂರು ಭಾಗಗಳಲ್ಲಿ ಇವರು ತಮ್ಮ ಕುರಿ ಸಂಗೋಪನೆಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಜಗತ್ತಿನಲ್ಲಿ ಅನೇಕ ಸಮುದಾಯಗಳಿವೆ. ಈ ಸಮುದಾಯಗಳು ಭಾರತದಲ್ಲಿ ಕಂಡುಬರುವ ಜನ ಸಮುದಾಯಗಳಿಗಿಂತ, ಭಿನ್ನವಾದವು ಅಲ್ಲದೆ ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಂದಿರುವಂತಹವು. ಇಂತಹ ಅನೇಕ ಸಮುದಾಯಗಳನ್ನು ಅನೇಕ ವಿದ್ವಾಂಸರು ಬಹಳ ಹಿಂದಿನಿಂದಲೂ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಅವುಗಳಲ್ಲಿ ಕೆಲವು ನಿರ್ಲಕ್ಷಿತ ಸಮುದಾಯಗಳು, ಉಳಿದವುಗಳನ್ನು ಸರ್ಕಾರ ಮತ್ತು ವಿದ್ವಾಂಸರು ಚಳುವಳಿಯ ರೂಪದಲ್ಲಿ ಸಾಮಾಜಿಕ ಸಮುದಾಯಗಳ ಹುಡುಕಾಟದಲ್ಲಿ ತೊಡಗಿದ್ದಾರೆ. ಇನ್ನು ಕೆಲವು ಸಮುದಾಯಗಳಲ್ಲಿ ತಮ್ಮ ಪರಂಪರೆ ಮತ್ತು ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ, ಆಧುನಿಕ ಸಮಾಜದ ಸಂಸ್ಕೃತಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ತೊಳಲಾಟದಲ್ಲಿ ಸಿಲುಕಿವೆ. ಇಂತಹ ಅಂಚಿನ ಸಮುದಾಯಗಳಲ್ಲಿ ಅಲೆಮಾರಿ ಕಾಡುಗೊಲ್ಲ ಸಮುದಾಯವು ಒಂದು.

ಅಲೆಮಾರಿ ಕಾಡುಗೊಲ್ಲ ಸಮುದಾಯದ ಸಾಮಾಜಿಕ-ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಹಿಂದುಳಿದದ್ದು ತನ್ನದೆ ಆದ ಸಾಮಾಜಿಕ ಸಂಘಟನೆಯನ್ನು ಹೊಂದಿದೆ. ಇತ್ತೀಚೆಗೆ ಕಾಡುಗೊಲ್ಲ ಸಮುದಾಯದಲ್ಲಿ ಉಂಟಾದ ಪರಿವರ್ತನೆಯಿಂದಾಗಿ ಸಮುದಾಯವು ಸಾಮಾಜಿಕ ಸಂಚಲನೆಯನ್ನು ಹೊಂದಿದೆ. ಮೂಲ ಸಂಸ್ಕೃತಿಯನ್ನು ಬಿಡದೆ ಈ ಸಮುದಾಯವು ಇತಿಹಾಸ ಮತ್ತು ಸಂಸ್ಕೃತಿ ಬೇರೆ ಸಮುದಾಯಗಳಿಗಿಂತ ಭಿನ್ನವೂ, ವಿಶಿಷ್ಟವೂ ಆಗಿದೆ. ಇತರೆ ಸಮುದಾಯಗಳೊಡನೆ ಗುರುತಿಸಿಕೊಳ್ಳಲು ಇಷ್ಟ ಪಡೆದ ಇವರು ಸದಾ ದೂರ, ತಮ್ಮದೆ ಆದ ಹಟ್ಟಿಗಳನ್ನು ನಿರ್ಮಿಸಿಕೊಂಡು, ಪ್ರಮುಖ ಊರಿನ ನೆಲೆಗಳಿಂದ, ಒಂದು ಕಿ.ಮೀ.ನಿಂದ ಎರಡು.ಕಿ.ಮೀ ಅಂತದಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವುದನ್ನು ಇಂದಿಗೂ ಕಾಣಬಹುದು. ಹಿ.ಚಿ.ಬೋರಲಿಂಗಯ್ಯನವರು ಅಭಿಪ್ರಾಯಪಡುತ್ತಾ ಕಾಡುಗೊಲ್ಲ ಸಮುದಾಯದವರು ಉತ್ತರ ಭಾರತದಿಂದ ಬಂದವರು. ಇವರ ಸಂಪ್ರದಾಯ ಕಾಡು ಕುರುಬರ ಸಂಪ್ರದಾಯವನ್ನು ಹೋಲುತ್ತವೆ. ಇವರು ವಾಸ ಮಾಡುವ ಪ್ರದೇಶಗಳು ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿವೆ.

## ೧.೪. ಅಧ್ಯಯನ ಪ್ರಾಮುಖ್ಯತೆ

ಭಾರತ ದೇಶದಲ್ಲಿ ಹಲವಾರು ಸಮುದಾಯಗಳು ನೆಲೆಗೊಂಡಿವೆ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಕಂಡುಕೊಂಡು ಮುಖ್ಯವಾಹಿನಿಗೆ ಬಂದಿವೆ. ಕೆಲವು ಅಲೆಮಾರಿ

ಸಮುದಾಯಗಳು ನೆಲೆ ನಿಲ್ಲದೆ ಅಲೆದಾಡುತ್ತಲೆ ಇವೆ. ದೇಶದ ಉದ್ದಗಲಕ್ಕೂ ಅಲೆಮಾರಿಗಳು ಕಂಡುಬರುತ್ತಿದ್ದು, ತಮ್ಮ ಜೀವನ ಶೈಲಿ, ಆಚಾರ-ವಿಚಾರ, ಸಂಪ್ರದಾಯ ಆಡಳಿತ ವ್ಯವಸ್ಥೆಯ ಕಸುಬು ಗಳಿಂದ ವಿಶಿಷ್ಟವಾಗಿದ್ದಾರೆ. ಇಂತಹ ಮುಗ್ಧ ಅಮಾಯಕ ಅಲೆಮಾರಿ ಸಮುದಾಯಗಳ ಅಧ್ಯಯನಗಳು ಇತ್ತೀಚೆಗೆ ಸಾಧಾರಣ ಮಟ್ಟದಲ್ಲಿ ನಡೆಯುತ್ತಿದ್ದರೂ ಆಧುನಿಕ ಸಮಾಜದಲ್ಲಿ ಸಂಸ್ಕೃತಿಯ ಅನನ್ಯತೆಗಳು ಜಾಗತೀಕರಣದಲ್ಲಿ ಮರೆಯಾಗುವುದಕ್ಕಿಂತ ಮೊದಲು ಅಲೆಮಾರಿ ಸಮುದಾಯಗಳು ಅಧ್ಯಯನ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ. ಅಲೆಮಾರಿ ಸಮುದಾಯಗಳೂ ತಮ್ಮದೆ ವಿಶಿಷ್ಟ ರೀತಿಯ ಗುಣ ಲಕ್ಷಣಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಟ್ಟುಕೊಂಡು ಹೊಟ್ಟೆಪಾಡಿನ ಗಂಜಿಗಾಗಿ ಸದಾ ಅಲೆಯುತ್ತಲೆ ಇದ್ದಾರೆ.

ಈ ಸಮುದಾಯಗಳ ಸಾಮಾಜಿಕ ಅಧ್ಯಯನ ತಮ್ಮದೆ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ ಇಂದಿನ ಶೀಘ್ರ ಪ್ರಗತಿಯ ಬದಲಾವಣೆಯನ್ನು ಸಾಮಾಜಿಕ ಜೀವನದಲ್ಲಿ, ಇಂತಹ ಮುಗ್ಧ ಸಮುದಾಯದಂತ ಹಲವು ಸಮುದಾಯಗಳ ಸಾಂಪ್ರದಾಯಿಕ ಜೀವನ ಶೈಲಿಯನ್ನು ಬದಲಾಯಿಸಿ ಬಿಡುವ ಸಾಧ್ಯತೆಗಳಿವೆ. ಹೀಗಾಗಿ ಈ ಸಮುದಾಯದ ಸಾಂಸ್ಕೃತಿಯ ಉತ್ತಮ ಗುಣಗಳನ್ನು ಪುನರ್ ಸಂಪಾದನೆ ಮಾಡಿ ವಿಶ್ಲೇಷಿಸುವ ಅವಶ್ಯಕತೆಯಿದೆ. ಬಡತನ ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡು, ಬಿಡಾರಗಳನ್ನು ಅರಣ್ಯ, ತೋಟ, ಹೊಲ, ಗದ್ದೆಗಳಲ್ಲಿ ಊರಿನಿಂದ ದೂರದ ಪ್ರದೇಶಗಳಲ್ಲಿ ಬಿಸಿಲು, ಮಳೆ, ಗಾಳಿಯಲ್ಲಿ, ಮಾಸಲು ಬಟ್ಟೆಯನ್ನು ಧರಿಸಿ ಬದುಕು ಸಾಗಿಸುತ್ತಿದ್ದಾರೆ. ಇಂತಹ ಸಮುದಾಯಗಳ ಬದುಕಿನ ಚಿತ್ರಣವನ್ನು ಅಧ್ಯಯನ ಮಾಡುವುದು ಅವಶ್ಯವಾಗಿದೆ. ಈ ದೃಷ್ಟಿಯಿಂದ ಅಲೆಮಾರಿ ಕಾಡುಗೊಲ್ಲ ಸಮುದಾಯದ ಕುರಿತಾದ ಅಧ್ಯಯನ ಮಾಡುವುದು ಮುಖ್ಯವಾಗಿದೆ.

## ೧.೫. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವಾದ ಆಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಆರು ಅಧ್ಯಾಯಗಳನ್ನು ರಚಿಸಿಕೊಳ್ಳಲಾಗಿದೆ. ಇದರಲ್ಲಿ ಮೊದಲ ಅಧ್ಯಾಯದಲ್ಲಿ ಅಲೆಮಾರಿ ಕಾಡುಗೊಲ್ಲರ ಅಧ್ಯಯನದ ಸ್ವರೂಪ, ವ್ಯಾಪ್ತಿಗಳ ಬಗ್ಗೆ ಚರ್ಚಿಸುವುದು ಮುಖ್ಯವಾಗಿದೆ. ಎರಡನೆಯ ಅಧ್ಯಾಯದಲ್ಲಿ ಅಲೆಮಾರಿ ಕಾಡುಗೊಲ್ಲರ ಹಿನ್ನೆಲೆಯ ಬಗ್ಗೆ ಚರ್ಚಿಸ ಸಲಾಗಿದೆ. ಈವರೆಗೂ ನಡೆದಿರುವ ಅಧ್ಯಯನಗಳು ಬರಿ ಕಾಡುಗೊಲ್ಲ ಸಮುದಾಯದ ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳ ಬಗ್ಗೆಯೇ ಅಧ್ಯಯನವನ್ನು ನಡೆಸಿರುವ ಕಾರಣದಿಂದ ಅಲೆಮಾರಿತನಕ್ಕೆ ಹೆಚ್ಚು ಒತ್ತನ್ನು ನೀಡಿ ಅಧ್ಯಯನ ಮಾಡಬೇಕಿದೆ. ಮೂರನೆಯ ಅಧ್ಯಾಯದಲ್ಲಿ ಅಲೆಮಾರಿ ಕಾಡುಗೊಲ್ಲರು ವಲಸೆ ಹೋಗಲು ಯಾವ ಯಾವ ಮಾರ್ಗಗಳ ಮುಖಾಂತರ ತಮ್ಮ ಅಲೆಮಾರಿ ತನವನ್ನು ಮುಂದುವರಿಸಿಕೊಂಡು

ಹೋಗುತ್ತಾರೆ ಎಂಬ ಹಲವಾರು ಮಾಹಿತಿಗಳನ್ನು ನೀಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಅಭಿವೃದ್ಧಿಯ ಬಗ್ಗೆ ವಿವರಿಸಲಾಗಿದೆ. ಮುಖ್ಯವಾಗಿ ಆರ್ಥಿಕಾಭಿವೃದ್ಧಿಯ ಮೂಲಗಳಾವುವು ಎಂಬುದರ ಬಗ್ಗೆ ಸಮಗ್ರ ಮಾಹಿತಿ ನೀಡುವುದು ಜೊತೆಗೆ ಅಭಿವೃದ್ಧಿಯ ಯೋಜನೆಗಳ ಬಗ್ಗೆ ಮಾಹಿತಿಯನ್ನು ವಿಶ್ಲೇಷಿಸುವುದು ಮುಖ್ಯ ವಿಷಯವಾಗಿದೆ. ಸಾಮಾಜಿಕ ಜೀವನದ ಅಭಿವೃದ್ಧಿ ಕಾರ್ಯಗಳಲ್ಲಿನ ಪ್ರಮುಖ ಅಂಶಗಳು, ಧಾರ್ಮಿಕ ಜೀವನದಲ್ಲಿ ಸಂಪ್ರದಾಯಗಳು, ಆಚರಣೆಗಳು, ಆಚಾರ ವಿಚಾರಗಳು ಹೀಗೆ ಸಮುದಾಯದ ಬಗ್ಗೆ ಒಟ್ಟಾರೆಯಾಗಿ ಚರ್ಚಿಸುವುದು ಈ ಅಧ್ಯಯನದ ಪ್ರಮುಖ ಅಂಶವಾಗಿದೆ. ಕೊನೆಯ ಅಧ್ಯಾಯ ದಲ್ಲಿ ಅಲೆಮಾರಿ ಕಾಡುಗೊಲ್ಲರ ಅತ್ಯಂತ ಪ್ರಮುಖವಾದ ಸಮಸ್ಯೆಗಳಾವುವು, ಆ ಸಮಸ್ಯೆಗಳಿಗೆ ಪರಿಹಾರೋಪಾಯಗಳೇನು, ಸರ್ಕಾರದ ಕ್ರಮಗಳೇನು, ಅಭಿವೃದ್ಧಿಯ ಯೋಜನೆಗಳ ಕುರಿತು, ಹೀಗೆ ಹಲವಾರು ವಿಷಯಗಳ ಕುರಿತು ಚರ್ಚಿಸುವುದರ ಜೊತೆಗೆ ಕ್ಷೇತ್ರಕಾರ್ಯದ ಸಮಗ್ರಮಾಹಿತಿ, ಸಮುದಾಯದ ಎಲ್ಲ ಅಂಶಗಳನ್ನು ಒಟ್ಟುಗೂಡಿಸಿದ ಸಮಗ್ರ ಮಾಹಿತಿಗಳನ್ನು ಜೊತೆಗೂಡಿಸಿ ಸಮಾರೋಪ ನೀಡುವುದು ಈ ಅಧ್ಯಯನದ ಮುಖ್ಯ ವಿವರಣೆಯಾಗಿದೆ.

ಈ ಒಂದು ಅಧ್ಯಯನಕ್ಕೆ ಪೂರಕವಾಗುವಂತೆ ಅಲೆಮಾರಿ ಕಾಡುಗೊಲ್ಲ ಸಮುದಾಯದ ತಾಲ್ಲೂಕುವಾರು ಅಂಕಿ-ಅಂಶಗಳನ್ನು ನೀಡುವುದು, ಇದುವರೆಗಿನ ಎಲ್ಲಾ ಅಧ್ಯಯನಗಳ ಒಟ್ಟಾರೆ ಸಮುದಾಯದ ಅಂಕಿ ಅಂಶಗಳನ್ನು ಮಾತ್ರ ನೀಡಿದ್ದು, ಅಲೆಮಾರಿ ಸಮುದಾಯದ ಮಾಹಿತಿಯನ್ನು ನೀಡಬೇಕಾಗಿದೆ. ಇದಕ್ಕೆ ಅನುಕೂಲವಾಗುವಂತೆ ವಿಷಯ ಸಂಗ್ರಹಿಸಲು ಪ್ರಶ್ನಾವಳಿಯನ್ನು ರೂಪಿಸಿಕೊಂಡು, ಸಂದರ್ಶನದಿಂದ ಸಮುದಾಯದ ಮುಖಂಡರಿಂದ ಮಾಹಿತಿಯನ್ನು ಸಂಗ್ರಹಿಸುವುದು, ಅಲ್ಲದೆ ಐತಿಹಾಸಿಕ ವಿಧಾನದಿಂದ ಸಮುದಾಯದ ಜೊತೆಗೆ ಅವಲೋಕನ ವಿಧಾನದಿಂದ ಹಾಗೂ ನೆರೆಯ ಸಮುದಾಯಗಳೊಂದಿಗೆ ತೌಲನಿಕವಾಗಿ ನೋಡುವುದು ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹಾಗೂ ಈ ಎಲ್ಲಾ ಮಾಹಿತಿಗಳನ್ನು ಸತ್ಯವೆನ್ನುವ ಹಾಗೆ ನಂಬಲು ಅಥವಾ ಘಟ್ಟಿಗೊಳಿಸಲು ಧ್ವನಿಮುದ್ರಣ ಮತ್ತು ಛಾಯಾಚಿತ್ರಗಳನ್ನು ಬಳಸಿಕೊಂಡು ಈ ಅಧ್ಯಯನವನ್ನು ಸಂಶೋಧನೆಗೆ ಒಳಪಡಿಸಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲಾಗಿದೆ.

ಸಮಾಜವಿಜ್ಞಾನಗಳ ಸಂಶೋಧನೆ ಕ್ಷೇತ್ರ ವಿಶಾಲವಾದುದರಿಂದ ನನ್ನ ಸಂಶೋಧನೆಗೆ ಮಿತಿಯಿರುವ ಸಮಯದಲ್ಲಿ ನ್ಯಾಯಯುತವಾಗಿ ಕ್ಷೇತ್ರಕಾರ್ಯ ಮಾಡಿ, ಪ್ರಸ್ತುತ ಸಂಶೋಧನೆಗೆ ಬಳಸಿಕೊಂಡ ವಿಧಾನಗಳು.

**ಪ್ರಶ್ನಾವಳಿ :** ಸಮುದಾಯದ ಮಾಹಿತಿ ಪಡೆಯಲು ಪ್ರಶ್ನಾವಳಿಗಳು ಅನಿವಾರ್ಯ. ಆದ್ದರಿಂದ ಅಲೆಮಾರಿ ಕಾಡುಗೊಲ್ಲ ಸಮುದಾಯಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ಚರ್ಚಿಸಿ ಸೂಕ್ತ ಪ್ರಶ್ನಾವಳಿಗಳನ್ನು ರಚಿಸಿಕೊಂಡು ಸಮೀಕ್ಷಿಸಲಾಗಿದೆ. ಫಲಗಳನ್ನು ಪ್ರಬಂಧದಲ್ಲಿ ನಮೂದಿಸಲಾಗಿದೆ. ಪ್ರಮುಖ ಪ್ರಶ್ನೆಗಳ

ಜೊತೆಗೆ ಸಂದರ್ಭಕ್ಕನುಗುಣವಾಗಿ ಉಪ ಪ್ರಶ್ನೆಗಳನ್ನು ಕೇಳುವುದರೊಂದಿಗೆ ಅಲೆಮಾರಿ ಕಾಡುಗೊಲ್ಲರಿಂದ ಮಾಹಿತಿ ಪಡೆಯಲಾಗಿದೆ.

**ಸಂದರ್ಶನ ವಿಧಾನ :** ವಲಸೆ ಹೋದ ಅಲೆಮಾರಿ ಕಾಡುಗೊಲ್ಲರನ್ನು ವಯೋಮಿತಿಗನುಗುಣವಾಗಿ ಅಂದರೆ ಸಮುದಾಯದ ಹಿರಿಯರು, ಸ್ತ್ರೀಯರು, ಪುರುಷರು ಹೀಗೆ ಹಲವಾರು ರೀತಿಯ ಜನರನ್ನು ಸಂದರ್ಶನ ನಡೆಸಲಾಗುತ್ತದೆ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನು, ಕಾಡುಗೊಲ್ಲ ಅಧ್ಯಕ್ಷರಾದ ನಾಗಪ್ಪವರನ್ನು, ತಾಲ್ಲೂಕು ಪಶುವೈದ್ಯಕೀಯ ಸಹಾಯಕ ನಿರ್ದೇಶಕರನ್ನು ಹಾಗೂ ಪ್ರಮುಖವಾಗಿ ಸಮುದಾಯವನ್ನು ಅಧ್ಯಯನ ನಡೆಸಿದ ವಿದ್ವಾಂಸರನ್ನ, ಹೀಗೆ ಹಲವಾರು ರೀತಿಯ ಜನರನ್ನು ಸಂದರ್ಶನ ಮಾಡಲಾಗಿದೆ.

**ಐತಿಹಾಸಿಕ ವಿಧಾನ :** ಈ ಅಧ್ಯಯನಕ್ಕೆ ಅಗತ್ಯವಿರುವ ಗ್ರಂಥಗಳನ್ನು, ಸರ್ಕಾರಿ ಪ್ರಕಟಣೆಗಳನ್ನು, ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಮತ್ತು ಇತರೆ ಅಂಕಿ ಅಂಶಗಳು ಹಾಗೂ ಆನುಷಂಗಿಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಅವಲೋಕನ ವಿಧಾನ :** ಸಂಶೋಧನಾ ಕ್ಷೇತ್ರಕಾರ್ಯಗಳಲ್ಲಿ ಮಾಹಿತಿ ಪಡೆಯಲು ಈ ವಿಧಾನ ಅನಿವಾರ್ಯ. ಇಲ್ಲಿ ಎರಡು ತರಹದ ಅವಲೋಕನ ವಿಧಾನ ಬಳಸಿಕೊಳ್ಳಬೇಕಿದೆ. ಒಂದು ಸಹಭಾಗಿ ಅವಲೋಕನ ಮೂಲಕ ಸಮುದಾಯದ ಜೊತೆಯಲ್ಲಿದ್ದು ಅವರು ಹೂಡುವ ಗುಡಾರ ಪದ್ಧತಿ, ಕುರಿ ಸಂಗೋಪನಾ ವಿಧಾನ ಅಲೆಮಾರಿತನದ ರೀತಿ, ಮದುವೆ, ಹಬ್ಬ, ಆಚರಣೆ ಇತ್ಯಾದಿಗಳಲ್ಲಿ ಭಾಗಿಯಾಗಿ ಅಧ್ಯಯನದಿಂದ ದೂರವಿದ್ದುಕೊಂಡು ಸಮುದಾಯದ ಚಲನವಲನಗಳನ್ನು ಗಮನಿಸಿ ಅವರ ಸಂಪೂರ್ಣ ಚಟುವಟಿಕೆಗಳನ್ನು ವೀಕ್ಷಿಸಿ ಅಧ್ಯಯನದ ಮಾಹಿತಿ ಪಡೆದುಕೊಂಡಿದ್ದೇನೆ.

**ತೌಲನಿಕ ವಿಧಾನ :** ಒಂದು ಸಮುದಾಯದಲ್ಲಿನ ಪ್ರಾದೇಶಿಕ ಭಿನ್ನತೆಗಳನ್ನು ಅರಿಯಲು ತುಲನಾತ್ಮಕ ವಿಧಾನಗಳನ್ನು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಈ ಸಮುದಾಯವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕುರಿ ಸಂಗೋಪನೆಗಾಗಿ ಅಲೆಯುತ್ತಿರುವುದರಿಂದ ವಿಷಯ ವಿಚಾರಗಳಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದ ವಿಷಯ ಸಂಗ್ರಹಿಸಿ ತೌಲನಿಕವಾಗಿ ಹೇಳುವಲ್ಲಿ ಈ ವಿಧಾನ ಬಳಸಿಕೊಂಡಿದ್ದೇನೆ.

**ಸಂಖ್ಯಾಶಾಸ್ತ್ರೀಯ ವಿಧಾನ :** ಸಮುದಾಯದ ಸಮೀಕ್ಷೆಯಿಂದ ಅಂಕಿ ಅಂಶಗಳನ್ನು ಸರ್ಕಾರದ ವಿವಿಧ ಇಲಾಖೆಗಳು ಪ್ರಕಟಿಸಿದ ಅಂಕಿ ಅಂಶಗಳನ್ನು ಸಂದರ್ಭಕ್ಕನುಗುಣವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಧ್ವನಿ ಮುದ್ರಣ ಮತ್ತು ಛಾಯಾಚಿತ್ರಣ :** ಸಮುದಾಯದ ಸಂದರ್ಶನದ ಸಮಯದಲ್ಲಿ ಅವರು ಹೇಳಿಕೊಂಡ ಸಮುದಾಯದ ಸಮಸ್ಯೆಗಳನ್ನು, ಬದುಕಿನ ಚಿತ್ರಣಗಳನ್ನು ಮೂಡಿಸುವ ಗುಡಾರ, ಊಟ,

ವೇಷಭೂಷಣ, ಕುರಿ ಸಂಗೋಪನೆ, ದೈವಾಚರಣೆ ಇತ್ಯಾದಿಗಳನ್ನು ಅಧ್ಯಯನ ಮಾಹಿತಿಗಾಗಿ ಬಳಸಿಕೊಂಡು ಅವರ ಧ್ವನಿಮುದ್ರಿತ ಹಾಗೂ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

## ೧.೬. ಇದುವರೆಗಿನ ಅಧ್ಯಯನಗಳು

ಕಾಡುಗೊಲ್ಲ ಸಮುದಾಯವನ್ನು ಕುರಿತಂತೆ ವಿದೇಶಿ ಸಂಶೋಧಕರು ಸೇರಿದಂತೆ ಹಲವಾರು ವಿದ್ವಾಂಸರು, ಸಂಶೋಧಕರು, ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಲೇಖನ ಮತ್ತು ಕೃತಿಗಳನ್ನು ರಚಿಸಿದ್ದಾರೆ. ಇಂತಹ ಕೃತಿಗಳಲ್ಲಿ ಕೆಲವು ಪಿಎಚ್.ಡಿ.ಸಂಶೋಧನೆ ಮಾಡಿ ಪುಸ್ತಕಗಳ ರೂಪದಲ್ಲಿ ಪ್ರಕಟಿತವಾದವುಗಳಾಗಿದ್ದರೆ ಮತ್ತು ಕೆಲವು ಜನಾಂಗೀಯ ಅಥವಾ ಕುಲಶಾಸ್ತ್ರೀಯ (Ethnographic) ಅಧ್ಯಯನಗಳಾಗಿವೆ. ಕೆಲವೊಂದು ಮಾನವಶಾಸ್ತ್ರೀಯ(Anthropological Studies) ಅಧ್ಯಯನಗಳೂ ಆಗಿವೆ. ಅನೇಕ ಲೇಖನಗಳು ದಿನಪತ್ರಿಕೆ, ವಾರಪತ್ರಿಕೆ, ತ್ರೈಮಾಸಿಕ ಮುಂತಾದ ಪತ್ರಿಕೆಗಳಲ್ಲಿ ಕಾಡುಗೊಲ್ಲರ ಜೀವನ ಸ್ಥಿತಿಗತಿಗಳ ಬಗ್ಗೆ ಉಲ್ಲೇಖವಿದೆ. ಕಾಡುಗೊಲ್ಲರ ಲಿಖಿತ ಚರಿತ್ರೆ ಮತ್ತು ಕುಲಶಾಸ್ತ್ರೀಯ ಅಧ್ಯಯನದ ಬಗ್ಗೆ ಬೆಳಕು ಚೆಲ್ಲಿ ಕೃತಿ ಮತ್ತು ಲೇಖನ ಪ್ರಕಟಿಸಿರುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಫ್ರಾನ್ಸಿಸ್ ಬುಕನಾನ್(೧೮೦೭) ತಮ್ಮ ಕೃತಿಯಾದ "ಜರ್ನಿ ಥ್ರೋ ಮೈಸೂರ್ ಕೆನೆರಾ ಅಂಡ್ ಮಲಬಾರ್"(Journey through Mysore Canara and Malabar)ದಲ್ಲಿ ಕಾಡುಗೊಲ್ಲರು ಬುಡಕಟ್ಟಿನ ಜನರಾಗಿದ್ದಾರೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಎ.ಎ.ಡಿ.ಲೂಯಿಸ್(೧೯೬೩)ರವರು ತಮ್ಮ ಕೃತಿಯಾದ "ದ ಟ್ರೈಬ್ಸ್ ಆಫ್ ಮೈಸೂರು"(The Tribes of Mysore)ದಲ್ಲಿ ಕಾಡುಗೊಲ್ಲರನ್ನು ಪರಿಶಿಷ್ಟ ಬುಡಕಟ್ಟಿಗೆ ಸೇರಿಸಲು ಅರ್ಹರು(Kadu Gollas who have a culture and dialect of their own rightly deserved to be classifed as Scheduled Tribes in Karnataka)ಎಂದು ಹೇಳಿದ್ದಾರೆ. ಎ.ಎ.ಡಿ.ಲೂಯಿಸ್ ಅವರು ಬುಡಕಟ್ಟು ಕೇಂದ್ರ ಸಲಹಾ ಮಂಡಳಿಯ ಸದಸ್ಯರು ಮತ್ತು ಅಲೆಮಾರಿ ಬುಡಕಟ್ಟು ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರು(೧೯೩೦) ತಮ್ಮ ಕೃತಿಯಲ್ಲಿ (The Mysore Tribes and Castes) ಕಾಡುಗೊಲ್ಲರು ಕಾಡಿನ ಅಂದರೆ ಅಡವಿ ಗೊಲ್ಲರು(Kadu Gollas are Forest Tribes)ಎಂದು ಹೇಳಿದ್ದಾರೆ. ಎಡ್ಗರ್ ಥರಸ್ಟನ್(೧೯೮೭) ತಮ್ಮ ಕೃತಿ "ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ"(Castes and Tribes of South India) ಎಂಬ ಕೃತಿಯಲ್ಲಿ ಕಾಡುಗೊಲ್ಲರ ಬಗ್ಗೆ ಪ್ರತ್ಯೇಕ ಉಲ್ಲೇಖವಿದ್ದು, ಕಾಡುಗೊಲ್ಲರು ಬುಡಕಟ್ಟು ಪಂಗಡದವರಾಗಿದ್ದಾರೆ ಎಂದು ಹೇಳಿದ್ದಾರೆ. ಎಲ್.ಕೆ.ವಿ.ಅಯ್ಯರ್ ಮತ್ತು ಎಡ್ಗರ್ ಥರಸ್ಟನ್‌ರವರು

ಪ್ರತ್ಯೇಕವಾಗಿ "ಕಾಡುಗೊಲ್ಲರ ಕುಲಶಾಸ್ತ್ರೀಯ ಅಧ್ಯಯನ"(Ethnomethodology) ಮಾಡಿ ವಿಸ್ತೃತವಾದ ಅಧ್ಯಾಯಗಳನ್ನು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ.

ಇದಲ್ಲದೆ ಪ್ರೊ.ತೀ.ನಂ.ಶಂಕರನಾರಾಯಣ(೧೯೮೨) ರವರು "ಕಾಡುಗೊಲ್ಲರ ಸಂಪ್ರದಾಯಗಳು ಮತ್ತ ನಂಬಿಕೆಗಳು" ಎಂಬ ಶೀರ್ಷಿಕೆಯಡಿ ಕಾಡುಗೊಲ್ಲರ ಬಗ್ಗೆ ಪಿಎಚ್.ಡಿ.ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಪಿಎಚ್.ಡಿ.ಮಹಾಪ್ರಬಂಧವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಮಾನವಶಾಸ್ತ್ರಜ್ಞರಿಗೆ, ಸಮಾಜ ಶಾಸ್ತ್ರಜ್ಞರಿಗೆ ಮತ್ತು ವಿದ್ವಾಂಸರುಗಳಿಗೆ, ಸಂಶೋಧಕರಿಗೆ ಇದೊಂದು ಉತ್ತಮ ಆಕರ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಶಂಕರನಾರಾಯಣರವರು ಕಾಡುಗೊಲ್ಲರ ಬುಡಕಟ್ಟು ಸಂಪ್ರದಾಯ ಮತ್ತು ನಂಬಿಕೆಗಳು ಹಾಗೂ ಕಾಡುಗೊಲ್ಲರು ಒಂದು ಅಪ್ಪಟ ಬುಡಕಟ್ಟಿನರು ಎಂಬುದಾಗಿ ವಿಸ್ತೃತವಾಗಿ ವಿವರಿಸಿದ್ದಾರೆ. ಬಿ.ವಿ.ನಾಗರಾಜು(೧೯೯೮)ರವರು "ಗೊಲ್ಲರ ಹಟ್ಟಿ" ಎಂಬ ಪುಸ್ತಕ ಬರೆದು ಕಾಡುಗೊಲ್ಲರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಮೇಲೆ ಬೆಳಕು ಚೆಲ್ಲಿದ್ದಾರೆ. ಡಾ.ಕಾಳೇಗೌಡ ನಾಗವಾರರವರು "ಕಾಡುಗೊಲ್ಲರ ಜಾನಪದ" ಎಂಬ ಪಿಎಚ್.ಡಿ.ಮಹಾಪ್ರಬಂಧವನ್ನು ರಚಿಸಿ ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಅರ್ಪಿಸಿದ್ದಾರೆ. ಅಲ್ಲದೆ ಅದು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಡಾ.ಮೀರಾಸಾಬಿಹಳ್ಳಿ ಶಿವಣ್ಣನವರು "ಕಾಡುಗೊಲ್ಲರ ಸಂಸ್ಕೃತಿ" ಎಂಬ ಪಿಎಚ್.ಡಿ.ಮಹಾಪ್ರಬಂಧವನ್ನು ರಚಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿದೆ. ನಂತರ ಅವರು ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಜುಂಜಪ್ಪ ಮತ್ತು ಎತ್ತಪ್ಪನವರ ಕುರಿತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಈ ರೀತಿಯ ಜಾನಪದ ಮತ್ತು ಸಾಹಿತ್ಯಾತ್ಮಕ ಕೃತಿಗಳಲ್ಲದೆ ಸಮಾಜಶಾಸ್ತ್ರೀಯ ಮತ್ತು ಸಾಮಾಜಿಕ ಮಾವಶಾಸ್ತ್ರೀಯ ಹಾಗೂ ಕುಲಶಾಸ್ತ್ರೀಯ ಅಧ್ಯಯನಗಳು ಮತ್ತು ಸಂಶೋಧನೆಗಳು ನಡೆದಿವೆ. ಡಾ.ಎಂ.ಗುರುಲಿಂಗಯ್ಯನವರು "ಕಾಡುಗೊಲ್ಲರಲ್ಲಿ ಸಾಮಾಜಿಕ ಚಲನೆ ಮತ್ತು ಸಾಮಾಜಿಕ ಬದಲಾವಣೆ" ಎಂಬ ಶೀರ್ಷಿಕೆಯಡಿ ಪಿಎಚ್.ಡಿ. ಸಂಶೋಧನೆಯನ್ನು ಸಮಾಜಶಾಸ್ತ್ರೀಯ(Sociology)ದೃಷ್ಟಿಕೋನದಿಂದ ಮಾಡಿದ್ದು(೧೯೯೯) Social Mobility and Social change among Kadu Gollas) ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ನಂತರ ಡಾ.ಗುರುಲಿಂಗಯ್ಯನವರು Tribal Culture, Change and Mobility ಎಂಬ ಕೃತಿಯಲ್ಲಿ ಗೊಲ್ಲ ಸಮುದಾಯಕ್ಕೆ ಸಂಬಂಧಿಸಿದಂತೆ ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ಡಾ.ಎಂ. ಗುರುಲಿಂಗಯ್ಯನವರು "ಕರ್ನಾಟಕದ ಗೊಲ್ಲ ಸಮುದಾಯ"(೨೦೦೫) ಎಂಬ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಕಾಡುಗೊಲ್ಲರ ಕುರಿತು ಪುಸ್ತಕಗಳಲ್ಲದೆ ಕೆಲವು ಪಿಎಚ್.ಡಿ. ಮಹಾಪ್ರಬಂಧಗಳು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅಂಗೀಕರಿಸಲ್ಪಟ್ಟಿವೆ. ಎಸ್.ಕೆ.ಸಣ್ಣಹೊಬಯ್ಯನವರು "ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ" ಎಂಬ ಮಹಾಪ್ರಬಂಧವನ್ನು

(೨೦೦೨) ಸಲ್ಲಿಸಿದ್ದಾರೆ. ಮಲ್ಲಿಕಾರ್ಜುನ ಕಲಮಾರಹಳ್ಳಿ ಅವರು ಕುವೆಂಪು ವಿಶ್ವವಿದ್ಯಾಲಯಕ್ಕೆ "ಕಾಡುಗೊಲ್ಲರ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ" ಎಂಬ ಪಿಎಚ್.ಡಿ.ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ. ಡಾ.ಕೆ.ಮೇತ್ರಿ ಅವರು "ಕೃಷ್ಣಗೊಲ್ಲರ ಕಥನ ಕಾವ್ಯ"ದ ಬಗ್ಗೆ(೧೯೯೭) ಪುಸ್ತಕವನ್ನು ಬರೆದಿದ್ದಾರೆ. ಇದೇ ವಿಭಾಗದ ಡಾ.ಚೆಲುವರಾಜು ಅವರು ಕಾಡುಗೊಲ್ಲರ ಸಾಂಸ್ಕೃತಿಕ ವೀರನಾದ "ಜುಂಜಪ್ಪನ ಕಾವ್ಯ"ದ ಬಗ್ಗೆ ಕೃತಿ ರಚಿಸಿದ್ದಾರೆ.

ಪುಸ್ತಕ ಮತ್ತು ಪಿಎಚ್.ಡಿ.ಮಹಾಪ್ರಬಂಧಗಳಲ್ಲದೆ ಹಲವಾರು ಸಂಶೋಧಕರು, ಲೇಖಕರು ಮತ್ತು ವಿದ್ವಾಂಸರು ವಿವಿಧ ಪತ್ರಿಕೆ(Journal) ಮತ್ತು ಪುಸ್ತಕಗಳಲ್ಲಿ ಕಾಡುಗೊಲ್ಲರ ಸಂಸ್ಕೃತಿ, ಸಮಾಜ ಮತ್ತು ಬುಡಕಟ್ಟು ಜೀವನವನ್ನು ಕುರಿತ ಲೇಖನಗಳನ್ನು ಪ್ರಕಟಿಸಿದ್ದಾರೆ. ಡಾ.ಜಿ.ಶಂ.ಪ.ರವರ "ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು" ಎಂಬ ಪಿಎಚ್.ಡಿ.ಮಹಾಪ್ರಬಂಧದಲ್ಲಿ ಕಾಡುಗೊಲ್ಲರ ಬಗ್ಗೆ ಉಲ್ಲೇಖವಿದೆ. ಡಾ.ಕೃಷ್ಣಮೂರ್ತಿ ಹನೂರ ಅವರು "ಕಾಡುಗೊಲ್ಲರು" ಎಂಬ ಲೇಖನವನ್ನು ಬರೆದಿದ್ದಾರೆ, ಡಾ.ಎಚ್.ಜೆ.ಲಕ್ಕಪ್ಪಗೌಡರ ಸಂಪಾದಕತ್ವದಲ್ಲಿ "ಕರ್ನಾಟಕದ ಬುಡಕಟ್ಟುಗಳು" ಎಂಬ ಪುಸ್ತಕ ರಚನೆಯಾಗಿದೆ.

ಕಾಡುಗೊಲ್ಲರ ಸಮುದಾಯದವರೇ ಆದ ರಂಗಯ್ಯನವರು "ಕರ್ನಾಟಕದ ಕಾಡುಗೊಲ್ಲರು" ಎಂಬ ಲೇಖನವನ್ನು (ಸ್ಮರಣ ಸಂಚಿಕೆ ತುಮಕೂರು ಜಿಲ್ಲಾ ಗೊಲ್ಲರ ಪ್ರಥಮ ಅಧಿವೇಶನ ತುರುವೇಕೆರೆ ದಿನಾಂಕ ೩.೦೯.೧೯೭೨) ಸ್ಮರಣ ಸಂಚಿಕೆಯಲ್ಲಿ ಬರೆದಿದ್ದಾರೆ. ಅದೇ ರೀತಿ ಡಿ.ಕರಿಯಪ್ಪ ಇನ್ನೊಬ್ಬ ಕಾಡುಗೊಲ್ಲ ಮುಖಂಡರು "ಅಡವೀ ಗೊಲ್ಲರ ಸಮುದಾಯದ ಚಾರಿತ್ರಿಕ ಹಿನ್ನೆಲೆ" ಎಂಬ ಲೇಖನವನ್ನು ಇದೇ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಇದೇ ರೀತಿ ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಎಂ.ಗುರುಲಿಂಗಯ್ಯನವರು ಗೊಲ್ಲ, ಯಾದವ ಮತ್ತು ಕಾಡುಗೊಲ್ಲ ಸಮುದಾಯದ ಬಗ್ಗೆ ಹಲವಾರು ಲೇಖನಗಳನ್ನು ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಡಾ.ಮೀರಾಸಾಬಿಹಳ್ಳಿ ಶಿವಣ್ಣನವರು ಕಾಡುಗೊಲ್ಲರ ಬುಡಕಟ್ಟು ವೀರರ ಬಗ್ಗೆ ಸಂಶೋಧನೆ ಮಾಡಿ ೧೯೯೬ರಲ್ಲಿ ಪಿಎಚ್.ಡಿ.ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧವು ೨೦೦೫ರಲ್ಲಿ "ಕಾಡುಗೊಲ್ಲ ಬುಡಕಟ್ಟು ವೀರರು" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ್ದಾರೆ. ಈ ಪುಸ್ತಕದಲ್ಲಿ ಶಿವಣ್ಣನವರು ಕಾಡುಗೊಲ್ಲರ ಸಂಸ್ಕೃತಿ ಮತ್ತು ಸಾಂಸ್ಕೃತಿಕ ವೀರರ ಬಗ್ಗೆ ವಿವರಿಸಿದ್ದಾರೆ. ಅಲ್ಲದೆ ಎತ್ತಪ್ಪ ಮತ್ತು ಜುಂಜಪ್ಪನ ಸಂಪ್ರದಾಯದ ಬಗ್ಗೆ ವಿವರವಾಗಿ ವಿವರಿಸಿದ್ದಾರೆ. ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಅಲೆಮಾರಿ ಸಮುದಾಯಗಳ ಅಧ್ಯಯನದ ಮಾಲೆಯಲ್ಲಿ, ಕಾಡುಗೊಲ್ಲ ಪುಸ್ತಕವನ್ನು ೨೦೦೮ರಲ್ಲಿ ಡಾ.ಎಂ.ಗುರುಲಿಂಗಯ್ಯ ಮತ್ತು ನಾಗಪ್ಪ ಇವರು ಬರೆದು ಪ್ರಕಟಿಸಿದ್ದಾರೆ. ಹೀಗೆ ಇನ್ನು ಹತ್ತಾರುಲೇಖನಗಳು ಕಾಡುಗೊಲ್ಲರನ್ನು ಬುಡಕಟ್ಟು ಜನರು ಎಂದು ಪ್ರತಿಪಾದಿಸಿದ್ದಾರೆ.

# ಅಧ್ಯಾಯ ೨

# ಅಲೆಮಾರಿ ಕಾಡುಗೊಲ್ಲರ ಹಿನ್ನೆಲೆ ಮತ್ತು ಅಲೆಮಾರಿತನ

೨

# ಅಲೆಮಾರಿ ಕಾಡುಗೊಲ್ಲರ ಹಿನ್ನೆಲೆ ಮತ್ತು ಅಲೆಮಾರಿತನ

## ೨.೧. ಗೊಲ್ಲ ಪದದ ನಿಷ್ಪತ್ತಿ

ಗೊಲ್ಲ ಸಮುದಾಯದ ಪದದ ಹುಟ್ಟಿನ ಬಗ್ಗೆ ಹಲವಾರು ವಿದ್ವಾಂಸರು ತಮ್ಮ ವ್ಯಾಖ್ಯಾನ ನೀಡಿದ್ದಾರೆ. ಗೊಲ್ಲ ಎಂಬ ಪದವು ವೃತ್ತಿಯನ್ನು ಸೂಚಿಸುವ ಪದವಾಗಿದೆ. ಗೋವುಗಳ ಪಾಲಕರನ್ನು ಗೊಲ್ಲ ಎಂದು ಕರೆಯಲಾಗುತ್ತದೆ. 'ಗೊಲ್ಲ' ಎಂದರೆ ಗೋವುಗಳನ್ನು ಕಾಯುವವನು ಎಂದು, 'ಕಾಡುಗೊಲ್ಲ' ಎಂದರೆ ಕಾಡಿನಲ್ಲಿ ವಾಸಿಸುವವನು ಗೊಲ್ಲನೆಂದು ಅರ್ಥೈಸಿದ್ದಾರೆ. ಗೊಲ್ಲ ಸಮುದಾಯದವರನ್ನು ಅಡವಿಗೊಲ್ಲರು ಮತ್ತು ಹಟ್ಟಿಗೊಲ್ಲರು ಎಂಬ ಹೆಸರುಗಳಿಂದಲೂ ಸಹ ಕರೆಯುತ್ತಾರೆ. ಇವರು ಕೃಷ್ಣ ವಂಶಸ್ಥರೆಂದು ಗುರುತಿಸಿಕೊಳ್ಳುತ್ತಾರೆ. ಮಹಾಭಾರತದ ಕೃಷ್ಣ ಇವರ ಮೂಲ ಪುರುಷ ಎಂಬುದು ಗೊಲ್ಲ ಸಮುದಾಯದವರ ನಂಬಿಕೆ, ಗೊಲ್ಲ ಸಮುದಾಯದವರು ಭಾರತದಾದ್ಯಂತ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಉದಾಹರಣೆಗೆ ಉತ್ತರ ಭಾರತದ, ಬಿಹಾರ, ಉತ್ತರ ಪ್ರದೇಶ, ಪಂಜಾಬ್ ಮತ್ತು ಇತರೆ ಭಾಗಗಳಲ್ಲಿ ಇವರನ್ನು ಅಹಿರ್, ಜಾಟ್, ಸಿಂಗ್, ಯಾದವ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕೇರಳದಲ್ಲಿ ಇವರನ್ನು ಯಾದವ ಮತ್ತು ಮಣಿಯಾಣಿಗಳೆಂದು, ತಮಿಳುನಾಡಿನಲ್ಲಿ ಇಂಡಿಯಾನ್, ಕೋನಾರ್‌ಗಳೆಂದು ಗುರುತಿಸಿಕೊಂಡಿದ್ದಾರೆ. ಹಾಗೆಯೇ ಆಂಧ್ರ ಪ್ರದೇಶದಲ್ಲಿ ರೆಡ್ಡಿಗೊಲ್ಲ ಹೆಸರುಗಳಿಂದ ಕರೆಯಲ್ಪಟ್ಟರೆ, ಕರ್ನಾಟಕದಲ್ಲಿ ಇವರನ್ನು ಗೊಲ್ಲ, ಗೊಲ್ಲ ರೆಡ್ಡಿ, ಯಾದವ, ಎಂಬ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಈ ಎಲ್ಲಾ ಬೇರೆ ಬೇರೆ ರಾಜ್ಯಗಳ ಗೊಲ್ಲ ಸಮುದಾಯದವರು ಆಯಾ ರಾಜ್ಯದ ಪ್ರಾದೇಶಿಕ ಬಳಕೆಯ ಹೆಸರಿನ ಜೊತೆಗೆ ಭಾರತದಾದ್ಯಂತ 'ಯಾದವ' ಎಂಬ ಹೆಸರಿನೊಂದಿಗೆ ಗುರುತಿಸಿಕೊಳ್ಳುತ್ತಾರೆ. ಆದರೂ ಕಾಡುಗೊಲ್ಲರು ಯಾದವರೆಂದು ಗುರುತಿಸಿಕೊಂಡರು. ತಮ್ಮ ಮೂಲವನ್ನು ಎಂದಿಗೂ ಬಿಡುವ ಮಾತೆ ಇಲ್ಲವೆನ್ನಬಹುದು.

ಕಾಡುಗೊಲ್ಲರು ಭಾರತೀಯ ಸಂಸ್ಕೃತಿಯಲ್ಲಿ ವಿಶಿಷ್ಟವಾದವರು. ಹಚ್ಚ ಹಸಿರಿನ ಮರಗಿಡಗಳ ಅಕ್ಕ ಪಕ್ಕ, ನಗರ ಪ್ರದೇಶಗಳಿಂದ ದೂರದಲ್ಲಿ ಹುಲ್ಲು ಗುಡಿಸಲು ಅಥವಾ ಮರದ ಎಲೆಗಳಿಂದ ಅಂದವಾದ ಜೋಪಡಿಗಳನ್ನು (ಇಂದಿಗೂ ಶಿರಾ ತಾಲ್ಲೂಕಿನಾದ್ಯಂತ ಕಾಣಬಹುದಾಗಿದೆ) ಕಟ್ಟಿಕೊಂಡು

ವಾಸಿಸುತ್ತಿದ್ದಾರೆ. ಇಂತಹ ಮುಂದುವರಿದ ಕಂಪ್ಯೂಟರ್ ಯುಗದಲ್ಲೂ ತಮ್ಮ ಬುಡಕಟ್ಟು ಲಕ್ಷಣಗಳಿಗೆ ಯಾವುದೇ ರೀತಿಯ ಧಕ್ಕೆಯಾಗಿದೆ ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ.

ಹರಿಜನ, ಗಿರಿಜನರನ್ನು ತಮ್ಮಹಟ್ಟಿಗೆ ಕಾಲಿಡದಂತೆ (ಇಂದೂ ಹರಿಜನರನ್ನು ತಿಳಿದಂತೆ ಯುವಕರು ಒಳಗೆ ಕರೆದರೆ ಬ್ಯಾಡಪ್ಪ ನಿಮ್ಮ ದೇವರು ಒಳ್ಳೆನಲ್ಲ ಎಂದು ಅಂಜಿಕೆ ತೋರಿಸುತ್ತಾರೆ). ಮಡಿಮೈಲಿಗೆಯಲ್ಲಿ, ಸೂತಕದ ಹೆಸರಿನಲ್ಲಿ ಹೆಂಗಸರನ್ನು ಹಟ್ಟಿಯಿಂದ ಹೊರಗಿಡುವ ಈ ಸಮುದಾಯ, ತಾವು ವಾಸಿಸುವ ಹಟ್ಟಿಯ ಸುತ್ತಾ ಬೇಲಿಯನ್ನು ಹಾಕಿಕೊಂಡು ಬದುಕುವುದು ಇವರ ವಿಶಿಷ್ಟ ಸಂಪ್ರದಾಯಗಳಲ್ಲಿ ಒಂದಾಗಿದೆ. ಕರ್ನಾಟಕದ ಚಿತ್ರದುರ್ಗ ತುಮಕೂರು, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚು ವಾಸಿಸುವ ಈ ಸಮುದಾಯ, ಇಂದು ಬುಡಕಟ್ಟು ಸಂಸ್ಕೃತಿ ಮತ್ತು ಸಂಪ್ರದಾಯ, ಆಚರಣೆಗಳ ಅಧ್ಯಯನಕ್ಕೆ ಅತ್ಯುತ್ತಮ ಮಾದರಿಯಾಗಿದ್ದಾರೆ. ಅಪಾರವಾದ ವಾಙ್ಞಯನ್ನು ಈ ಸಮುದಾಯವು ಹೊಂದಿದೆ.

ಬೈಗೂ-ಬೆಳಗೂ ಹಕ್ಕಿಗಳ ಇಂಚರಕ್ಕೆ ದನ ಕುರಿ ಮೇಕೆಗಳ ಜೊತೆಗೆ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾ. ಪ್ರಕೃತಿಯಲ್ಲಿ, ಪ್ರಕೃತಿಗಳಾಗಿ ಬಾಳುವ ಕಾಡುಗೊಲ್ಲರ ತಾಣಗಳು ಕೇವಲ ಹುಲ್ಲಿನಿಂದ ಕಟ್ಟಿದ ಜೋಪಡಿಗಳೆಲ್ಲ ಸಾಹಿತ್ಯದ ಮುತ್ತು, ರತ್ನಗಳನ್ನು ತುಂಬಿದ ಕಣಜಗಳು, ಜಾನಪದ ಸಾಹಿತ್ಯದ ಹಾಡುಗಳೆ ಆಗಿವೆ. ಮಡಿಮೈಲಿಗೆಯಲ್ಲಿ ಅತ್ಯಂತ ಕಟ್ಟುನಿಟ್ಟು. ಹೆಣ್ಣು ಮುಟ್ಟಾದಾಗ, ಹೆರಿಗೆಯಾದಾಗ ಸೂತಕದ ಹೆಸರಿನಲ್ಲಿ ಊರಿಂದ ಅರ್ಧ ಫಲಾಂಗ್ ದೂರ ಕಳಿಸುವ ಕ್ರೌರ್ಯದ ವರ್ತನೆ ಇಂದಿಗೂ ನಿಂತಿಲ್ಲ. ಆದರೆ ಇಂದು ಸರ್ಕಾರದಿಂದ ಪ್ರಸೂತಿ ಗೃಹಗಳನ್ನು ನಿರ್ಮಿಸುತ್ತಿದ್ದಾರೆ (ಚಿಕ್ಕಣ್ಣಯೆಣೆಕಟ್ಟೆ, ೧೯೮೮:೧). ಕಾಡುಗೊಲ್ಲ ಸಮುದಾಯದಲ್ಲೂ ಎಂತಹ ಸಂದರ್ಭಗಳೆ ಬಂದರೂ ತಮ್ಮ ನಂಬಿಕೆ, ಸಂಪ್ರದಾಯಗಳಿಗೆ ಯಾವುದೇ ಕುತ್ತು ಬರದ ಹಾಗೆ ಕಾಪಾಡಿಕೊಂಡು ಬರುತ್ತಿರುವ ಬುಡಕಟ್ಟುಗಳಲ್ಲಿ ಇದು ಒಂದು.

## ೨.೨. ಅಲೆಮಾರಿ ಪದದ ಅರ್ಥ ವಿವರಣೆ

ಮಾನವರ ಸಾಮಾಜಿಕ ವ್ಯವಸ್ಥೆಗೆ ದೀರ್ಘವಾದ ಇತಿಹಾಸವನ್ನು ಹೊಂದಿದೆ. ಮೊದಲು ಆದಿವಾಸಿ ಜೀವನ ಸಾಗಿಸುತ್ತಿದ್ದ, ಇವರು ಕಾಲ ಉರುಳಿದಂತೆ ಮೂಲ ವೃತ್ತಿಗಳಿಂದ ಹೊರ ಬರುತ್ತಲೆ ಭಿನ್ನ ವೃತ್ತಿಗಳನ್ನು ಕಂಡುಕೊಂಡರು. ವೈವಿಧ್ಯಮಯ ಬದುಕನ್ನು ಕಂಡುಕೊಂಡಿರುವುದು ಎಲ್ಲರಿಗೂ ಗೊತ್ತಿರುವ ಸಾಮಾಜಿಕ ವಿಷಯವಾಗಿದೆ. ಅದರೆ ಕೆಲವೊಂದು ಮಾನವ ಸಮುದಾಯಗಳು ಯಾವುದೆ ಸಾಂಸ್ಕೃತಿಕ ತಂತ್ರಜ್ಞಾನ ಆಧುನಿಕ ಬಿರುಗಾಳಿ ಬೀಸಿದರು, ಬಗ್ಗದೇ ತಮ್ಮದೆ ಮೂಲ ಪರಂಪರೆಯೊಂದಿಗೆ ತಮ್ಮ ಸಾಂಸ್ಕೃತಿಯ ಕಲೆಗಳೊಂದಿಗೆ ಜೀವನವನ್ನು ಸಂದರ್ಭಾನುಸಾರವಾಗಿ ನಿರ್ವಹಿಸುತ್ತಾ ಬಂದಿದ್ದಾರೆ.

ಅನ್ಯ ಸಂಸ್ಕೃತಿಯ ಅನ್ಯಾಯವನ್ನು ಎದುರಿಸುತ್ತಾ ಪ್ರತ್ಯೇಕವಾಗಿಯೇ ಜೀವಿಸುತ್ತಿರುವ ಸಮುದಾಯವೆ ಅಲೆಮಾರಿ ಸಮುದಾಯಗಳಾಗಿವೆ.

ಅಲೆಮಾರಿ ಸಮುದಾಯ ಎಂದು ಪರಿಗಣಿಸಿರುವುದರಿಂದ ಅಲೆಮಾರಿ ಎಂದರೇನು? ಎಂಬುದು ಇಲ್ಲಿ ಪ್ರಮುಖವಾದ ವಿಷಯವಾಗಿದೆ. ಜೀವನ ನಿರ್ವಹಣೆಗಾಗಿ ಉನ್ನತ ಪದವಿ, ವ್ಯಾಸಂಗಕ್ಕಾಗಿ ದೇಶ ವಿದೇಶಗಳಲ್ಲಿ ತಿರುಗಾಡಿದರೆ ಅವರು ಇದರ ಪರಿಧಿಗೆ ಬರುವುದಿಲ್ಲ. ಉದ್ಯೋಗ ನಿಮಿತ್ತ ಒಂದು ಸ್ಥಳದಿಂದ ಮತ್ತೊಂದು ಸ್ಥಳಗಳಿಗೆ ಹೋಗಿ ಬರುವ ಜನಸಮುದಾಯಗಳಿಗೆ ಈ ಪದದ ವ್ಯಾಪ್ತಿಗೆ ಸೇರುವುದಿಲ್ಲ. ವ್ಯಾಪಾರದ ಉದ್ದೇಶದಿಂದ ನೆಲೆನಿಂತು, ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಸಂಚರಿಸುತ್ತಿರುವವರನ್ನು ಅಲೆಮಾರಿಗಳೆಂದು ಹೇಳುವುದಿಲ್ಲ.

ಗ್ರಾಮ ಮತ್ತು ನಗರ ಸಂಸ್ಕೃತಿಯ ಪ್ರಭಾವಕ್ಕೆ ಸಂಪೂರ್ಣವಾಗಿ ಒಳಗಾಗದೆ ಅದರಿಂದ ದೂರವಿದ್ದು ನಿರ್ಗತಿಕವಾಗಿ ಧಾರ್ಮಿಕ ಭಿಕ್ಷಾಟನೆ, ಸ್ಮಶಾನದಲ್ಲಿ ವಾಸ, ಸಮುದಾಯದ ಕಾಯಕ, ಪ್ರಾಣಿಗಳ ಜೊತೆಯಲ್ಲಿ ಇತರರಿಗಿಂತ ಭಿನ್ನ ಪದ್ಧತಿ ರೂಪಿಸಿಕೊಂಡು ತಮ್ಮ ಮೂಲ ವೃತ್ತಿಗಳಿಂದ ಒಂದೂರಿನಿಂದ ಮತ್ತೊಂದೆಡೆಗೆ ಅಲೆಯುವ ಅಥವಾ ಚಾಲನೆ ಸ್ಥಿತಿಯಲ್ಲಿರುವ ಸಮುದಾಯವನ್ನು ಅಲೆಮಾರಿ ಸಮುದಾಯವೆನ್ನಬಹುದು. ಅಥವಾ ಪಾರಂಪರಿಕ ಸಮಾಜದಲ್ಲಿ ಆಧುನಿಕ ನಿರ್ವಹಣೆಯ ಮೂಲಕ ಒಪ್ಪತ್ತಿನ ಊಟದ ಅನ್ವೇಷಣೆಯಲ್ಲಿ ೨೧ನೇ ಶತಮಾನದಲ್ಲೂ ಅಲೆದಾಡುವ ಸಾಮಾಜಿಕ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಸಮುದಾಯಗಳನ್ನು ಇಲ್ಲಿ ಅಲೆಮಾರಿಗಳು ಎಂದು ಪರಿಭಾವಿಸಲಾಗಿದೆ(ಅಜ್ಜಯ್ಯ, ೨೦೦೬:೧೫-೬).

ಅಧ್ಯಯನದಲ್ಲಿ ಆಯ್ದುಕೊಂಡಿರುವ ಅಲೆಮಾರಿ ಸಮುದಾಯಗಳು ಜಾತಿ ಶ್ರೇಣಿಯ ಕೆಳಗೆ ಬರುವವರಾಗಿದ್ದಾರೆ. ಆ ಮೂಲಕ ತಮ್ಮದೇ ಜೀವನ ಪದ್ಧತಿಯೊಂದಿಗೆ ಬದುಕನ್ನು ಹರಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಾರೆ. ಎಲ್ಲಿ ತಮಗೆ ಯೋಗ್ಯವಾದ ಪ್ರದೇಶವೆಂದು ಅಂದುಕೊಳ್ಳುತ್ತಾರೆ, ಅಂತಹ ಕಡೆಗಳಲ್ಲಿ ಅಂದರೆ ಸ್ಮಶಾನ ಭಾಗ, ಊರಿನ ಹೊರ ಪ್ರದೇಶದಲ್ಲಿ, ನೀರು ಹರಿಯುವ ಸ್ಥಳ, ಶಾಲಾ ಮೈದಾನ, ಸಂತೆ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಚಲನಚಿತ್ರಗಳ ಮಂದಿರಗಳ ಹಿಂಭಾಗ ಇತ್ಯಾದಿ ಸ್ಥಳಗಳಲ್ಲಿ ಕೆಲವು ದಿನಗಳವರೆಗೆ ಗುಡಾರಗಳನ್ನು ನಿರ್ಮಿಸಿಕೊಂಡು ಉಳಿದುಕೊಳ್ಳುತ್ತಾರೆ. ತರುವಾಯ ಅಲ್ಲಿಂದ ಮುಂದಿನ ಪ್ರದೇಶದಲ್ಲಿ ಸಂಚರಿಸುತ್ತಾ ನೋವು, ಹಿಂಸೆ, ದೌರ್ಜನ್ಯ, ಅನುಭವಿಸಿ ತಮ್ಮ ಶ್ರೇಷ್ಠತೆಯನ್ನು ಉಳಿಸಿಕೊಂಡು ನೆಲೆನಿಂತ ಸಮುದಾಯಗಳೊಂದಿಗೆ ಮುಖಾಮುಖಿಯಾಗಿ ಜೀವನ ನಡೆಸುತ್ತಿದ್ದಾರೆ. ಆದರೂ ಆಧುನಿಕ ಬದುಕಿಗೆ ಅಲೆಮಾರಿಗಳು, ನೆಲೆ ಇಲ್ಲದೆ ಕೊಚ್ಚಿ ಹೋಗುತ್ತಿದ್ದಾರೆ. ಇವರ ಮೂಲವನ್ನು ಉಳಿಸಿಕೊಳ್ಳುವಲ್ಲಿ ಹೆಣಗಾಡುವುದೆ ನಿತ್ಯ ಜೀವನವಾಗಿದೆ.

ಅಲೆಮಾರಿಗಳ ಜೀವನ ಮೂಲ ಹುಡುಕಾಟವೇನೆಂದು ವಿಶ್ಲೇಷಿಸಿದಾಗ, ಯಾವುದೇ ಸಮುದಾಯದ ಮೂಲವನ್ನು ಶೋಧಿಸಿದವರು ನಿರ್ದಿಷ್ಟವಾಗಿ ಇಂತಹ ಮೂಲದಿಂದ ಬಂದವರು. ಇಂತಹ ಪ್ರದೇಶದಿಂದಲೆ ಬಂದವರೆಂದು ಹೇಳುವುದು ಕಠಿಣವಾದ ಕಾರ್ಯ. ಇದೇ ಮೂಲವೆಂದು ಹೇಳುವುದೂ ಕಷ್ಟವಾದುದು, ವಾತಾವರಣ, ಕಾಡಿನ ಸಂಪನ್ಮೂಲ, ನೀರಿನ ಸಂಪನ್ಮೂಲ ಹಾಗೂ ಹೇರಳವಾಗಿ ಭಿಕ್ಷೆ ದೊರೆಯುವ ಸ್ಥಳಗಳು ಬೇಟೆಗೆ ಅನುಕೂಲವಾದ ಸ್ಥಳಗಳು ಮತ್ತು ವ್ಯಾಪಾರಕ್ಕಾಗಿ ಎಲ್ಲೆಲ್ಲಿ ಅನುಕೂಲವಾಗುತ್ತದೆಯೋ ಅಲ್ಲೆಲ್ಲ ನೆಲೆಸಿರುವುದನ್ನು ಕಾಣಬಹುದಾಗಿದೆ.

ಮೂಲ ಎಲ್ಲಿ ಎಂದು ನಿಖರವಾಗಿ ಹೇಳುವುದು ಕಷ್ಟವೆನ್ನಬಹುದು. ಮೂಲದ ಬಗ್ಗೆ ಕೆದುಕುತ್ತಾ ಹೋದಂತೆಲ್ಲಾ ಇವರ ಸೃಷ್ಟಿ ಪುರಾಣಗಳಿಂದ ಮತ್ತು ಮಾಹಿತಿದಾರರಿಂದಲೂ ತಿಳಿಯಬಹುದಾಗಿದೆ. ಆದರೆ ಒಬ್ಬರ ಮಾಹಿತಿ ಒಂದೊಂದು ತೆರನಾಗಿರುತ್ತದೆ. ಶಾಪದಿಂದ, ಪ್ರಾಣಿ, ಪಕ್ಷಿಗಳಿಂದ ಋಷಿಗಳಿಂದ ಹೀಗೆ ನಾನಾ ರೀತಿಯಲ್ಲಿ ಸೃಷ್ಠಿಯಾಗಿರುವುದನ್ನು ತಿಳಿಯಬಹುದಾಗಿದೆ. ಆದಿಮ ಕಾಲದಲ್ಲಿ ಪ್ರಾಣಿಯಂತಿದ್ದ ಮಾನವ ಹಂತ ಹಂತವಾಗಿ ಬೇರೆ ಬೇರೆ ಆಯಾಮಗಳಲ್ಲಿ ಬೆಳೆದು ಬಂದಿದ್ದಾನೆ. ಈ ಹಂತಗಳಲ್ಲಿ ಬದುಕಿನಲ್ಲಿ ನಡೆದ ಎಲ್ಲಾ ಘಟನೆಗಳಿಂದ ಪ್ರಕೃತಿ ವಿಕೋಪ, ಅಕಾಲಿಕ ಮಳೆ, ಚಳಿ, ಬಿಸಿಲು, ಕ್ರೂರ ಮೃಗಗಳ ಹಾವಳಿ, ಆಹಾರದ ಅಭಾವ, ಬೇಟೆಯ ತುಡಿತ, ವ್ಯಾಪಾರದ ಅಮಲು, ಬ್ರಿಟಿಷರ ಮತ್ತು ಸ್ಥಳೀಯರ ಆಡಳಿತದಿಂದ ಬೇಸತ್ತು ಮತ್ತು ಕೆಲವೊಂದು ಮುಸ್ಲಿಂದೊರೆಗಳಿಂದ ಹಿಂಸೆಯನ್ನು ಅನುಭವಿಸಿ ಬಂದವರಾಗಿದ್ದಾರೆ. ಇಂತಹ ಸಮುದಾಯಗಳನ್ನು ಅಂದಿನ ಆಳುವ ವರ್ಗವು ಧರ್ಮದ ಪ್ರಚಾರದ ಸೇವೆಗಾಗಿ ಹಾಗೂ ಇನ್ನಿತರ ಕಾರಣಗಳಿಗಾಗಿ ಬಳಸಿಕೊಂಡರು. ವೈವಿಧ್ಯಮಯ ಸ್ಥಳಗಳಲ್ಲಿ ಚದುರಿ ಹಂಚಿ ಹೋದ ಸಮುದಾಯಗಳು ಅಲೆಮಾರಿಗಳಾಗಿ ವಾಸದ ನೆಲೆ-ನೆಲವಿಲ್ಲದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಲೇ ಇದ್ದಾರೆ. ಆಳುವ ಸಮುದಾಯದ ದಬ್ಬಾಳಿಕೆಗೆ ತಲೆಮರೆಸಿಕೊಂಡು ಕಾಡಿಗೆ ಪ್ರವೇಶಿಸಿ, ಹಿಂಸೆಯನ್ನು ಸಹಿಸಿಕೊಂಡು ಅಡ್ಡದಾರಿ ಹಿಡಿಯಬೇಕಾಯಿತು. ಇದನ್ನು ಸರ್ಕಾರಗಳು ಅಪರಾಧ ಎಂದು ಹೇಳಿದವು. ಇದರಲ್ಲಿ ತೊಡಗಿದ ಸಮುದಾಯಗಳನ್ನು ಅಪರಾಧಿ ಬುಡಕಟ್ಟು ಎಂದು ಪರಿಗಣಿಸಿದವು. ಕೆಲವು ಅಲೆಮಾರಿಗಳು ತಮ್ಮ ಮೂಲ ಕಸುಬುಗಳಿಂದಲೆ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಭಿಕ್ಷೆ ಬೇಡಿಕೊಂಡು ಜೀವಿಸುತ್ತಿದ್ದಾರೆ. ಆದ್ದರಿಂದ ಅಲೆಮಾರಿಗಳ ಮೂಲ ಹುಡುಕಾಟ ತುಂಬಾ ಕಷ್ಟಕರವಾದುದು ಶೋಧಿಸಿದರೆ ಮಾತ್ರ ಸಮಗ್ರವಾಗಿ ಮಾಹಿತಿ ದೊರೆಯುತ್ತದೆ. ಹೀಗಾಗಿ ಅಲೆಮಾರಿಗಳ ಮೂಲವನ್ನು ಶೋಧಿಸುವುದು ಮೂಲ ಉದ್ದೇಶವಾಗಿದೆ. ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನವಿಟ್ಟುಕೊಂಡು ಅಲೆಮಾರಿಗಳ ನೈಜತೆಯ ಸಾಮಾಜಿಕ, ಆರ್ಥಿಕ ರಚನೆಯ ರೀತಿಯದ್ದಾಗಿದೆ ಎಂಬುದನ್ನು ಈ ಸಂಶೋಧನೆಗಳಿಂದ ತಿಳಿದುಕೊಳ್ಳಬೇಕಾಗಿದೆ(ಅಜ್ಜಯ್ಯ ಕೆ., ೨೦೦೬:೩೧-೨). ಈ ಅಧ್ಯಯನ ವ್ಯಾಪ್ತಿಯಲ್ಲಿ ಕಾಡುಗೊಲ್ಲ ಸಮುದಾಯದಲ್ಲಿ ಇಂದಿಗೂ

ಅಲೆಮಾರಿ ಜೀವನ ನಡೆಸುತ್ತಿರುವ ದೊಡ್ಡ ಸಮುದಾಯವಾಗಿದ್ದು, ಇದರ ಮೂಲ ಶೋಧನೆಯ ಜೊತೆಗೆ ಇದರ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡುವುದು ಈ ಅಧ್ಯಯನದ ಉದ್ದೇಶವಾಗಿದೆ.

## ೨.೩. ಸಮುದಾಯದ ಮೂಲ

ಗೊಲ್ಲ ಅಥವಾ ಯಾದವರು ಮೂಲತಃ ಉತ್ತರ ಭಾರತಕ್ಕೆ ಸೇರಿದವರು ಮತ್ತು ಆರ್ಯರ ಒಂದು ಬಣಕ್ಕೆ ಸೇರಿದವರಾಗಿದ್ದರು. ಈ ವಿಷಯಕ್ಕೆ ಪೂರಕವಾಗಿರುವಂತೆ ಡಾ.ಬಿ.ಆರ್ .ಅಂಬೇಡ್ಕರ್ ರವರ ಮಾಹಿತಿಗಳನ್ನು ಗಮನಿಸಬಹುದಾಗಿದೆ. "ವೈದಿಕ ಆರ್ಯರು ಒಂದೆ ಬಣ್ಣದವರಾಗಿರಲಿಲ್ಲ. ಅವರ ಮೈಬಣ್ಣದಲ್ಲಿ ವ್ಯತ್ಯಾಸವಿತ್ತು. ಕೆಲವರು ತಾಮ್ರ ವರ್ಣದವರಾಗಿದ್ದರು. ಕೆಲವರು ಬೆಳ್ಳಗೆ - ಇನ್ನು ಕೆಲವರು ಕಪ್ಪಗೆ ಇದ್ದರು. ದಶರಥ ಮಗನಾದ ರಾಮನನ್ನು 'ಶ್ಯಾಮ' ಕಪ್ಪನೆಯ ಮೈಬಣ್ಣದವನೆಂದು ವರ್ಣಿಸಲಾಗಿದೆ. ಹಾಗೆಯೆ ಆರ್ಯರ ಇನ್ನೊಂದು ಬಣವಾದ ಯಾದವರಲ್ಲಿ ಹುಟ್ಟಿದ ಕೃಷ್ಣನು ಸಹ ಕಪ್ಪಗಿದ್ದನು.

ಗೊಲ್ಲ ಸಮುದಾಯದವರನ್ನು ಕುರಿತಂತೆ ಇರುವ ಐತಿಹ್ಯವೂ ಈ ಮಾತಿಗೆ ಪೂರಕವಾಗಿ ನಿಲ್ಲುತ್ತದೆ. ಅದರ ಪ್ರಕಾರ ಕಾಡುಗೊಲ್ಲರು ಮೊದಲಿಗೆ ಉತ್ತರ ಭಾರತದ ಕಾಡುಗಳಲ್ಲಿ ವಾಸವಾಗಿದ್ದರು. ಇವರ ಮೂಲ ಪುರುಷ ಅಂಬೆರಾಯ, ತುಂಬೆರಾಯರು. ಮುಂದೆ ಅವರ ವಂಶದಲ್ಲಿ ಚಿತ್ತ ಮುತ್ತಿ ಚಂದಮುತ್ತಿಯರೆಂಬ ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಅವರು ಬೆಳೆದು ದೊಡ್ಡವರಾದಾಗ ತಮ್ಮ ಕುಲವೃತ್ತಿಯಂತೆ ಹಾಲು ಮೊಸರುಗಳನ್ನು ಮಡಿಕೆಗಳಲ್ಲಿ ತುಂಬಿಕೊಂಡು ದೆಹಲಿ ಪಟ್ಟಣಕ್ಕೆ ಮಾರಲು ಹೋದರು. ಅಲ್ಲಿ ಸುರ ಸುಂದರಿಯರಾದ ಇವರ ಸೌಂದರ್ಯಕ್ಕೆ ಮಾರುಹೋಗಿ ಅವರನ್ನು ವಿವಾಹವಾಗಲು ದೆಹಲಿಯ ನವಾಬ ಹಲವಾರು ಉಪಾಯಗಳನ್ನು ಮಾಡಿದರೂ ಸಾಧ್ಯವಾಗಲಿಲ್ಲ. ಕೊನೆಗೆ ಅವರ ತಂದೆಯರಾದ ಚಿತ್ತಮುತ್ತಿ, ಚಂದಮುತ್ತಿಯ ಬಳಿಗೆ ಹೋಗಿ ಕೇಳಿದಾಗ ಅವರ ಒಪ್ಪಲಿಲ್ಲ. ಅದರೆ ನವಾಬನಿಗೆ ವಿರುದ್ಧವಾಗಿ ವರ್ತಿಸಿದರೆ ಬದುಕುವುದೆ ಕಷ್ಟವಾಗುತ್ತದೆ. ಒಪ್ಪಿನಡೆದರೆ ಹಾಲಿನಂಥ ಕುಲ ನೀರು ಪಾಲಾಗುತ್ತದೆ. ಆದರೂ ಈ ಸಮಯದಲ್ಲಿ ಅವರಿಗೆ ಕುಲವೆ ಮುಖ್ಯವಾಯಿತು. ಹಾಗಾಗಿ ಕುಲಶುದ್ಧಿಯನ್ನು ಕಾಪಾಡಿಕೊಳ್ಳಲು ಹದಿನೆಂಟು ಜಾತಿ, ಹನ್ನೆರೆಡು ಕೈವಾಡಗಳನ್ನು ಕಟ್ಟಿಕೊಂಡು ತಮ್ಮ ಜಾನುವಾರುಗಳನ್ನೆಲ್ಲಾ ಹೊಡೆದುಕೊಂಡು ದಕ್ಷಿಣ ಭಾರತಕ್ಕೆ ರಾತ್ರೋರಾತ್ರಿ ಹೊರಟರು.

ಬರುವಾಗ ಮಾರ್ಗ ಮಧ್ಯದಲ್ಲಿ ನದಿಯೊಂದು ಅಡ್ಡ ಹರಿಯುತ್ತಿತ್ತು. ಆಗ ಅವರಿಗೆ ಏನು ತೋಚದಂತಾಗಿ, ಕಂಗಾಲಾಗಿ ಕುಳಿತರು. ಹಿಂದೆ ನವಾಬನ ಸೈನಿಕರು ಬೆನ್ನಟ್ಟಿ ಬರುತ್ತಿದ್ದರು. ಆಗ ಜಲ್ದಿ ಬಪ್ಪರಾಯ ಭಕ್ತಿಯಿಂದ ನದಿಯನ್ನು ಪೂಜಿಸಿ ತನ್ನ ತಲೆಯನ್ನೆ ಕಡಿದು ಅರ್ಪಿಸಿದಾಗ ನದಿದಾರಿ ಮಾಡಿ

ಕೊಟ್ಟಿತು. ನಂತರ ಎಲ್ಲರೂ ಧಾಟಿದ ಅನಂತರ ನದಿಕೂಡಿಕೊಂಡಿತು. ನವಾಬರ ಸೈನಿಕರು ನದಿಯನ್ನು ದಾಟಲಾಗದೆ ಹಿಂದೆ ಹೋದರು. ಆಗ ಬಂದ ಕಾಡುಗೊಲ್ಲರು ವಿಜಯನಗರದ ಆಸುಪಾಸಿನಲ್ಲಿ ವಾಸಿಸತೊಡಗಿದರು.

ಒಕ್ಕಲಿಗರನ್ನು ಕುರಿತಂತೆ ಇರುವ ಐತಿಹ್ಯವು ಇದೆ ರೀತಿಯಲ್ಲಿದೆ. ಅಲ್ಪಸ್ವಲ್ಪ ಬದಲಾವಣೆಯನ್ನು ಬಿಟ್ಟರೆ ಉಳಿದಂತೆ ಎರಡಕ್ಕೂ ಸಾಮ್ಯತೆಯಿದೆ. ಆ ಐತಿಹ್ಯದ ಪ್ರಕಾರ ಹಿಂದೆ ಮೊಘಲರ ಆಳ್ವಿಕೆಯಲ್ಲಿ ಉತ್ತರ ಭಾರತದಲ್ಲಿ ದೆಹಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ನಲವತ್ತೆಂಟು ಗೋತ್ರದ ಒಕ್ಕಲಿಗರು ವಾಸವಾಗಿದ್ದರಂತೆ. ಮೊಘಲರ ದಬ್ಬಾಳಿಕೆಯನ್ನು ಅನುಭವಿಸಿ ಬೇಸತ್ತು ದಕ್ಷಿಣ ಭಾರತಕ್ಕೆ ವಲಸೆ ಬಂದರು. ಬರುವಾಗ ದಾರಿಯಲ್ಲಿ ಒಂದು ನದಿ ಅಡ್ಡಲಾಗಿತ್ತು, ಆ ನದಿಯನ್ನು ದಾಟಲಾಗದೆ ಹಿಂದಕ್ಕೆ ಹೋಗಲೂ ಆಗದೆ ಕೈಚೆಲ್ಲಿ ಕುಳಿತಿದ್ದಾಗ, ತಮ್ಮ ದೇವತೆಯನ್ನು ನೆನೆದು ಭಕ್ತಿಯಿಂದ ಪ್ರಾರ್ಥಿಸಿದರು. ಇದರಿಂದ ಪ್ರಸನ್ನಳಾದ ದೇವತೆ ಅವರಿಗೆ ನದಿಯನ್ನು ಇಬ್ಭಾಗ ಮಾಡಿ ದಾರಿ ತೋರಿಸಿದಳು. ನದಿಯ ಮಧ್ಯದಲ್ಲಿ ದಾರಿ ಮಾಡಿಕೊಟ್ಟ ದೇವತೆಯನ್ನು ಮಾಧ್ಯಮಾಂಬ ಎಂದು ಕರೆದು ಆರಾಧಿಸಲು ಆರಂಭಿಸಿದರು. ಈ ದೇವತೆ ಮೊದಲಿಗೆ ಯಾದವರ ಆರಾಧ್ಯ ದೇವತೆಯಾಗಿದ್ದಳು. ಅನಂತರ ಒಕ್ಕಲಿಗರೂ ಈಕೆಯನ್ನು ತಮ್ಮ ಆರಾಧ್ಯ ದೈವವೆಂದು ಪೂಜಿಸ ತೊಡಗಿದರು. ಈಗಾಗಲೆ ಈ ಮಧ್ಯಮಾಂಬ ದೇವತೆಯನ್ನು ಮದ್ದೆಮ್ಮ ಎಂದು ಕರೆದು ಪಾವಗಡ ತಾಲ್ಲೂಕಿನ (ತುಮಕೂರು ಜಿಲ್ಲೆ) ಮದ್ದಿಬಂಡೆಯಲ್ಲಿ ಕಾಡುಗೊಲ್ಲರು, ಶಿರಾ ತಾಲ್ಲೂಕಿನ ಕಾಮಗೊಂಡನ ಹಳ್ಳಿಯಲ್ಲಿ ಒಕ್ಕಲಿಗರೂ ತಮ್ಮ ಕುಲದೇವತೆಯೆಂದು ಪೂಜಿಸುತ್ತಿದ್ದಾರೆ (ತಿಮ್ಮಯ್ಯ ಕೆ., ೨೦೦೭:೧೦). ಹಲವಾರು ಸಂಪ್ರದಾಯ ಆಚರಣೆ ಗಳಲ್ಲಿ ಕಾಡುಗೊಲ್ಲ ಸಮುದಾಯವು ಕೆಲವೊಂದು ನಂಬಿಕೆ, ಆಚರಣೆಗಳಲ್ಲಿ ಒಕ್ಕಲಿಗ, ಕುರುಬ, ಬೇಡ, ಸಮುದಾಯಗಳೊಂದಿಗೆ ಸಂಬಂಧಗಳನ್ನು ಹೊಂದಿರುವ ಕುರುಹುಗಳಾಗಿವೆ.

ಈ ಎಲ್ಲಾ ಆಧಾರಗಳ ಪ್ರಕಾರ ಗೊಲ್ಲರು ಅಥವಾ ಕಾಡುಗೊಲ್ಲ ಸಮುದಾಯದವರು ಉತ್ತರ ಭಾರತದ ಆರ್ಯರ ಒಂದು ಪಂಗಡವಾಗಿದ್ದರು. ಒಕ್ಕಲಿಗರು ಮೊದಲಿಗೆ ಯಾದವ ಅಥವಾ ಗೊಲ್ಲ ಸಮುದಾಯಕ್ಕೆ ಅಥವಾ ವಂಶಕ್ಕೆ ಸೇರಿದವರೆ ಆಗಿದ್ದಾರೆ. ಈ ಸಂಬಂಧವಾಗಿ ದೇಜಗೌ ಅವರು ಹೀಗೆ ಹೇಳುತ್ತಾರೆ. "ಕುಂಚಿಟಿಗರು, ಕುರುಬರು, ಕಾಡುಗೊಲ್ಲ ಸಮುದಾಯದವರು ಮೂಲತಃ ಒಂದೆ ವಂಶದವರಿರಬೇಕು ಇವಲ್ಲವೇ ಒಂದೆ ಮನೆಯವರಿರಬೇಕು. ಈ ಮೂರು ಜಾತಿಯವರೂ ಹೆಚ್ಚು ಕಡಿಮೆ ಒಂದೇ ಸಂಪ್ರದಾಯದವರು, ಅವರ ನಡೆ ನುಡಿಗಳಲ್ಲೂ ಭೇದವಿಲ್ಲ, ಒಂದೇ ಕೇರಿಯಲ್ಲಿ ಇಂದಿಗೂ ಅಣ್ಣ ತಮ್ಮಂದಿರಂತೆ ವಾಸಿಸುತ್ತಿದ್ದಾರೆ. ಅಷ್ಟೇ ಅಲ್ಲ ಕೂಳು ಕೊಡೆಯೊಂದನ್ನು ಉಳಿದರೆ ಇವರಲ್ಲಿ ಭೇದವಾಗಲಿ ಪ್ರತ್ಯೇಕತೆಯಾಗಲಿ ಕಾಣುವುದಿಲ್ಲ. ಮೂಲತಃ ಒಂದೇ ಆಗಿದ್ದ ಜನ ಕಸುಬೇ ಕಾರಣವಾಗಿ ಬೇರೆಯಾದರು. ಬೇರೆಯಾದ ಮೇಲೆ ಕೂಳು ಕೂಡೆಯಿಂದ ಅವರು ಸಂಪೂರ್ಣವಾಗಿ ಬೇರ್ಪಟ್ಟರು,

ಮುಂದುವರಿದಂತೆ ಗೊಲ್ಲ ಸಮುದಾಯದಲ್ಲಿಯೂ ಎರಡು ಪಂಗಡಗಳಾಗಿ ಒಡೆದು ಹೋಯಿತು. ಪಶುಪಾಲನೆಯನ್ನೇ ಪ್ರಧಾನವಾಗಿ ಅವಲಂಬಿಸಿದವರು ಅದೇ ಕಾರಣಕ್ಕಾಗಿ ಊರ ಹೊರಗೆ ಪ್ರತ್ಯೇಕವಾಗಿ ದನ ಕರುಗಳನ್ನು ಮೇಯಿಸಿಕೊಂಡು ಅವುಗಳಿಗೆ ರೊಪ್ಪಗಳನ್ನು ಕಟ್ಟಿಕೊಂಡು ಕಾಡುಗಳಲ್ಲಿ ವಾಸಿಸತೊಡಗಿ ಕಾಡುಗೊಲ್ಲರಾದರು. ವ್ಯವಸಾಯವನ್ನವಲಂಬಿಸಿದ ಪಂಗಡ ಊರುಗೊಲ್ಲರಾಗಿ ಉಳಿದರು. ಇವರಲ್ಲೂ ಕ್ರಮೇಣ ಕೂಳುಕೊಡೆಗಳು ನಿಂತು ಸಂಪೂರ್ಣ ಬೇರೆಯಾದಂತೆ ಕಾಣುತ್ತದೆ (ತಿಮ್ಮಯ್ಯ ಕೆ., ೨೦೦೭:೨೧).

## ೨.೪. ಕಾಡುಗೊಲ್ಲರ ಅಲೆಮಾರಿತನ

ವಲಸೆ; ದನಗಾಹಿಗಳು 'ಪಡುವ ಹೋಗುವ' ಸಂಪ್ರದಾಯ ಎತ್ತಪ್ಪ, ಜುಂಜಪ್ಪನ ಕಾಲದಲ್ಲಿ ಸಮೃದ್ಧವಾದ ಪಶುಸಂಪತ್ತು ತುಂಬಿತ್ತು. ಹುಲ್ಲು ನೀರಿಗಾಗಿ ಸಾಕಷ್ಟು ಹುಲ್ಲುಗಾವಲುಗಳು, ಗೋಮಾಳಗಳು, ಗೋಕಟ್ಟೆಗಳು ಇರುತ್ತಿದ್ದವು. ಇಷ್ಟೆಲ್ಲ ಇದ್ದು ಒಮ್ಮೊಮ್ಮೆ 'ಗೂಟ್ಟು'(ಬರ) ಬಂದು ದನಗಳಿಗೆ ಹುಲ್ಲು-ನೀರಿಲ್ಲದೆ ಪರದಾಡುವ ಪರಿಸ್ಥಿತಿ ಉಂಟಾಗುತ್ತಿತ್ತು. ಎತ್ತಪ್ಪ-ಜುಂಜಪ್ಪ ಸೇರಿದಂತೆ ಅಸಂಖ್ಯ ಈರಗಾರರ ಕತೆಗಳಲ್ಲೆಲ್ಲಾ ಹುಲ್ಲು ನೀರಿನ ಬವಣೆಯ ಚಿತ್ರಗಳೆ ತುಂಬಿವೆ. ಹುಲ್ಲು ನೀರಿಗಾಗಿ ಎಂತೆಂತಹ ಸಾಹಸಗಳನ್ನು, ಎಂತೆಂತಹ ಗಂಡಾಂತರಗಳನ್ನು ಎದುರಿಸಬೇಕಿತ್ತು ಎಂಬುದನ್ನು ಅಂದಿನ ದನಗಾಹಿಗಳ ಬದುಕಿನ ಕತೆಗಳನ್ನು ನೋಡಿದರೆ ತಿಳಿದು ಬಿಡುತ್ತದೆ. ಹೆಜ್ಜೆ ಹೆಜ್ಜೆಗೂ ಅಪಾಯವನ್ನು ಎದುರಿಸುತ್ತಾ ತಮ್ಮ ದನಗಳ ಉಳಿವಿಗಾಗಿ ಹೋರಾಡುವ ದನಗಾಹಿಗಳ ಚಿತ್ರಗಳು ಮನ ಕಲಕುತ್ತವೆ. ಈ ದನಗಾಹಿಗಳ ಬದುಕಿನ ಕತೆಗಳು, ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಬೇಟೆ ಪಶುಪಾಲನೆಯ ಕತೆಗಳೇ ಆಗಿವೆ.

ಜುಂಜಪ್ಪ ಬೇಳೂರು ಪ್ರಕರಣದಲ್ಲಿ ಒಂದು ಬಲಿಷ್ಟ ಪಾಳೆಪಟ್ಟಿನ ಪಾಳೇಗಾರನನ್ನೆ ಇದಿರು ಹಾಕಿ ಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಎತ್ತಪ್ಪನ ಕಥೆಯೂ ಹುಲ್ಲು, ನೀರಿನ ಹೋರಾಟದ ಕತೆಯೆ ಆಗಿದೆ. ಬರಬಿದ್ದು, ದನ ಉಪವಾಸದಿಂದ ನೆಲಹತ್ತಿ ಗೆದ್ದಲು ಹತ್ತಿದಾಗ ಈ ಪಶುಪಾಲಕ ವೀರರು ಅಸಾಯಕರಾಗಿ ಕಣ್ಣೀರುಗೆರೆಯುವ ಚಿತ್ರ ಮನೆಮುಟ್ಟುವಂತಿದೆ. ಅಂತಹ ಸಂದರ್ಭದಲ್ಲಿ ಅವರು ಹುಲ್ಲು ನೀರು ಹುಡುಕಿಕೊಂಡು ಅಲೆಯಬೇಕಾಗಿತ್ತು. ಎತ್ತಪ್ಪ ಜುಂಜಪ್ಪನ ಕತೆಗಳಲ್ಲೂ ಅವರ ದನಗಳು ಕಾವಲಿನಿಂದ ಕಾವಲಿಗೆ ಅಲೆಯುವ ಚಿತ್ರಗಳೆ ತುಂಬಿವೆ. ಜುಂಜಪ್ಪನಂತೂ 'ಎಲ್ಲಿ ಹುಲ್ಲುನೀರು ಐತೋ, ಅದೇ ನನ್ನ ಮನಿ, ಮಾರು' ಎಂದು ಹೇಳುವುದೂ ಪಶುಪಾಲಕ ಸಂಸ್ಕೃತಿಯ ಸಾರ ಸಂಗ್ರಹದಂತಿದೆ. ಹುಲ್ಲು ನೀರಿಗಾಗಿ ಪಡುವ ಹೋಗುವುದು ಎಂದರೆ ಪಶ್ಚಿಮ ಘಟ್ಟಗಳ 'ಮಲಸೀಮೆ'ಗೆ ಹೋಗುವ ಕತೆಯನ್ನು ಹೇಳುತ್ತದೆ. ದಕ್ಷಿಣ ಸಂಪ್ರದಾಯದ ಜುಂಜಪ್ಪನ ಕತೆಯಲ್ಲಿ

ಜುಂಜಪ್ಪನ ದನಗಳು ಮಲಸೀಮೆಗೆ ಹೋಗುವ ಚಿತ್ರ ಬರುತ್ತದೆ. ಕಳೆದ ಶತಮಾನದಲ್ಲಿ ದನಗಾಹಿಗಳು ಹುಲ್ಲು, ನೀರು ಹುಡುಕುತ್ತಾ ಹೋಗುತ್ತಿದ್ದ ಚಿತ್ರ ಎಂಬ 'ಎಫ್ ಬ್ಯುಕಾನೆನ್'(Journey through Mysore Canara and Malabar) ಕೃತಿಯಲ್ಲಿ ಕಣ್ಣಿಗೆ ಕಟ್ಟಿದಂತೆ ದೊರೆಯುತ್ತದೆ. ಅವರು ಹುಲ್ಲು, ನೀರು ಯಾವ ಜಾಗದಲ್ಲೂ ಸಮೃದ್ಧವಾಗಿ ಸಿಗುತ್ತದೆಯೇ ಅಲ್ಲಿಯೇ ಇದ್ದು ಬಿಡುತ್ತಿದ್ದರು. ಅದು ಕಾಡಾದರೂ ಸರಿ ನಾಡಾದರೂ ಸರಿ, ಅವರು ದನಕರುಗಳೊಂದಿಗೆ ಕುರಿ, ಮೇಕೆಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಅವರು ಹುಲಿಗಳಿಂದ ದೂರವಿರಲು ರಾತ್ರಿಯೆಲ್ಲಾ ಬೆಂಕಿ ಹಾಕಿಕೊಂಡು ಮಲಗದೆ ಕಾಯುತ್ತಿದ್ದರು. ಕಳ್ಳರೊಂದಿಗೆ ಅಂದಿನ ಪಾಳೆಗಾರರು ದೌರ್ಜನ್ಯದಿಂದ ಕುರಿ-ಮೇಕೆಗಳನ್ನು ಕದ್ದುಕೊಂಡು ಹೋಗುತ್ತಿದ್ದರು. ಆದರೆ ಇರಿಯಲು ಬರುವ ದನಗಳನ್ನು ಯಾರು ಮುಟ್ಟುತ್ತಿರಲಿಲ್ಲ ಎಂಬ ವಿವರಗಳನ್ನು ಕೊಡುತ್ತಾನೆ. ಕಳೆದ ಶತಮಾನದ ಪಶುಪಾಲನೆಯ ಚಿತ್ರವೆ ಇಷ್ಟು ಘೋರವಿರುವಾಗ, ಇನ್ನು ಎತ್ತಪ್ಪ, ಜುಂಜಪ್ಪರ ಕಾಲದಲ್ಲಿ ತಲೆ ಒಡೆದರೂ ಕೇಳುವವರೆ ಇರಲಿಲ್ಲ. ಬಹಳಷ್ಟು ಪಶುಪಾಲಕ ಕಾಡುಗೊಲ್ಲರ ಬದುಕು ಹೀಗೆ ಮ್ಯಾಸ ಬೇಡರಿಂದ ತಲೆ ಒಡಿಸಿಕೊಂಡ ಸತ್ತಕತೆಗಳನ್ನು ಹೇಳುತ್ತವೆ. ಕಾಡು ಪ್ರಾಣಿಗಳು (ಹುಲಿ, ಹಂದಿ, ತೋಳ) ಧಾಳಿಗೆ ಸಿಕ್ಕು ಸತ್ತ ಅನೇಕ ಮಂದಿ ಈರಗಾರರ ಕತೆಗಳೂ ಇವೆ (ಮೀರಾಸಾಬಿಹಳ್ಳಿ ಶಿವಣ್ಣ, ೨೦೦೫:೫೧೮).

ಆದರೆ ಪಶು ಸಂಪತ್ತು ಇಂದು ಸಂಪೂರ್ಣ ನಾಶವಾಗಿ ಕುರಿಗಳ ಸಾಕಾಣೆ ನಡೆದಿದೆ. ಹಿಂದೆ ಪಶು ಸಂಪತ್ತಿನೊಂದಿಗೆ ಹುಲ್ಲು-ನೀರಿಗಾಗಿ ಪಡುವಣದಿಕ್ಕಿನತ್ತ ತಿರುಗಿಸುತ್ತಾರೆ. ಚಿತ್ರದುರ್ಗ ತುಮಕೂರು ಜಿಲ್ಲೆಯ ಬಯಲು ಸೀಮೆಯ ಈ ಭಾಗದಲ್ಲಿ ಮಳೆಗಾಲ ಮುಗಿಯುತ್ತಲೆ, ಅಂದರೆ ಜನವರಿ ತಿಂಗಳ ಸುಮಾರಿನಲ್ಲಿ ಮಲೆನಾಡಿಗೆ ಹೋದರೆ ಮತ್ತೆ ಬರುವುದು ಈ ಬಯಲು ಸೀಮೆಯಲ್ಲಿ ಮಳೆ ಬಂದು ಹುಲ್ಲು ಬಿದ್ದ ನಂತರವೆ, ಹೆಚ್ಚು ಕಡಿಮೆ ಜೂನ್ ತಿಂಗಳಲ್ಲಿ ಅವರು ಹಿಂದಕ್ಕೆ ಬರುತ್ತಾರೆ. ಇದು ಪ್ರತಿವರ್ಷ ಮಾಮೂಲಿಯಾಗಿ ನಡೆಯುವ ದಿನಚರಿ. ಹೀಗೆ ಪ್ರತಿಸಾರಿ ಮಲಸೀಮೆಗೆ ಹೋಗುವ ಕುರಿಗಾಹಿಗಳು ಕಾಡು ಮೇಡುಗಳ ಮಧ್ಯದಲ್ಲಿ ತಮ್ಮದೆ ಆದ ದಾರಿಯನ್ನು ಕಂಡುಕೊಂಡಿರುತ್ತಾರೆ. ಒಂದೊಂದು ಭಾಗದಿಂದ ಪಡುವ ಹೋಗುವ ಜನ ತಮ್ಮದೆ ಆದ ಬೇರೆ ಬೇರೆ ದಾರಿಗಳ ಮೂಲಕ ಮಲೆಸೀಮೆ ತಲುಪುತ್ತಾರೆ. ಆ ದಾರಿಯ ಮಧ್ಯೆ ಸಿಗುವ ಕೆಲವೊಂದು ದೇವತೆಗಳನ್ನು ಆರಾಧಿಸುತ್ತಾರೆ. ಮಲೇಸೀಮೆಗೆ ಹೋಗುವವರೆಗೂ ದಾರಿಯ ಉದ್ದಕ್ಕೂ ಸಿಗುವ ಗ್ರಾಮಗಳಲ್ಲಿ ಆ ಊರಿನ ಸ್ಥಿತಿವಂತರ ಹೊಲಗಳಲ್ಲಿ 'ಮಂದೆ' ಬಿಡುತ್ತಾರೆ. ಬೆಳಿಗ್ಗೆಯೆಲ್ಲಾ ಮೇಯ್ದು ಕುರಿಗಳು ಅಂದು ರಾತ್ರಿ ಹೊಲದಲ್ಲಿ ತಂಗಿ, ಬೆಳಿಗ್ಗೆ ಎದ್ದು ಗಂಜು ಹೊಯ್ದು, ಪಿಚ್ಚಿಗೆ ಉದುರಿಸಿ ಮುಂದಿನ ಊರಿಗೆ ಹೋಗುತ್ತವೆ. ಇದರಿಂದ ಭೂಮಿಯ ಫಲವತ್ತತೆ ಹೆಚ್ಚುತ್ತದೆ. ಈ ರೀತಿ 'ಮಂದೆ' ಬಿಟ್ಟಿದ್ದಕ್ಕೆ ಒಂದೊಂದು ರಾತ್ರಿಗೆ ಇಷ್ಟು ಎಂದು ಮೊದಲೇ ಮಾತನಾಡಿಕೊಂಡಂತೆ ಹಣ ಮತ್ತು ಭತ್ಯೆವು(ಕಾಳು-ಕಡ್ಡಿಗಳನ್ನು)

ಪಡೆದುಕೊಳ್ಳುತ್ತಾರೆ. ದಾರಿಯುದ್ದಕ್ಕೂ ಇವರು ಭತ್ಯೆಯನ್ನು ಹೀಗೆ ಸಂಗ್ರಹಿಸುತ್ತಾ, ಬಳಸುತ್ತಾ ಗುರಿಮುಟ್ಟುತ್ತಾರೆ. ಇವರ ಪಾತ್ರಕ-ಪಡಗ, ಬಟ್ಟೆ-ಬರೆ, ಕಂಬಳಿ, ಹಚ್ಚಡಗಲ್ಲದೆ ಅಗತ್ಯದ ಕೆಲವು ಸಾಮಗ್ರಿಗಳನ್ನು ಹೊರಲು ಕತ್ತೆಗಳನ್ನು ಸಾಕಿಕೊಂಡಿರುತ್ತಾರೆ. ಮಂದೆಯ ಹಿಂದೆ ಈ ಕತ್ತೆಗಳು ಸರಕು ಹೊತ್ತು ಸಾಗುತ್ತವೆ.

ಹೀಗೆ ಸಾಗುವಾಗ ದಾರಿಯ ಮಧ್ಯದ ಕೆಲವು ನಿರ್ದಿಷ್ಟ ಜಾಗದಲ್ಲಿ ಉಳಿದುಕೊಂಡು ಅಲ್ಲಿರುವ ದೇವರಿಗೆ ಕುರಿ ಕಡಿದು ಹರಕೆ ಒಪ್ಪಿಸಿ, ತಮ್ಮ ಪ್ರಾಣಿ ಸಂಪತ್ತು ಕ್ಷೇಮವಾಗಿ ಹಿಂತಿರುಗಿ ಬರುವಂತೆ ಆಶೀರ್ವದಿಸಿ ಎಂದು ಬೇಡಿ ಮುಂದೆ ಹೋಗುತ್ತಾರೆ. ಅಂಥ ಎರಡು ಪ್ರಮುಖ ನೆಲೆಗಳ ಬಗ್ಗೆ ಇಲ್ಲಿ ನೋಡಬಹುದಾಗಿದೆ.

**ದಿಣ್ಣೆ ಕರಿಯಮ್ಮ :** ಈಕೆಯ ನೆಲೆ ಶಿರಾ ತಾಲೂಕಿನ ಬೇವಿನ ಹಳ್ಳಿಯಲ್ಲಿದೆ. ಮರಮೂರ್ತಿ ಊರಲ್ಲಿದೆ. ಮೂಲ ಮೂರ್ತಿ ಊರಿಗೆ ೨ ಕಿ.ಮೀ. ದೂರದ ಬೊಮ್ಮನಕುಂಟೆ ದಿಣ್ಣೆಯ ಮೇಲಿದೆ. ಈಕೆ ಎತ್ತಪ್ಪನ ಕತೆಯಲ್ಲಿ ಬರುತ್ತಾಳೆ. ಎತ್ತಪ್ಪನ ಕರುವಿನ ಗೂಡಿನಲ್ಲಿ ಕಲ್ಲಿನ ಬೆನವನ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಎತ್ತಯ್ಯ ದಿನಾ ಹಟ್ಟಿಯ ಕಸ ವಡೆಯುವಾಗ ಪ್ರತಿದಿನ ಇಷ್ಟಿಷ್ಟೇ ಮೇಲಕ್ಕೆ ಏಳುತ್ತಿದ್ದಳು. ಎತ್ತಿನ ಕರುಗಳಿಗೆ ಮಲಗುವಾಗ ಇದು ಒತ್ತುತ್ತದೆ ಎಂದು ಎತ್ತಯ್ಯ ದಿನಾಕಲ್ಲು ತೆಗೆದುಕೊಂಡು ಅದನ್ನು ನೆಲದೊಳಕ್ಕೆ ಹೋಗುವಂತೆ ಕುಟ್ಟುತ್ತಿದ್ದನಂತೆ. ಕೊನೆಗೆ ಗೌರಸಂದ್ರ ಮಾರಕ್ಕೆ ಕೊರವಂಜಿಯಾಗಿ ಬಂದು ಕಣಿ ಹೇಳಿದಾಗ ಎತ್ತಪ್ಪನಿಗೆ ಅರಿವಾಗುತ್ತದೆ. 'ಕರುವಿನ ಗೂಡಿನಲ್ಲಿ ಹುಟ್ಟಿದೋಳು ಕರಿಯಮ್ಮ' ಎಂದು ಹೆಸರು ಕಟ್ಟಿದ ಎತ್ತಪ್ಪ ಹಾಲಲ್ಲಿ ಬೆಣ್ಣೆಮಿದ್ದು ಈಕೆಗೋಸ್ಕರ ಕಲ್ಲುಗುಡಿ ಕಟ್ಟಿದ. ಎತ್ತಯ್ಯ ಹುಲ್ಲು ನೀರಿಗೆ ಹೊರಟಾಗ ಇದರ ಪೂಜೆಯನ್ನು ಸಮೀಪದಲ್ಲೇ ಈಚಲಿಗಾಗಿ ಹುತ್ತ ಅಗೆಯುತ್ತಿದ್ದ ನಾಯಕರಿಗೆ (ಬ್ಯಾಡರಿಗೆ) ಒಪ್ಪಿಸಿಹೋದ, ಹೀಗಾಗಿ ಈಗಲೂ ನಾಯಕರದೆ ಪೂಜೆ, ದೀಪಾವಳಿ ದಿನ ಬಂದು ಇಲ್ಲಿ ದೀಪ ಏರಿಸುತ್ತಾರೆ. ಕರಿಯಮ್ಮ ಎತ್ತಪ್ಪನಿಗೆ ಅಕ್ಕನಂತೆ ನಡೆದುಕೊಳ್ಳುತ್ತಾಳೆ. ಎತ್ತಪ್ಪ ಇರುವ ನೆಲೆಯಲ್ಲಿ ಬೇವಿನಹಳ್ಳಿ ಕರಿಯಮ್ಮನೂ ಇರುತ್ತಾಳೆ. ಹಾಗಲವಾಡಿಯಲ್ಲಿರುವ ಎತ್ತಪ್ಪನ ನೆಲೆಯ ಬಳಿಯೆ ಬೇವಿನಹಳ್ಳಿ ಕರಿಯಮ್ಮನ ಮೂರ್ತಿ ಇದೆ. ಹೀಗಾಗಿ ಈಕೆಯ ಜಾತ್ರೆ ನಡೆದಾಗ ಬೇವಿನಹಳ್ಳಿಯಿಂದ ೫ ಕಿ.ಮೀ. ದೂರದಲ್ಲಿರುವ ಎತ್ತಯ್ಯನ ಜೂಜಿನ ಬೇವಿನ ಮರದ ಬಳಿ ಹೋಗಿ ಎತ್ತಪ್ಪನನ್ನು ಕಂಡುಬರುವ ಸಂಪ್ರದಾಯವಿದೆ. ಎತ್ತಪ್ಪನಲ್ಲಿಗೆ ಹೋದಾಗ "ದಿಣ್ಣೆ ಕರಿಯಮ್ಮ" ಎಂದು ಕರೆದು ಇವಳನ್ನು ಹಿಂತಿರುಗಿ ಬರುತ್ತಲೆ 'ಹಬ್ಬದ ಕರಿಯಮ್ಮ' ಎಂದು ಕರೆದು ಭಾರಿ ಜಾತ್ರೆ ಮಾಡುತ್ತಾರೆ. ಕುರಿಗಳನ್ನು ಬಲಿ ನೀಡುತ್ತಾರೆ (ಅದೇ, ೨೦೦೫:೫೨೧-೨).

ದಿಣ್ಣೆ ಕರಿಯಮ್ಮನ ಗುಡಿಯ ಬಳಿ 'ಪಡುವ ಪ್ರಯಾಣ ಬೆಳೆಸುವವರು ಒಂದು ರಾತ್ರಿ ತಂಗಿದ್ದು ಕುರಿ ಕಡಿದು 'ಪರವು' ಮಾಡಿ ಮರುದಿನ ಪ್ರಯಾಣ ಬೆಳೆಸುತ್ತಾರೆ. ಹೋಗುವ ಮುನ್ನ ಕುರಿಗಳನ್ನು

ಈಕೆಯ ಪಾಳಿಗುಡಿಯ ಸುತ್ತ ತಿರುಗಿಸುತ್ತಾರೆ. ಹುಲ್ಲು-ನೀರಿನಿಂದ ಹಿಂತಿರುಗಿದ ನಂತರವೂ ಕುರಿ ಕಡಿದು ಪರವು ಮಾಡಿ ತಮ್ಮ ಸ್ವಸ್ಥಾನಗಳಿಗೆ ಹೋಗುತ್ತಾರೆ.

**ಪೂಜಾರಿ ಚಿತ್ತಯ್ಯನ ಗುಡ್ಡ**

ಬೇವಿನಹಳ್ಳಿಯ ದಿಣ್ಣೆ ಕರಿಯಮ್ಮನಿಂದ ಹೊರಟ ಕುರಿಗಾಹಿಗಳು ತಂಗುವ ಮತ್ತೊಂದು ನೆಲೆ ಪೂಜಾರ ಚಿತ್ತಯ್ಯನ ಗುಡ್ಡ. ಇದು ಮರಡಿ ಗುಡ್ಡದ ಸಮೀಪದಲ್ಲಿರುವ ಚಿಕ್ಕಸಂದ್ರದ ಕೆರೆ ಏಣಿನ ಬಳಿ ಇದೆ. ಜುಂಜಪ್ಪನ ಮರಣಾನಂತರ ಮರಡಿಗುಡ್ಡದ ಸಮೀಪದ ಹಿರಿಯಟ್ಟಿಯಲ್ಲಿ ಜುಂಜಪ್ಪ ದೇವರಾಗಿದ್ದಾಗ ಜುಂಜಪ್ಪನ ಪೂಜೆ ಮಾಡುತ್ತಿದ್ದವನು ಚಿತ್ತಯ್ಯ. ಜುಂಜಪ್ಪ ಮತ್ತು ಚಿತ್ತಯ್ಯನವರ ಸಂಬಂಧ ಎಷ್ಟು ಅನ್ಯೂನ್ಯವಾಗಿತ್ತೆಂದರೆ 'ಜುಂಜಪ್ಪನಂತ ದೇವರಿಲ್ಲ, ಚಿತ್ತಯ್ಯನಂತ ಪೂಜಾರಿ ಇಲ್ಲ' ಎಂಬ ಗಾದೆಯೆ ಹುಟ್ಟಿಕೊಳ್ಳಲು ಕಾರಣವಾಯಿತು. ಜುಂಜಪ್ಪ ಚಿತ್ತಯ್ಯನ ಜತೆಗೆ ಮನುಷ್ಯರು ಮಾತನಾಡಿದಂತೆ ಮಾತನಾಡುತ್ತಿದ್ದ ಎಂಬ ಪ್ರತೀತಿ. ಆಗ ಹಿರಿಯಟ್ಟಿಯವರು ಕೊಳ್ಳಿ ದಂಡು ಬರುತ್ತದೆ ಎಂದು ಹೆದರಿ ಜುಂಜಪ್ಪ ಎಷ್ಟು ಬೇಡವೆಂದು ಹೇಳಿದರೂ ಕೇಳದೆ ಪರುಷವ್ವನ ಕೆರೆಯಲ್ಲಿ ಸೇದೆ ತೆಗೆದು ಜುಂಜಪ್ಪನನ್ನು ಅದರಲ್ಲಿ ಹೂಣಿದ್ದರಿಂದ ಸಿಟ್ಟುಗೊಂಡ ಜುಂಜಪ್ಪ ಚಿಕ್ಕಸಂದ್ರದ ಕೆರೆ ಏಣಿನಲ್ಲಿ ಚಿತ್ತಯ್ಯನನ್ನು ಕೆಂಡಕೊಂಡ ಮಾಡಿದ. ಇಲ್ಲಿ ಜುಂಜಪ್ಪ ಒಲಿದರೆ ನಾರಿ ಮನಿದರ ಮಾರಿ, ಅನ್ನೊ ಹಾಗೆ ತನ್ನ ಪ್ರೀತಿಯ ಭಕ್ತ ಚಿತ್ತಯ್ಯನನ್ನೆ ಬಲಿ ತೆಗೆದುಕೊಳ್ಳುತ್ತಾನೆ.

ಚಿತ್ತಯ್ಯ ಕೆಂಡಕೊಂಡವಾದ ಈ ಜಾಗದಲ್ಲಿ ಬೆನವಗಳನ್ನು ಮಾಡಿದ್ದಾರೆ. ಇತ್ತೀಚೆಗೆ ಕಲ್ಲು ಚಪ್ಪಡಿಗಳ ಬಯಲು ಪಾಳಿಯ ವ್ಯವಸ್ಥೆಯು ಆಗಿದೆ. ಎದುರಿಗೆ ದೀಪಸ್ತಂಭ ಇದೆ. ಕುರಿಯವರು ಪಡುವ ಹೋಗುವಾಗ ಇಲ್ಲಿ ಒಂದು ರಾತ್ರಿ ತಂಗುತ್ತಾರೆ. "ತೋಳ, ತಪ್ಪಡೆ (ಕಪ್ಪಲಾಟನರಿ) ಕಳ್ಳಕಾಕರ ದೃಷ್ಟಿಗೆ ಬೀಳದೆ, ಯಾವ ವಿಧವಾದ ತೊಂದರೆ ಇಲ್ಲದೆ ಸುಖವಾಗಿ ಕಾಪಾಡಿಕೊಂಡು ಬಂದರೆ ನಿನ್ನ ಗುಡಿಯ ಹತ್ತಿರ ಒಂದು ರಾತ್ರಿ ಕುರಿ ತಡಕೊಂಡಿದ್ದು, ನಿನಗೆ ಹಾಲು ಮೀಸಲು ಹೊಯ್ದುಕೊಂಡು ಹೋಗ್ತೀವಿ" ಅಂತ 'ಕೈಮುಕ್ಕಂಡು' ಪಾಳಿ ಸುತ್ತಿಸಿಕೊಂಡು ಹೋಗುತ್ತಾರೆ. ಅಲ್ಲಿಂದ ಹಿಂತಿರುಗಿ ಬರುವಾಗ ಹಾಲುಕರೆದು, ಹಾಲ ಬಿಂದಿಗೆಗೆ ಬಾಯಿಕಟ್ಟಿಕೊಂಡು ವಾಲಗ ಮಾಡಿಸಿಕೊಂಡು ತಂದು ಬೆನವನ ಮ್ಯಾಲೆ ಹೊಯ್ಯುತ್ತಾರೆ. ಆ ರಾತ್ರಿ ಕುರಿ ತಡೆದು, ಪಾಳಿ ಗುಡಿಸುತ್ತಾನೆ. 'ಅರಿಸ್ವಾವೆ' ಮಾಡಿ ಹಣ್ಣುಕಾಯಿ ಮಾಡಿಕೊಂಡು ಹೋಗುತ್ತಾರೆ. ಇದು ಸಾಮಾನ್ಯವಾಗಿ ಶ್ರಾವಣ ಮಾಸದಲ್ಲಿ ನಡೆಯುತ್ತದೆ. ಇದು ಏನಿದ್ದರೂ 'ಚೊಕ್ಕ ಭೋಜನದ (ಸಸ್ಯಹಾರಿ) ದೇವರು.

ಈ ಭಾಗದಲ್ಲಿ ಜನ ತಮ್ಮ ಹಸು ಎಮ್ಮೆ ಮೊದಲು ಈವಾಗ (ಹೆತ್ತಾಗ) ಹರಕೆ ಮಾಡಿಕೊಂಡು 'ಹಾಲು-ಮೀಸಲು' ಒಪ್ಪಿಸುವುದು ವಾಡಿಕೆ. ದೊಡ್ಡ ದೀಪಾವಳಿಯಲ್ಲಿ ಒಂದು ದಿನ ಚಿತ್ರ ನಡೆಯುತ್ತೆ, ದೀಪ ಏರಿಸುತ್ತಾರೆ. ಹರಕೆ ಮಾಡಿಕೊಂಡವರು ಬೆಳ್ಳಿ ತಗಡಿನ ಹಾವು ಚೇಳು ಒಪ್ಪಿಸುತ್ತಾರೆ.

ಮಹಾರಾಷ್ಟ್ರದಲ್ಲಿ ನಡೆಯುವ ಇಂಥದೆ ಸಂಪ್ರದಾಯವೊಂದರ ಚಿತ್ರವನ್ನು ಸೊಂತೈಮರ್ ಕೊಡುತ್ತಾರೆ. ಹುಲ್ಲು ನೀರಿಗಾಗಿ ಹೊರಟ ಇಲ್ಲಿಯ ಕುರಿ ಸಾಕಾಣಿಕೆಗಾರರು, ಹೋಗುವ ಮುನ್ನ ತಮ್ಮ ಹಿರಿಯರನ್ನು, ದೇವರುಗಳನ್ನು ನೆನೆಯುವ 'ಬೇಲ್' ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಅವರು ನರ್ತಿಸುತ್ತಾರೆ. ಇದು ಅಶ್ವಿಜ ಮಾಸದಲ್ಲಿ (ಸೆಪ್ಟೆಂಬರ್-ಆಕ್ಟೋಬರ್)ನಡೆಯುತ್ತದೆ. ನಂತರ ಕುರಿ ಬಲಿಕೊಟ್ಟು ಪಿತೃದೇವತೆಗಳಿಗೆ ಅರ್ಪಿಸಿ ಮುಂದೆ ಹೋಗುತ್ತಾರೆ(ಅದೇ, ೨೦೦೫:೫೨೧-೨). ಇಂಥ ಹಲವಾರು ಉದಾಹರಣೆಗಳನ್ನು ಕರ್ನಾಟಕಾದ್ಯಂತ ಇಂದಿಗೂ ಕಾಣಬಹುದಾಗಿದೆ. ಇಂತಹ ಆಚರಣೆಗಳು ವಿಶೇಷವಾಗಿ ಶಿರಾ ಹಿರಿಯೂರು, ಚಿತ್ರದುರ್ಗದ ಪ್ರದೇಶಗಳಲ್ಲಿ ಕಾಣಬಹುದು.

ಅಧ್ಯಾಯ ೩

# ಪಶುಪಾಲನೆ ಮತ್ತು ಪಾರಂಪರಿಕ ವೈದ್ಯ ಪದ್ಧತಿ

೩.೧. ಕುರಿಸಂಗೋಪನೆಗೆ ಮೂಲ

೩.೨. ಪಾರಂಪರಿಕ ವೈದ್ಯಪದ್ಧತಿ ಮತ್ತು ಬಗೆಗಳು

೩.೩. ಕುರಿ ನಿರ್ವಹಣೆಯಲ್ಲಿ ಅಲೆಮಾರಿ ಕಾಡುಗೊಲ್ಲರ ನಿಪುಣತೆ

೩.೪. ಕುಬೇರರಾಗದ ಕುರಿಗಾರರು : ಒಂದು ಅವಲೋಕನ

೩.೫. ಬದಲಾದ ಕುರುಬರ ನೀತಿ

೩

# ಪಶುಪಾಲನೆ ಮತ್ತು ಪಾರಂಪರಿಕ ವೈದ್ಯ ಪದ್ಧತಿ

## ೩.೧. ಕುರಿ ಸಂಗೋಪನೆಗೆ ಮೂಲ

ಮೇಕೆ, ಮೇಷಗಳಂತಹ ಸಾಧು ಪ್ರಾಣಿಗಳ ಪಾಲನೆಯಿಂದ ಉಗಮಗೊಂಡ ಪಶುಪಾಲನೆ, ಕಾಲಾಂತರದಲ್ಲಿ ದನಕರುಗಳು, ಎಮ್ಮೆ ಇತ್ಯಾದಿ ಪಶುಗಳ ಪಾಲನೆಗೆ ಮಾನವ ವಿಸ್ತಾರಗೊಳಿಸಿದ, ಇದು ಸಾರ್ವತ್ರಿಕ ಸತ್ಯ. ಬೇಟೆಗಾರಿಕೆಯ ಕಾಲದಲ್ಲಿ ಮಾನವರಲ್ಲಿ ಭೇದಭಾವವಿರಲಿಲ್ಲ. ಜಾತಿ ಮತಗಳ ಉಗಮವಾಗಿರಲಿಲ್ಲ. ಪ್ರಕೃತಿಯ ಜೀವನ ಅವರದಾಗಿತ್ತು. ಆದರೆ ಪಶುಪಾಲನೆಯ ಹಂತದಲ್ಲಿ ಕಸುಬಾಧಾರಿತ ಜಾತಿಗಳು ಉಗಮಗೊಂಡವು. ಮೇಕೆ, ಮೇಷ ಪಾಲಕರಿಗೆ ಮ್ಯಾಸ(ಮೇಷ) ನಾಯಕರೆಂದು, ದನಗಳ ಪಾಲಕರಿಗೆ ದ(ಧ)ನಗಾರರೆಂದು, ಗೊಲ್ಲರೆಂದು ಹೀಗೆ ಭಿನ್ನ ಪ್ರಾದೇಶಿಕ ನೆಲೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟರು. ಇವರೆಲ್ಲರ ಮೂಲ, ಬೇಟೆಗಾರಿಕೆಯೇ. ಅಲ್ಲಿಂದಲೇ ಕವಲೊಡೆಯುತ್ತಾ ಪಶುಪಾಲಕರಾಗಿ, ಆಮೇಲೆ ಕೃಷಿಕರಾಗಿ, ಗ್ರಾಮಸ್ಥಾಪಕರಾಗಿ ನಾಗರಿಕರಾದರು. ಪಶುಪಾಲನೆಯ ಹಂತ ಬೇಟೆಗಾರಿಕೆಯ ಹಂತಕ್ಕಿಂತಲೂ ಹೆಚ್ಚಿನ ನೆಮ್ಮದಿ ನೀಡಿತು. ಮಾನವ ಭಾಷೆ ಕಲಿತು ಸುಸಂಸ್ಕೃತ ಎನಿಸಿಕೊಳ್ಳುತ್ತಾ ಮಾನವ ಪ್ರಗತಿಗೆ ಬೇಕಾದುದೆಲ್ಲ ನಿರ್ಮಿಸಿಕೊಳ್ಳತೊಡಗಿದ. ಅವನ ಸರಳ ಬದುಕಿನಿಂದ ಸಂಕೀರ್ಣ ಬದುಕಿನತ್ತ ಸಾಗುತ್ತ ನಿಸರ್ಗದ ಮೇಲೆ ಹಕ್ಕನ್ನು ಸ್ಥಾಪಿಸಿದ.

ಈ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಸಾಮಾಜೀಕರಣ, ಸಾಂಸ್ಕೃತೀಕರಣಗೊಂಡು ಪಶುಪಾಲನೆಯ ಹಾಗೂ ಕೃಷಿ ನಡುವಣದ ಹಂತದಲ್ಲಿರುವ ಬುಡಕಟ್ಟಾದರೂ ಕಾಡಿನ ಮೂಲದ ಸಂಸ್ಕೃತಿಯನ್ನು ತನ್ನೊಡಲಲ್ಲಿ ಪೋಷಿಸಿಕೊಂಡು ನಿಸರ್ಗಮಯವಾಗಿ ಬದುಕುತ್ತಿರುವುದು ಸೋಜಿಗವೇ. ಇಂದಿಗೂ ನಿಸರ್ಗಮಯ, ಹೆರಿಗೆ, ಗ್ರಾಮದಿಂದ ದೂರದ ಕಾಡುಗಳಲ್ಲಿ ವಾಸ. ಪಶು ಕುರಿಗಳೊಂದಿಗೆ ಅಲೆಯುವಿಕೆ, ಗೆಡ್ಡೆ ಗೆಣಸುಗಳ ಹಸಿ ಬಿಸಿ ಸೇವನೆ, ಇವೆಲ್ಲ ಕಾಡಿನ ಮೂಲದ ಸಂಸ್ಕೃತಿಯ ಪ್ರತೀಕವಲ್ಲದೆ ಮತ್ತೇನು ಆಗಿರಲಾರವು. ಇವು ಇಂದಿಗೂ ಅವರಿಗೆ ಅಸಹಜ, ಆದರೆ ನಾಗರಿಕರೆನ್ನುವವರೆಗೆ ಇವು ಸಂಕೀರ್ಣ ಎನಿಸುವವು. ಅಪ್ಪಟ ಬುಡಕಟ್ಟಿನ ಸ್ವರೂಪ ಹೊಂದಿರುವ ಈ ಸಮುದಾಯ ಭಾರತದ ಬುಡಕಟ್ಟು ಪಟ್ಟಿಗೆ ಸೇರದೇ ಇರುವುದು ವಿಪರ್ಯಾಸ. ಶೈವ, ವೈಷ್ಣವ ಸಂಪ್ರದಾಯಗಳಿಂದ ತಪ್ಪಿಸಿಕೊಳ್ಳಲಾಗದ ಈ ಸಮುದಾಯ ಬುಡಕಟ್ಟಾಗಿ ಕಾಣದೆ ತಜ್ಞರಿಗೆ ಜಾತಿಯಾಗಿ ಕಂಡಂತಿದೆ. ಒಂದು

ವೇಳೆ ತಜ್ಞರು ಈ ಕಾರಣಕ್ಕಾಗಿಯೇ ಕಾಡುಗೊಲ್ಲರನ್ನು ಬುಡಕಟ್ಟು ಪಟ್ಟಿಗೆ ಸೇರಿಸಲಾಗದಿದ್ದರೆ ಈ ನೀತಿ ಭಾರತದ ಇತರೆ ಬುಡಕಟ್ಟುಗಳಿಗೂ ಅನ್ವಯಿಸಬೇಕಾಗಿತ್ತು. ಭಾರತದ ಯಾವ ಬುಡಕಟ್ಟುಗಳಿಗೂ ಶೈವ-ವೈಷ್ಣವ ಸಂಪ್ರದಾಯಗಳು ಮುಕ್ತವಾಗಿ ಬಿಟ್ಟಂತಿಲ್ಲ. ಅಷ್ಟೇ ಅಲ್ಲ ಇನ್ನೂ ಹಲವು ಬುಡಕಟ್ಟುಗಳಿಗೆ ಇಸ್ಲಾಂ, ಕ್ರೈಸ್ತ ಇತ್ಯಾದಿ ಮತಗಳ ಸಂಪ್ರದಾಯಗಳಿಂದ ಮುಕ್ತಿ ಕಾಣುತ್ತಿಲ್ಲ. ಹೀಗಾಗಿ ಬುಡಕಟ್ಟು ಧರ್ಮ ದಿನೇ ದಿನೇ ಗೌಣವಾಗುತ್ತಿರುವುದು ಸಹಜ. ಬುಡಕಟ್ಟು ಧರ್ಮವೇ ಮಾನವ ಜೀವನದ ಅಡಿಪಾಯವಾದ್ದರಿಂದ ಇಂದು ಅವುಗಳನ್ನು ಬೆಳೆಸಿ ಉಳಿಸಬೇಕಾದುದು ನಮ್ಮ ಕರ್ತವ್ಯವಾಗಿದೆ (ಮೇತ್ರಿ ಕೆ.ಎಂ., ೨೦೦೦:೧-೨).

'ಇಂದು ಕಾಡುಗೊಲ್ಲ ಸಮುದಾಯ ಗೋವುಗಳನ್ನು ಹಿಂಡು ಹಿಂಡಾಗಿ ಸಾಕುವುದು ತುಂಬಾ ವಿರಳ. ಅಲ್ಲಿ ಇಲ್ಲಿ ನಾಲ್ಕು-ಐದರವರೆಗೆ ಸಾಕಿರುವುದನ್ನು ಮಾತ್ರ ಕಾಣಬಹುದು. ಏಕೆಂದರೆ ಇಂದು ಗೋಮಾಳಗಳು, ಹುಲ್ಲುಗಾವಲುಗಳು, ಕಾಡುಮೇಡುಗಳು ಒತ್ತುವರಿಯಾಗಿ, ಕೃಷಿ ಭೂಮಿಯಾಗಿ ಮಾರ್ಪಟ್ಟಾದ್ದರಿಂದ ನೂರಾರು ದನಗಳನ್ನು ಸಾಕುವುದು ತುಂಬಾ ಕಷ್ಟಕರವಾದುದೇ ಸರಿ. ಆದ್ದರಿಂದ ಕಡಿಮೆ ಜಾಗದಲ್ಲಿಯೇ ಮೇಯಿಸಬಹುದಾದ ದನ ಕರುಗಳಿಗಿಂತಲೂ ಕಡಿಮೆ ಜಾಗದಲ್ಲೇ ಹುಲ್ಲು ನೀರುಗಳನ್ನು ಮೇದು ಬದುಕುವ ಕುರಿ-ಮೇಕೆಗಳನ್ನು ಸಾಕಲು ಆರಂಭಿಸಿದರು. ಅಂದರೆ ತಮ್ಮ ವೃತ್ತಿಯಲ್ಲಿ ಒಂದು ತಿರುವನ್ನು ಹೊಂದಿದರು ಎಂದು ಹೇಳಬಹುದು. ಇಂತಹ ತಮ್ಮ ವೃತ್ತಿಯ ತಿರುವಿಗೆ ಸಂಬಂಧಿಸಿದಂತೆ ತಮ್ಮದೇ ಆದ ಒಂದು ಕಾರಣವನ್ನು ಕಥೆಯ ರೂಪದಲ್ಲಿ ಹೇಳುತ್ತಾರೆ.

ಬಹಳ ಹಿಂದಿನ ಕಾಲದಲ್ಲಿ ಒಮ್ಮೆ ಮಾನವರೆಲ್ಲ ಸಂತೋಷದಿಂದ ಹಬ್ಬ ಮಾಡುತ್ತಿದ್ದರು. ಹಬ್ಬದೂಟವನ್ನು ಉಂಡು ಊರ ಮಧ್ಯದ ಅರಳೀಕಟ್ಟೆಯ ಬಳಿ ಕೂತಿದ್ದರು. ಸಂತೋಷದಿಂದಲೇ ಲೋಕಾಭಿಮರಾಮವಾಗಿ ಎಲ್ಲಾ ಸುದ್ದಿಗಳನ್ನು ಮಾತನಾಡುತ್ತಿದ್ದರು. ಆ ವೇಳೆಗೆ ಶಿವ ಪಾರ್ವತಿಯರು ಲೋಕ ಸಂಚಾರ್ಥವಾಗಿ ಬರುತ್ತಿದ್ದರು. ಈ ಜನರನ್ನು ನೋಡಿ, ಪಾರ್ವತಿ ಶಿವನನ್ನು ಕುರಿತು ಜನರೆಲ್ಲ ಏಕೆ ಇಲ್ಲಿ ಕುಳಿತಿದ್ದಾರೆ ಎಂದು ಕೇಳಿದಳು. ಆಗ ಶಿವ ಹಬ್ಬದ ಸಡಗರದಲ್ಲಿ ಕೂತು ಹರಟುತ್ತಿದ್ದಾರೆ ಎಂದನು. ಇಂತಹ ಸಂತೋಷದಲ್ಲಿ ಜನರು ತೇಲುತ್ತಿರುವ ಜಾಗವನ್ನು ನನಗೆ ತೋರಿಸಿದ್ದೀರಿ. ಇದಕ್ಕಿಂತಲೂ ಸಂತೋಷಕರವಾದ ಹಾಗೆ ಆ ಜಾಗವನ್ನು ಹತ್ತಿರದಿಂದ ನನಗೆ ತೋರಿಸುವಿರಾ ಎಂದು ಪಾರ್ವತಿ ಕೇಳಿದಳು. ಆಗ ಶಿವ ಅಂತಹದೊಂದು ಜಾಗ ಇದೆ. ಆದರೆ ಅದು ಅಪಾಯಕಾರಿ ಜಾಗ. ನಾವು ಅಲ್ಲಿಗೆ ಹೋಗುವುದು ಬೇಡ ಎಂದನು. ಅದರೆ ಆ ಜಾಗವನ್ನು ನೋಡಲೇಬೇಕೆಂದು ಹಠಹಿಡಿದಳು ಪಾರ್ವತಿ. ಹಾಗಾದರೆ ನಾವು ವೇಷ ಬದಲಿಸಿಕೊಂಡು ಹೋಗೋಣ. ಮೊದಲು ನೀನು ಒಂದು ವಿಕಾರ ರೂಪ ಧರಿಸಿಕೊಂಡು ಅಲ್ಲಿಗೆ ಹೋಗು ಎಂದನು ಶಿವ. ಆಗ ಪಾರ್ವತಿ ರಕ್ಕಸಿಯ ರೂಪಧರಿಸಿಕೊಂಡು ಆ ಜನರು ಕುಳಿತು ಹರಟುತ್ತಿದ್ದ ಜಾಗಕ್ಕೆ ಹೋದಳು. ಜನರು ಆಕೆಯ ವಿಕಾರ

ರೂಪವನ್ನು ನೋಡಿ ಬಿದ್ದು ಬಿದ್ದು ನಕ್ಕರು. ಅವರಿಂದ ಅವಮಾನಿತಳಾದ ಪಾರ್ವತಿಗೆ ಕೋಪ ಬಂದು ಆ ಜನರಿಗೆ ಶಾಪ ಕೊಟ್ಟಳು. ಮುಂದೆ ನಕ್ಕವರೆಲ್ಲ ಮೇಕೆಯಾಗಲಿ, ಹಿಂದೆ ನಕ್ಕವರೆಲ್ಲ ಕುರಿಯಾಗಲಿ ಎಂದು. ಅಂತೆಯೇ ಜನರೆಲ್ಲ ಕುರಿ-ಮೇಕೆಗಳಾದರು.

ಪಾರ್ವತಿ ತಿರುಗಿ ಶಿವನ ಬಳಿ ಹೋದಳು. ಶಿವ ಏನಾಯ್ತು? ಎಂದು ಕೇಳಿದ ಏನಾದರೂ ಆಗಲಿ ಮುಂದೆ ನಡೆಯಿರಿ ಎಂದಳು. ಶಿವ ಅಲ್ಲಿ ನಡೆದ ವಿಚಾರವನ್ನು ಈಗಲೇ ಹೇಳಬೇಕೆಂದು ಹಠಹಿಡಿದ. ಆಗ ಪಾರ್ವತಿ ಅದೊಂದು ದೊಡ್ಡ ಕತೆ ಯಾವಾಗಲಾದರೂ ಹೇಳುತ್ತೇನೆ ಎಂದಳು. ಅದರೂ ಶಿವ ಹಠ ಬಿಡಲಿಲ್ಲ. ಆಗ ಪಾರ್ವತಿ ಅಲ್ಲಿ ನಡೆದಿದ್ದನ್ನೆಲ್ಲಾ ವಿವರವಾಗಿ ಹೇಳಿದಳು. ಆಗ ಶಿವ ಜನರನ್ನು ನೀನು ಕುರಿ ಮೇಕೆಗಳನ್ನಾಗಿ ಮಾಡಿದ್ದೇನೋ ಆಯ್ತು. ಆದರೆ ಅವುಗಳ ಸ್ಥಿತಿ-ಗತಿಗಳನ್ನು ನೋಡಿಕೊಳ್ಳಲು ಅವುಗಳನ್ನು ಕಾಯಲು ಕುರುಬ ಬೇಡವೇ ಎಂದನು. ಕುರುಬ ಸಿಗುವವರೆಗೂ ನಾನೇ ಕುರಿ ಕಾಯುವ ಕೆಲಸ ಮಾಡುತ್ತೇನೆ ಎಂದನು. ನೀನು ಮನೆಗೆ ಹೋಗಿ ಬುತ್ತಿ ತೆಗೆದುಕೊಂಡು ಬಾ ಹೋಗು ಎಂದು ಹೇಳಿ, ಕುರಿಗಳನ್ನು ಹೊಡೆದುಕೊಂಡು ಬೆಟ್ಟಕ್ಕೆ ಹೋದ. ಪಾರ್ವತಿ ಬುತ್ತಿ ತೆಗೆದುಕೊಂಡು ಬಂದಳು. ಹೀಗೆ ದಿನಾಲು ಬುತ್ತಿ ತರುವುದು ಕಷ್ಟವಾಯಿತು.

ಇದರಿಂದ ಬೇಸರಗೊಂಡಳು ಪಾರ್ವತಿ. ಒಂದು ದಿನ ನಿರ್ಧಾರಕ್ಕೆ ಬಂದಳು. ನಾನು ಬುತ್ತಿ ಹೊರುವುದು ತಪ್ಪಬೇಕು. ಇಲ್ಲ ಶಿವನ ಪಾದದ ಮೇಲೆ ಬಿದ್ದು ಪ್ರಾಣ ಬಿಡಬೇಕು ಎಂದು ತೀರ್ಮಾನಿಸಿದರು. ತನ್ನ ತೀರ್ಮಾನವನ್ನು ಶಿವನ ಬಳಿಯಲ್ಲಿ ಹೇಳಿದಳು. ಆಗ ಶಿವ ನಿನ್ನ ಮೂಗುತಿಯನ್ನು ಕೊಡುವುದಾದರೆ ಆ ಕಷ್ಟ ನಿವಾರಣೆ ಮಾಡುತ್ತೇನೆ ಎಂದು ಹೇಳಿದ, ಪಾರ್ವತಿಯಾದರೂ ಈ ಕಷ್ಟಕ್ಕಿಂತ ಮೂಗುತಿ ಕಳೆದುಕೊಳ್ಳುವುದೇ ಮೇಲೆಂದು ತನ್ನ ಮೂಗುತಿ ತೆಗೆದುಕೊಟ್ಟಳು. ಮೂಗುತಿಯನ್ನು ಪಡೆದ ಶಿವನು ಭೂಮಿಯನ್ನು ಇಬ್ಭಾಗ ಮಾಡಿ ಅದರೊಳಗೆ ಕುರಿ-ಮೇಕೆಗಗಳನ್ನು ಹಾಕಿ ಮುಚ್ಚಿ, ಪಾರ್ವತಿಯ ಮೂರ್ತಿಯನ್ನು ಬೀಗ ಮಾಡಿ ಅದಕ್ಕೆ ಬೀಗ ಮುದ್ರೆ ಜಡಿದ. ನಂತರ ಒಳಗಿನ ಕುರಿ, ಮೇಕೆಗಳಿಗೆ ಎಂದು ನಿಮ್ಮನ್ನು ಕಾಯುವ ಕುರುಬ ಸಿಗುವನೋ ಅಂದು ಭೂಮಿಯಿಂದ ಹೊರಗೆ ಬನ್ನಿ ಎಂದು ಹೇಳಿದ. ಆಗ ಶಿವ ಪಾರ್ವತಿ ನೆಮ್ಮದಿಯಿಂದ ಕೈಲಾಸಕ್ಕೆ ಹೋದರು.

ಹೀಗಿರುವಾಗ ಒಂದಾನೊಂದು ಕಾಲಕ್ಕೆ ಭೂಲೋಕದಲ್ಲಿ ಒಬ್ಬ ಮಾನವನಿಗೆ ಒಂದು ಊರಿನಲ್ಲಿ ಆರು ಜನ ಗಂಡು ಮಕ್ಕಳಿದ್ದರು. ಹಿರಿಮುದ್ದ, ಕಿರಿಮುದ್ದ, ದೊಡ್ಡಮುದ್ದ, ಚಿಕ್ಕಮುದ್ದ, ಸಣ್ಣಮುದ್ದ, ಉಂಡಾಳಪದುಮಣ್ಣ ಎಂಬ ಇವರು ಸಂಸಾರವೇನೋ ತುಂಬಾ ದೊಡ್ಡದು. ಆದರೆ ತುಂಬಾ ಬಡತನ, ಬಡತನ ತುಂಬಾ ದಿನ ಇರಲಿಲ್ಲ. ಕೊನೆಯವನಾದ ಉಂಡಾಳಪದುಮಣ್ಣ ಹುಟ್ಟಿದ ಮೇಲೆ ಸಿರಿತನ ಬಂತು. ಇದರಿಂದಾಗಿ ಹಿರಿಯ ಮಗನಾದ ಹಿರಿಮುದ್ದನಿಗೆ ಕಿರಿ ತಮ್ಮನಾದ ಪದುಮಣ್ಣನ ಮೇಲೆ ಇನ್ನಿಲ್ಲದ ಅಕ್ಕರೆ. ಯಾವ ಕೆಲಸಕ್ಕೂ ಹಚ್ಚದೆ, ಪಾಯಸ, ಪರಮಾನ್ನದ ಊಟ ಕೊಡುತ್ತಿದ್ದ. ಇದನ್ನು

ನೋಡಿ ನೋಡಿ ಸಾಕಾಗಿ, ಕುಟುಂಬದ ಸೊಸೆಯಂದಿರು ತಮ್ಮ ತಮ್ಮ ಗಂಡಂದಿರಿಗೆ ಚಾಡಿ ಹೇಳಿದರು. ಈ ಭೇದಭಾವ ಸಹಿಸಿಕೊಂಡು ಎಷ್ಟು ದಿನ ಅಂತ ಇರೋದು, ನಿಮ್ಮ ನಿಮ್ಮ ಪಾಲು ಕೇಳಿ ಎಂದರು. ಹೆಂಡತಿಯರ ಮಾತಿನಲ್ಲಿ ತಮ್ಮ ಜೀವನವೇ ಅಡಗಿದೆ ಎಂದು ತಿಳಿದ ಅವರು ಹಿರಿಯಣ್ಣನ ಬಳಿ ತೆರಳಿ ಪಾಲು ಕೇಳಿದರು.

ಆಗ ಹಿರಿಯವನು ಕುಟುಂಬದ ಯಜಮಾನನೂ ಆದ ಹಿರಿಮುದ್ದ ತಮ್ಮಂದಿರಿಗೆ ಸಮಾಧಾನ ಹೇಳಿದ. ಇನ್ನು ಮುಂದೆ ಉಂಡಾಳು ಪದುಮಣ್ಣನನ್ನು ನಿಮ್ಮಂತೆಯೇ ಕೆಲಸಕ್ಕೆ ಕಳಿಸುವುದಾಗಿಯೂ, ಎಲ್ಲರಿಗೂ ಒಂದೇ ರೀತಿಯ ಊಟ ಕೊಡುವುದಾಗಿಯೂ ಹೇಳಿದ. ಮಾರನೆ ದಿನ ಉಂಡಾಳ ಪದುಮಣ್ಣನು ತನ್ನ ಅಣ್ಣಂದಿರೊಂದಿಗೆ ಹೊಲಕ್ಕೆ ದುಡಿಯಲು ಹೋದ. ತಮ್ಮ ಎರೆಹೊಲದಲ್ಲಿ ಹತ್ತಿಕಡ್ಡಿಯನ್ನು ಕೀಳಬೇಕಿತ್ತು. ಪ್ರತಿಯೊಬ್ಬರೂ ಇಷ್ಟಿಷ್ಟು ಸಾಲುಗಳನ್ನು ಕೀಳಬೇಕೆಂದು ಹಂಚಿಕೊಂಡು ಕಿತ್ತರು.

ಆದರೆ ಉಂಡಾಳುಪದುಮಣ್ಣ ಇಷ್ಟು ದಿನ ಸುಖವಾಗಿದ್ದವನು, ಕೈಯಲ್ಲಿ ರಕ್ತಸೋರಿ, ಹತ್ತಿಗಿಡಗಳನ್ನು ಕೀಳಲು ಕಷ್ಟವಾಯಿತು. ಆದರೂ ಸಹಿಸಿಕೊಂಡು ಕಿತ್ತು ಮುಗಿಸಿದ. ಅಷ್ಟರಲ್ಲಿ ಬುತ್ತಿ ಬಂತು, ಎಲ್ಲರೂ ಊಟಕ್ಕೆ ಕುಳಿತರು. ಎಲ್ಲರಿಗೂ ಮುದ್ದೆ ಸಾರಿನ ಊಟವನ್ನು ಬಡಿಸಿದರು. ಆದರೆ ದೈವ ಮಾಯೆಯಿಂದ ಅದೃಷ್ಟವಂತನಾದ ಉಂಡಾಳುಪದುಮಣ್ಣನ ಎಲೆಯಲ್ಲಿನ ಊಟ ಪಾಯಸ, ಪರಮಾನ್ನವಾಗಿ ಬದಲಾಯಿತು. ಇದನ್ನು ನೋಡಿದ ಉಳಿದವರು ನಮ್ಮ ಹಿರಿಯಣ್ಣ ಇನ್ನು ಭೇದ ಭಾವಬಿಟ್ಟಿಲ್ಲ. ನಮಗೆ ಒಂದು ಪದುಮಣ್ಣನಿಗೆ ಒಂದು ಮಾಡುತ್ತಿದ್ದಾನೆ ಎಂದು ಮುನಿಸಿಕೊಂಡರು. ಅಲ್ಲದೆ ತಮ್ಮ ಪಾಲುಕೊಡುವಂತೆ ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಮಣಿದ ಹಿರಿಮುದ್ದ ಪಾಲುಕೊಟ್ಟ. ಎಲ್ಲರಿಗೂ ಮೇಲು ಆಸ್ತಿ ಬಂತು. ಆದರೆ ಪದುಮಣ್ಣನಿಗೆ ಫಲವತ್ತಲ್ಲದ ಹಳ್ಳಕೊಳ್ಳಗಳಿಂದ ಕೂಡಿದ ಬರೀ ಗಿಡಗಂಟೆಗಳಿಂದ ಕೂಡಿದ ಭೂಮಿ ಸಿಕ್ಕಿತು. ಪದುಮಣ್ಣ ಅಸಮಾಧಾನವಾದರೂ ಊರಜನ ಆತನಿಗೆ ನಿನ್ನ ಅದೃಷ್ಟದಿಂದ ಒಳ್ಳೆಯ ಭೂಮಿಯಾಗುತ್ತದೆ ಬಿಡು ಎಂದು ಸಮಾಧಾನಪಡಿಸಿದರು.

ಅದಕ್ಕೆ ಒಪ್ಪಿದ ಉಂಡಾಳುಪದುಮಣ್ಣ ತನ್ನ ಹೊಲದಲ್ಲಿ ಬೆಳೆದಿದ್ದ ಗಿಡ-ಗಂಟೆಗಳನ್ನೆಲ್ಲ ಕಿತ್ತು ಹೊಲದ ಮೂಲೆಯಲ್ಲಿದ್ದ ಹುತ್ತವೊಂದರ ಮೇಲೆ ಹಾಕಿ ಬೆಂಕಿ ಇಟ್ಟ. ಆ ಬೆಂಕಿಯ ಬಿಸಿಗೆ ಹಿಂದೆ ಶಿವಪಾರ್ವತಿಯರು ಹಾಕಿದ ಮೂಗುತಿಯ ಬೀಗ ಕರಗಿ ಹೋಯಿತು. ಒಳಗಿದ್ದ ಕುರಿ-ಮೇಕೆಗಳು ಹೊರಬಂದವು. ಮುಂದೆ ಪದುಮಣ್ಣ ಹೋದ ಹಾಗೆ ಹಿಂದೆ ಕುರಿಗಳು ಸಾಲಾಗಿ ಹುತ್ತದಿಂದ ಬರತೊಡಗಿದವು. ಮುಂದೆ ಹೋಗುತ್ತಿದ್ದ ಪದುಮಣ್ಣ ತನ್ನ ಹಿಂದೆ ಏನೋ ಸದ್ದಾಗುತ್ತಿದೆಯಲ್ಲಾ ಎಂದು ಹೆದರಿ ತಿರುಗಿ ನೋಡಿದ. ಹುತ್ತದಿಂದ ಬರುತ್ತಿದ್ದ ಕುರಿ ಮೇಕೆ ಬಂದು ಅವನ ಮುಂದೆ ನಿಂತವು. ಈತ ಹೆದರಿ ಓಡತೊಡಗಿದ. ಕುರಿ ಮೇಕೆಗಳು ಆತನ ಬೆನ್ನತ್ತಿ ಬಂದವು. ಆತ ವಿಪರೀತ ಹೆದರಿ

ಓಡಲಾಗದೆ ಒಂದು ಮರವನ್ನು ಏರಿ ಕುಳಿತ. ಕುರಿಗಳು ಅಲ್ಲಿಗೆ ಬಂದವು. ಮರದ ಬುಡದಲ್ಲಿ ಆತನನ್ನೇ ನೋಡುತ್ತಾ ಅರಚತೊಡಗಿದವು. ಈ ವಿಷಯ ತಿಳಿದ ಊರ ಮಂದಿ ಅಲ್ಲಿಗೆ ಬಂದು ನಿನ್ನನ್ನೇ ನಂಬಿ ನಿಂತಿರುವ ಈ ಪ್ರಾಣಿಗಳನ್ನು ನೀನೇ ಕಾಪಾಡಬೇಕೆಂದು ಹೇಳಿದರು. ಅದರಂತೆ ಉಂಡಾಳುಪದುಮಣ್ಣ ಕುರಿ-ಮೇಕೆಗಳನ್ನು ಕಾಯತೊಡಗಿದ.

ಹೀಗೆ 'ಪದುಮಣ್ಣನು ಕಾಡಿನಲ್ಲಿ ಕುರಿ ಮೇಯಿಸುತ್ತಿರುವಾಗ ಅಲ್ಲಿ ಒಬ್ಬ ಕಾಡುಗೊಲ್ಲರವನು ದನಗಳನ್ನು ಕಾಯುತ್ತಿದ್ದನು. ಇಬ್ಬರಿಗೂ ಪರಸ್ಪರ ಪರಿಚಯವಾಯಿತು, ಪರಿಚಯ ಸ್ನೇಹವಾಗಿ ಬೆಳೆಯಿತು. ದಿನಾಲು ಕಾಡುಗೊಲ್ಲನ ಹೆಂಡತಿ ಬುತ್ತಿ ಹೊತ್ತು ತರುತ್ತಿದ್ದಳು. ಇಬ್ಬರೂ ಹಂಚಿ ಉಣ್ಣುತ್ತಿದ್ದರು. ಒಂದು ದಿವಸ ಕಾಡುಗೊಲ್ಲರವನು ಪದುಮಣ್ಣನಿಗೆ ನೀನು ಒಂದು ಮದುವೆಯಾಗು ಎಂದು ಸಲಹೆ ನೀಡಿದ. ಪದುಮಣ್ಣ ಒಪ್ಪಿದ. ತಾನು ಹೆಣ್ಣು ನೋಡಿ ಮದುವೆ ಮಾಡಿಕೊಂಡು ಬರುವವರೆಗೂ ತನ್ನ ಕುರಿಗಳನ್ನು ನೀನೆ ನೋಡಿಕೋಬೇಕೆಂದು ಕಾಡುಗೊಲ್ಲನಿಗೆ ಹೇಳಿ ಒಪ್ಪಿಸಿದ.

ಮುಂದೆ ಪದುಮಣ್ಣ ಮದುವೆ ಮಾಡಕೊಂಡ, ಆದರೆ ಹೊಸದಾಗಿ ಮದುವೆಯಾದ ಸಂದರ್ಭದಲ್ಲಿ ಸಂಸಾರ ಮಾಡುವುದು, ಕುರಿ ಕಾಯುವುದೂ ಎರಡು ಕೆಲಸಗಳನ್ನು ನಿಭಾಯಿಸುವುದು ಕಷ್ಟವೆನಿಸಿತು. ಕಾಡುಗೊಲ್ಲನಿಗೆ ತನ್ನ ಕುರಿಗಳನ್ನು ನೀನೇ ನೋಡಿಕೋ ಎಂದು ಹೇಳಿದ. ಹೀಗೆ ಕೆಲವು ದಿನಗಳು ಕಳೆಯಿತು. ಆದರೂ ಪದುಮಣ್ಣನಿಗೆ ಸಂಸಾರ ಬಿಟ್ಟು ಕುರಿಕಾಯಲು ಹೋಗಲು ಸಾಧ್ಯವಾಗಲಿಲ್ಲ. ಕೊನೆಗೆ ಕಾಡುಗೊಲ್ಲನಿಗೆ ಕುರಿಗಳನ್ನು ನೀನೆ ಕೊಂಡುಕೋ ಎನಗೆ ಬೇಡ ಎಂದ. ಗೊಲ್ಲ ತನ್ನ ಬಳಿಯಲ್ಲಿ ಹಣವಿಲ್ಲ ಎಂದ. ಆಗ ಉಂಡಾಳು ಪದಮಣ್ಣು ಹಣವಿಲ್ಲವೆಂದು ಕೊರಗಬೇಡ. ಮುಂದೆ ಹುಟ್ಟುವ ಕುರಿಮರಿಗಳಲ್ಲಿ ಗಂಡು ಮರಿಗಳನ್ನು ಮಾರಿದಾಗ ಸ್ವಲ್ಪ ಹಣಕೊಡು. ಆರು ತಿಂಗಳಿಗೊಮ್ಮೆ ಕುರಿಗಳ ತುಪ್ಪಟ ನಾನೇ ಕತ್ತರಿಸಿಕೊಳ್ಳುತ್ತೇನೆ. ನೀನು ಚಳಿ ಮಳೆಗೆ ಹೆದರಬೇಡ, ಕಂಬಳಿ ಮಾಡಿ ಕೊಡುತ್ತೇನೆ, ತುಪ್ಪಟ ಕತ್ತರಿಸಿದಾಗಲೆಲ್ಲ ಕುರಿಗಳ ಹಾಲುತುಪ್ಪ ಚೆಲ್ಲು ಇಬ್ಬರೂ ಕೂಡಿ ಉಂಬೋಣ. ಇದರಲ್ಲಿ ಯಾರ ವಂಚನೆ ಮಾಡುವುದು ಬೇಡ ಅಣ್ಣ-ತಮ್ಮಂದರಂತೆ ಇರೋಣ. ಇದಕ್ಕೆ ಸೂರ್ಯ ಚಂದ್ರರೇ ಸಾಕ್ಷಿ ಎಂದು ಹೇಳಿದ. ಇದಕ್ಕೆ ಕಾಡುಗೊಲ್ಲನೂ ಒಪ್ಪಿದ.

ಅಂದಿನಿಂದ ಗೊಲ್ಲ ದನಗಳನ್ನು, ಕುರಿಗಳನ್ನು ಒಟ್ಟಿಗೆ ಕಾಯತೊಡಗಿದ. ಆದರೆ ಮುಂದೆ ದನಗಳನ್ನು ಸಾಕುವುದು ಕಷ್ಟವೆನಿಸಿದಾಗ ಬರೀ ಕುರಿ-ಮೇಕೆಗಳನ್ನು ಕಾಯತೊಡಗಿದ. ಹೀಗೆ ಕುರುಬ ಕಾಯುತ್ತಿದ್ದ ಕುರಿಗಳನ್ನು ಕಾಡುಗೊಲ್ಲ ಕಾಯುವಂತಾಯಿತು. ಆದರೆ ಕುರಿಕಾದ ಮಾತ್ರಕ್ಕೆ ಇವರಿಗೆ ಕುರುಬರೆಂಬ ಹೆಸರು ಬರಲಿಲ್ಲ. ತಮ್ಮ ಹಿಂದಿನ ಗೋವುಗಳನ್ನು ಕಾದ ವೃತ್ತಿಯಿಂದ ಬಂದ ಹೆಸರಾದ ಕಾಡುಗೊಲ್ಲರೆಂಬುದೇ ಉಳಿಯಿತು. ಏಕೆಂದರೆ ಗೋವುಗಳನ್ನು ಕಾದದ್ದು ತಮ್ಮ ಮೂಲದ ಗೊಲ್ಲರ

ಕಸುಬು ತಮ್ಮ ಕಾಡುಗೊಲ್ಲ ವಂಶದ ಹುಟ್ಟು, ಕೂಡು ಗೋವುಗಳೊಂದಿಗೆ ಬೆಸೆದುಕೊಂಡಿರುವದೇ ಇದಕ್ಕೆ ಕಾರಣ. ಆದರೆ ಕುರಿಕಾಯುವ ಕಸುಬು ಮಧ್ಯಂತರ ಬಂದ ವೃತ್ತಿ. ಆದ್ದರಿಂದ ಕುರಿಕಾದರೂ ಕುರುಬರೆಂದು ಕರೆದುಕೊಳ್ಳಲಿಲ್ಲ. ಆದರೆ ಆಂಧ್ರ ಪ್ರದೇಶದ ಕೆಲವೆಡೆಗಳಲ್ಲಿ ಇವರನ್ನು ಕುರುಬಗೊಲ್ಲರೆಂದು ಕರೆಯುವ ವಾಡಿಕೆ ಇದೆ(ತಿಮ್ಮಯ್ಯ ಕೆ., ೨೦೦೪:೩೨).

ಇಂದಿಗೂ ಈ ಹೆಸರಿನ ಸಮುದಾಯಗಳನ್ನು ಕಾಣಬಹುದಾಗಿದೆ. ಅಲ್ಲಿಂದ ಕುರುಬ ಮತ್ತು ಕಾಡುಗೊಲ್ಲರ ಸಂಸ್ಕೃತಿಗೆ ಹೆಚ್ಚು ಸಾಮ್ಯತೆಯನ್ನು ಕಾಣಬಹುದಾಗಿದೆ. ಅಲ್ಲದೆ ಇವು ಜನ್ಮತಃ ಒಂದೇ ಬುಡಕಟ್ಟು ಮೂಲದಿಂದ ಬೆಳೆದು ಬಂದಂತಹ ಸಮುದಾಯಗಳಾವೆ.

## ೩.೨. ಪಾರಂಪರಿಕ ವೈದ್ಯಪದ್ಧತಿಯ ಬಗೆಗಳು

ವೈದ್ಯ ವಿದ್ಯೆ ಆದಿವಾಸಿ ಸಮುದಾಯಗಳು ದ್ಯಾನಸ್ಥ ಸ್ಥಿತಿಯಲ್ಲಿದ್ದಾಗ ರೂಪಗೊಂಡ ಅದರ ಪಾರಂಪರಿಕ ಜ್ಞಾನ. ಅದರ ವೈವಿಧ್ಯಮಯ ಜೀವಂತಿಕೆ ಹಂತ ಹಂತವಾಗಿ ಬೆಳೆಯುತ್ತ ಬಂದಿದೆ. ಪರಂಪರಾನುಗತವಾಗಿ ಬೆಳಸಿಕೊಂಡು ಬಂದ ಆದಿವಾಸಿಗಳ ವೈದ್ಯ ವಿದ್ಯೆಯನ್ನು ಬೇರೆ ಬೇರೆ ನೆಲೆಗಳಲ್ಲಿ ನಿಂತು ಅಧ್ಯಯನ ಮಾಡುವ ಮತ್ತು ವಿಶ್ಲೇಷಿಸುವ ಅಗತ್ಯ ಇದೆ.

ವೈದ್ಯೆ ವಿದ್ಯೆ ಮಾನವನಷ್ಟೆ ಪ್ರಾಚೀನವಾದುದು ಮತ್ತು ಮಾನವನೊಂದಿಗೆ ಹುಟ್ಟಿ ಬಂದಿರು ವಂತಹದ್ದು. ಈ ವೈದ್ಯಕೀಯ ಜ್ಞಾನ ಮಾನವನ ಪ್ರಯತ್ನಗಳು ಬೆಳೆದಂತೆಲ್ಲಾ ಅದು ಬೆಳೆಯಿತು. ಈ ಪಾರಂಪಕ ವೈದ್ಯಕೀಯ ಜ್ಞಾನ ಒಬ್ಬ ವ್ಯಕ್ತಿಯಿಂದಾಗಲಿ ಒಂದು ಸಮೂಹದಿಂದಾಗಲಿ ಬೆಳೆದು ಬಂದಿರುವಂತಹದಲ್ಲ. ಈ ಜ್ಞಾನಶಾಖೆಯ ಹಿಂದೆ ಹಲವಾರು ಆದಿವಾಸಿ ಸಮುದಾಯಗಳ ವಿಶಿಷ್ಟವಾದ ಅನುಭವಗಳು ಇವೆ. ಜಗತ್ತಿನ ವೈದ್ಯಕೀಯ ಪರಂಪರೆಗೆ ಆದಿವಾಸಿಗಳ ವೈದ್ಯಪದ್ದತಿ ವಿಶೇಷವಾದ ಕೊಡುಗೆ ನೀಡಿದೆ. ವೈದ್ಯೆ ವಿದ್ಯೆ ಸಿಂಧೂ ಸಂಸ್ಕೃತಿ ವೇದ ಸಂಸ್ಕೃತಿಯಲ್ಲೂ ರೂಪ ಪಡೆಯುವುದಕ್ಕಿಂತ ಮೊದಲೆ ಆದಿವಾಸಿ ಸಮುದಾಯಗಳಲ್ಲೂ ವೈದ್ಯ ಪದ್ಧತಿ ಇತ್ತು. ವೇದ ಕಾಲದಲ್ಲಿ ಆದಿವಾಸಿಗಳ ವೈದ್ಯ ಪದ್ಧತಿಯನ್ನೆ ಅಧ್ಯಯನಕ್ಕೊಳಪಡಿಸಿ ಪರಿಷ್ಕರಿಸಿ ಅದಕ್ಕೆ 'ಆಯುರ್ವೇದ' ಎಂದು ಹೆಸರಿಸಿದರು. ವೇದಕಾಲಕ್ಕೆ ವೈದ್ಯ ಪದ್ಧತಿ ಹೊಸ ಹೊಸ ಪ್ರಯೋಗಗಳಿಗೆ ಒಳಪಟ್ಟು ಖಚಿತತೆ ಪಡೆದುಕೊಂಡು ಶರೀರ ವಿಜ್ಞಾನ, ಆರೋಗ್ಯದ ಕಲ್ಪನೆ ಕುರಿತು ಅನೇಕ ಅಧ್ಯಯನಗಳು ಪ್ರಾರಂಭವಾದವು. ಆಯುರ್ವೇದ ವೈದ್ಯಪದ್ಧತಿ ಎನ್ನುವುದು ಭೂ ಮತ್ತು ವರ್ತಮಾನಗಳ ಸಂಯೋಗದಿಂದ ನಿರಂತರ ವಿಕಾಸಶೀಲ ಪ್ರವೃತ್ತಿಯನ್ನು ರೂಪಿಸಿಕೊಂಡಿದೆ. ಈ ಕಾರಣಕ್ಕಾಗಿ ಇದಿಷ್ಟು ಆದಿವಾಸಿಗಳಿದ್ದು, ಇದಿಷ್ಟು ವೇದಕಾಲದ್ದು ಎಂದು ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಆದಿವಾಸಿಗಳ ಪಾರಂಪರಿಕ ವೈದ್ಯ ವಿದ್ಯೆ ವೇದಕಾಲಕ್ಕೆ ನಿರಂತರ ಶೋಧನೆಗಳಿಗೆ ಒಳಗಾಗಿ ಒಂದು ಚೌಕಟ್ಟನ್ನು ಮರುಹುಟ್ಟನ್ನು ಪಡೆದುಕೊಂಡಿತು. ನಾಗರಿಕ

ಸಮುದಾಯ ಆದಿವಾಸಿಗಳ ಅತ್ಯುತ್ತಮ ಜ್ಞಾನ ಶಿಸ್ತುಗಳನ್ನು ತಮ್ಮದೆಂದು ದಕ್ಕಿಸಿಕೊಂಡು ಸಾಂಸ್ಕೃತಿಕ ಪ್ರಭುತ್ವವು ಸಾವಿರಾರು ವರ್ಷಗಳಿಂದ ಅಧಿಕಾರದ ಕೇಂದ್ರವನ್ನು ಹಿಡಿದುಕೊಂಡು ಬಂದಿವೆ. ಶತ ಶತಮಾನಗಳಿಂದ ಒಂದು ಸಮುದಾಯದ ಅಂತರಂಗವನ್ನು ಪೊರೆದ ಜ್ಞಾನ ಶಿಸ್ತು ಇದ್ದಕ್ಕಿದ್ದಂತೆ ನೆನಪಿನ ಸ್ಥರಗಳ ಹಿಂದಕ್ಕೆ ಅಡಗಿ ಕೊರಬಲ್ಲದೆ ಪುರೋಹಿತಶಾಹಿ, ವಸಾಹತುಶಾಹಿ, ಆಧುನಿಕತೆ, ಜಾಗತೀಕರಣ, ವೈಜ್ಞಾನಿಕೀಕರಣ ಯಾವುದೇ ಆಗಲಿ ಅದು ಸಾವಿರಾರು ವರ್ಷಗಳಿಂದ ಜೀವಂತವಗಿ ಬೆಳೆದುಕೊಂಡು ಬಂದಿರುವ ಒಂದು ಜ್ಞಾನಶಿಸ್ತನ್ನು ನಾಶ ಮಾಡಬಲ್ಲದೇ ಇಲ್ಲ. ಆದಿವಾಸಿಗಳ ಮೇಲೆ ಎಷ್ಟೋ ಆಕ್ರಮಣಗಳು ನಡೆದರೂ ಅವು ತಮ್ಮ ಪಾರಂಪರಿಕ ಜ್ಞಾನದ ಹಿನ್ನೆಲೆಯಲ್ಲೇ ಬದುಕುತ್ತಿವೆ. ಆದಿವಾಸಿಗಳ ಪಾರಂಪರಿಕ ಜ್ಞಾನ ಜೀವಂತವಾಗಿರುತ್ತದೆ.

ಬ್ರಿಟಿಷ್‌ರು ಭಾರತವನ್ನು ಆಳತೊಡಗಿದ ಮೇಲೆ ಭಾರತಕ್ಕೆ ಬಂದ ಕ್ರೈಸ್ತ ಮಿಶನರಿಗಳಲ್ಲಿ ಕೆಲವರು ಗಿರಿಜನಾಡನ್ನು ಪ್ರವೇಶಿಸಿ ಆದಿವಾಸಿಗಳ ವಿಶಿಷ್ಟವಾದ ಬದುಕನ್ನು ಕಂಡು ಅವರೊಂದಿಗೆ ಬದುಕಿ, ಆದಿವಾಸಿಗಳು ಬೆಳೆಸಿಕೊಂಡು ಬಂದಿದ್ದ ಪರಾಂಪರಾನುಗತವಾದ ಜ್ಞಾನಶಿಸ್ತುಗಳನ್ನು ಕುರಿತು ಅಧ್ಯಯನ ಮಾಡಿ ನಾಗರಿಕ ಲೋಕಕ್ಕೆ ಪರಿಚಯಿಸಿದರು. ಕ್ರೈಸ್ತ ಮಿಶನರಿಗಳು ಆದಿವಾಸಿಗಳ ಅನನ್ಯ ವಾದ ಬದುಕನ್ನು ಕಂಡು ತಮ್ಮ ಉದ್ದೇಶವನ್ನು ಗೌಣಗೊಳಿಸಿ ಅವರ ಬದುಕಿನ ಅಧ್ಯಯನ ಕೈಗೊಂಡಿ ರುವ ವಿಷಯ ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಪಾಶ್ಚಾತ್ಯ ವೈದ್ಯರು ಆದಿವಾಸಿಗಳ ರೋಗ ನಿವಾರಣೆ ಗಾಗೆ ಬಳಸುತ್ತಿದ್ದ ಗಿಡಮೂಲಿಕೆಗಳ ಮೇಲೆ ಪ್ರಯೋಗ ನಡೆಸಿ ಮಲೇರಿಯಾ, ಪ್ಲೇಗನಂತಹ ಮಾರಕ ರೋಗಗಳಿಗೆ ಔಷಧಿ ಕಂಡುಹಿಡಿದರು.

ಇಂದು ಜಗತ್ತಿನಾದ್ಯಂತ ಅನೇಕ ಭಯಂಕರ ರೋಗಗಳು ಹುಟ್ಟಿಕೊಳ್ಳುತ್ತಿವೆ. ಅವೆಲ್ಲವು ಮನು ಕುಲವನ್ನೇ ನಾಶ ಮಾಡಬಲ್ಲ ಶಕ್ತಿಯನ್ನು ಹೊಂದಿವೆ. ಆಧುನಿಕ ವೈದ್ಯಕೀಯ ಸಂಶೋಧನೆಗಳಿಂದ ಅವುಗಳನ್ನು ಬಹಳ ಎಚ್ಚರಿಕೆಯಿಂದ ನಿಯಂತ್ರದಲ್ಲಿಡಬಹುದೇ ವಿನಃ ಪೂರ್ಣ ಪ್ರಮಾಣದ ಪರಿಹಾರ ಕಂಡುಕೊಳ್ಳಲಾಗದು. ಜಗತ್ತಿನ ಅನೇಕ ವೈದ್ಯಕೀಯ ಸಂಶೋಧಕರು ಭಾರತ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ವಾಸವಾಗಿರುವ ಆದಿವಾಸಿಗಳ ವೈದ್ಯಕೀಯ ಜ್ಞಾನ ಪರಂಪರೆಯನ್ನು ಅಧ್ಯಯನ ಮಾಡುತ್ತಿದ್ದಾರೆ. ನ್ಯಾಶನಲ್‌ಜಿಯಾಗ್ರಪಿ ಮತ್ತು ಡಿಸ್ಕವರಿಯಂತಹ ಪ್ರಸಾರ ಮಾಧ್ಯಮಗಳನ್ನು ಗಮನಿಸಿದಾಗ ಆದಿವಾಸಿಗಳ ಪಾರಂಪರಿಕ ಜ್ಞಾನ ಕುರಿತು ನಿರಂತರ ಅಧ್ಯಯನ ಸಂಶೋಧನೆ ಮಾಡುತ್ತಿರುವುದು ಕಂಡುಬರುತ್ತಿದೆ. ಇದು ನಾವು ಎದುರಿಸುತ್ತಿರುವ ಅನೇಕ ರೋಗಗಳಿಗೆ ಪರಿಹಾರ ಕಂಡುಕೊಳ್ಳಲು ಆದಿವಾಸಿಗಳ ಪಾರಂಪರಿಕಜ್ಞಾನದ ಕಡೆಗೆ ಗಮನಹರಿಸಬೇಕಿದೆ. ಹೀಗಾಗಿ ಆಧುನಿಕ ಜಗತ್ತು ಆದಿವಾಸಿ ಗಳನ್ನು ಅನಾಗರಿಕರು, ಅವೈಚಾರಿಕರು, ಮೂರ್ಖರು ಎಂದು ಕರೆಯುತ್ತಿದ್ದುದನ್ನು ಬಿಡಬೇಕಾಗಿದೆ. ಮತ್ತು ನಮ್ಮ ಆದಿವಾಸಿ ಸಮುದಾಯಗಳಲ್ಲಿ ಆಳದಲ್ಲಿರುವ ಪಾರಂಪರಿಕ ವೈದ್ಯಕೀಯ ಜ್ಞಾನವನ್ನು

ಅಧ್ಯಯನ ಮೊಡಲೇಬೇಕಾಗಿದೆ (ಗಂಗಾಧರ ದೈವಜ್ಞ, ೨೦೦೫:೧೩೪), ಇಂತಹ ಒಂದು ಉದಾಹರಣೆಗೆ ಕಾಡುಗೊಲ್ಲ ಅಲೆಮಾರಿ ಕುರಿಗಾರರನ್ನು ಹೆಸರಿಸಬಹುದಾಗಿದೆ. ಸಾಮಾನ್ಯ ವಾಸ ನೆಲೆಗಳಿಂದ ದೂರವಿದ್ದು ತಮ್ಮ ಕುರಿಗಳಿಗೆ ಹೆಚ್ಚಾಗಿ ಅವರು ಕಲಿತಿರುವ ವೈದ್ಯ ಮಾಡುತ್ತಾ ಬಂದಿರುವ ಪಾರಂಪರಿಕ ವೈದ್ಯ ಪದ್ಧತಿಗೆ ಹೆಚ್ಚು ಅಂಟಿಕೊಂಡಿರುವುದು ವಿಶೇಷ. ಏಕೆಂದರೆ ಇವರು ಪರಸ್ಥಳಗಳಿಗೆ ಹೋದಾಗ ಅಲ್ಲಿನ ವೈದ್ಯರು ಬೇರೆ ಊರುಗಳಿಂದ ಬಂದ ನಿಮಗೆ ಔಷಧ ಕ್ರೋಢಿಕರಿಸಿಲ್ಲ ಎಂದು ಹೇಳುತ್ತಾರೆ. ಅದಕಾರಣ ಇವರ ಕುರಿಗಳಿಗೆ ತಗಲುವ ಮಾರಕ ರೋಗಗಳಿಗೆ ಇವರೇ ಚಿಕಿತ್ಸೆ ನೀಡುತ್ತಾರೆ. ಅಂತಹ ಒಂದು ಪಾರಂಪರಿಕ ವೈದ್ಯಪದ್ಧತಿಯ ರೂಪ ಬಗೆಗಳನ್ನು ವಿವರಿಸಲಾಗಿದೆ.

ಇಂದಿಗೂ ಅಲೆಮಾರಿ ಕಾಡುಗೊಲ್ಲ ಕುರಿಗಾರರು ಶೇ.೪೦ ರಿಂದ ೫೦ರಷ್ಟು ಪಾರಂಪರಿಕ ವೈದ್ಯ ಪದ್ಧತಿಯನ್ನು ಅವಲಂಬಿಸಿದ್ದಾರೆ. ಏಕೆಂದರೆ ಅವರ ಜೀವನದಾದ್ಯಂತ ಪ್ರಕೃತಿಯೊಂದಿಗೆ ಜೀವನ ನಡೆಸುತ್ತಿರುವುದರಿಂದ ಈ ಅವಲಂಬನೆ ಅಗತ್ಯವಾಗಿದೆ. ಇಂದು ಯಾವುದೇ ಕಾಡುಗೊಲ್ಲರ ಹಟ್ಟಿಗಳಲ್ಲಿ ನೋಡಿದರೂ ಒಬ್ಬರಿಂದ ಇಬ್ಬರಂತೆ ಈ ಪಾರಂಪರಿಕ ವೈದ್ಯ ಪದ್ಧತಿಯನ್ನು ಮಾಡುವವರನ್ನು ಇಂದು ಕಾಣಬಹುದಾಗಿದೆ. ಶಿರಾತಾಲ್ಲೂಕಿನಲ್ಲಿ ಅತ್ಯಂತ ಪ್ರಮುಖವಾಗಿ ಗುರುತಿಸಿಕೊಂಡವರಲ್ಲಿ ಲಕ್ಕವ್ವನ ಹಳ್ಳಿ ನಿಂಗಜ್ಜ ಇವರು ಜಾನಪದ ಅಕಾಡಮಿಯ ಪ್ರಶಸ್ತಿ ಪುರಸ್ಕೃತರು ೭೦ ವಯಸ್ಸಿನ ಇವರು ಇಂದಿಗೂ ಈ ವೈದ್ಯ ಪದ್ಧತಿಯನ್ನು ಮಾಡುತ್ತಿದ್ದಾರೆ. ಪ್ರಸಿದ್ಧವಾದ ರಂಗನಾಥನ ಕ್ಷೇತ್ರವಾದ ಮಾಗೋಡು ಗೊಲ್ಲರ ಹಟ್ಟಿಯ ಚಿತ್ತಪ್ಪ ತಂದೆ ದಾಸಪ್ಪ, ಚಿಕ್ಕ ವಯಸ್ಸಿನಿಂದಲೇ ಈ ಪದ್ಧತಿಯನ್ನು ಮಾಡುತ್ತಾ ಬಂದಿದ್ದಾರೆ. ಇನ್ನು ತಾಲ್ಲೂಕಿನ ಕುರಿಗಳ ಕಣಜ ಎಂದೇ ಹೇಳುವ ಬೇವಿನ ಹಳ್ಳಿಯ ಸಣ್ಣ ಚಿತ್ತಪ್ಪ ತಂದೆ ಚಿತ್ತಪ್ಪರವರು ಊರಿನ ಎಲ್ಲಾ ಕುರಿಗಳಿಗೂ ಮತ್ತು ದನಕರುಗಳಿಗೆ ವೈದ್ಯವನ್ನು ಮಾಡುತ್ತಾರೆ. ಹಾರೋಗೆರೆಯ ಕೆಂಚಣ್ಣ ತಂದೆ ಈರಣ್ಣ, ದ್ವಾರನ ಕುಂಟೆಯ ಕಿಟ್ಟಣ್ಣ ತಂದೆ ಯೆರೆಯಪ್ಪ, ಚಿತ್ತಪ್ಪ ತಂದೆ ಕವುಡೀರಪ್ಪ ಮದ್ದನಕುಂಟೆ ಗೊಲ್ಲರಹಟ್ಟಿ, ತಿಮ್ಮನಹಳ್ಳಿ ಗೊಲ್ಲರ ಹಟ್ಟಿಯ ಸಣ್ಣ ರಂಗಣ್ಣ ತಂದೆ ರಂಗಜ್ಜ, ಮುದ್ದಜ್ಜ ತಂದೆ ಚಿತ್ತಪ್ಪ, ಹುಳುವಿಗೆರೆ ಗೊಲ್ಲರ ಹಟ್ಟಿಯ ತಿಮ್ಮಣ್ಣ ಮೇಣಿಗನಹಟ್ಟಿಯ ದಂಡಪ್ಪ, ರಾಗಿ ಲಿಂಗದ ಹಳ್ಳಿಯ ನಾಗಣ್ಣ, ಎಮ್.ದಾಸರಹಳ್ಳಿಯ ಕೆಂಪಣ್ಣ ತಂದೆ ಸಣ್ಣ ತಿಮ್ಮಣ್ಣ ಇವರ ತಂದೆಯು ವೈದ್ಯ ಮಾಡುತ್ತಿದ್ದರು. ಇವರ ತಂದೆಯ ಮರಣಾನಂತರವು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬೊಮ್ಮೆರಸನಹಳ್ಳಿ ಗೂಲ್ಲರ ಹಟ್ಟಿಯ ಮುದ್ದಣ್ಣ ತಂದೆ ಚಿಕ್ಕಣ್ಣ ಇವರು ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳಲ್ಲಿರುವ ಕುರಿ-ದನಗಳಿಗೆ ವೈದ್ಯವನ್ನು ಮಾಡುತ್ತಿದ್ದಾರೆ. ಇವರು ವಿಶೇಷವಾಗಿ ಕುರಿ-ದನಗಳ ಕೈಕಾಲುಗಳು ಮುರಿದಾಗ ಅದು ಎಷ್ಟೇ ತೀವ್ರತರವಾಗಿ ಮುರಿದಿದ್ದರು. ಸುಲಭವಾಗಿ ಅವುಗಳನ್ನು ಜೋಡಿಸುವ ಕಲೆಯನ್ನು ಹೊಂದಿದ್ದಾರೆ. ಆದ್ದರಿಂದ ಸುತ್ತಲಿನ ಎಲ್ಲಾ ಹಳ್ಳಿಗಳಿಗೂ ವೈದ್ಯವನ್ನು ನೀಡುತ್ತಾ ಬಂದಿದ್ದಾರೆ. ಅಲ್ಲದೆ ಇವರು ಹಸು, ಎಮ್ಮೆಗಳಿಗೆ, ಕುರಿ,

ಮೇಕೆಗಳಿಗೆ ಮರಿ ಹಾಕಬೇಕಾದಾಗ, ಹೊಟ್ಟೆಯಲ್ಲಿ ಕರು ಅಡ್ಡ ತಿರುಗುವುದು, ಹೊಟ್ಟೆಯಲ್ಲಿ ಸತ್ತಿರುವುದು ಅಥವಾ ಕರು-ಮರಿಗಳನ್ನು ಹಾಕದೇ ನೋವನ್ನು ಅನುಭವಿಸುವ ದನ-ಕುರಿಗಳಿಗೆ ಸುಲಭವಾಗಿ ಪ್ರಸವವಾಗುವಂತೆ ವೈದ್ಯವನ್ನು ಮಾಡುತ್ತಾ ಬಂದಿದ್ದಾರೆ.

ಈ ಎಲ್ಲಾ ಉದಾಹರಣೆಗಳನ್ನು ನೋಡಿದಾಗ ಈ ಸಮುದಾಯದಲ್ಲಿ ಜನಪದ ವೈದ್ಯೋಪಚಾರ ಪದ್ಧತಿಯನ್ನು ಇನ್ನೂ ಅಳವಡಿಸಿಕೊಂಡಿರುವುದು ತುಂಬಾ ಆಶ್ಚರ್ಯಕರ. ಇಂದು ಕಾಡಿನಲ್ಲಿದ್ದ ಬುಡಕಟ್ಟುಗಳನ್ನು ಸರ್ಕಾರಗಳು ಹೊರಹಾಕಿದುದರಿಂದ ಅವರಲ್ಲಿನ ಕೆಲ ಕಲೆಗಳು ಅಧುನಿಕತೆಯಲ್ಲಿ ಮಾಯವಾಗುತ್ತಿವೆ. ಆದರೆ ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಲ್ಲಿ ಬಳಸುವ ಈ ಜನಪದ ವೈದ್ಯಪದ್ಧತಿ ಮಾತ್ರ ಇಂದಿಗೂ ಬಿಡುವ ಲಕ್ಷಣಗಳೇ ಇಲ್ಲ. ಏಕೆಂದರೆ ಇಂದು ಇವರಿಗೆ ಸುಲಭವಾಗಿ ಆಸ್ಪತ್ರೆ, ವೈದ್ಯರು, ಅಲ್ಲದೆ ಆಧುನಿಕ ಔಷಧಿಗಳ ಬೆಲೆಯು ಗಗನಕ್ಕೇರುವುದರಿಂದ ಸುಲಭವಾಗಿ ಯಾವುದೇ ದೊರೆಯುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಎಂದರೆ ಕುರಿಗಳಿಗೆ ಬರುವ ಅಮ್ಮ(ಸಿಡುಬು) ರೋಗಕ್ಕೆ ಒಂದು Injoction Tub ಸಾವಿರ ರೂಪಾಯಿ ರೂಪಾಯಿ. ಬೆಲೆ ಇರುವಂತಹದ್ದು. ಅಲ್ಲದೆ ಯಾವುದೇ ಸರ್ಕಾರಿ ವೈದ್ಯ ಕುರಿ ರೊಪ್ಪಗಳಿಗೆ ಬಂದರೆ ಕುರಿಯೊಂದಕ್ಕೆ ಎರಡು ರೂಪಾಯಿ. ವಸೂಲಿ ಮಾಡುತ್ತಾನೆ. ಅಲ್ಪ ಸ್ವಲ್ಪ ಕುರಿ ಇರುವವರು ಇವರ ತಂಟೆಯೇ ಬೇಡವೆಂದು ಜನಪದ ವೈದ್ಯ ಪದ್ಧತಿಗೆ ಮೊರೆ ಹೋಗಿದ್ದಾರೆ. ಅಲ್ಲದೇ ಪಯಣದ ಹಾದಿಯಲ್ಲಿ ಯಾವಾಗಲೂ ವೈದ್ಯರನ್ನು ನಂಬಿಕೊಂಡು ಕೂರುವ ಹಾಗಿರುವುದಿಲ್ಲವಾದ್ದರಿಂದ ಕಾಡುಗೊಲ್ಲರು ತಮ್ಮ ಪಾರಂಪರಿಕ ವೈದ್ಯಪದ್ಧತಿಗೆ ಅಂಟಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**ಕಾಡುಗೊಲ್ಲರ ಕುರಿಗಳಿಗೆ ಬಳಸುವ ಪಾರಂಪರಿಕ ವೈದ್ಯ ಪದ್ಧತಿ**

ಕಾಡುಮೇಡುಗಳಲ್ಲಿ ತಮ್ಮ ವಾಸದ ಮನೆಗಳನ್ನು ಮಾಡಿಕೊಂಡು ಅಲ್ಲಿಯೇ ಕುರಿಹಟ್ಟಿಗಳನ್ನು ಹಾಕಿಕೊಂಡು, ಊರಿಗೂ ತಮಗೂ ನೇರ ಸಂಬಂಧವಿಲ್ಲವೇನೋ ಎಂಬಂತೆ ಬದುಕುವ ಕಾಡುಗೊಲ್ಲರು. ಆಧುನಿಕ ವೈದ್ಯ ಪದ್ಧತಿಯು ಕಂಡರಿಯದ ಸ್ಥಿತಿಯಲ್ಲಿದ್ದಾರೆ. ಹಾಗೆಂದ ಮಾತ್ರಕ್ಕೆ ಅವರಿಗೆ ಯಾವ ರೋಗ-ರುಜಿನಗಳು ಬರುತ್ತಿಲ್ಲವೆಂದಲ್ಲ. ರೋಗಗಳಿಗೆ ಇಡಾದಾಗ ದೈವದ ಮೊರೆ ಹೋಗುತ್ತಿದ್ದರು. ಕುಲ ದೈವವನ್ನೆ ನಂಬಿ ಸುಮ್ಮನೆ ಕೂತವರೂ ಅಲ್ಲ. ದೈವಬಲದೊಂದಿಗೆ ತಮ್ಮ ತಿಳುವಳಿಕೆ ಬಂದಂತೆ ಗಿಡ ಮೂಲಿಕೆಗಳನ್ನು ಉಪಯೋಗಿಸಿ ಔಷಧಿ ಮಾಡುವುದನ್ನು ಕಂಡುಕೊಂಡರು. ಕ್ರಮೇಣ ಅದರಲ್ಲಿ ಗುಣಕಂಡ ಇವರು ಅದನ್ನೆ ಮುಖ್ಯ ವೈದ್ಯವಾಗಿ ಬಳಸಿಕೊಂಡು ಬಂದಿದ್ದಾರೆ.

೧. **ಗರ್ಭಧಾರಣಾ ಮೂಲಿಕೆ :** ಮುಂಗಾರು ಮಳೆಯ ಆರಂಭದಲ್ಲಿ ಹಾಗೂ ದೀಪಾವಳಿಯ ಸಮಯದಲ್ಲಿ ಹೆಚ್ಚು ಹೆಚ್ಚು ಕುರಿಗಳು ಗರ್ಭಧರಿಸುವ ಸಮಯ. ಒಂದು ವೇಳೆ ಕಾಲಕ್ಕೆ ಸರಿಯಾಗಿ

ಈ ಕ್ರಿಯೆ ನಡೆಯದಿದ್ದರೆ, ಅದಕ್ಕೆ ತಕ್ಕ ಔಷಧಿಯನ್ನು ತಯಾರಿಸಿ ಸಂತಾನಾಭಿವೃದ್ಧಿ ಕ್ರಿಯೆಯನ್ನು ದ್ವಿಗುಣಗೊಳಿಸಬಲ್ಲರು ಕಾಡುಗೊಲ್ಲರು.

ಅದಕ್ಕೆ ಬೇಕಾದ ವಸ್ತುಗಳೆಂದರೆ, ಹುತ್ತದ ಮೇಲೆ ಆಲೆಸೊಪ್ಪನ್ನು ಮೇಕೆ ಹಾಲಿನಲ್ಲಿ ಚೆನ್ನಾಗಿ ಅರೆದು, ಕುರಿಗಳ ಮೇಲೆ ಚೆಲ್ಲಿದರೆ ಕುರಿಗಳು ಬೇಗನೆ ಬೆದೆಗೆ ಬರುತ್ತವೆ. ಆದರೆ ಗರ್ಭ ನಿಲ್ಲುವುದಿಲ್ಲ, ಆಗ ಅದೆ ಸೊಪ್ಪನ್ನು ಎಮ್ಮೆ ಮಜ್ಜಿಗೆಯಲ್ಲಿ ಅರೆದು ಚೆಲ್ಲಿದರ ಗರ್ಭ ನಿಲ್ಲುತ್ತದೆ. ಇದಕ್ಕಿಂತಲೂ ಪರಿಣಾಮ ಬೀರುವ ಔಷಧಿ ಎಂದರೆ ನಸುಗುನ್ನಿ ಕಾಯಿಯನ್ನು ಮೇಕೆ ಹಾಲಿನಲ್ಲಿ ಅರೆದು ಚೆಲ್ಲಿದರೆ ಹಾಕಿದ ಒಂದೆ ಗಂಟೆಯಲ್ಲಿ ಬೆದಗೆ ಬರುತ್ತದೆ. ಗರ್ಭವು ನಿಲ್ಲುತ್ತದೆ.

**೨. ಹೂಗೇಟು ಹಾಕುವುದು :** ನೆಗಡಿಯಾದಾಗ ಮಾನವರು ಕೆಂಡದ ಮೇಲೆ ರಾಗಿಹಿಟ್ಟು, ಅರಿಶಿನ ಓಟ್ಟು ಪುಡಿ ಉದುರಿಸಿ ಮುಸುಕು ಹಾಕಿಕೊಂಡು ಹೊಗೆ ಸೇವಿಸುತ್ತಾರೆ. ಹಾಗೆಯೆ ಕುರಿಗಳಿಗೆ ಮೂಗಲ್ಲಿ ಗೊಣ್ಣೆ ಸುರಿಯುವುದು ಕಂಡುಬಂದರೆ ಹೊಗೇಟು ಹಾಕುತ್ತಾರೆ.

ಕರಿಹೊಟ್ಟೆಗಿಡ, ಬೂದುಹೊಟ್ಟೆಗಿಡ, ಕರಲು ಹೊಟ್ಟೆಗಿಡ, ದೊಡ್ಡ ಕಾಯಿಗಿಡ, ನೆಲತಂಗಡಿ ಗಿಡ, ಬಿಳಿ ಗುಬಸಿಗಿಡ, ಬಿಳಿ ಜೋಳದ ಕಡ್ಡಿ, ಸದಾ ಫಲಗಿಡ, ಲಗ್ನ ಮಾಡಿದ (ಅರಳಿ-ಬೇವು) ಮರದ ಚೆಕ್ಕೆ, ಸಪ್ಪಿಗಿಡ, ಕರಿಗುಲಗಂಜಿ, ಬಿಳಿಗುಲಗಂಜಿ, ಮಾಡಹರಿದ ಬಿಳಿ ಎಕ್ಕದ ಬೇರು ಇವೆಲ್ಲವನ್ನು ಚೆನ್ನಾಗಿ ಕುಟ್ಟ ಬೇಕು, ನಂತರ ಹಂದಿ ತುಪ್ಪದಲ್ಲಿ ಅಥವಾ ಹಸುವಿನ ಬೆಣ್ಣೆಯಲ್ಲಿ ಅಥವಾ ಮೇಕೆ ಹಾಲಿನಲ್ಲಿ ನೆನಸಿಡಬೇಕು. ನಂತರದ ದಿನದ ರಾತ್ರಿಯ ವೇಳೆಗೆ ಕುರಿಯೆಲ್ಲವನ್ನು ಕೂಡುಗುಂಪಾಗಿ ಹೊಡೆದು ಕೊಂಡು ಚೆನ್ನಾಗಿ ಒಣಗಿರೋ ತಂಕ್ಕಟೆ ಕಟ್ಟಿಗೆಯಿಂದ ಬೆಂಕಿಯನ್ನು ಹಾಕಿ ಅದರ ಮೇಲೆ ಇವೆಲ್ಲವನ್ನು ಇಟ್ಟಾಗ ಬರುವ ಹೊಗೆಯು ಕುರಿಗಳ ಮೇಲೆಲ್ಲಾ ಹೋಗುವಂತೆ ಮಾಡುತ್ತಾರೆ. ಈ ಹೊಗೆಯನ್ನು ಸೇವಿಸಿದರೆ ಕುರಿಗಳಿಗೆ ಕೆಮ್ಮು, ಗೊಣ್ಣೆ ಸೋರುವುದು ನಿಂತು ಹೋಗುತ್ತದೆ. ಹಾಗೇ ಗಾಬು ಹಾಗೂ ಜಾಡು ತೆಗಲುವುದಿಲ್ಲ.

**೩. ಮುಸರೆ ಹಾಕುವುದು :** ಇದರಲ್ಲಿ ಎರಡು ರೀತಿಯ ಮುಸುರೆಯನ್ನು ಹಾಕುವುದಿದೆ. ೧. ಮೂರು ಮನೆ ಮುಸುರೆ! ಇದು ಬೇರೆ ಕುರಿಗಳಿಗೂ ತೊಂದರೆಯಾಗುವುದಿಲ್ಲ. ಇದೊಂತರ Pencilin Injection ತರಹದ್ದು ಸರ್ವರೋಗಾನಿವಾರಕ ಮದ್ದು ಎನ್ನುವ ತರ. ಕೇವಲ ಮೂರು ಮನೆಗಳಿಂದ ಊಟ ಆದ ನಂತರ ಪಾತ್ರೆಯ ತಳದಲ್ಲಿ ಉಳಿದಿರುವುದನ್ನು ಸಂಗ್ರಹಿಸಿ ಕುರಿಹಟ್ಟಿಯಲ್ಲಿರುವ ಕುರಿಗಳ ಮೇಲೆ ನಂತರ ಮೇಯಲು ಹೋಗುವಾಗ ಹಟ್ಟಿಯ ಮುಂದೆ ಮೂರು ರೇಖೆಯೋಪಾದಿಯಲ್ಲಿ ಹೊಯ್ಯುವುದು. ನಂತರ ಸಾಯಂಕಾಲ ಹಿಂತಿರುವಾಗ ಕುರಿಗಳಿಗೆ ಇದೇ ತರಹ ಹಾಕುವುದು ಒಂದು ವಿಧ.

ಇನ್ನೊಂದು ಕುರಿಗಳು ಮರಿ ಹಾಕಿದಾಗ, ಮರಿಗೆ ಸಾಕಷ್ಟು ಹಾಲು ಇದ್ದರೆ ಚೆನ್ನಾಗಿ ಬೆಳೆಯುತ್ತವೆ. ಕುರಿಗಳಲ್ಲಿ ಹಾಲು ಕಡಿಮೆಯಾದರೆ, ಮುಸರೆ ಮಾಡಿ ಹಾಕುತ್ತಾರೆ. ಇದರಿಂದ ಕುರಿಗಳಿಗೆ

ಹಾಲು ಸಮೃದ್ಧವಾಗಿ ಸಿಗುವಂತಾಗುತ್ತದೆ. ಮಾಡುವ ಕ್ರಮ : ಹಾಲುಬಳ್ಳಿ, ಹಾಲುಸಕ್ಕಿನ ಬಳ್ಳಿ, ಕೋಣದ ಬಳ್ಳಿ, ಮಾಲದಕಿವಿಗೆಡ್ಡೆ, ಕರಿಗುಲಗಂಜಿ, ಬಿಳಿಗುಲಗಂಜಿ, ಸಣ್ಣಕಾಯಿ, ದೊಡ್ಡಕಾಯಿಗಿಡ, ಬಿಳಿ ಎಕ್ಕದ ಗಿಡ, ಬನ್ನಿಪತ್ರ, ಬಿಲ್ಪಪತ್ರೆ, ಇಷ್ಟನ್ನು ಸೇರಿಸಿ ಎಮ್ಮೆ ಮಜ್ಜಿಗೆಯಲ್ಲಿ ಚೆನ್ನಾಗಿ ಕುಟ್ಟಿ ನೆನಸಬೇಕು. ನಂತರ ಅದಕ್ಕೆ ಕಸ್ತೂರಿ, ಅರಿಶಿನ, ಹಸಿ ಅರಿಶಿನ, ಕುದುರೆ ಅರಿಶಿಣ, ನಿಂಬೆಹಣ್ಣು, ಮುಂತಾದವುಗಳನ್ನು ಕುಟ್ಟಿ ಸೇರಿಸಬೇಕು. ಮೂರು ದಿನಗಳವರೆಗೆ ಎಮ್ಮೆ ಮಜ್ಜಿಗೆಯನ್ನು ಹಾಕುತ್ತಾ ಇರಬೇಕು. ನಂತರ ಚೆನ್ನಾಗಿ ನೆನೆದು ಪರಿಮಳ ಸೂಸುವ ಈ ಮುಸುರೆಯನ್ನು ಕುರಿಗಳ ಮೇಲೆ ಚೆಲ್ಲಿದರೆ ಕುರಿಗಳು ಇದರ ವಾಸನೆಯನ್ನು ಸೇವಿಸಿದಾಗ ಹಾಲು ಸಮೃದ್ಧವಾಗುತ್ತದೆ.

**೪. ಜ್ವರಕ್ಕೆ ಔಷಧಿ :** ಕುರಿಗಳಿಗೆ ಸಾಮಾನ್ಯವಾಗಿ ಜ್ವರ ಬಂದಾಗ ಮೊದಲು ಮೇವು ಬಿಡುತ್ತವೆ. ಇನ್ನು ಕಾಲುಜ್ವರ ಬಂದರೆ ಕಾಲುಗಳಲ್ಲಿ ಗಾಯಗಳಾಗುತ್ತವೆ. ಬಾಯಿಯಲ್ಲಿ ಗಾಯದೋಪಾದಿಯಲ್ಲಿ ಹುಣ್ಣು ಆಗುತ್ತದೆ. ಇಂತಹ ಸಂದರ್ಭದಲ್ಲಿ ಅತ್ಯಂತ ಜಾಗರೂಕತೆಯಿಂದ ಅವುಗಳನ್ನು ಹಾರೈಕೆ ಮಾಡಬೇಕಾಗುತ್ತದೆ.

ರಾಗಿ ಅಂಬಲಿ(ಗಂಜಿ)ಯನ್ನು ಮಾಡಿಕೊಂಡು ಯಾವುದಾದರೂ (ಹಸು, ಎಮ್ಮೆ) ಮಜ್ಜಿಗೆಗೆ ಸ್ವಲ್ಪ ಖಾರದ ಪುಡಿಯನ್ನು ಮಿಶ್ರಣ ಮಾಡಿಕೊಂಡು ಹಾಗೂ ಮಂಗರ ಬಳ್ಳಿಯ ರಸ, ಮೆಣಸು, ಬೆಳ್ಳುಳ್ಳಿಗಳನ್ನು ಕುಟ್ಟಿ ಇದರ ರಸವನ್ನು ಇದರೊಂದಿಗೆ ಸೇರಿಸಿ, ಬಿಸಿನೀರಿನಲ್ಲಿ ಬಾಯಿ ತೊಳೆದು ನಂತರ ಹೊಯ್ಯುವುದು. ಇನ್ನೊಂದು ಬಗೆಯೆಂದರೆ ಚಿಟ್ಟು ಬಾಳೆಹಣ್ಣು, ಇಂಗು, ಪಚ್ಚಕರ್ಪೂರ, ಹಂದಿತುಪ್ಪ, ಇವುಗಳನ್ನು ಕಲೆಸಿ ತಿನ್ನಿಸುತ್ತಾರೆ. ಇದಕ್ಕೆ ವಾಸಿಯಾಗದಿದ್ದಲ್ಲಿ ಮಳೆಮೀನು ತಂದು ನೀರಲ್ಲಿ ಹಾಕಿ ಅರೆದು, ಕುರಿಗೆ ಮೈಮೇಲೆ ಚೆಲ್ಲಿದರೆ ಒಂದನ್ನೊಂದು ಕುರಿಗಳು ಮೂಸಿದಾಗ ಈ ಔಷಧಿಯನ್ನು ಮೂಗಿನ ಮೂಲಕ ಸೇವಿಸುತ್ತವೆ. ಆಗ ಜ್ವರದ ತಾಪ ಕಡಿಮೆಯಾಗುತ್ತದೆ.

**೫. ಜಾಡಿಗ ಸಿಕ್ಕು ಉಂಟಾದ ಗಾಬಿಗೆ :** ಸಾಮಾನ್ಯವಾಗಿ ಒಂದು ಊರಿನಲ್ಲಿ ಅನೇಕ ಕುರಿ ಮಂದೆಗಳನ್ನು ಸಾಕಿರುತ್ತಾರೆ. ಅಲ್ಲದೆ ಪಕ್ಕದ ಊರಿನವರು ಸಾಕಿರುತ್ತಾರೆ. ಅಂತಹ ಸಂದರ್ಭದಲ್ಲಿ ಎಲ್ಲ ಕುರಿಗಾರರಿಗೂ ವಿಶ್ವಾಸವಿಲ್ಲದೆ, ಅಸೂಯೆ ಬೆಳೆದರೆ, ಒಬ್ಬರನ್ನೊಬ್ಬರು ತುಳಿಯಲಿಕ್ಕೆ ಪ್ರಯತ್ನಿಸುತ್ತಾರೆ. ತನ್ನ ಕುರಿಗಳಿಗೆ ನಿತ್ಯಬರುವ ಜಾಗದಲ್ಲಿ ಓಡಾಡಿಸಿಕೊಂಡು ಹೋಗುತ್ತಾರೆ. ತಿಳಿಯದೆ ಆ ಜಾಡಿಗೆ ಬಂದ ಇತರರ ಕುರಿಗಳು ಆ ಕುರಿಗಳ ಸಗಣಿ, ಗಂಜಳವನ್ನು ತುಳಿದರೆ 'ಗಾಬು' ತಗುಲುತ್ತದೆ. ತಕ್ಷಣವೇ ಹೊಟ್ಟೆ ಊದಿಕೊಂಡು ನೆಲಕ್ಕೆ ಬಿದ್ದು ಒದ್ದಾಡಿ ಸಾಯುತ್ತವೆ. ಇದರಿಂದ ಪರಿಹಾರಬೇಕೆಂದರೆ ಅದಕ್ಕೆ ಪ್ರತಿಯಾಗಿ ರಕ್ಷಣಾತ್ಮಕವಾಗಿ ಔಷಧಿಯನ್ನು ಮಾಡಲೇಬೇಕು. ಔಷಧವನ್ನು ಮಾಡುವ ಬಗೆ ಎಂದರೆ

ತಮ್ಮ ಊರಿನ ಮೂಡಣ ದಿಕ್ಕಿನಲ್ಲಿ ಮೂಡಮುಖವಾಗಿ ಹರಿಯುವ ಹಳ್ಳದಲ್ಲಿ ಮೂರು ಚಿಲುಮೆ ತೋಡಿ, ಅಲ್ಲಿ ಗಂಗಾಪೂಜೆ ಮಾಡಬೇಕು. ನಂತರ ಮೂರು ಚಿಲುಮೆಯಿಂದಲೂ ತಾಮ್ರದ ಇಲ್ಲವೆ ಹಿತ್ತಾಳೆಯ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ಅದಕ್ಕೆ ಪೂಜಿಸಿ ನಂತರ ಸುಡಗಾಡಿನಲ್ಲಿರುವ

ಬಿಲ್ಪಪತ್ರ ಮರಕ್ಕೆ ಒಬ್ಬ ಕುರಿ ಹುಡುಗನನ್ನು ಹುಟ್ಟ ಬಟ್ಟೆಯಲ್ಲಿ ರಾತ್ರಿ ಮರಕ್ಕೆ ಪೂಜಿಸಿ, ಪತ್ರೆ ತರಿಸಬೇಕು. ಪತ್ರ ಕೀಳುವ ಕ್ರಮ, ಮರವನ್ನು ಹತ್ತುವಾಗ ಮೂರು ಹಿಡಿ, ಇಳಿಯುತ್ತಾ ಮೂರು ಹಿಡಿ ಪತ್ರ ಕೀಳಬೇಕು. ನಂತರ ಅದನ್ನು ತಂದು ಹೊಳೆಯಿಂದ ತಂದ ನೀರಿಗೆ ಕುಟ್ಟಿ ಹಾಕಬೇಕು. ಅದಕ್ಕೆ ಮೂರು ನಿಂಬೆಹಣ್ಣು, ಬಿಳೀ ಕಣಗಿಲೆ ಮುಂತಾದವುಗಳನ್ನು ಸೇರಿಸಿ ಕುರಿಗಳಿಗೆ ಹಾಕಿದರೆ ಗಾಬು ವಾಸಿಯಾಗುತ್ತದೆ.

**೬. ಕಾಲು ಮುರಿದಾಗ :** ಕುರಿಗಳ ಕಾಲು ಮುರಿಯುವುದು ಸರ್ವೇಸಾಮಾನ್ಯ. ಹೊಲಗಳಿಗೆ ಕಳ್ಳತನದಲ್ಲಿ ಮೇಯಲು ಹೋಗುವ ಕುರಿಗಳಿಗೆ ಕಲು ಎಸೆಯುವ ಸಂದರ್ಭದಲ್ಲಿ ಅಥವಾ ಆಕಸ್ಮಿಕ ವೇಳೆಗಳಲ್ಲಿ ಕಾಲುಮುರಿಯುತ್ತದೆ. ಇದಕ್ಕೆ ಮೇಕೆ ಹಾಲು, ಕಳ್ಳಿಹಾಲು, ಕುರಿಸಗಣಿ ಕಲಸಿ ಚೆನ್ನಾಗಿ ನೆನೆಯುವಂತೆ ಮಾಡಿ ಮುರಿದ ಭಾಗಕ್ಕೆ ಸುತ್ತಿ, ೧೧/೨ ಇಂಚು ಅಗಲ ೬ ಇಂಚು ಉದ್ದದ ರೀತಿಯಲ್ಲಿ ಬಿದಿರು ದೆಬ್ಬೆಗಳ ತುಂಡುಗಳನ್ನು ಜೋಡಿಸಿಕೊಂಡಿ ಆ ಮಿಶ್ರಣದ ಮೇಲೆ ಮುರಿದ ಭಾಗಕ್ಕೆ ಕಟ್ಟುವುದು. ನಂತರ ಹುರುಳಿಕಾಳುಗಳನ್ನು ದಿನಾಲು ತಿನ್ನಿಸುವುದರಿಂದ ಕಾಲು ಬೇಗ ಕಟ್ಟಿಕೊಳ್ಳುತ್ತದೆ.

**೭. ಹುಳು ಮುಟ್ಟಿದಾಗ :** ಹುಳು(ಸಗಣಿ) ಕೆಚ್ಚಲಿನ ಭಾಗಕ್ಕೆ ಮಲಗಿದಾಗ ಹಲವು ಬಾರಿ ಕಚ್ಚುವ ಪ್ರಸಂಗಗಳು ಬಂದಾಗ ಕೆಚ್ಚಲು ಬಾವು ಬಂದು ಮರಿಗಳಿಗೆ ಹಾಲು ಕುಡಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಬಿಳಿಹುಲಿಸೊಪ್ಪು, ಆಡುಮುಟ್ಟದ ಸೊಪ್ಪನ್ನು ಆಡಿನ ಹಾಲಿನೊಂದಿಗೆ ಮಿಶ್ರಣ ಮಾಡಿ ಹೊಯ್ಯುವುದು. ಮತ್ತೆ ಕೆಲವೊಮ್ಮೆ ಪೊದೆ, ಗಿಡ ಗಂಟೆಗಳಲ್ಲಿ ಬಾಯಿ ತೂರಿಸಿ ಹುಲ್ಲು ಮೇಯುವಾಗ ವಿಷ ಜಂತುಗಳು ಕಚ್ಚುವುದುಂಟು. ಕಚ್ಚಿದ ಕೂಡಲೆ ವಿಪರೀತ ಭಾದೆಯಾಗಿ ಮೇವು ಬಿಟ್ಟು ತಲೆ ತಗ್ಗಿಸಿ ಮಂಕಾಗಿ ನಿಂತುಬಿಡುತ್ತದೆ. ಅದನ್ನು ಗಮನಿಸಿದ ಕಾಡುಗೊಲ್ಲರು ಕೂಡಲೆ ಆಡುಮುಟ್ಟದ ಸೊಪ್ಪಿನ ಬೇರನ್ನು ಕಿತ್ತು ತಂದು ತಿನ್ನಿಸುತ್ತಾರೆ. ಇದು ಪ್ರಥಮ ಚಿಕಿತ್ಸೆ ಹಾಗೂ ಇದೆ ಬೇರನ್ನು ಮೇಕೆ ಹಾಲಿನಲ್ಲಿ ಹೊಯ್ಯುತ್ತಾರೆ.

**೮. ದೊಮ್ಮ ರೋಗ ಹಾಗೂ ದೊಮ್ಮಗೆ ಏಟಾದಾಗ :** ಹೆಚ್ಚಾಗಿ ಕುರಿಗಳು ದೊಮ್ಮೆ ರೋಗಕ್ಕೆ ತುತ್ತಾಗುತ್ತವೆ. ಇದರಿಂದ ಬೇಗನೆ ಸಾಯುತ್ತವೆ. ಇದಕ್ಕೆ ಆಧುನಿಕ ವೈದ್ಯ ಚಿಕಿತ್ಸೆಯು ಅವಶ್ಯಕವಾಗಿರುತ್ತದೆ. ಆದರೂ ಕುರಿಗಾರರೇ ಮಾಡುವ ಚಿಕಿತ್ಸಾ ವಿಧಾನವೆಂದರೆ ಹುಣಸೇಹಣ್ಣಿನ ಹುಳಿ, ಖಾರದ ಹಾಲು (ಹಾಲಿಗೆ ಖಾರದ ಪುಡಿ ಮಿಶ್ರಣ) ಹೊಯ್ಯುತ್ತಾರೆ.

ದೊಮ್ಮಗೆ ಏಟು ಬಿದ್ದಾಗ, ಕುರಿಪಟ್ಲಿಗಳು ಗುದ್ದಾಡಿದಾಗ, ಇಂತಹ ಸಮಯದಲ್ಲಿ ಬ್ಯಾಲದ ಚೆಕ್ಕೆ, ಜಾಲಿ ಚೆಕ್ಕೆ, ಅರಳಿ ಮರದ ಚೆಕ್ಕೆಯನ್ನು ಆರೋಗ್ಯವಂತ ಮರಗಳಿಂದ ಕಿತ್ತುತಂದು, ಆ ಚೆಕ್ಕೆಗಳನ್ನು ಕುಟ್ಟಿ ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ನಂತರ ಆ ಕುದಿದ ನೀರನ್ನು ಬಸಿದು ಅದಕ್ಕೆ

ಬೆಲ್ಲ ಹಾಕಿ ಪಾನಕದಂತೆ ಮಾಡಿ ಅದನ್ನು ಸಣ್ಣಬಿಂದಿಗೆಗೆ ಸುರಿದುಕೊಂಡು ಕುರಿಬಾಯಿಗೆ ಹಾಕುತ್ತಾರೆ. ಹೀಗೆ ಒಂದೆರಡು ಬಾರಿ ಹಾಕಿದರೆ ಗುಣವಾಗುತ್ತದೆ.

**೯. ಗಾಯಗಳಲ್ಲಿ ಹುಳು ಬಿದ್ದಾಗ :** ಆಕಸ್ಮಿಕವಾಗಿ ಆದ ಗಾಯಗಳಲ್ಲಿ ಹುಳು ಬಿದ್ದಾಗ ಕೆಲವೊಮ್ಮೆ ಪ್ರಾಣಕ್ಕೆ ಕುತ್ತುಬರುತ್ತದೆ. ಗಾಯವಾದಂತಹ ಜಾಗಕ್ಕೆ ಹೊಗೆಸೊಪ್ಪಿನ ಪುಡಿಯೊಂದಿಗೆ ಸುಣ್ಣ, ಜೇಡಿಮಣ್ಣು ಮಿಶ್ರಣವನ್ನು ಶೆಲ್‌ಗಳ ಹೊಳಗಿರುವ(ಇಂಗಾಲ ಡೈಆಕ್ಸಡ್) ಪುಡಿಯನ್ನು ಹರಳೆಣ್ಣೆಯೊಂದಿಗೆ ಸೇರಿಸಿ ಗಾಯದ ಮೇಲೆ ಲೇಪಿಸುತ್ತಾರೆ.

**೧೦. ಕಣ್ಣು ಕಾಣದಾಗ :** ಇದು ಹಲವು ರೀತಿಯಾಗಿ ಕಣ್ಣು ಕುರುಡಾಗುತ್ತದೆ. ಮೇವು ಮೇಯುವಾಗ ಕಡ್ಡಿ, ಮುಳ್ಳುಗಳು ಪಟ್ಲಿಗಳು ಕೊಂಬು ತಗುಲಿದಾಗ, ಕಣ್ಣುಗಳು ಕುರುಡಾಗುತ್ತವೆ. ಇಂತಹ ಸಮಯದಲ್ಲಿ ಕುರಿಗಳ ತೊಡೆಯ ಸಂದಿನಲ್ಲಿರುವ ಕುರಿಯ ಬೆವರು ತೆಗೆದುಕೊಂಡು ಅಂಗೈಯಲ್ಲಿ ಹಾಕಿಕೊಂಡು ಕುರಿಹಾಲು ಹಾಗು ಉಪ್ಪಿನೊಂದಿಗೆ ಚೆನ್ನಾಗಿ ಕಲೆಸಿ ಕಣ್ಣಿನೊಳಕ್ಕೆ ಹಾಕುವುದು. ಇದರಿಂದ ಎರಡು ಮೂರು ದಿನಕ್ಕೆ ವಾಸಿಯಾಗುತ್ತವೆ.

**೧೧. ತಲೆ ನೀರು(ಬುರುಡೆ) ನಡುಗುವುದು :** ಇನ್ನಿ ಈರೆಸೊಪ್ಪು, ಮೇಕೆ ಹಾಲು, ಮೆಣಸು, ಬೆಳ್ಳುಳ್ಳಿ ಮಿಶ್ರಣ ಮಾಡಿ ತಿನ್ನಿಸುವುದರಿಂದ ಇದು ನಿಲ್ಲುತ್ತದೆ. ಇದು ಮಳೆ ಬಂದಾಗ ರೋಜಾ(ಲಂಟನ್) ಸೊಪ್ಪು ತಿಂದಾಗ, ವಾತಾವರಣದಲ್ಲಿ ಆದ ಬದಲಾವಣೆಯಿಂದ ಈ ತರಹ ಆಗುತ್ತವೆ.

**೧೨. ಪ್ರಸವದ ತೊಂದರೆ :** ಕುರಿಗಳು ಸುಲಭವಾಗಿ ಮರಿಹಾಕುತ್ತವೆ. ಒಂದು ವೇಳೆ ಮೊದಲನೇ ಸಲವಾಗಿದ್ದರೆ ಕೆಲವು ಸಲ ಮರಿಹಾಕುವುದು ತುಂಬಾ ತಡವಾಗುತ್ತದೆ. ಕುರಿ ಸೂಲಿಸುವುದು ಆರಂಭವಾಗುತ್ತಲೆ ಕುರಿಗಾಹಿಗಳು ಅದರ ಬಗ್ಗೆ ನಿಗಾವಹಿಸುತ್ತಾರೆ. ಮರಿಹಾಕುವುದಕ್ಕೆ ತೊಂದರೆಯಾಗಿದೆ; ಮರಿ ಅಡ್ಡ ಬಿದ್ದಿದೆ ಎಂದು ಗೊತ್ತಾಗುತ್ತದೆ. ಕೂಡಲೆ ಇಬ್ಬರು ಆ ಕುರಿಯನ್ನು ಹಿಡಿದು ಸಮನಾದ ನೆಲದ ಮೇಲೆ ಮಲಗಿಸುತ್ತಾರೆ. ನಂತರ ಮುಂದಿನ ಎರಡು ಕಾಲುಗಳನ್ನು ಒಬ್ಬ ಹಿಂದಿನ ಎರಡು ಕಾಲುಗಳನ್ನು ಒಬ್ಬ ಎಳೆದು ಹಿಡಿದು ಕುರಿಯನ್ನು ಆ ಕಡೆ ಈ ಕಡೆ ನಾಲ್ಕು ಸಲ ಹೊರಳಾಡಿಸುತ್ತಾರೆ. ನಂತರ ಹಿಂಗಾಲುಗಳನ್ನು ಬಿಟ್ಟು ಮುಂಗಾಲುಗಳನ್ನು ಹಿಡಿದು ಮೇಲೆತ್ತಿ ಹೊಟ್ಟೆಯ ಭಾಗವನ್ನು ಎಡಗಾಲಿನಿಂದ ನೀವುತ್ತಾರೆ. ನಂತರ ಕುರಿಯನ್ನು ಎತ್ತಿ ಬಿಡುತ್ತಾರೆ. ಹೀಗೆ ಮಾಡಿದ ಒಂದೆರೆಡು ತಾಸುಗಳಲ್ಲಿ ಮರಿಹಾಕುತ್ತದೆ. ಮರಿಯು ಹೊರ ಬಂದ ಕೂಡಲೆ ತಾವೆ ಬಂದು ಕುರಿಯನ್ನು ಅದುಮಿಡಿದು ಅದರ ಮಡಿಲನ್ನು(ಜನನಾಂಗ) ಹಿಗ್ಗಲಿಸಿ ಈಯಿಸುತ್ತಾರೆ. ಮರಿಹೊರ ಬಂದ ಕೂಡಲೆ ಅದರ ಮೇಲಿರುವ ಮಲವನ್ನು(ಮಾಸು) ಕೈಯಲ್ಲಿ ತೆಗೆದು, ಅದರ ಮೂತಿಯನ್ನು ಸ್ವಚ್ಛಗೊಳಿಸಿ ಅದನ್ನು ಕುರಿಗೆ ತಿನ್ನಿಸುತ್ತಾರೆ. ನಂತರ ಉಳಿದ 'ಮಲವು'ವನ್ನು ಕುರಿ ನೆಕ್ಕಿ ಶುಭ್ರಗೊಳಿಸುತ್ತದೆ. ಹೀಗೆ ಮಾಡುವುದರಿಂದ

ಮರಿಯ ಮೇಲೆ ಮಮತೆ ಹೆಚ್ಚಾಗಿ ಚೆನ್ನಾಗಿ ಹಾಲುಣಿಸುತ್ತದೆ ಮತ್ತು ತನ್ನ ಮರಿಯ ವಾಸನೆಯ ಗುರುತು ಉಳಿಯುತ್ತದೆ.

ಒಂದು ವೇಳೆ ಮರಿಯ ವಾಸನೆ ಬದಲಾದರೆ ಆಗ ಅದು ತನ್ನ ಮರಿಯಲ್ಲವೆಂದು ತಿಳಿದು ಕುರಿ ಹಾಲುಣಿಸುವುದಿಲ್ಲ. ಆಗ ಮರಿಯನ್ನು ನೀರಿನಿಂದ ಚೆನ್ನಾಗಿ ತೊಳೆಯುತ್ತಾರೆ. ಮೈ ಆರಿದ ವೇಳೆ ಕುರಿಯ ಬೆವರಿನ ಭಾಗಕ್ಕೆ ಮರಿಯನ್ನು ಉಜ್ಜಿ ಅದರ ಬೆವರು ಗುರುತು ಹತ್ತುವಂತೆ ಮಾಡುತ್ತಾರೆ. ಆಗ ತನ್ನ ವಾಸನೆಯೆ ಬರುವುದರಿಂದ ಮರಿ ತನ್ನದೆ ಎಂದು ತಿಳಿದು ಕುರಿ ಹಾಲುಣಿಸುತ್ತದೆ.

೧೩. **ಸತ್ತೆ (ಮಾಸು) ಹಾಕದಿದ್ದಾಗ :** ಕೆಲವೊಂದು ಬಾರಿ ಮರಿ ಹಾಕಿದ ಕುರಿ ಸತ್ತೆ ಹಾಕುವುದಿಲ್ಲ. ಅದರಿಂದ ಕುರಿಗೆ ನಡೆದಾಡಲು, ಮರಿಗೆ ಹಾಲು ಕುಡಿಸಲು ತೊಂದರೆಯಾಗುತ್ತದೆ. ಆದ್ದರಿಂದ ಇವರೆ ತಯಾರಿಸಿದ ಚಿಕಿತ್ಸಾ ವಿಧಾನವೆಂದರೆ ಕಾಮಕಸ್ತೂರಿ ಸೊಪ್ಪು, ಎಳ್ಳು, ಬೆಲ್ಲ, ಮೂರು ಮಿಶ್ರಣ ಮಾಡಿ ತಿನ್ನಿಸುವುದರಿಂದ ಸತ್ತೆಯನ್ನು ಸುಲಭವಾಗಿ ಹಾಕುತ್ತದೆ. ಅದನ್ನು ಹುತ್ತದ ಕೋಮಿಯೊಳಕ್ಕೆ ಇಲ್ಲವೆ ಕುರಿಹಟ್ಟಿಯ ಕಳ್ಳೆಯೊಳಕ್ಕೆ ಹಾಕುತ್ತಾರೆ.

೧೪. **ಕೋಳಿ ಹುಳಿಯನ್ನು ತಯಾರಿಸುವುದು :** ಇದು ಸರ್ವ ರೋಗಗಳಿಗೂ ಮದ್ದು. ಇದರಿಂದ ಯಾವುದೇ ಗಾಬು, ಬೇದಿ, ಹಾಲುಸಮೃದ್ಧಿಯಾಗಲೂ, ಕಂದು ಹಾಕಿಕೊಳ್ಳದೆ ಇರುವುದಕ್ಕೆ ಹೀಗೆ ಹಲವು ರೀತಿಯ ಸಮಸ್ಯೆಗಳಗೆ ಪರಿಹಾರವಾಗಿ ಉಪಯೋಗಿಸುತ್ತಾರೆ. ಇದಕ್ಕೆ ನಾಟಿ ಕೋಳಿಯ ಬಳಕೆಯು ಪ್ರಮುಖವಾಗಿದೆ. ಇದು 'ಒಂದು ಸಾವಿರ ಕುರಿಗಳಿಗೆ'

ಐವತ್ತು ಕಿ.ಲೋ. ಕೋಳಿಯ ಮಾಂಸ (ಮೂಳೆಗಳನ್ನು ಬೇರ್ಪಡಿಸಿ)

ಐವತ್ತು ಕಿ.ಲೋ ಕೊತ್ತಂಬರಿ (ದನಿಯಾ) ಕಾಳು

ಇಪ್ಪತ್ತು ಕಿ.ಲೋ ಈರುಳ್ಳಿ

ಇಪ್ಪತ್ತು ಕಿ.ಲೋ. ಬೆಳ್ಳುಳ್ಳಿ

ಒಂದು ಕಿ.ಲೋ. ಮೆಣಸು

ಅರ್ಧ ಕಿ.ಲೋ. ಇಪ್ಪಲಿ (ಒಣಗಿದ ಬಳ್ಳಿ)

ಎರಡು ಕಿ.ಲೋ. ಮೋಡಿ (ಕಡ್ಡಿ ಅಥವಾ ಬಳ್ಳಿ)

ಹತ್ತು ಬಾಕ್ಸ್ ಗೋರಂಜನ (ಚಿಕ್ಕ ಡಬ್ಬಿಗಳ ಸಂಗ್ರಹ)

ಅರ್ಧ ಕಿ.ಲೋ. ಇಂಗು

ಎರಡು ಕಿ.ಲೋ ಕಸ್ತೂರಿ ಹರಿಶಿಣ

ಒಂದು ಕಿ.ಲೋ.ಬುರುಗುದೋಣಿ (ಚೆಕ್ಕೆ ತರಹದ್ದು. ಇದು ನೀರಿನಲ್ಲಿ ಕರುಗುವುದಿಲ್ಲ. ಇದು ಪುಡಿಯೊಂದಿಗೆ ಮಿಶ್ರಣ ಮಾಡುವುದು)

ಒಂದು ಕಿ.ಲೋ. ಹಸಿಶುಂಠಿ

ಎರಡು ಕಿ.ಲೋ. ಬಾಲ ಮೆಣಸು

ಎರಡು ಕಿ.ಲೋ. ಬಿಳಿ ಮೆಣಸು

ಐವತ್ತು ಕಾಯಿ ಚಾ ಕಾಯಿಗಳು

ಒಂದು ಕಿ.ಲೋ. ಜಾ ಪತ್ರ

ಐವತ್ತು ಗೆಡ್ಡೆಯೊಂದಿಗೆ ತೀಸ್ ಬಾಸ್ಲೇಗೆಡ್ಡೆ (ಬಳ್ಳಿಯೊಂದಿಗೆ ತಿನ್ನಿಸುವುದರಿಂದ ಉದರಬಾದೆ, ಪಿತ್ತ, ನಿವಾರಣೆಗೆ ಹೆಚ್ಚು ಅನುಕೂಲ)

ನೂರು ಕಿ.ಲೋ. ದೊಮ್ಮಗೆಡ್ಡೆ (ಬೆಟ್ಟಗುಡ್ಡಗಳಲ್ಲಿ ದೊರೆಯುವುದು)

ಐವತ್ತು ಕಿ.ಲೋ.ಮಾಂಸವನ್ನು ಮೂಳೆಗಳಿಂದ ಬೇರ್ಪಡಿಸಿ ನೀರಿನಲ್ಲಿ ಚೆನ್ನಾಗಿ ಬೇಯಿಸಿ, ಅದನ್ನು ರುಬ್ಬಲು(ಅರೆಯಲು) ಅನುಕೂಲವಾಗುವಂತೆ, ಈ ಎಲ್ಲಾ ವಸ್ತುಗಳನ್ನು ಚೆನ್ನಾಗಿ ಅರೆದು ಎಲ್ಲವನ್ನು ಕೋಳಿಯ ಮಾಂಸವನ್ನು ಬೇಯಿಸಿದ ನೀರಿನೊಂದಿಗೆ ಮಿಶ್ರಣ ಮಾಡಿ ಇದರ ಜೊತೆಗೆ, ಬೇವಿನ ಚೆಕ್ಕೆ, ಹೊಂಗೆ ಚೆಕ್ಕೆಗಳನ್ನು ಚೆನ್ನಾಗಿ ಬೇಯಿಸಿ, ಇದರ ರಸವನ್ನು ತೆಗೆದು ಈ ಎಲ್ಲವನ್ನು ಮಿಶ್ರಣ ಮಾಡಿ ಕುರಿಗಳಿಗೆ ಹೊಯ್ಯುವುದು(ಕುಡಿಸುವುದು). ಇದರಿಂದ ಯಾವುದೇ ರೀತಿಯ ಸಮಸ್ಯೆಗಳಿಗೂ ಕುರಿಗಳು ಸಿಲುಕುವುದಿಲ್ಲ. ಇದು ಬಹುದೊಡ್ಡ ಕುರಿಮಂದೆಗಳನ್ನು ಹೊಂದಿರುವವರು ಮಾತ್ರ ಇದನ್ನು ಮಾಡಲು ಸಾಧ್ಯ. ಹೆಚ್ಚು ಖರ್ಚು ಬರುವುದರಿಂದ ಯಾವಾಗಲೂ ಮಾಡಲು ಸಾಧ್ಯವಾಗುವುದಿಲ್ಲ (ಮಾಹಿತಿ: ಸಣ್ಣೀರಯ್ಯ, ಮೇಣಿಗನಹಟ್ಟಿ).

## ೩.೩. ಕುರಿ ನಿರ್ವಹಣೆಯಲ್ಲಿ ಅಲೆಮಾರಿ ಕಾಡುಗೊಲ್ಲ ಕುರಿಗಾರರ ನಿಪುಣತೆ

ಅಲೆಮಾರಿ ಕಾಡುಗೊಲ್ಲರಲ್ಲಿ ಅನಕ್ಷರಸ್ಥರೇ ಅದರೂ ಕುರಿ ಸಂಗೋಪನೆಯಲ್ಲಿ ನಿಪುಣರು. ಹೆಚ್ಚು ಮಾಡುವುದ. ಆದರೆ ಇಂದು ನಾಗರಿಕ ಸಮಾಜಗಳಲ್ಲಿ ಈ ನಿರ್ವಹಣೆಯ ಕೆಲಸಕ್ಕಾಗಿ ದೊಡ್ಡ ದೊಡ್ಡ ಪದವಿಗಳನ್ನು ಪಡೆದರೂ ನಿರ್ವಹಣೆ ಮಾಡಲು ಹರಸಾಹಸ ಮಾಡುತ್ತಿದ್ದಾರೆ. ಆದರೆ ಕುರಿ ಗಾರರು ಮಾತ್ರ ಯಾವುದೆ ಸಮಸ್ಯೆ ಇಲ್ಲದೆ ಗಡಿಯಾರದ ಮುಳ್ಳಿನ ರೀತಿಯಲ್ಲಿ ಚಾಚೂತಪ್ಪದೆ ನಿರ್ವಹಣೆ ಮಾಡುತ್ತಿದ್ದಾರೆ.

ಕಾಡುಗೊಲ್ಲ ಸಮುದಾಯದ ಪಾರಂಪರಿಕ ಉದ್ಯೋಗವಾದದ್ದರಿಂದ ಇದು ಒಂದು ‘Internal Understand’ ಹಿರಿಯರು ನಿರ್ವಹಿಸಿದ್ದುದನ್ನು ಇವರ ಮಕ್ಕಳಿಗೆ ಔಪಚಾರಿಕ ಶಿಕ್ಷಣಕ್ಕಿಂತ, ಸಾಂಪ್ರದಾಯಿಕ ಉದ್ಯೋಗದ ಬಗ್ಗೆ ಅನುಭವಗಳನ್ನು ವಿವರಿಸುವುದೆ ಹೆಚ್ಚು. ಒಂದು ಮಗು ಜನಿಸಿದರೆ ಅದಕ್ಕೆ ಕುರಿಗಳು ಹೇಗಿರುತ್ತವೆ, ಮರಿಗಳು ಹೇಗೆ ಜನಿಸುತ್ತವೆ, ಅವುಗಳಿಗೆ ಬರುವ ರೋಗಗಳ ಲಕ್ಷಣಗಳು ಅವಕ್ಕೆ ನೀಡುವ ಪಾರಂಪರಿಕ ಚಿಕಿತ್ಸೆಗಳನ್ನು ನೀಡುವ ಬಗೆ, ಬಳಸುವ ವಸ್ತುಗಳು ಅಲ್ಲದೆ ಯಾವ

ಯಾವ ಕಾಲದಲ್ಲಿ ಯಾವ ರೋಗ ಬರುತ್ತವೆ, ಅವುಗಳನ್ನು ಎಲ್ಲಿ ಹೇಗೆ ಮೇಯಿಸಬೇಕು. ಅಲೆಮಾರಿ ಪಯಣದಲ್ಲಿ ಬಳಸುವ ಮಾರ್ಗಗಳಲ್ಲಿ ಎಲ್ಲಿ, ಹೆಚ್ಚು ಸಮಸ್ಯೆಗಳು ಬರುತ್ತವೆ. ಮಳೆ, ಗಾಳಿ, ಬಿಸಿಲು, ಗುಡುಗು, ಸಿಡಿಲು ಪ್ರವಾಹ, ನೆರೆಗಳಿಂದ, ಕಾಡು ಪ್ರಾಣಿಗಳಿಂದ, ಕಳ್ಳಕಾಕರಿಂದ ಹೇಗೆ ರಕ್ಷಣೆ ಪಡೆಯಬೇಕೆಂಬುದನ್ನು ಈ ಸಮುದಾಯದ ಒಬ್ಬ ಚಿಕ್ಕ ಮಕ್ಕಳನ್ನು ಕೇಳಿದರೂ ಹೇಳುತ್ತಾರೆ. ಇಂತಹ ವ್ಯವಸ್ಥಿತವಾದ ನಿರ್ವಹಣೆ ಯಾವುದೇ ಪದವಿ ಪಡೆದವರಿಗೂ ಬರುವುದಿಲ್ಲ.

ಪ್ರತಿಯೊಬ್ಬರು ಇದರಲ್ಲಿ ಚಿಕ್ಕ ವಯಸ್ಸಿನಿಂದಲೇ ನಿರ್ವಹಿಸುವುದರಿಂದ ಪ್ರತಿದಿನ ಹಲವಾರು ರೀತಿಯ ಘಟನೆಗಳು ಕಣ್ಣುಮುಂದೆ ಬರುತ್ತಿರುತ್ತವೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇರುತ್ತಾರೆ. ಜೊತೆಗೆ ತಂದೆ, ತಾಯಿಗಳೆ ಮೊದಲ ಗುರುಗಳು. ಜೊತೆಗೆ ತಮ್ಮ ಅನುಭವವನ್ನು, ಸಮಸ್ಯೆಗಳನ್ನು ಪರಿಹರಿಸುವ ಬಗೆಯನ್ನು ವಿವರಿಸುತ್ತಲೆ ಇರುತ್ತಾರೆ. ಕುರಿಸಂಗೋಪನೆಯಲ್ಲಿ ಜವಾಬ್ದಾರಿಯು ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತದೆ. ಇದರಿಂದಲೆ ಇಂದು ಕುರಿ ಕಾಯುವುದು ಅತ್ಯಂತ ಯಶಸ್ವಿಯಾಗಿ ಕುರಿಗಾರರು ನಿರ್ವಹಿಸುತ್ತಿದ್ದಾರೆ. ಇಲ್ಲಿ ಬದುಕುವವರು ನಾಗರಿಕ ಸಮಾಜದ ಸಂಬಂಧಗಳನ್ನೇ ಕಡಿದುಕೊಂಡಿರುತ್ತಾರೆ. ಅಲ್ಲದೇ ಯಾವುದೇ ವಿದ್ಯಮಾನಗಳ ಬಗ್ಗೆ ಅರಿವೆ ಇರುವುದಿಲ್ಲವಾದ್ದರಿಂದ ಅವರಿಗೆ ಕಾಡು, ಹಳ್ಳ, ಕೊಳ್ಳ, ಗಾಳಿ, ಮಳೆ, ಬಿಸಿಲುಗಳೇ ಇವರ ನಿತ್ಯದ ಸಂಗಾತಿಗಳಾಗಿದ್ದರಿಂದ ಪ್ರಕೃತಿಯು ಇವರ ನಿರ್ವಹಣೆಗೆ ಸಹಕಾರ ಮಾಡಿದಂತಿದೆ.

ಅಲೆಮಾರಿ ಕಾಡುಗೊಲ್ಲ ಸಮುದಾಯದಲ್ಲಿ ಸಂಪ್ರದಾಯಗಳು ನಂಬಿಕೆ ಮತ್ತು ದೇವರ ಮೇಲಿನ ಭಯ, ಭಕ್ತಿಗಳು ಇವು ಇವರ ವೃತ್ತಿಯಲ್ಲಿ ಹಾಸುಹೊಕ್ಕಾಗಿವೆ. ಆದ್ದರಿಂದ ಇವರ ವೃತ್ತಿಯ ಜೊತೆಗೆ ದೇವರು ಸಹ ಪ್ರಮುಖ ಪಾತ್ರವಹಿಸಿದ್ದಾನೆ ಎಂಬುದು ಇವರ ನಂಬಿಕೆ.

ಜೊತೆಗೆ ಚಿಕ್ಕಮಕ್ಕಳನ್ನು ಸಹ ಇದರಲ್ಲಿ ತೊಡಗಿಸಿಕೊಂಡಾಗ ಅವರಿಗೆ ಕುರಿಯ ಮಂದೆಯು ಮೇಯಲು ಹೋದಾಗ ಗೊಡೆಯ ಬಳಿ ಇರುವ ಮರಿಗಳನ್ನು ನೋಡಿಕೊಳ್ಳುವ ಕೆಲಸಕ್ಕೆ, ತೋಟದಲ್ಲಿ ಹುಲ್ಲು ತರುವ ಕೆಲಸ ಅಥವಾ ದೊಡ್ಡ ಮರಿಗಳಿಗೆ, ಕುಂಟು ಕುರಿಗಳಿಗೆ ನೀರನ್ನು ಕುಡಿಸುವುದರಿಂದ ಆರಂಭವಾಗುವ ಈ ಶಿಕ್ಷಣ ಹಂತ ಹಂತವಾಗಿ ವಯಸ್ಸಾದಂತೆ ಅನುಭವಗಳು ಕುರಿಕಾಯುವಲ್ಲಿ ತಿಳುವಳಿಕೆ ಮೂಡುತ್ತಾ ಹೋಗುತ್ತದೆ. ಇದರಿಂದ ಕುರಿಗಳ ಬಗ್ಗೆ ಪರಿಪೂರ್ಣವಾಗಿ ಇಪ್ಪತ್ತು ವರ್ಷ ತುಂಬವಷ್ಟರಲ್ಲಿ ಸಕಲ ಕಲಾವಲ್ಲಭರ ರೀತಿಯಲ್ಲಿ ತಯಾರಾಗುತ್ತಾರೆ.

**ಕುರಿ ಕಂಡು ಹಿಡಿಯುವುದು**

ಕುರಿ ಮಂದೆಯಲ್ಲಿ ಸಾವಿರ ಕುರಿಗಳವರೆಗೂ ಇರುತ್ತವೆ. ಅವುಗಳು ಸಾಮಾನ್ಯವಾಗಿ ಎಲ್ಲ ಒಂದೆ ರೀತಿಯಲ್ಲಿರುತ್ತವೆ. ಆದರೆ ಇದೆ ಕುರಿ ನಮ್ಮದು, ಅದರ ಮರಿ ತಾಯಿ ಇಂತಹ ಕಡೆ ಪಯಣದಲ್ಲಿದ್ದಾಗ

ಇಷ್ಟವತ್ತಲ್ಲೇ ಹುಟ್ಟಿತು. ಅಮಾವಾಸೆಗೆ ಇಷ್ಟು ದಿವಸ ಮುಂಚೆ, ಹುಣ್ಣಿಮೆಗೆ ಇಷ್ಟು ದಿವಸ ಓಂದೆ ಹುಟ್ಟಿತ್ತು. ಹೀಗೆ ನಿಖರವಾಗಿಯೆ ಅಂಕಿ ಅಂಶಗಳನ್ನು ಸಹ ವಿವರಿಸುತ್ತಾರೆ.

ಇದರ ರಹಸ್ಯವೆಂದರೆ ಒಬ್ಬ ಕುರಿಕಾಯುವವನಿಗೆ ಹೊರಗಿನ ಪ್ರಪಂಚದ ಯಾವುದೇ ವಿಷಯಗಳ ಬಗ್ಗೆ ಅರಿವಿರುವುದಿಲ್ಲ. ಅಲ್ಲದೆ ತನ್ನ ಕಾಯಕದಲ್ಲಿಯೆ ಸರ್ವಸ್ವವನ್ನು ಕಾಣುತ್ತಾನೆ. ಅಂದರೆ ಸ್ವಯಂ ಘೋಷಿತ ಸೇವಾಕಾರ್ಯಕರ್ತ(Valuntary Servent)ಅವರು ಲೌಕಿಕ ಜೀವನದ ಬಗ್ಗೆ ಅರಿವಿಲ್ಲದೆ ಬದುಕಿರುತ್ತಾನೆ. ಪ್ರತಿದಿನ ಪ್ರತಿಕ್ಷಣವು ಒಂದು ಕುರಿಯ ಎಲ್ಲಾ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸುತ್ತಲೆ ಇರುತ್ತಾನೆ. ಆದರ ಆಕಾರ, ಬಣ್ಣಗಳನ್ನು ದೃಷ್ಟಿ ಇಟ್ಟು ನೋಡುತ್ತಲೆ ಇರುತ್ತಾನೆ. ಇದು ಒಂದು ಶಿಕ್ಷಣ ಸಂಸ್ಥೆ ಇದ್ದ ಹಾಗೆ, ಒಂದು ಪ್ರಮುಖ ಅಂಶವೆಂದರೆ ಕುರಿ ಎಂಬ ವಿಷಯದ ಪಠ್ಯ ಹೊರತುಪಡೆಸಿದರೆ ಬೇರೆಯೆ ಪಠ್ಯ ಇರುವುದಿಲ್ಲ. ಇಲ್ಲಿ ಬೇರೆಯವರು ಕಲಿಸುವುದಕ್ಕಿಂತ ತಾನು ಎಷ್ಟು ಪ್ರಮಾಣದಲ್ಲಿ ಕಲಿತೆ ಎಂಬುದೆ ಇಲ್ಲಿ ಪ್ರಮುಖವಾಗಿರುತ್ತದೆ. ಅಂತಹವರು ಇಲ್ಲಿ ವಿದ್ವಾಂಸರು, ಅವರಿಗೆ ಇಲ್ಲಿ ಬೆಲೆ. ಇವರು ಕುರಿಕಾಯುವುದು, ಅವುಗಳ ರೋಗಗಳನ್ನು ಪತ್ತೆಹಚ್ಚುವುದು, ಅವುಗಳಿಗೆ ಚಿಕಿತ್ಸೆ ನೀಡುವುದು, ರಾತ್ರಿ ಸರ್ತೆ ಕಾಯುವುದು ಹಾಗೂ ಜನರು ಕಡಿಮೆ ಇದ್ದಾಗ ಯಾವ ರೀತಿ ಮಂದೆಯನ್ನು ನಿರ್ವಹಿಸುವುದು ಎಂಬ ಅಂಶಗಳನ್ನು ಪ್ರಕೃತಿದತ್ತವಾಗಿಯೆ ಕಲಿಯುತ್ತಾರೆ. ಆದ್ದರಿಂದ ಪ್ರತಿ ಅಂಶಗಳು ಮೆದುಳಿಗೆ ಇಳಿದು ಬಿಟ್ಟಿರುತ್ತವೆ. ಆದ್ದರಿಂದ ಪ್ರತಿ ಕುರಿಯನ್ನು ಸುಲಭವಾಗಿ ಪತ್ತೆ ಹಚ್ಚುತ್ತಾರೆ. ಇವರ ಕುರಿ ಎಲ್ಲೇ ತಪ್ಪಿಸಿಕೊಂಡರೂ ಇದೆ ರೀತಿಯದು, ಇಷ್ಟು ವಯಸ್ಸು, ಬಣ್ಣ ಎಲ್ಲವನ್ನು ಸುಲಭವಾಗಿ ಹೇಳುವ ವಿದ್ಯೆ ನೈಸರ್ಗಿಕವಾಗಿ ಬರುತ್ತದೆ. ಆದ್ದರಿಂದಲೆ ಪೂರ್ವದಲ್ಲಿ ಗುರುಕುಲ ಶಿಕ್ಷಣ ಪದ್ಧತಿಯು ಇಂದಿಗೂ ಗಟ್ಟಿಯಾದ ಭದ್ರಬುನಾದಿಯಾಗಿದೆ. ಇದು ಅಲೆಮಾರಿ ಕಾಡುಗೊಲ್ಲರಲ್ಲಿ ಪ್ರಮುಖವಾದ ವಿದ್ಯೆಯಾಗಿದೆ.

## ೩.೪. ಕುಬೇರರಾಗದ ಕುರಿಗಾರರು : ಒಂದು ಅವಲೋಕನ

ಉತ್ತಣ್ಣ ಮೇಣಿಗನಹಟ್ಟಿಯ ವಾಸಿ. ಇವರಿಗೆ ಐವತ್ತು ವರ್ಷ ಇವರ ಹುಟ್ಟಿನಿಂದ ಊರೂರು ಅಲೆದು ಕುರಿಕಾಯ್ದವರು. ಇವರಿಗೆ ಮನೆ ತುಂಬಾ ಮಕ್ಕಳು ಕುರಿ ಕಾಯುವುದನ್ನು ಬಿಟ್ಟರೆ ಬೇರೆ ಯಾವುದೆ ಕೆಲಸ ಬರುವುದಿಲ್ಲ. ಕುರಿಗಳ ಸಂಗೋಪನೆ ಇಂದಿಗೂ ನಡೆದಿದೆ. ಅದು ಹೆಣ್ಣು ಮಕ್ಕಳು ಮಾತ್ರ ಕಾಯುತ್ತಿದ್ದಾರೆ. ಏಕೆಂದರೆ ಇವರಿಗೆ ಇಂದು ಅರ್ಧಗಂಟೆ ನಡೆದಾಡಲು ಸಾದ್ಯವಾಗುವುದಿಲ್ಲ. ಕೈ ಕಾಲುಗಳು ಸ್ಥಿಮಿತಕ್ಕೆ ಬರುವುದಿಲ್ಲ. ಸ್ವಲ್ಪ ಕೆಲಸ ಮಾಡಿದರೂ ಆಯಾಸವಾಗುತ್ತದೆ. ಇಡೀ ದೇಹ ಬಿಸಿಲಿಗೆ ತಿರುಗಿ ಒಣಗಿ ಔಡಲ ಕಡ್ಡಿಯೋಪಾದಿಯಲ್ಲಿದೆ. ಜೀವನದಲ್ಲಿ ಪ್ರತಿದಿನ ಒಂದು ತುತ್ತು ಊಟಕ್ಕಾಗಿ ಯೋಚಿಸುವಂತಹ ಪರಿಸ್ಥಿತಿ ಇದೆ. ಕಾರಣ ಕುರಿ ಕಾದು ಈ ಪರಿಸ್ಥಿತಿ ಬಂದಿದೆ. ಇಲ್ಲಿ

‘ಕುರಿಕಾದು ಕುಬೇರರಾಗು’ ಎಂಬ ಆಡುಮಾತು ಮಾತ್ರ ಅಕ್ಷಶಃ ಸುಳ್ಳಾಗಿದೆ. ಇವರ ಕುಟುಂಬದಲ್ಲಿ ಐದು ಜನ ಅಣ್ಣತಮ್ಮಂದಿರು, ಮೂರು ಜನರು ಕುರಿಸಂಗೋಪನೆಯಲ್ಲಿ ತೊಡಗಿಸಿಕೊಂಡಿದ್ದರು. ಉಳಿದವರು ಕೂಲಿ ಕೆಲಸ ಮಾಡಿಕೊಂಡು ಊರಲ್ಲೆ ನೆಲೆಸಿದ್ದರು. ಪೂರ್ಣ ಜವಾಬ್ದಾರಿ ಉತ್ತಣ್ಣನವರದೆ. ಅವರೇ ಎಲ್ಲಾ ಕುರಿಗಳ ಜವಾಬ್ದಾರಿವಹಿಸಿದ್ದರು. ಇವರ ಕುಟುಂಬಗಳು ಬೇರೆ ಬೇರೆಯಾದಾಗ ಇವರು ಒಂಟಿ, ಅಲ್ಪಸ್ವಲ್ಪ ಕುರಿಯಿಂದಲೇ ಬದುಕು. ಒಂದು ಕುರಿ ಮಾರಿದರೆ, ಕಡಿಮೆಯಾಗುತ್ತವೆ. ಎರಡು ಮಾರಿದರೆ ಕುರಿಗಳೇ ಇಲ್ಲವಾಗುತ್ತವೆ. ಇತ್ತ ಕಾಯಲು ಅಗೋದಿಲ್ಲ ಬಿಡಲೂ ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಿಂದ ಮನೆಯಲ್ಲಿ ಕಿತ್ತು ತಿನ್ನುವ ಬಡತನದಿಂದ ಆರು ಜನ ಮಕ್ಕಳಲ್ಲಿ ಯಾರನ್ನು ವಿದ್ಯಾಭ್ಯಾಸ ಮಾಡಿಸಲಾಗಿಲ್ಲ. ಇವರು ಅತ್ಯಂತ ನಿಕೃಷ್ಟ ಜೀವನ ಇಂದಿಗೂ ಮುಂದುವರೆದಿದೆ. ಇಂತಹವರ ಸಾಲಿನಲ್ಲಿ ಜೀವನ ಪರ್ಯಾಂತ ಕುರಿ ಕಾಯುವುದರಲ್ಲೆ ಜೀವನ ಸವೆಸಿದವರು. ಜೀತದ ಕಾರ್ಯದಲ್ಲೆ ಬದುಕು ನಡೆಸುತ್ತಿರುವವರು ಪ್ರತಿ ಊರಿನಲ್ಲೂ ಕಾಣಬಹುದಾಗಿದೆ. ಇಂತಹ ನಿಕೃಷ್ಟ ಬದುಕು ನಡೆಸುವವರಲ್ಲಿ ಲೆಕ್ಕವಿಲ್ಲದಷ್ಟು ಕಾಣಬಹುದು. ‘ಕುಬೇರ’ ಎಂಬ ಪದಕ್ಕೆ ವಿರುದ್ಧವಾಗಿ ದಿನದ ತುತ್ತಿಗಾಗಿ ಹೋರಾಟ ನಡೆಸುತ್ತಿದ್ದಾರೆ.

ಇವರು ಒಂದು ಬಗೆಯಾದರೆ ಮತ್ತೊಂದು ರೀತಿಯ ದುರಾದೃಷ್ಟರನ್ನು ಕಾಣಬಹುದು. ತಮ್ಮ ಸಂಸಾರದಲ್ಲಿ ಕಿತ್ತು ತಿನ್ನುವ ಬಡತನದಿಂದ ದೊಡ್ಡ ದೊಡ್ಡ ಕುರಿ ಮಂದೆಗಳಿಗೆ ‘ಜೀತಕ್ಕೆ’ ಹೋದವರು. ಅಲ್ಪಸ್ವಲ್ಪ ಕುರಿಗಳನ್ನು ಸಂಪಾದಿಸಿದರು. ನಂತರ ಅಲ್ಲಿಂದ ಹೊರಬಂದು ತಮ್ಮದೇ ಸ್ವಂತ ಮಂದೆಯನ್ನು ಮಾಡಿಕೊಂಡರು. ಆದರೆ ಈ ಸ್ಪರ್ಧಾ ಜಗತ್ತಿನ ಸಮನಾಗಿ ಜೀವಿಸಲು ಸಾಧ್ಯವಾಗದೆ ಆರಕ್ಕೇರದೆ, ಮುರಕ್ಕಿಳಿಯದೆ ನೆಮ್ಮದಿಯ ಜೀವನ ನಡೆಸಲು ಆಗದೆ, ಒಳ್ಳೆಯ ವಿದ್ಯಾಭ್ಯಾಸ ಕೂಡಿಸಲಾಗದೆ, ಬರೀ ಕೂಲಿಯ ಕೆಲಸಕ್ಕೆ ಹೆಂಡತಿ ಮಕ್ಕಳನ್ನು ಕಳುಹಿಸುತ್ತಾ ಬದುಕು ಸವೆಸುತ್ತಿದ್ದಾರೆ. ಏಕೆಂದರೆ ಕುರಿ ಕಾಯುವುದು ಸಾಮಾನ್ಯ ಕೆಲಸವಲ್ಲ. ಆ ನೋವು ಸಂಕಟ ಹೇಳ ತೀರದು. ಅದಕ್ಕೆ ಎಲ್ಲರ ಕುಟುಂಬದ ಎಲ್ಲ ಸದಸ್ಯರನ್ನು ಬಲಿನೀಡಬೇಕಾಗುತ್ತದೆ. ಅವರ ಅದೃಷ್ಟ ಚೆನ್ನಾಗಿದ್ದರೆ ಅಭಿವೃದ್ಧಿಯಾಗಿ ಕುಟುಂಬವು ಸುಧಾರಿಸುತ್ತದೆ. ಇಲ್ಲವೆಂದರೆ, ಗಂಡ ಒಂದು ಕಡೆ, ಹೆಂಡತಿ ಮಕ್ಕಳು, ತಂದೆ-ತಾಯಿ ಒಂದು ಕಡೆಯಾಗಿ ಜೀವನ ನಡೆಸಬೇಕಾಗುತ್ತದೆ. ಈ ಎಲ್ಲಾ ಹಿಂಸೆಗಳಿಂದ ಅವರ ಬಳಿ ಇರುವ ಅಲ್ಪಸ್ವಲ್ಪ ಕುರಿಗಳನ್ನೆಲ್ಲಾ ಮಾರಿ ಎಲ್ಲಾ ಕುಟುಂಬ ಸದಸ್ಯರೊಡನೆ ಕೂಲಿ ಮಾಡಿಕೊಂಡು ಅರೆಬರೆಯಾಗಿ ಜೀವನ ನಡೆಸುತ್ತಿರುವರು ಲೆಕ್ಕವಿಲ್ಲದವರು. ಈ ಕುರಿಕಾಯುದರಲ್ಲಿ ಲಾಭಕ್ಕಿಂತ ಇಂದು ನಷ್ಟವೇ ಹೆಚ್ಚು ಎಂದು ಭಾವಿಸುವಂತಹವರು ಅನೇಕ. ಆದ್ದರಿಂದ ಕೆಲವರು ಇದರಿಂದ ವಿಮುಖರಾಗುತ್ತಿರುವುದನ್ನು ಕಾಣಬಹುದಾಗಿದೆ.

## ೩.೫. ಬದಲಾದ ಕುರುಬರ ನೀತಿ

ಉಂಡಾಳುಪದುಮಣ್ಣನ ಐತಿಹ್ಯದ ಪ್ರಕಾರ ಕಾಡುಗೊಲ್ಲ ಸಮುದಾಯಕ್ಕೆ ಕುರುಬರಿಂದ ಕುರಿಗಳು ದೊರೆತವು ಎಂಬುದು ತಿಳಿದ ಸತ್ಯ. ಪದುಮಣ್ಣನು ಕುರಿ ಕೊಡುವಾಗ ಗೊಲ್ಲನ ಬಳಿ ಹಣವಿಲ್ಲದ ಕಾರಣ ಇಬ್ಬರ ನಡುವೆ ಒಪ್ಪಂದ ಮಾಡಿಕೊಳ್ಳುತ್ತಾರೆ. ವರ್ಷಕ್ಕೆರಡು ಬಾರಿ ಉಣ್ಣೆ ಕತ್ತರಿಸು ಕೊಡುವುದು ಕೊಡುವಾಗ ಹಾಲು ತುಪ್ಪ ಚೆಲ್ಲುವಾಗ 'ಜನ್ನ ಸಾವಿರ, ಜಾಲ ಸಾವಿರ ಹೋಲಿಗ್ಗಾ ಸಾಮಿ ಹೋಲಿಗ್ಗಾ...' 'ಉಂಡು ಸಾವಿರ ಅಂಡ ಸಾವಿರ ಹೋಲಿಗ್ಗಾ ಸ್ವಾಮಿ ಹೋಲಿಗ್ಗಾ...' ಕುಂಟು ಕುರಿ ಎಂಟು ಸಾವಿರ ಈಯಲಿ, ಹೋಲಿಗ್ ಸ್ವಾಮಿ ಹೋಲಿಗ್ಗಾ...' 'ಏಳಲಾರದ ಕುರಿ ಏಳು ಸೂಲಿಯಲಿ ಹೊಲಿಗ್ಗಾ ಸ್ವಾಮಿ ಹೋಲಿಗ್ಗಾ...' ಎತ್ತಪ್ಪ ಜುಂಜಪ್ಪ ಹೋಲಿಗ್ಗಾ ಸ್ವಾಮಿ ಹೋಲಿಗ್ಗಾ...' ರೇವಣ ಸಿದ್ದೇಶ್ವರ ಹೋಲಿಗ್ಗಾ ಸ್ವಾಮಿ ಹೋಲಿಗ್ಗಾ..." ಎಂದು ಪ್ರತಿವರ್ಷ ಹರಸುತ್ತಿದ್ದ ಕುರುಬರು ಇಂದು ಕುರಿಯ ಮಂದೆಯ ಕಡೆ ಸಹ ನೋಡುತ್ತಿಲ್ಲ. ಕುರಿ ಉಣ್ಣೆ ಕತ್ತರಿಸಲು ಕರೆದರೂ ಬರುತ್ತಿಲ್ಲ. ನೂರು ಕುರಿ ಉಣ್ಣೆ ಕತ್ತರಿಸಿದರೆ ಮೂರು ಕಂಬಳಿಯನ್ನು ಕೊಡುತ್ತಿದ್ದರು, ಆದರೆ ಇಂದು ಒಂದು ಕುರಿಗೆ ಎರಡು ರೂಪಾಯಿಯಿಂದ ಐದು ರೂಪಾಯಿಗಳವರೆಗೆ ಹಣ ಪಡೆಯುತ್ತಿದ್ದಾರೆ. ಕತ್ತರಿಸಿದ ಉಣ್ಣೆಗೆ ಕಂಬಳಿ ಕೊಡುಬೇಕೆಂದರೆ ಅದನ್ನು ಅಲ್ಲೆ ಬಿಟ್ಟು ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಒಟ್ಟಾರೆ ಕೂಲಿ ಇಲ್ಲದೆ ಉಣ್ಣೆ ಕತ್ತರಿಸಲು ಬರುವುದಿಲ್ಲ. ಸಾಂಪ್ರದಾಯಿಕ ಪದ್ಧತಿಯು ಇಂದು ನಂಬಿಕೆಯಾಗಿ ಉಳಿದಿದೆ. ಆಚರಣೆಯಲ್ಲಿ ಮಾತ್ರ ಅಗಾಧವಾದ ಬದಲಾವಣೆಯಾಗಿದೆ. ಅಣ್ಣ ತಮ್ಮರಂತೆ ಇರೋಣ ಎಂಬ ಆಣೆ ಮಾಡಿಕೊಂಡ ಈ ಸಮುದಾಯಗಳು ವ್ಯಾಪಾರಿ ಮನೋಭಾವದತ್ತ ಉರುಳುವುದು ವಿಷಾದನೀಯ. ಇದಕ್ಕೆ ಪ್ರಮುಖ ಕಾರಣವೆಂದರೆ, ನಮ್ಮ ಬಯಲು ಸೀಮೆಯೆ ಕುರಿಗಳ ಉಣ್ಣೆಯು ಹೆಚ್ಚು ಒರಟಾಗಿರುವುದ, ಇದನ್ನು ಎಲ್ಲರೂ ಬಳಸುವುದಿಲ್ಲ. ಆದರೆ ಉತ್ತರ ಭಾರತದಾದ್ಯಂತ ಮೃದುವಾದಂತಹ, ಸುಂದರವಾದ ಹಾಗೂ ಮೆತ್ತನೆಯ ಕಂಬಳಿಗಳು ತಯಾರಾಗುವಂತಹ ತಳಿಗಳ ಕುರಿಗಳನ್ನು ಉಣ್ಣೆಗಾಗಿಯೆ ಸಂಗೋಪನೆ ಮಾಡಲಾಗುತ್ತಿದೆ. ಆದರೆ ನಮ್ಮ ಪ್ರದೇಶದ ವಾತಾವರಣಕ್ಕೆ ಈ ತಳಿಗಳು ಹೊರತುಪಡಿಸಿದರೆ ಒಳ್ಳೆಯ ಉಣ್ಣೆಯನ್ನು ನೀಡುವ ಕುರಿಗಳನ್ನು ಸಂಗೋಪನೆ ಮಾಡಲಾಗದು. ಇಂದು ಹೆಚ್ಚಿನದಾಗಿ ನಮ್ಮ ಕುರಿಗಳ ಉಣ್ಣೆಯನ್ನು ಯಾರು ಮುಟ್ಟುತ್ತಿಲ್ಲ. ಇದಕ್ಕೆ ಮತ್ತೊಂದು ಕಾರಣವೆಂದರೆ, ಮಾರುಕಟ್ಟೆಯಲ್ಲಿನ ಬೇಡಿಕೆಗೆ ಅನುಗುಣವಾಗಿ ಹಾಗೂ ಜನರ ಬದಲಾದ ಜೀವನ ಶೈಲಿಯಿಂದ ಕಂಬಳಿಯ ಬದಲಿಗೆ ರಾಜಾಸ್ತಾನದ ಉಲ್ಲನ್ ರಗ್ಗುಗಳು, ನೋಡಲು ಸುಂದರ ಹಾಗೂ ಹೊದೆಯಲು ಮೆತ್ತನೆಯಾಗಿರುವುದರಿಂದ ಇದು ಕುರಿಯ ಮಂದೆಯಲ್ಲಿಯೂ ಸಹ ಈ ರಗ್ಗುಗಳನ್ನು ಬಳಕೆ ಮಾಡುತ್ತಿದ್ದಾರೆ. ಆದ್ದರಿಂದ ಇಂದು ಕಾಡುಗೊಲ್ಲ ಮತ್ತು ಕುರುಬರ ಸಾಂಪ್ರದಾಯಿಕ ಸಂಬಂಧದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಇದರಲ್ಲಿ ಕೆಲವೊಂದು ಹಬ್ಬಗಳಲ್ಲಿ ಮಾತ್ರ ಇವರು ಸೇರುತ್ತಾರೆ. ಉಳಿದಂತೆ ಹಲವಾರು ಸಂಪ್ರದಾಯ ಸಂಬಂಧಗಳು ಹಂತ ಹಂತವಾಗಿ ಕಡಿದುಕೊಳ್ಳುತ್ತಿವೆ. ಬದುಕಲು ವ್ಯಾಪಾರಿ ಮನೋಭಾವಗಳು ಹೆಚ್ಚುತ್ತಿರುವುದು ವಿಷಾದನೀಯ.

# ಅಧ್ಯಾಯ ೪

# ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ

೪.೧. ಆರ್ಥಿಕಾಭಿವೃದ್ಧಿ

೪.೨. ಸಾಮಾಜಿಕ ಅಭಿವೃದ್ಧಿ

೪.೩. ಶೈಕ್ಷಣಿಕ ಅಭಿವೃದ್ಧಿ

೪.೪. ರಾಜಕೀಯ ಅಭಿವೃದ್ಧಿ

೪.೫. ಧಾರ್ಮಿಕ ಅಭಿವೃದ್ಧಿ

೪.೬. ಸಾಂಸ್ಕೃತಿಕ ಅಭಿವೃದ್ಧಿ

# ೪

# ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ

## ೪.೧. ಅಭಿವೃದ್ಧಿ ಮತ್ತು ಬುಡಕಟ್ಟು



ಅಭಿವೃದ್ಧಿ ಎಂದರೆ ಅಭ್ಯುದಯ, ಶ್ರೇಯಸ್ಸು, ಏಳಿಗೆ ಮುಂತಾದ ಸಮಾನಾರ್ಥದಲ್ಲಿ ಬಳಸಬಹುದು. ಅಂದರೆ ಸಮಾನತೆಯ ಮೌಲ್ಯಗಳ ಮೇಲೆ ಸ್ಥಾಪಿತವಾದ ಪ್ರತಿಯೊಬ್ಬ ವ್ಯಕ್ತಿ ತನ್ನ ಸುಪ್ತ ಸಾಮರ್ಥ್ಯ ಅರಿಯಲು ಅವಶ್ಯವಾದವೆಲ್ಲವನ್ನು ಅವರುಗಳ ಕೈಗೆ ಸಿಗದಂತೆ ಶೋಷಣೆಗೆ ಎಡೆಯೇ ಇಲ್ಲದಂತಹ ಸಮಾಜದ ಸೃಷ್ಟಿಯ ಅಭಿವೃದ್ಧಿಯ ಪ್ರಮುಖ ಉದ್ದೇಶ. ಆದರೆ ಸರ್ಕಾರದ ಅಭಿವೃದ್ಧಿ ಕ್ರಮ ಬೇರೊಂದು ದಿಕ್ಕಿನಲ್ಲಿ ಸಾಗುತ್ತಿದೆ. ಇಂದು ದೇಶದಲ್ಲಿ ಅಭಿವೃದ್ಧಿ ಎಂಬ ಪದಕ್ಕೆ ಸಮಾನಾರ್ಥವೆಂದರೆ ದೊಡ್ಡ ದೊಡ್ಡ ಅಣೆಕಟ್ಟುಗಳು ಅಣುಶಕ್ತಿ ಸ್ಥಾವರಗಳು, ಗಣಿಗಳು, ಕಾರ್ಖಾನೆಗಳನ್ನು ಸ್ಥಾಪಿಸುವುದು ಅಭಿವೃದ್ಧಿಯ ಕ್ರಮವಾಗಿದೆ. ಇಂತಹ ಕ್ರಮದಿಂದ ಅನುಕೂಲವಾಗುತ್ತಿರುವುದು ಅಂದಿನ ಸಮುದಾಯಗಳಿಗೆ ಬದಲಾಗಿ, ಬಂಡವಾಳಶಾಹಿಗಳಿಗೆ, ಭೂಮಾಲೀಕರಿಗೆ ಅನುಕೂಲವಾಗುತ್ತಿದೆ. ಇಂತಹ ಅಭಿವೃದ್ಧಿ ಕ್ರಮದಿಂದ ಕೈಗೊಳ್ಳುವ ಸ್ಥಳದಲ್ಲಿ ಹಲವು ವರ್ಷಗಳಿಂದ ವ್ಯಾಪಿಸಿಕೊಂಡು ಬಂದ ಸಮುದಾಯಗಳನ್ನೆ ಸ್ಥಳಾಂತರಿಸಲಾಗುತ್ತಿದೆ. ಬದುಕನ್ನು ಕಸಿದುಕೊಳ್ಳುತ್ತಿದೆ. ಒಂದು ಸಮುದಾಯ ಎಲ್ಲಿ ನೆಲೆಯಾಗುತ್ತದೆಯೋ ಅಲ್ಲಿ ತನ್ನದೇ ಆದ ರಚನೆಯ ಮೂಲಕ ಅಲ್ಲಿನ ಪರಿಸರದಲ್ಲೂ ಹೊಂದಿಕೊಂಡು ಜೀವನ ನಡೆಸುತ್ತಿದೆ. ಇವರ ಮೇಲೆ ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಂದ ಒಕ್ಕಲೆಬ್ಬಿಸಿ, ಅಲ್ಲದೆ ಆ ಪ್ರದೇಶದ ಸಂಪತ್ತನ್ನು ನಂಬಿ ಜೀವಿಸುತ್ತಿದ್ದವರಿಗೆ ಆ ಸಂಪತ್ತು ದೊರಕದಂತಾಯಿತು. ಅಲ್ಲಿ ಉದ್ಯಾನವನ, ಪ್ರವಾಸೋದ್ಯಮ, ರೈಲ್ವೇ ಅಳಿಗಳನ್ನು ಹಾಕಲಾಯಿತು. ಇಂತಹ ಸರ್ಕಾರದ ಅಭಿವೃದ್ಧಿ ಹೆಸರಿನ ಯೋಜನೆಗಳಿಂದ ಅರಣ್ಯಗಳಲ್ಲಿ ಜೀವಿಸುತ್ತಿದ್ದ ಬುಡಕಟ್ಟು ಸಮುದಾಯಗಳ ಬದುಕು ಅತಂತ್ರವಾಯಿತು. ಇವರಿಗೆ ಬೇರೊಂದು ಸ್ಥಳದಲ್ಲಿ ಕೆಲಸಕ್ಕೆ ಬಾರದಂತಹ ಪ್ರದೇಶಗಳ ನೆಲೆಗಳನ್ನು ನೀಡಿದರೂ ಅವರಿಗೆ ಹಲವಾರು ಅವಕಾಶಗಳಿಂದ ವಂಚಿತರಾಗುವಂತೆ ಈ ಯೋಜನೆಗಳು ಮಾಡಿದವು. ಅಭಿವೃದ್ಧಿಯ ಕ್ರಮದ ಲೋಪದೋಷ ನೀತಿಗಳಿಂದ ಅಭಿವೃದ್ಧಿ ಸಾಧಿಸುವುದಕ್ಕಿಂತ ನಷ್ಟವೇ ಹೆಚ್ಚು ಆಯಿತು (ಪ್ರಭಾಕರ ಎ.ಎಸ್., ೨೦೦೪:೯).

ಭಾರತದಲ್ಲಿ ಅಭಿವೃದ್ಧಿ ಯೋಜನೆಗಳು ಉಳ್ಳವರ ಪರವಾಗಿ ಆಗುವ ಯೋಜನೆಗಳಾಗಿ ಮಾರ್ಪಟ್ಟವೇ ವಿನಃ ಹಿಂದುಳಿದಿರುವ ತಳ ಸಮುದಾಯಗಳಿಗೆ ಯಾವುದೇ ಯೋಜನೆಗಳು ದೊರೆಯಲೆ ಇಲ್ಲ. ಆದ್ದರಿಂದ ಅವು ಇಂದಿಗೂ ಯಾವುದೇ ರೀತಿಯ ಮಾರ್ಪಾಡುಗಳು ಅವುಗಳ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲೂ ಆಗಲಿಲ್ಲ.

'ಭಾರತವು ವಿವಿಧ ರಾಷ್ಟ್ರೀಯತೆಗಳ ಒಂದು ಬೃಹತ್ ರಾಷ್ಟ್ರ. ಭಾಷೆ, ಧರ್ಮ, ಜಾತಿ, ಸಮುದಾಯ, ಪ್ರದೇಶ, ಬುಡಕಟ್ಟುಗಳಲ್ಲಿ ವಿವಿಧತೆಯ ಸಾಮಾಜಿಕ ಅಂಶಗಳನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ನೋಡಬಹುದು. ಭಾರತೀಯ ಸಮಾಜವು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿದ್ದು, ಮೇಲಸ್ತರ, ಕೆಳಸ್ತರಗಳೆಂಬ, ಸಾಮಾಜಿಕ ಕಂದರಗಳಿಂದ ಕೂಡಿದೆ. ಪರಂಪರಾಗತ ಹಿಂದೂ ಶ್ರೇಣಿಕೃತ ವ್ಯವಸ್ಥೆಯು ಇಡೀ ಜನ ಸಮುದಾಯವನ್ನು ಅಸಮಾನವಾಗಿ ವಿಂಗಡಿಸಿ ಸಮಾಜವನ್ನು ಜಾತಿ ಕೂಪಕ್ಕೆ ತಳ್ಳಿದೆ. ವರ್ಣಾಶ್ರಮ ಪದ್ಧತಿಯು ಭಾರತೀಯ ಸಮಾಜಕ್ಕೆ ಶಾಪವಿದ್ದಂತೆ, ಆರಂಭದಲ್ಲಿ ವೃತ್ತಿಗನುಗುಣವಾಗಿ ಪರಿಣಮಿಸಿತು. ಈ ಶೋಷಣೆಯಿಂದ ಮುಕ್ತಿ ಹೊಂದಲು ವಿವಿಧ ಜಾತಿ ಮತ್ತು ಬುಡಕಟ್ಟುಗಳ ಆರ್ಥಿಕ ಅಭಿವೃದ್ಧಿ ಮುಂತಾದ ವಿಷಯಗಳನ್ನು ವಾಗ್ವಾದಕ್ಕೊಳಪಡಿಸಿ ಹೋರಾಟ ನಡೆಸುತ್ತಿರುವುದು ಇತಿಹಾಸ ತಿಳಿಸುತ್ತದೆ.

ಒಂದು ಸಮಾಜದ ಪ್ರಗತಿ ಅಥವಾ ಅಭಿವೃದ್ಧಿಯೆಂದರೆ ಆ ಸಮಾಜದ ಅಥವಾ ದೇಶದ ಎಲ್ಲಾ ಸ್ತರದ ವ್ಯಕ್ತಿಗಳ ಅಥವಾ ಗುಂಪುಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಪ್ರಗತಿ ಎಂದು ಅರ್ಥೈಸಬಹುದು. ಭಾರತೀಯ ಸಮಾಜದ ಉದಾಹರಣೆ ತೆಗೆದುಕೊಂಡರೆ ಇಲ್ಲಿ ಅಭಿವೃದ್ಧಿ ಎಂಬ ಪದವು ತುಂಬಾ ಅರ್ಥಪೂರ್ಣವಾದುದು. ಅದು ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳಲ್ಲಿ ಮತ್ತು ಸಾಮಾಜಿಕ ಗುಂಪುಗಳಲ್ಲಿ ಪರಿಮಾಣಾತ್ಮಕವಾದ ಹಾಗೂ ಗುಣಾತ್ಮಕವಾದ ಪರಿವರ್ತನೆ ಅಥವಾ ಬದಲಾವಣೆಯನ್ನುಂಟು ಮಾಡುವ ಚಟುವಟಿಕೆ ಅಥವಾ ಪ್ರಕ್ರಿಯೆಯಾಗಿದೆ(ಗುರುಲಿಂಗಯ್ಯ, ೨೦೦೫:೧೬-೭). ಅಭಿವೃದ್ಧಿಯು ಜನರ ಜೀವನದ ಸ್ಥಿತಿಗಳನ್ನು ತಕ್ಷಣದಿಂದಲೇ ಗಣನೀಯವಾಗಿ ಸುಧಾರಿಸುವ ಇಲ್ಲವೇ ಭವಿಷ್ಯದಲ್ಲಿನ ಜೀವನದ ಪರಿಸ್ಥಿತಿಗಳು ಗಮನಾರ್ಹವಾಗಿ ಉತ್ತಮಗೊಳ್ಳುವಂತೆ ಮಾಡುವ ಗುರಿಯನ್ನು ಹೊಂದಿರುತ್ತದೆ. ''ಅಭಿವೃದ್ಧಿಯು ಅನೇಕ ಆಯಕಟ್ಟುಗಳನ್ನು ಒಳಗೊಂಡಿರುವುದು. ಅದು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮುಂತಾದ ಕ್ಷೇತ್ರಗಳಲ್ಲಿನ ಗುಣಾತ್ಮಕ ಬದಲಾವಣೆಗಳನ್ನು ಸೂಚಿಸುವುದು. ಅಭಿವೃದ್ಧಿಯು ನಿರಂತರವಾಗಿ ಸಾಗುವ ಪ್ರಕ್ರಿಯೆಯಾಗಿದೆ. ಅದು ಸಮಾಜದ ಎಲ್ಲಾ ಕ್ಷೇತ್ರಗಳ ಸುಧಾರಣೆ ಮಾಡಲು ಅವ್ಯಾಹತವಾಗಿ ತೊಡಗಿರುವ ತಡೆರಹಿತ ಪ್ರಕ್ರಿಯೆಯಾಗಿದೆ. ಅಭಿವೃದ್ಧಿಯು ಮಾನವನ ಅಭಿವೃದ್ಧಿಯ ಹಕ್ಕನ್ನು ಸೂಚಿಸುತ್ತದೆ. ಹಾಗಾದರೆ ಮಾನವ ಅಭಿವೃದ್ಧಿ ಎಂದರೇನು ''ವೇಗವಾಗಿ ಅಭಿವೃದ್ಧಿಯನ್ನು ವರಮಾನದ ಏರಿಕೆಯಲ್ಲಿ ಗುರುತಿಸುವುದು ವಾಡಿಕೆಯಲ್ಲಿತ್ತು.

ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿಯನ್ನು ಒಟ್ಟು ದೇಶೀಯ ಉತ್ಪನ್ನ(GDI) ಅಥವಾ ಒಟ್ಟು ರಾಷ್ಟ್ರೀಯ ಉತ್ಪನ್ನ(GNI)ದ ಮೂಲಕ ಅಳೆಯಲಾಗುತ್ತದೆ. ಈ ಸೂಚಿಯಲ್ಲಿನ ವಾರ್ಷಿಕ ಏರಿಕೆಯನ್ನು ಅಭಿವೃದ್ಧಿ ಎಂದು ಕರೆಯಲಾಗುತ್ತದೆ (ಶ್ರೀಧರ್ ಎ., ಹೆಚ್.ಡಿ.ಪ್ರಶಾಂತ್, ೨೦೦೬:೧೯).

ಭಾರತೀಯ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಸಾಮಾಜಿಕ ಗುಂಪು ಮತ್ತು ಬುಡಕಟ್ಟುಗಳಾಗಿವೆ. ಇವರಲ್ಲಿ ಸಂಪತ್ತು, ಅಧಿಕಾರ, ಸಾಮಾಜಿಕ ಸ್ಥಾನಮಾನ ಮತ್ತು ಇತರೆ ಜೀವನದ ಅವಕಾಶಗಳು ಸಮನಾಗಿ ಹಂಚಲ್ಪಟ್ಟಿಲ್ಲ. ಈ ಅಸಮಾನ ಮತ್ತು ಇತರ ಜೀವನದ ಅವಕಾಶ ಮತ್ತು ಸೌಲಭ್ಯಗಳ ಹಂಚಿಕೆಯಿಂದ ತತ್ತರಿಸಿದ ಕೆಳಸ್ತರದ ಸಾಮಾಜಿಕ ಗುಂಪುಗಳು ಇಂತಹ ಅಸಮಾನತೆಯನ್ನು ತೊಡೆದು ಹಾಕಲು ಸಾಮಾಜಿಕ ಚಳುವಳಿ ನಡೆಸಿದವು. ಚಳುವಳಿಗಳು ಕೇವಲ ಸವಲತ್ತುಗಳನ್ನು ಪಡೆಯಲು ಹುಟ್ಟಿಕೊಳ್ಳದೆ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳೂ ಕೂಡ ಚಳುವಳಿಯ ವಿಕಾಸಕ್ಕೆ ಕಾರಣವಾದವು (ಗುರುಲಿಂಗಯ್ಯ, ೨೦೦೫:೧೧೭). ಇದರಿಂದ ಸಮುದಾಯದ ಅಭಿವೃದ್ಧಿ ಮಾರ್ಗಕ್ಕೆ ಅನುಕೂಲವಾಯಿತು.

ಆಧುನಿಕತೆಯ ಕಡೆಗೆ ಸಾಗಿದ ಬುಡಕಟ್ಟು ಸಮುದಾಯಗಳು ತೀವ್ರಗತಿಯಲ್ಲಿ ಬದಲಾವಣೆ ಹೊಂದುತ್ತಿವೆ ಎಂದು ಹೇಳುವ ನಾವು ಬುಡಕಟ್ಟುಗಳಲ್ಲಿ ಏನು ಬದಲಾವಣೆಯಾಗುತ್ತಿದೆ ಮತ್ತು ಹೇಗೆ ಬದಲಾವಣೆಯಾಗುತ್ತಿದೆ. ಬದಲಾವಣೆಯಾಗುತ್ತಿರುವುದಕ್ಕೆ ಮುಖ್ಯ ಕಾರಣಗಳೇನು ಎಷ್ಟು ಪ್ರಮಾಣದಲ್ಲಿ ಬದಲಾವಣೆಯಾಗಿದೆ. ಬದಲಾವಣೆಯಿಂದ ಆ ಸಮುದಾಯಗಳ ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯ ನೀತಿಗಳ ಮೇಲೆ ಆದ ಪರಿಣಾಮಗಳೇನು ಮುಂತಾದ ಅಧ್ಯಯನ ಇಂದು ಅವಶ್ಯವಾಗಿದೆ. ಬುಡಕಟ್ಟುಗಳು ಆಧುನಿಕತೆಯ ಪ್ರಭಾವಕ್ಕೆ ಒಳಗಾಗದೆ ಇರದಿದ್ದರೆ ತಮ್ಮದೇ ಆದ ಸಂಸ್ಕೃತಿ, ಆಚಾರ, ವಿಚಾರಗಳನ್ನು ಕಟ್ಟುನಿಟ್ಟಿನಿಂದ ತಲೆಮಾರಿನಿಂದ ತಲೆಮಾರಿಗೆ ಸಾಗಿಸುತ್ತಲೇ ಬಂದಿದ್ದರೆ ಅದಕ್ಕೆ ಇತಿಹಾಸವೆಂಬುದು ಇರುತ್ತಿರಲಿಲ್ಲವೇನೋ ಎಂಬುದು ನನ್ನ ಕಲ್ಪನೆ. ಹಳೆಯ, ಪರಿವರ್ತಿಸಿಕೊಂಡಿರುವ ಅಥವಾ ಅಧುನಿಕತೆಯ ಸಂಪ್ರದಾಯದ ಆಚಾರ, ವಿಚಾರ ಎಂದು ಗುರುತಿಸುವ ಮತ್ತು ಅಧ್ಯಯನ ಮಾಡುವ ಅವಶ್ಯಕತೆಯೂ ಇಂದು ಇರುತ್ತಿರಲಿಲ್ಲ ಎನಿಸುತ್ತದೆ. ಕಾಂಕ್ರೀಟ್ ಸಂಸ್ಕತಿ ಕಾಡುಗಳನ್ನೆಲ್ಲ ಆವರಿಸಿಕೊಳ್ಳತೊಡಗಿದಂತೆ ಗಿರಿಜನರ ಬದುಕಿನ ಕ್ರಮಗಳೂ ನೈಸರ್ಗಿಕ ನಿಯಮದಂತೆ ಬದಲಾಗತೊಡಗಿದವು. ಬುಡಕಟ್ಟುಗಳು ಆಯಾ ಪ್ರದೇಶಗಳಲ್ಲಿ ಅಚರಿಸುವಂತಹ ಎಲ್ಲಾ ವಿಧಿ ವಿಧಾನ ಗಳು, ಆಚರಣೆ ಸಂಸ್ಕಾರಗಳು ಸಾಮಾಜಿಕ ಶಾಸನಬದ್ಧ ಆಚರಣೆಗಳು ಎಂದು ಮುದ್ರೆ ಪಡೆದಿರುತ್ತವೆ. ಅವು ಅಲಿಖಿತ ಕಾನೂನುಗಳೇ ಆಗಿರುತ್ತವೆ. ಹೀಗೆ ಒಪ್ಪಿದ ಆಚರಣೆಗಳನ್ನು ಅವರು ಪ್ರಾಚೀನ ಮತ್ತು ಅಪವಿತ್ರ ಆಚರಣೆಗಳೆಂದು ನಂಬಿರುತ್ತಾರೆ.'' ಈ ಕಾನೂನುಗಳ ಹಿಂದೆ ಇಡೀ ಸಮುದಾಯವೇ ಇರುತ್ತದೆ. ಬುಡಕಟ್ಟು ಜನರ ಒಬ್ಬೊಬ್ಬರಿಂದ ಪ್ರಾಚೀನ ಕಾಲದಿಂದ ಬೆಳೆದು ಬಂದ ಆಚರಣೆ,

ಸಂಪ್ರದಾಯಗಳನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ. ಒಂದು ಪ್ರದೇಶದ ಇಡೀ ಸಮುದಾಯ ಆಚರಣೆಗಳನ್ನು ಬದಲಾಯಿಸಲು ಯತ್ನಿಸಿದರೆ ಮಾತ್ರ ಅದು ಸಾಧ್ಯ. ಗಿರಿಜನರಲ್ಲಿ ಯಾರಾದರೂ ತಮ್ಮ ಮದುವೆ, ಸಾವು ಮುಂತಾದ ಕ್ರಿಯೆಗಳಲ್ಲಿ ಅವರ ಸಮುದಾಯದಲ್ಲೂ ಒಪ್ಪಿಗೆಯಾಗದಿದ್ದವುಗಳನ್ನು ಅನುಸರಿಸಿದರೆ ಬಹಿಷ್ಕಾರ ಹಾಕುವುದುಂಟು. ಹೀಗಾಗಿ ಬುಡಕಟ್ಟು ಜನರಲ್ಲಿ ಅವರು ಒಪ್ಪಿರುವ ಮೌಲ್ಯಗಳನ್ನು ಇಟ್ಟುಕೊಂಡೇ ಪರಿಷ್ಕರಣೆಯಾಗಿರುವುದು ಕಂಡುಬರುತ್ತದೆ. ಆದ್ದರಿಂದ ಇವರು ಆಧುನಿಕತೆಯ ಕಡೆಗೆ ಮುಖಮಾಡಿರುವುದು ಕಂಡುಬರುತ್ತದೆ(ಗಂಗಾಧರ ದೈವಜ್ಞ, ೨೦೦೦:ಪ್ರಸ್ತಾವನೆ). ಹಾಗೆಯೇ ಮಾನಸಿಕವಾಗಿ ಅವರು ಮೂಲದ ಕಡೆಗೆ ದೃಷ್ಟಿ ನೆಟ್ಟಿದ್ದಾರೆ.

## ಅಭಿವೃದ್ಧಿಯ ಬಗೆ

ಕಾಡುಗೊಲ್ಲ ಅಲೆಮಾರಿ ಕುರಿಗಾರರು ಆರ್ಥಿಕವಾಗಿ ಅಭಿವೃದ್ಧಿಯಾಗಿದ್ದಾರೆಯೇ ಎಂದು ಒಮ್ಮೆ ಗಮನಹರಿಸಿದಾಗ ಆಶ್ಚರ್ಯವಾಗುತ್ತದೆ. ಇವರಿಗೆ ಇದು ಪಾರಂಪರಿಕ ಕಸುಬಾಗಿದೆ. ಇದನ್ನು ಬಿಟ್ಟರೆ ಇವರಿಗೆ ಬೇರೆ ಆದಾಯದ ಮೂಲಗಳ ವೃತ್ತಿಗಳು ಗೊತ್ತಿಲ್ಲವಾದ್ದರಿಂದ ಇಂದಿಗೂ ಇವರು ಆರಕ್ಕೇರದೆ ಮೂರಕ್ಕಿಳಿಯದೇ ಹಾಗೆಯೇ ಇದ್ದಾರೆ. ದಶಕದ ಹಿಂದೆ ಒಂದು ಕುರಿಗೆ ಮುನ್ನೂರು ರೂಪಾಯಿಗಳಿಂದ ಐದು ನೂರು ರೂಪಾಯಿಗಳು ಅತ್ಯಂತ ಹೆಚ್ಚಿನ ಬೆಲೆಯಾಗಿತ್ತು. ಆದರೆ ಇಂದು ಒಂದು ಸಾವಿರದ ಐದುನೂರು ರೂಪಾಯಿಗಳಿಂದ ಮೂರು ಸಾವಿರದವರೆಗೂ ಒಂದು ಕುರಿಯನ್ನು ಮಾರಾಟ ಮಾಡುತ್ತಿದ್ದಾರೆ. ಹಾಗೂ ಒಂದು ಮರಿಗೆ ಇಂದು ಹದಿನೈದು ನೂರು ರೂಪಾಯಿಗಳವರೆಗೂ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹೆಚ್ಚು ಹೆಚ್ಚು ಕುರಿಗಳನ್ನು ಹೊಂದಿರುವವರು ಹಣವನ್ನು ಗಳಿಸುತ್ತಿದ್ದಾರೆ.

ಹಿಂದೆ ಕುರಿಗಳಿಗೆ ಸಾಂಕ್ರಮಿಕ ರೋಗಗಳು ಬಂದರೆ, ಅಥವಾ ನೆರೆ, ಹಾವಳಿ ಬಂದರೆ ಇಡೀ ಮಂದೆಯೇ ಸತ್ತು ಬೀಳುತ್ತಿದ್ದವು ಹಾಗೂ ಕೊಚ್ಚಿಕೊಂಡು ಹೋಗುತ್ತಿದ್ದವು. ಇದರಿಂದ ಕುಟುಂಬಗಳು ಬೀದಿ ಪಾಲಾಗುತ್ತಿದ್ದವು. ಆದ್ದರಿಂದ ಸರ್ಕಾರಗಳು ಸ್ವಲ್ಪ ಮಟ್ಟಿಗೆ ವಿಮಾ ರಕ್ಷಣೆಯನ್ನು ನೀಡಿದ್ದಾರೆ. ಇಂದು ಅಲ್ಲಲ್ಲಿ ಕುರಿಗಳ ಕಿವಿಗೆ ಓಲೆಯನ್ನು ಹಾಕಿರುವುದನ್ನು ಕಾಣಬಹುದಾಗಿದೆ. ಇವು ವಿಮೆಗೂ, ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಹೆಚ್ಚು ಹೆಚ್ಚು ಕುರಿಗಳನ್ನು ಅಭಿವೃದ್ಧಿಪಡಿಸಲು ಕೊಂಡುಕೊಳ್ಳುತ್ತಿದ್ದರು. ಇದರಿಂದ ಇವರ ಅಭಿವೃದ್ಧಿ ಸಾಗುತ್ತಿರುವುದನ್ನು ಕಾಣಬಹುದಾಗಿದೆ. ಹಿಂದೆ ಬರೀ ನಷ್ಟವನ್ನೇ ಅನುಭವಿಸುತ್ತಿದ್ದ ಇವರು ಅಲ್ಪಸ್ವಲ್ಪ ಸರ್ಕಾರದಿಂದ ಲಾಭವನ್ನು ಪಡೆಯುತ್ತಿರುವುದು ಅಭಿವೃದ್ಧಿಗೆ ಮೂಲವೆನ್ನಬಹುದು.

ಕುರಿಯ ಗೊಬ್ಬರವನ್ನು ಇಂದು ತೋಟಗಳಿಗೆ ಹಾಗೂ ಗದ್ದೆಗಳಿಗೆ ಉಪಯೋಗಿಸುತ್ತಾರೆ. ಕುರಿ ಗೊಬ್ಬರ ಅತ್ಯಂತ ಸತ್ವಯುತ ಗೊಬ್ಬವಾಗಿರುವುದರಿಂದ ಇಂದು ಎಲ್ಲಿಲ್ಲದ ಬೇಡಿಕೆ ಸೃಷ್ಟಿಯಾಗಿದೆ.

ಕುರಿಯ ಗೊಬ್ಬರವನ್ನು ದೊಡ್ಡ ದೊಡ್ಡ ಜಮೀನ್ದಾರರು ಹುಡುಕಿಕೊಂಡು ಬರುತ್ತಾರೆ. ಕುರಿಯ ಗಂಜು ಮತ್ತು ಪಿಚ್ಚಿಕೆಗಳಲ್ಲಿ ಯುರಿಯ ಅಂಶ ಇರುವುದರಿಂದ ಹಾಗೂ ತಂಪಾದ ಪ್ರದೇಶಗಳ ಬೆಳೆಗಳಿಗೆ ಹೆಚ್ಚು ಹವೆಯನ್ನು(ಬಿಸಿಯಾದ) ನೀಡುವ ಕಾರಣದಿಂದ ಇಂದು ಇದಕ್ಕೆ ಬೇಡಿಕೆ ಹೆಚ್ಚಿದೆ. ಆದ್ದರಿಂದ ಇವರು ಆದಷ್ಟು ಗೊಬ್ಬರವನ್ನು ಸಂಗ್ರಹಿಸಿ ಮಾರಾಟ ಮಾಡಲು ಆರಂಭಿಸಿದ್ದಾರೆ. ಆದ್ದರಿಂದ ಇದು ಸಹ ಆದಾಯದ ಮೂಲವಾಗಿದೆ ಹಾಗೂ ಆರ್ಥಿಕವಾಗಿ ಅಭಿವೃದ್ಧಿಗೆ ಕಾರಣವಾಗಿದೆ.

ಅಲೆಮಾರಿ ಕುರಿಗಾರರು ಇಂದು ಹೆಚ್ಚು ಹೆಚ್ಚು ಕುರಿಗಳನ್ನು ಸಂಗೋಪನೆ ಮಾಡುತ್ತಿದ್ದಾರೆ. ವಿಶೇಷವಾಗಿ ಕಾಡುಗೊಲ್ಲರಲ್ಲಿ ಈ ಕಸುಬನ್ನು ಹೆಚ್ಚು ಇಷ್ಟಪಡುತ್ತಾರೆ. ಏಕೆಂದರೆ ಶ್ರಮವಹಿಸಿ ಕೆಲಸ ನಿರ್ವಹಿಸುವುದರಲ್ಲಿ ಎತ್ತಿದ ಕೈಯಾದ್ದರಿಂದ, ಹಗಲು, ರಾತ್ರಿ, ಗಾಳಿ, ಮಳೆ, ಚಳಿಗೆ ಹೆದರದೆ ಸದಾ ಆತಂಕದ ಸ್ಥಿತಿಯ ಬದುಕು ಇದ್ದರೂ ಯಾವುದಕ್ಕೂ ಅಂಜದೆ ಜೀವನ ಸಾಗಿಸುತ್ತಿದ್ದಾರೆ. ಅಂತಹದರಲ್ಲಿ ಶಿರಾ ತಾಲ್ಲೂಕಿನ ಬೇವಿನಹಳ್ಳಿಯ ಅಲೆಮಾರಿ ಕುರಿಗಾರರು ಮಾತ್ರ ಶತಮಾನಗಳಿಂದ ಈ ಕಸುಬನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಐವತ್ತು ಸಾವಿರ ಕುರಿಗಳನ್ನು ಸಂಗೋಪನೆ ಮಾಡಲಾಗುತ್ತದೆ. ಈ ಊರಿನಲ್ಲಿ ಯಾವುದೋ ಮನೆಯಲ್ಲಿ ಜನರು ಇರುವುದು, ಅದರಲ್ಲಿ ವೃದ್ಧರು, ಚಿಕ್ಕ ಚಿಕ್ಕ ಮಕ್ಕಳು ಹಾಗೂ ಕುರುಡರು, ಕುಂಟರು ಮಾತ್ರ ಈ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ನಿಜವಾದ ನೋವುಗಳನ್ನು ಈ ಗ್ರಾಮದಲ್ಲಿ ಕಣ್ಣಾರೆ ನೋಡಬಹುದು. ಕಾಡುಗೊಲ್ಲ ಕುರಿಗಾರರು ಕೆಲವೊಂದು ಕುಟುಂಬಗಳು ಕುರಿ ಸಂಗೋಪನೆಯಿಂದ ಆರ್ಥಿಕವಾಗಿ ಅಭಿವೃದ್ಧಿಯಾಗಿರುವುದನ್ನು ಇಲ್ಲಿ ಅಲ್ಪಸ್ವಲ್ಪ ಕಾಣಬಹುದಾಗಿದೆ. ಇಲ್ಲಿನ ಗಂಡಸರು, ಅವರ ಹೆಂಡತಿ, ಹಿರಿಯ ಮಕ್ಕಳು ಕುರಿಯ ಹತ್ತಿರವೇ ವಾಸಿಸುತ್ತಾರೆ. ಆದರೆ ಅವರು ಇಲ್ಲಿರುವವರೆಗೂ ವರ್ಷದಲ್ಲಿ ಒಂದು ಬಾರಿ ಮನೆದೇವರ ಜಾತ್ರೆ ಹಾಗೂ ವಯಸ್ಸಿಗೆ ಬಂದ ಮಕ್ಕಳು ಶುಭಕಾರ್ಯಗಳಿಗೋಸ್ಕರ ಕೆಲವರು ಜಮೀನನ್ನು ಖರೀದಿಸಿದ್ದಾರೆ. ಅದನ್ನು ವೃದ್ಧರು ನಿರ್ವಹಿಸುತ್ತಾರೆ. ಇಲ್ಲದಿದ್ದರೆ ಬೇರೆಯವರಿಗೆ ಕೋರಿಗೆ, ಇಲ್ಲವೆ 'ಒಪ್ಪಂದಕ್ಕೆ' ನೀಡಿದ್ದಾರೆ. ಅಲ್ಲದೆ ಮನೆಯಲ್ಲಿರುವವರು ನೆಮ್ಮದಿಯಿಂದ ಇರಲು ಬೇಕಾದ ಅನುಕೂಲಗಳನ್ನು ತಕ್ಕಮಟ್ಟಿಗೆ ಮಾಡಿಕೊಟ್ಟಿದ್ದಾರೆ. ಆದರೆ ಮನೆಯಲ್ಲಿರುವ ವೃದ್ಧರನ್ನು ಸಂದರ್ಶಿಸಿದರೆ ಯಾರಲ್ಲೂ ಸಮಾಧಾನವಿಲ್ಲ. ಏಕೆಂದರೆ ಒಂದು ದಿನವೂ ನಾವು ನೆಮ್ಮದಿಯಿಂದ ತಂದೆ-ತಾಯಿಗಳ ಜೊತೆಗೆ, ಮಕ್ಕಳು, ಸೊಸೆ, ಮೊಮ್ಮಕ್ಕಳ ಜೊತೆಗೆ ಆನಂದದ ಕ್ಷಣಗಳನ್ನು ಕಂಡಿಲ್ಲ. ಇವತ್ತೋ, ನಾಳೆಯೋ ಅನ್ನೊ ನಮ್ಮ ವಯಸ್ಸು ಇಷ್ಟೆಲ್ಲಾ ಇದ್ದರೆ ಯಾವ ಸುಖಕ್ಕಾಗಿ ಎಂದು ಪ್ರಶ್ನಾರ್ಥಕವಾಗಿ ನೋಡುತ್ತಾರೆ.

ಇದೇ ಊರಿನ 'ಚಿತ್ತಜ್ಜಿ' ಎನ್ನುವ ಇವರು ಎಪ್ಪತ್ತು ವರ್ಷದ ವೃದ್ಧರು, ಇರುವುದರಲ್ಲಿ ಸ್ಥಿತಿವಂತರು. ಮನೆ, ಆಸ್ತಿ ಎಲ್ಲವನ್ನು ಕುರಿಯಿಂದಲೇ ಗಳಿಸಿದ್ದಾರೆ. ಆದರೆ ಅವರಿಗೆ ನೋಡಲು ದೃಷ್ಟಿಯೇ ಇಲ್ಲ. ''ಕುರಿಯನ್ನು ಕಾಯುವಾಗ ಕಾಡಲ್ಲಿ ಮುಳ್ಳಿನ ರೆಂಬೆ ತಗುಲಿ ಎರಡು ಕಣ್ಣುಗಳು

ದೃಷ್ಟಿಯನ್ನು ಕಳೆದುಕೊಂಡರು. ಕೂತಲ್ಲೇ ಕೂರಬೇಕು. ಒಂದು ಹೆಜ್ಜೆ ಮುಂದೆ ಹೋಗಲು ಮತ್ತೊಬ್ಬರ ಸಹಾಯಬೇಕು. ಇಂತಹ ಜೀವನ ಯಾರಿಗೆ ಬೇಕು? ನಮಗೆ ಆಗ ಬುದ್ಧಿ ಇರಲಿಲ್ಲ. ನಮ್ಮಕ್ಕಳೆಲ್ಲಾ ಕುರಿಕಾಯೋಕೆ ಕಳಿಸಿದ್ದೀವಿ, ಯಾರೊಬ್ಬರನ್ನು ಓದಿಸಾಕೆ ಕಳಿಸಲಿಲ್ಲ. ಅವರನ್ನು ಉದ್ಧಾರ ಮಾಡಲಿಲ್ಲ, ನಾವು ನೆಮ್ಮದಿಯಾಗಿ ಬಾಳಾಕ ಆಗಲಿಲ್ಲ ಸ್ವಾಮಿ'' ಎಂದು ದುಃಖ ತುಂಬಿದ ಕಣ್ಣುಗಳಿಂದ ಹೇಳುತ್ತಾರೆ.

ಈ ಊರಿನಲ್ಲಿ ಉಳಿದಂಥ ಕುಟುಂಬದವರು ಸಹ ಅಷ್ಟಾಗೀ ಇದ್ದು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದರೂ ಇವರಿಗೆ ಹೊರಗಿನ ಲೋಕದ ಅನುಭವವೇ ಇಲ್ಲದಿರುವುದು ದುರಾದೃಷ್ಟ ಎನ್ನಬಹುದು. ಈ ರೀತಿಯಾಗಿ ಕಾಡುಗೊಲ್ಲರು ಕೆಲವೊಂದು ಕಡೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದರೂ ಯಾರಿಗೂ ನೆಮ್ಮದಿಯಿಲ್ಲ. ನೆಮ್ಮದಿ ಇಲ್ಲದ ಕಡೆ ಯಾವ ಆಸ್ತಿಯೂ ಇಲ್ಲ. ಇದು ಇಂದಿನ ಸ್ಥಿತಿ.

## ೪.೨. ಅಲೆಮಾರಿ ಕಾಡುಗೊಲ್ಲರ ಆರ್ಥಿಕಾಭಿವೃದ್ಧಿ

### ೪.೨.೧. ಆರ್ಥಿಕಾಭಿವೃದ್ಧಿಯಲ್ಲಿ ಕುರಿ ಸಂಗೋಪನೆ

ಕಾಡುಗೊಲ್ಲರ ಹೆಸರೆ ಸೂಚಿಸುವಂತೆ ಅವರ ಮೂಲಕಸುಬು ಪಶುಪಾಲನೆ. ಕಾಡು-ಮೇಡುಗಳು ಹೆಚ್ಚಾಗಿದ್ದ ಕಾಲದಲ್ಲಿ ಹೆಚ್ಚೆಚ್ಚು ದನ ಕರುಗಳನ್ನು ಸಾಕಿ ಅವುಗಳ ಹಾಲು, ಮೊಸರು, ತುಪ್ಪವನ್ನು ಮಾರಿ ಜೀವನ ಸಾಗಿಸುತ್ತಿದ್ದರು. ಆದರೆ ಇಂದು ಬದಲಾದ ಕಾಲಮಾನಕ್ಕೆ ತಕ್ಕಂತೆ ಜನಸಂಖ್ಯೆ ಹೆಚ್ಚಾಯಿತು. ಅರಣ್ಯ ಪ್ರದೇಶ ಕಡಿಮೆಯಾಗುತ್ತಾ ಬಂದವು. ಅರಣ್ಯ ನಿಯಮಗಳು ಕಠಿಣವಾದವು. ಮೀಸಲು ಅರಣ್ಯ ಎಂಬ ನಿಯಮಗಳನ್ನು ಜಾರಿಗೆ ತಂದರು. ಆದ್ದರಿಂದ ಇಂದು ಪಶುಪಾಲನೆಯು ಸುಲಭದ ತುತ್ತಾಗಿ ಉಳಿದಿಲ್ಲ. ಆದರೆ ಕಾಡುಗೊಲ್ಲ ಸಮುದಾಯ ಮಾತ್ರ 'ಬೆನ್ನಿಗೆ ಅಂಟಿದ ಚರ್ಮದ ರೀತಿಯಲ್ಲಿ ಅದನ್ನು ಬೆನ್ನಟ್ಟಿ ಬೇಟೆಯಾಡುತ್ತಿದ್ದಾರೆ. ಇಂದೂ ಸಹ ಗೊಲ್ಲರ ಹಟ್ಟಿಗಳಲ್ಲಿ ಪ್ರತಿಯೊಬ್ಬರ ಮನೆಯ ಮುಂದೆ ಹಸು, ಎಮ್ಮೆ ಇಲ್ಲವೇ ಒಂದು ಕುರಿ ಮರಿ ಅಥವಾ ಆಡು ಮರಿಗಳನ್ನು ಸಾಕುವುದನ್ನು ಇಂದು ಕಾಣಬಹುದಾಗಿದೆ. ಅಂದರೆ ಅವರ ಬುಡಕಟ್ಟಿನ ಮೂಲ ಕಸುಬಿನ ಲಕ್ಷಣವನ್ನು ಇಲ್ಲಿ ಕಾಣಬಹುದಾಗಿದೆ. ಇವುಗಳ ಜೊತೆ ಕೆಲವರು ಹಸುಗಳನ್ನು ಕುರಿಮಂದೆಯಲ್ಲಿ ಸಾಕಿಕೊಂಡು ಬರುವುದನ್ನು ಇಂದು ನಾವು ಕಾಣಬಹುದಾಗಿದೆ. ಅಂದರೆ ಇದು ತಮ್ಮ ಬುಡಕಟ್ಟು, ದೈವ ಜುಂಜಪ್ಪ, ಎತ್ತಪ್ಪ ದೈವಗಳು ಎಂದು ಭಾವಿಸಿಕೊಳ್ಳುತ್ತಿದ್ದಾರೆ.

ಇಂದು ಕುರಿ ಮೇಕೆಗಳು ಆರ್ಥಿಕವಾಗಿ ಲಾಭ ತರುವಂತಹ ಕಸುಬಾದ್ದರಿಂದ ಇದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದು ಸಾಂಪ್ರದಾಯಿಕ ಕುಲ ಕಸುಬಾದ ಕುರಿ ಸಾಕಾಣಿಕೆ ಸುಲಭದ ಉದ್ಯೋಗವಲ್ಲ ಎಂದು ತಿಳಿದಿದ್ದರೂ ಕಾಡುಗೊಲ್ಲ ಸಮುದಾಯ ಮಾತ್ರ ಇದನ್ನು ಬಿಡಲು ಮನಸ್ಸು ಮಾಡುತ್ತಿಲ್ಲ. ಏಕೆಂದರೆ ಇವರು ಶ್ರಮ ಜೀವಿಗಳಾದ್ದರಿಂದ ಈ ಕಸುಬನ್ನೇ ಮುಂದುವರಿಸಿಕೊಂಡು

ಹೋಗುತ್ತಿದ್ದಾರೆ. ಇಂದು ಯಾರನ್ನೇ ಕೇಳಿದರು. ಅವರು ತಟ್ಟನೆ ಹೇಳುತ್ತಾರೆ. ಎಷ್ಟು ಆಸ್ತಿ ಇದ್ದರೂ ಎರಡು ಕುರಿ ಮರಿ ಇರಬೇಕು. ಅವಸರಕ್ಕೆ (ಕಷ್ಟಕಾಲದಲ್ಲಿ) ಅನುಕೂಲವಾಗುತ್ತವೆ ಎಂದು ಹೇಳುತ್ತಾರೆ. ಇಂದಿಗೂ...!

ಶಿರಾ ತಾಲ್ಲೂಕಿನಲ್ಲಿ ಕುರಿಸಾಕಾಣಿಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಮೂವತ್ತೆಂಟು ಲಕ್ಷ ಕುರಿಗಳನ್ನು ಸಂಗೋಪನೆ ಮಾಡಲಾಗುತ್ತದೆ. ಅದರಲ್ಲಿ ಕಾಡುಗೊಲ್ಲ ಸಮುದಾಯದವರು ೯೯% ರಷ್ಟು ಕಾಣಬಹುದಾಗಿದೆ. ಕಾಡುಗೊಲ್ಲ ಸಮುದಾಯದಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಕುರಿ ಕಾಯಲು ತೊಡಗಿಸಿಕೊಳ್ಳುತ್ತಿದ್ದಾರೆ. ಏಕೆಂದರೆ ಅವರಿಗೆ ವಿದ್ಯೆ ಎನ್ನುವುದರ ಗಂಧ ಗಾಳಿಯು ತಿಳಿದಿರಲಿಲ್ಲ(ಇಂದಿಗೂ ಸಹ ಕಾಣಬಹುದಾಗಿದೆ). ಆದ್ದರಿಂದ ಹುಟ್ಟಿನಿಂದ ಕುರಿ ಸಂಗೋಪನೆ ಯಲ್ಲಿ ತೊಡಗಿದ್ದರೂ ಅವರು ಆರ್ಥಿಕವಾಗಿ ಮಾತ್ರ ತೀರ ಡೋಲಾಯಮಾನದ ಸ್ಥಿತಿಯನ್ನು ಇಂದು ಕಣ್ಣಾರೆ ಕಾಣಬಹುದಾಗಿದೆ. ಇಪ್ಪತ್ತು ಮೂವತ್ತು ವರ್ಷಗಳಿಂದಲೂ ಕುರಿ ಸಂಗೋಪನೆಯಲ್ಲಿ ತೊಡಗಿದ್ದರೂ ಬರೀ ಕೈಯಲ್ಲಿ ಕೈಚೆಲ್ಲಿ ಕುಳಿತಿದ್ದಾರೆ. ಕಾರಣ ಅವರಿಗೆ ನಿರ್ವಹಣೆ ಬಗೆಗೆ ಅರಿವಿಲ್ಲದೆ ಇರುವುದು. ಅಥವಾ ಯಾವುದೇ ರೀತಿಯ ಸ್ಥಿರ, ಚರ ಆಸ್ತಿಗಳನ್ನು ಮಾಡದೇ ಇರುವುದು. ದೊಡ್ಡ ದುರಂತವೆಂದು ಹೇಳಬಹುದು. ಶಿರಾ ತಾಲ್ಲೂಕಿನಲ್ಲೂ ಕೆಲವೊಂದು ಗ್ರಾಮಗಳನ್ನು ಹೊರತುಪಡಿಸಿದರೆ(ಅದು ಬೆರಳೆಣಿಕೆಯಷ್ಟು ಮಾತ್ರ) ಉಳಿದೆಲ್ಲಾ ಗ್ರಾಮಗಳಲ್ಲಿ ಕಡು ಬಡತನದಲ್ಲೇ ಜೀವನ ಸಾಗಿಸುತ್ತಿದ್ದಾರೆ. ಮೂವತ್ತು ವರ್ಷಗಳಿಂದ ಕುರಿಕಾದರೂ ಇವರಿಗೆ ಉಳಿದಿರುವುದು ಸವಕಲು ದೇಹ ಮಾತ್ರ. ಸಮಸ್ಯೆಗಳು ಬೆಟ್ಟದೆತ್ತರ ಬೆಳೆದು ನಿಂತಿರುವುದು ಇವರಿಗೆ ಬರೀ ಕುರಿ ಕಾಯುವುದು ಮಾತ್ರ. ವ್ಯವಸಾಯದ ಬಗ್ಗೆ ಅರಿವಿಲ್ಲದೆ ಇರುವುದು ಅತ್ಯಂತ ವಿಷಾದನೀಯವೆಂದೇ ಹೇಳಬಹುದು.

ಐವತ್ತು ಕುರಿಗಳಿರುವವರು ಹತ್ತರಿಂದ ಹದಿನೈದು ಮರಿಗಳನ್ನು ವರ್ಷಕ್ಕೆ ಎರಡು ಬಾರಿ ಮರಿಗಳನ್ನು ಮಾರಾಟ ಮಾಡುತ್ತಾರೆ. ಇದರಿಂದ ಇಪ್ಪತ್ತರಿಂದ ಮೂವತ್ತು ಸಾವಿರದವರೆಗೆ ಹಣಗಳಿಸುತ್ತಾರೆ. ಇದರಲ್ಲಿ ಇನ್ನೊಂದು ವಿಶೇಷವೆಂದರೆ ಇಂದಿಗೂ ಕಾಡುಗೊಲ್ಲ ಸಮುದಾಯದಲ್ಲಿ ಕೂಡು ಕುಟುಂಬ ಅಥವಾ ಅವಿಭಕ್ತ ಕುಟುಂಬಗಳನ್ನು ಕಾಣಬಹುದಾಗಿದೆ. ಆದ್ದರಿಂದ ಹೆಚ್ಚು ಹೆಚ್ಚು ಜನಸಂಖ್ಯೆ ಹೊಂದಿರುವ ಕುಟುಂಬಗಳಾದ್ದರಿಂದ ಹೆಚ್ಚು ಖರ್ಚು ಸಹ ಭರಿಸುತ್ತಿದ್ದರು. ಮೂವತ್ತು ಸಾವಿರದಲ್ಲೂ ಕುಟುಂಬ ನಿರ್ವಹಣೆ, ಸಂಬಳದ ಆಳುಗಳಿಗೆ ಸಂಬಳ, ಕುರಿಗಳಿಗೆ ಆರೋಗ್ಯಕ್ಕಾಗಿ ಬರಿಸುವ ಖರ್ಚು ವೆಚ್ಚ, ಹಬ್ಬ ಹರಿದಿನಗಳು ಹೀಗೆ ಎಲ್ಲಾ ಲೆಕ್ಕ ಹಾಕುತ್ತಾ ಹೋದರೆ ಉಳಿಯುವುದು ಬಿಡಿಕಾಸು ಸಹ ಇರುವುದಿಲ್ಲವಾದ್ದರಿಂದ ಅಲೆಮಾರಿ ಕಾಡುಗೊಲ್ಲ ಸ್ಥಿತಿ ಇಂದಿಗೂ (ಡೋಲಾಯಮಾನ ಪರಿಸ್ಥಿತಿಯಲ್ಲಿ ಇರುವುದನ್ನು) ಅಯೋಮಯವಾಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ಕಂಡಿರುತ್ತೇನೆ.

ಕೆಲವೊಂದು ಕುಟುಂಬಗಳು ಅಲೆಮಾರಿತನಕ್ಕೆ ಹೊಂದಿಕೊಳ್ಳಲು ಸೀಮೆಗೆ ಹೋದಾಗ ಅಲ್ಲಿ ಮಂದೆ ಬಿಟ್ಟಾಗ ದೊರೆಯುವ ದವಸ-ಧಾನ್ಯಗಳ ಮೇಲೆ ನಿಗಾ ಇರಿಸುತ್ತಾರೆ. ಏಕೆಂದರೆ ಕೆಲ ಅವಿಭಕ್ತ ಕುಟುಂಬಗಳು ಇಂತಹ ಸಮಯದಲ್ಲಿ ದೊರೆಯುವ ಧವಸ ಧಾನ್ಯಗಳಿಂದ ಜೀವನ ಸುಲಭವಾಗಿ ನಡೆಸಬಹುದು ಎಂಬುದು ಸಹ ಇವರ ಅನಿಸಿಕೆಯಾಗಿದೆ.

ಕೆಲವೊಂದು ಗ್ರಾಮಗಳಲ್ಲಿ ಯಾರೂ ವಿದ್ಯೆಯತ್ತ ಅಲ್ಪಸ್ವಲ್ಪ, ಗಮನ ಹರಿಸಿ ಹೊರಗಿನ ಪ್ರಪಂಚ ಸುತ್ತಾಡಿ, ಅರಿತವರಿರುತ್ತಾರೋ ಅವರು ಮಾತ್ರ (ಬೇವಿನಹಳ್ಳಿ, ತಿಮ್ಮನಹಳ್ಳಿ, ತಡಕಲೂರು, ದಿಬ್ಬಹಟ್ಟಿ, ಮೇಣಿಗನ ಹಟ್ಟಿ) ಕೆಲಸ್ಥಿರ, ಚರ ಆಸ್ತಿಗಳನ್ನು ಮಾಡಿಕೊಂಡಿರುವುದನ್ನು ಕಾಣಬಹುದಾಗಿದೆ. ಇಂತಹ ಕುಟುಂಬಗಳನ್ನು ಮಾತ್ರ ಸುಸ್ಥಿತಿಯಲ್ಲಿ ಕಾಣಬಹುದಾಗಿದೆ. ಅವಿಭಕ್ತ ಕುಟುಂಬಗಳಲ್ಲಿ ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳಲು ಒಂದು ಸಂಸಾರ, ಅಂದರೆ ಗಂಡ-ಹೆಂಡತಿಯರು ಮನೆಯಲ್ಲಿ ಉಳಿದುಕೊಳ್ಳಬೇಕಾಗಿರುವ ಕಾರಣದಿಂದ ಅವರು ಕೃಷಿಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಇಂದು ಕಾಡುಗೊಲ್ಲರ ಯಾವುದೇ ಹಟ್ಟಿಗಳಲ್ಲಿ ನೋಡಿದರೂ ಪಶುಪಾಲನೆಯ ಕುರುಹುಗಳು, ಪಶುಪಾಲನೆಯೇ ಬುಡಕಟ್ಟಿಗೆ ಮೂಲ ಎಂಬುದನ್ನು ಅವರುಗಳ ವಾಸಸ್ಥಳದ ಅಕ್ಕಪಕ್ಕಗಳಲ್ಲಿ ಮನೆಯ ಮುಂದಿನ ಭಾಗದಲ್ಲಿ ನಿರ್ಮಿಸಿರುವ ಕೊಟ್ಟಿಗೆಗಳು, ಕುರಿ ಹಟ್ಟಿಗಳು, ಎತ್ತುಗಳನ್ನು ಮೇಯಿಸಲು ಗೊಂದಿಗೆ ಹಾಗೂ ಮನೆಯ ಹಿತ್ತಲಿನಲ್ಲಿ ಕಾಣುವ ತಿಪ್ಪೆಗುಂಡಿಗಳು ಪಶುಪಾಲನಾ ವೃತ್ತಿಗೆ ಹಿಡಿದ ಕನ್ನಡಿಗಳಾಗಿವೆ. ಆದ್ದರಿಂದ ಇವರು ಆರ್ಥಿಕ ಜೀವನವು ಸಹ ಪಶುಪಾಲನೆಯಿಂದಲೇ ಎಂಬುದನ್ನು ತಿಳಿಯಬಹುದಾಗಿದೆ.

ಶಿರಾ ತಾಲ್ಲೂಕಿನ ಕಾಡುಗೊಲ್ಲ ಸಮುದಾಯದವರು ಕುರಿ ಸಾಕಾಣಿಕೆಯೆ ಪ್ರಧಾನ ಕಸುಬನ್ನಾಗಿಸಿ ಕೊಂಡಿದ್ದಾರೆ. ಸಾಂಪ್ರದಾಯಿಕವಾಗಿ ಕುರಿ ಸಾಕಾಣೆಯು ಕುರುಬ ಸಮುದಾಯದ ಕಸುಬಾಗಿದ್ದರೂ, ಕರ್ನಾಟಕದ ಬಹುತೇಕ ಕಾಡುಗೊಲ್ಲ ಸಮುದಾಯದವರು ಕುರಿ ಸಂಗೋಪನೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ರಾಜ್ಯದ ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಡುಗೊಲ್ಲ ಸಮುದಾಯದವರು ಅಧಿಕ ಸಂಖ್ಯೆಯಲ್ಲಿ ಕುರಿ ಸಂಗೋಪನೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಕಸುಬು ಮತ್ತು ಸಾಂಸ್ಕೃತಿಕ ಅಂಶಗಳಿಗೆ ಸಂಬಂಧಪಟ್ಟಂತೆ ಕುರುಬ ಮತ್ತು ಕಾಡುಗೊಲ್ಲ ಸಮುದಾಯಗಳಿಗೆ ಸಾಮ್ಯತೆ ಕಂಡುಬರುತ್ತದೆ. ಕಾಡುಗೊಲ್ಲ ಸಮುದಾಯದವರು ಕುರಿಗಳನ್ನು ಸಾಕಿದರೆ ಕುರುಬರು ಅದರ ಉಣ್ಣೆಯನ್ನು ಕತ್ತರಿಸಿಕೊಂಡು ಹೋಗಿ ಕಂಬಳಿ ತಯಾರಿಸುತ್ತಿದ್ದರು. ಆದರೆ ಇಂದು ವಿಭಿನ್ನ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಬದಲಾದ ಕಾಲಮಾನದಲ್ಲೂ, ಮಾರುಕಟ್ಟೆಯಲ್ಲಿನ ಬೇಡಿಕೆಗೆ ಅನುಗುಣವಾಗಿ ಹಾಗೂ ಬದಲಾದ ಜೀವನ ಶೈಲಿಗೆ ಅನುಗುಣವಾಗಿ ಇಂದು ಕಂಬಳಿ, ರಗ್ಗು ಇವೆರೆಡರಲ್ಲಿ ತೀವ್ರ ಪೈಪೋಟಿಯಿದ್ದು, ಕಂಬಳಿಗೆ ದಿನೇ ದಿನೇ ಬೇಡಿಕೆ ಕುಸಿಯುತ್ತಿದೆ. ಕುರಿ ಉಣ್ಣೆ

ಕ್ರೈಮಗ್ಗಗಳು, ಸಹಕಾರಿ ಸಂಘಗಳು, ಮುಚ್ಚಿ ಹೋಗಿವೆ. ಕುರಿ ಉಣ್ಣೆ ಇಂದು ಗೊಬ್ಬರಕ್ಕೂ ಬರದ ಸ್ಥಿತಿಯಲ್ಲಿದೆ. ಆದ್ದರಿಂದ ಇಂದು ಕುರಿ ಉಣ್ಣೆ ಕೇಳುವವರಿಲ್ಲವಾಗಿದ್ದಾರೆ. ಅದರ ಜಾಗದಲ್ಲಿ ಮೆತ್ತನೆಯ ರಾಜಸ್ತಾನ ರಗ್ಗು-ದುಪ್ಪಡಿಗಳು ರಾರಾಜಿಸುತ್ತಿವೆ. ಆದರೂ ಕುರಿ ಕಾಯುವ ಕಾಡುಗೊಲ್ಲ ಸಮುದಾಯಕ್ಕೆ ಕಂಬಳಿಯೇ ಆಸರೆಯಾಗಿದೆ. ಏಕೆಂದರೆ ಅಲೆಮಾರಿಗಳಾದ ಇವರು ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡಿ ನಿಲ್ಲುವುದರಿಂದ ಕಂಬಳಿಯೇ ಇವರಿಗೆ ಸೂಕ್ತ ರಕ್ಷಣೆಯನ್ನೊದಗಿಸುತ್ತದೆ. ಹಾಗೂ ರಾತ್ರಿಯ ವೇಳೆ ಕುರಿಯನ್ನು ಸರದಿಯೋಪಾದಿಯಲ್ಲಿ ಪಾಳಿ ಕೆಲಸ ನಿರ್ವಹಿಸುವಾಗ, ಮಳೆ ಬರುವ ಸಮಯದಲ್ಲಿ ಮಳೆಯಲ್ಲಿಯೆ ನಿಂತು ಪಾಳಿ ಕೆಲಸ ನಿರ್ವಹಿಸಬೇಕಾದ ಸಂದರ್ಭದಲ್ಲಿ ಕಂಬಳಿಯೇ ಉಕ್ಕಿನ ಕವಚವಾಗಿರುತ್ತದೆಯಾದ್ದರಿಂದ ಕಂಬಳಿಯೇ ಗತಿ. ಆದರೆ ಇಂದು ಕುರುಬ ಸಮುದಾಯದವರು ಉಚಿತವಾಗಿ ಉಣ್ಣೆ ಕತ್ತರಿಸಲು ಬರುತ್ತಿಲ್ಲ. ಬದಲಿಗೆ ನಾಲ್ಕು ರೂಪಾಯಿ ಹೆಚ್ಚು ಕುರಿಗಳಿದ್ದರೆ ಐದು ರೂಪಾಯಿಗಳ ಕೂಲಿಯನ್ನು ಪಡೆಯುತ್ತಿದ್ದಾರೆ. ಅಲ್ಲದೆ ಕತ್ತರಿಸಿದ ಉಣ್ಣೆಯನ್ನು ಉಚಿತವಾಗಿ ತೆಗೆದುಕೊಂಡು ಹೋಗುತ್ತಾರೆ ವಿನಃ ಅದಕ್ಕೆ ಪ್ರತಿಯಾಗಿ ಕಂಬಳಿಯನ್ನು ನೀಡುವುದಿಲ್ಲ. ಆಕಸ್ಮಾತಾಗಿ ಉಣ್ಣೆಗೆ ಕಂಬಳಿಯನ್ನೆ ನೀಡಬೇಕೆಂದು ಬೇಡಿಕೆ ಇಟ್ಟರೆ ಉಣ್ಣೆಯನ್ನು ಅಲ್ಲೇ ಬಿಟ್ಟು ಹೋಗುತ್ತಾರೆ. ಆದರೆ ಅದು ಗೊಬ್ಬರವಾಗಿ ಕೊಳೆಯುವುದಿಲ್ಲವಾದ್ದರಿಂದ ಕಾಡುಗೊಲ್ಲರಿಗೆ ಇದರಿಂದ ಪ್ರಯೋಜನವೇ ಇಲ್ಲವಾದ್ದರಿಂದ, ಪುಕ್ಕಟೆಯಾಗಿ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಕುರುಬ ಸಮುದಾಯಕ್ಕೂ ಹಾಗೂ ಕಾಡು ಗೊಲ್ಲ ಸಮುದಾಯಗಳಲ್ಲಿ ಇಂದು ಜೀವನ ನಿರ್ವಹಿಸಲು ವ್ಯಾಪಾರಿಯುತ ಮನಸ್ಸುಗಳಾಗಿ ಬದಲಾಗುತ್ತಿದೆ.

ಇದರ ಬಗ್ಗೆ ಕುರುಬ ಸಮುದಾಯದವರನ್ನು ವಿಚಾರಿಸಿದಾಗ ದುರ್ಬರವಾದ ಬದುಕನ್ನು ನಿರ್ವಹಿಸಲು ಕಷ್ಟಕರ ಎಂದು, ಅಲ್ಲದೆ ಕುರಿ ಉಣ್ಣೆ ಹೆಚ್ಚು ಒರಟಾಗಿರುವುದರಿಂದ ಅದನ್ನು ಮಾರುಕಟ್ಟೆಯಲ್ಲಿ ಕೊಳ್ಳಲು ಮುಂದೆ ಬರುತ್ತಿಲ್ಲ. ಬದಲಿಗೆ ರಾಜಸ್ಥಾನದ ನಯವಾದ ಹಾಗೂ ಸುಂದರವಾದ ಉಲ್ಲನ್ ರಗ್ಗುಗಳನ್ನು ಬಳಸುತ್ತಿರುವುದರಿಂದ ಎಲ್ಲರು ಅದರತ್ತ ವಾಲುತ್ತಿದ್ದಾರೆ ಎಂಬುದು ಕುರುಬ ಸಮುದಾಯದ ಅಭಿಪ್ರಾಯ ಹಾಗೂ ಸದ್ಯದ ಪರಿಸ್ಥಿತಿಯು ಸಹ.

ಕಾಡುಗೊಲ್ಲ ಸಮುದಾಯ ಅಧ್ಯಯನಕಾರರ ಹೇಳಿಕೆಗಳಲ್ಲಿ ಇಂದಿನ ಸ್ಥಿತಿಯಲ್ಲಿ ಕೆಲವೊಂದು ಬದಲಾವಣೆಗಳೆಂದರೆ ಅಂದು ಹಾಲು, ಮೊಸರು, ತುಪ್ಪ ಬೀದಿ ಬೀದಿಯಲ್ಲಿ ಮಾರಾಟ ಮಾಡುತ್ತಿದ್ದರು. ಆದರೆ ಇಂದು ಕೆಲವೇ ಪ್ರದೇಶಗಳಿಗೆ ಸೀಮಿತವಾಗಿದೆ. (ಚಿತ್ರದುರ್ಗದಲ್ಲಿ ಇಂದಿಗೂ ಕಾಣಬಹುದು) ಮಾರುಕಟ್ಟೆಯಲ್ಲಿನ ಹಲವಾರು ರೀತಿಯ ಬದಲಾದ ಗ್ರಾಹಕರ ಮನೋಸ್ಥಿತಿಗೆ ತಕ್ಕಂತೆ, ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಲು ಉತ್ಪನ್ನಗಳನ್ನು ಇಂದು ಮಾರುಕಟ್ಟೆಯಲ್ಲಿ ದೊರೆಯುತ್ತಿದೆ. ಆದರೂ ಕಾಡುಗೊಲ್ಲರ ಹಟ್ಟಿಗಳಲ್ಲಿ ಇಂದಿಗೂ ಸಹ ನೆರೆಹೊರೆಯ ಗ್ರಾಮದವರು ಹಾಲು ತುಪ್ಪಗಳನ್ನು ಕೊಂಡು

ಕೊಳ್ಳುತ್ತಿದ್ದಾರೆ. ಹಾಗೂ ಪಶು ಸಂಪತ್ತನ್ನು ನಿರ್ವಹಿಸುವುದು ದುಸ್ತರವಾದುದರಿಂದ ಅದರ ಬದಲಿಗೆ ಕುರಿ ಸಂಗೋಪನೆಯೂ ಉತ್ತಮವೆಂದು ತಿಳಿದು ಕುರಿ ಸಂಗೋಪನೆಯತ್ತ ಕಾಡುಗೊಲ್ಲ ಸಮುದಾಯ ಉದ್ಯೋಗವನ್ನಾಗಿ ಆಯ್ದುಕೊಂಡಿದ್ದಾರೆ. ಇದು ಜೀವನ ನಿರ್ವಹಣೆಯ ಪ್ರಮುಖ ಮಾರ್ಗವಾಗಿದೆ. ಅಲ್ಲದೆ ಈ ಸಮುದಾಯದಲ್ಲಿ ಅವರ ಸಾಮಾಜಿಕ ಸ್ಥಾನಮಾನ ನಿರ್ಧಾರವಾಗುವುದು ಅವರು ಸಾಕಿರುವ ಕುರಿಗಳ ಸಂಖ್ಯೆಯ ಮೇಲೆಯೆ.

### ೪.೨.೨. ಆರ್ಥಿಕಾಭಿವೃದ್ಧಿಯಲ್ಲಿ ಸಂಬಳದಾಳುವಿನ ಪಾತ್ರ

ಅಲೆಮಾರಿ ಕುರಿಗಾರರಲ್ಲಿ 'ಸಂಬಳದಾಳು'ವಿನ ಪಾತ್ರ ಅಮೋಘವಾದುದು. ಇವರಿಲ್ಲದೆ ಕುರಿಗಳು ಅಲೆಮಾರಿ ಪ್ರಯಾಣ ಮುಂದುವರೆಸಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಹದಿನಾಲ್ಕು ವಯಸ್ಸಿನವರೆಗೆ ಎರಡು ಕುರಿ, ಮರಿ ಒಂದು ಪರಮ. ಅವರಿಗೆ ದುಡ್ಡಿನ ಅವಶ್ಯಕತೆ ಇದ್ದರೆ ಇಪ್ಪತ್ತು ಸಾವಿರದಿಂದ ನಲವತ್ತು ಸಾವಿರದವರೆಗೂ ಬಡ್ಡಿ ಇಲ್ಲದೆ ಮುಂಗಡವಾಗಿ ಹಣ ಪಡೆಯುತ್ತಾರೆ. ಹಾಗೂ ಇನ್ನೂ ಹೆಚ್ಚಿನ ವಯಸ್ಸಿನ ಅಂದರೆ ಅರವತ್ತು ವಯಸ್ಸಿನವರೆಗೂ ಸಂಬಳದ ಕೆಲಸ ನಿರ್ವಹಿಸುತ್ತಾರೆ. ಇವರಿಗೆ ಮೂರು ಕುರಿಮರಿ ಎರಡು ಪರಮ ಊಟ, ಬೀಡಿ, ಬೆಂಕಿಪೊಟ್ಟಣ, ಬಡ್ಡಿ ಇಲ್ಲದೆ ಮುಂಗಡ ಹಣ, ವರ್ಷಕ್ಕೆ ಯುಗಾದಿ ಹಬ್ಬಕ್ಕೆ ಒಂದು ಬಾಡಿ ನಿಕ್ಕರ್, ಒಂದು ಪಾಲಿಸ್ಟರ್ ಪಂಜೆ, ಒಂದು ಅಂಗಿಯನ್ನು ನೀಡುತ್ತಾರೆ. ಅಡಿಗೆ ಮಾತ್ರ ಅವರವರ ಅನುಕೂಲಕ್ಕೆ ತಕ್ಕಂತೆ ಹೋಗುತ್ತದೆ. ಇವರ ಸಮುದಾಯದವರಲ್ಲದೆ ಅನ್ಯಜಾತಿಯವರಾದ ವಡ್ಡರು, ಸುಕಾಲಿ, ನಾಯಕ, ಸಮುದಾಯವರು ಇವರ ಕುರಿಯಲ್ಲಿ ಸಂಬಳಕ್ಕೆ ಇರುತ್ತಾರೆ. ಸಂಬಳಕ್ಕೆ ಇರುವವರಿಗೆ ಬೇರೆ ತಟ್ಟೆ, ಚೆಂಬು ಇಲ್ಲವೇ ಲೋಟ ನೀಡಿರುತ್ತಾರೆ. ಮಲಗಲು ಅವರಿಗೆ ಬೇರೆ ಕಂಬಳಿಯನ್ನು ನೀಡುತ್ತಾರೆ. ಅವರು ಇಪ್ಪತ್ತು ನಾಲ್ಕು ಗಂಟೆಯ ನಿರಂತರವಾಗಿಯೇ ಕೆಲಸ ನಿರ್ವಹಿಸುತ್ತಾರೆ. ಕಡ್ಡಾಯವಾಗಿ ರಾತ್ರಿಯ ವೇಳೆ ಸರದಿ ಪ್ರಕಾರ ಚಳಿ, ಮಳೆ ಎನ್ನದೆ ಕುರಿ ಕಾಯಬೇಕಾಗಿರುತ್ತದೆ. ಇವರಿಗೆ ತಿಂಗಳಿಗೊಮ್ಮೆ ಮಾತ್ರ ಸ್ನಾನ ಮಾಡಲು ಕಟಿಂಗ್, ಶೇವಿಂಗ್‌ಗಳಿಗೆ ವಿರಾಮವಿರುತ್ತದೆ. ಇನ್ನು ಊರಿಗೆ ಹೋಗಲು ಆರು ತಿಂಗಳಿಗೊಮ್ಮೆ, ಒಂದು ವರ್ಷಕ್ಕೊಮ್ಮೆ ಮಾತ್ರ. ಇಂತಹ ಒಬ್ಬ ಸಂಬಳದಾಳುವಿನ ಉದಾಹರಣೆಯೆಂದರೆ

**ಜೋಗಿ :** ಇವರ ತಂದೆಯ ಹೆಸರು ಹಾಗೂ ದೇವರ ಹೆಸರು ಸಹ ಸಿದ್ಧಯ್ಯ ಪೂಜಾರಿಗಳು ವಾರವಾರ ಭಾನುವಾರದಂದು ಮನೆ ಮನೆಯಲ್ಲಿ ಭಿಕ್ಷೆಯನ್ನು ಸಂಗ್ರಹಿಸುತ್ತಾರೆ. ಅವರನ್ನೇ ಜೋಗಪ್ಪ ಅಥವಾ ಜೋಗಿ ಎನ್ನುವ ಹೆಸರು ಕಾಡುಗೊಲ್ಲ ಸಮುದಾಯದಲ್ಲಿದೆ. ಇಂತಹವನು ನಮ್ಮ ಸಂಗೋಪನಾ ಕಾರ್ಯದಲ್ಲಿ ಇಪ್ಪತ್ತು ವರ್ಷಗಳಿಂದ ಸಂಬಳಕ್ಕಿದ್ದಾನೆ. ಅವನಿಗೆ ರಾತ್ರಿಯ ಕುರುಡು ಆದ್ದರಿಂದ ರಾತ್ರಿ ಸರದಿ ಕಾಯುವುದರಲ್ಲಿ ಸ್ವಲ್ಪ ರಿಯಾಯಿತಿ ಇದೆ. ಇವನು ಸ್ನಾನ ಮಾಡಲು ತಿಂಗಳಿಂದ ಎರಡು

ತಿಂಗಳಾಗುತ್ತದೆ. ಒಮ್ಮೆ ಸ್ನಾನ ಮಾಡಿ ಒಂದು ಹಳೆಯ ಅಂಗಿ ಹಾಕಿಕೊಂಡರೆ, ಮತ್ತೆ ಅದು ಹರಿದು ಚಿಂದಿಯಾಗುವವರೆಗೂ ಬಿಡುವುದಿಲ್ಲ. ಇನ್ನು ಮುಖದ ಮೇಲೆ ಗಡ್ಡ, ಮೀಸೆ, ತಲೆಯ ಕೂದಲು ತಪಸ್ಸಿಗೆ ಕುಳಿತ ಋಷಿ ಬೆಳೆಸಿದ ರೀತಿಯಲ್ಲಿ ಕೂದಲನ್ನು ಬೆಳೆಸಿ ಅವನು ತಿಂಗಳಿಗೊಂದರಂತೆ ರಜೆ ಪಡೆಯುತ್ತಾನೆ. ಅದರಲ್ಲೂ ಮುಖ್ಯವಾಗಿ ಒಂದು ಸೋಮವಾರವೇ ರಜೆ ತೆಗೆದುಕೊಳ್ಳುತ್ತಾನೆ. ಆ ದಿನವೆಲ್ಲಾ ಮಾಸಿಕ ಕರ್ಮಗಳನ್ನು ಮುಗಿಸಿ ಕೊಳ್ಳುತ್ತಾನೆ. ಆದರೆ ಯಾವುದೇ ಕಾರಣಕ್ಕೂ ಯಾವುದೇ ವಿಷಯಗಳ ಬಗ್ಗೆ ಎಂದು ವಿಚಾರ ಮಾಡುವುದಿಲ್ಲ. ಅವನು ಇಂದಿಗೆ ಕುರಿಕಾಯಲು ಆರಂಭಿಸಿ ಮೂವತ್ತು ವರ್ಷಗಳೇ ಸಂದಿವೆ. ಅಂದಿನಿಂದ ಇಂದಿನವರೆಗೂ ಸಂಬಳದಾಳಾಗಿ ದುಡಿಯುತ್ತಲೇ ಇದ್ದಾನೆ. ಆರಕ್ಕಂತು ಏರಲು ಸಾಧ್ಯವಾಗಿಲ್ಲ. ಆದರೆ ಮೂರಕ್ಕಿಂತ ಕೆಳಗೆ ಮಾತ್ರ ಇಳಿಯುತ್ತಿದ್ದಾನೆ. ಇಂತಹ ಸಂಬಳದಾಳುಗಳ ಹಲವು ಕಥೆಗಳು ಈ ಸಮುದಾಯದಲ್ಲಿ ಇವೆ. ಆದರೆ ಕೆಲ ಬುದ್ಧಿವಂತ ಆಳುಗಳು ಸುಮಾರು ಐದು ವರ್ಷ ಮಾತ್ರ ಸಂಬಳ ಇದ್ದು ನಂತರ ಅವರ ಕುರಿಗಳೊಡನೆ ಬೇರೆಯೆ ಮಂದೆಯನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ನಂತರ ಅವನ ಕುಟುಂಬದ ಸದಸ್ಯರೊಂದಿಗೆ ಅವನೇ ಮಂದೆಯನ್ನು ನಿರ್ವಹಿಸುತ್ತಾನೆ. ಇನ್ನು ಕೆಲವರು ಚಿಕ್ಕ ವಯಸ್ಸಿನಿಂದ ಕುರಿ ಕಾದು, ಕಾದು ಬಿಸಿಲಿಗೆ ಅವರ ದೇಹ ಒಣಗಿ ಐವತ್ತು ವರ್ಷಕ್ಕಿಂತ ಮುಂಚಿತವಾಗಿಯೇ ಬಾಗುತ್ತಾರೆ. ಕೈ ಕಾಲುಗಳ ಮೂಳೆಗಳು ಸವೆಯುತ್ತವೆ ಮೂಳೆಗಳಲ್ಲಿ ಕ್ಯಾಲ್ಸಿಯಂ ಅಂಶವೇ ಕಡಿಮೆಯಾಗಿ ಮೊಣಕಾಲುಗಳು ಒಂದಕ್ಕೊಂದು ಕೂಡಿಕೊಂಡು ತೊಡರುಕಾಲುಗಳಾಗಿ ಜೋರಾಗಿ ನಡೆಯಲು ಸಾಧ್ಯವಾಗುವುದಿಲ್ಲ. ದೇಹ ನಿಯಂತ್ರಣ ತಪ್ಪುತ್ತದೆ. ಚರ್ಮದ ಕ್ಯಾನ್ಸರ್ ಬರುತ್ತದೆ. ಮುಖದಲ್ಲಿ ನೀರಿನ ಅಂಶವೆಲ್ಲ ಬತ್ತಿ ಹೋಗಿ ಕಪ್ಪಾಗುತ್ತದೆ. ಹೀಗೆ ಹಲವಾರು ರೀತಿಯ ಸಮಸ್ಯೆಗಳಿಗೆ ಕುರಿಗಾರರು ತುತ್ತಾಗುತ್ತಾರೆ. ಕೆಲವೊಬ್ಬರಿಗೆ ಕುರಿಗಳಿಗೆ ಮುಳ್ಳಿನ ಸೊಪ್ಪು ಕೊಯ್ಯುವಾಗ ಅಥವಾ ಅರಣ್ಯಗಳಲ್ಲಿ ಮರದ ಕೊಂಬೆಯ ಕಡ್ಡಿಗಳು, ಮುಳ್ಳುಗಳು ತಗುಲಿ ಕಣ್ಣು ಕುರುಡಾಗಿರೋದು ಸೊಪ್ಪು ತರಲು ಹೋಗಿ ಮರಹತ್ತಿ ಬಿದ್ದು ಕಾಲು, ಕೈ ಮುರಿದುಕೊಂಡವರ ಉದಾಹರಣೆ ಲೆಕ್ಕವಿಲ್ಲ. ಅಲ್ಲದೆ ಕಾಡುಹಂದಿಯಿಂದ ಹೊಡೆಸಿಕೊಂಡು ಕಾಲು ಮುರಿದುಕೊಂಡವರು, ಕರಡಿಯಿಂದ ತಲೆ ಮೆದುಳು ಹೊರಗೆ ಬರುವಂತೆ ಮಾಡಿಕೊಂಡವರು, ಕಣ್ಣು ಗುಡ್ಡೆ ಕೀಳಿಸಿಕೊಂಡವರು. ತೋಳಗಳಿಂದ ಕಚ್ಚಿಸಿಕೊಂಡವರು, ದಟ್ಟ ಅರಣ್ಯಗಳಲ್ಲಿ ಹುಲಿ-ಚಿರತೆಗಳಿಗೆ ಬಲಿಯಾದವರು. ಹಾಗೂ ನೈಸರ್ಗಿಕ ಪ್ರವಾಹ ಗುಡುಗು, ಸಿಡಿಲಿಗೆ ಬಲಿಯಾದವರು, ಜೊತೆಗೆ ಸಿಡಿಲಿಗೆ ಸಿಕ್ಕ ಕುರಿಮಂದೆಗಳಿಂದ ಬೀದಿಪಾಲಾದವರು. ಹಾವು, ಚೇಳು, ಮಂಡರಗಬ್ಬೆಯಿಂದ ಕಚ್ಚಿಸಿಕೊಂಡು ಮರಣ ಹೊಂದಿದವರು, ಕೊಳಕು ಮಂಡಲ, ಉರಿಮಂಡಲಗಳಿಂದ ಕಚ್ಚಿಸಿಕೊಂಡು ದೇಹದ ಅಂಗಗಳನ್ನು ಕಳೆದುಕೊಂಡವರು, ಕುರಿಯನ್ನು ನುಂಗಿದ ಹೆಬ್ಬಾವು ಹೀಗೆ ಹಲವು ರೀತಿಯ ಆಪತ್ತುಗಳನ್ನು ಕುರಿಗಾರರು ತಮ್ಮ ಸಾಮಾಜಿಕ ಜೀವನದಲ್ಲಿ ಎದುರಿಸುತ್ತಲೇ ಬರುತ್ತಿದ್ದಾರೆ. ಆದರೆ ಇವರು

ಇಂದಿನವರೆಗೂ ಸರ್ಕಾರಕ್ಕಾಗಲಿ ಯಾರೊಬ್ಬರಿಗಾಗಲಿ ಸಹಾಯ ಹಸ್ತ ಚಾಚಿಯೇ ಇಲ್ಲ. ಅವರ ಬದುಕಿನಲ್ಲಿ ಬರುವ ನೋವು, ನಿರಾಶೆ, ಅಸಹಾಯಕತೆಯನ್ನು ಮೌನವಾಗಿ ಪ್ರತಿಭಟಿಸುತ್ತಲೇ ಬರುತ್ತಿದ್ದಾರೆ. ಆದರೆ ಇವರ ಕೈಹಿಡಿದು ಮುಂದೆ ನಡೆಸಲು ಯಾರುಬರುತ್ತಿಲ್ಲ. ಆದ ಕಾರಣ ಇವರಿಗೆ ಕೈ ಹಿಡಿದು ಯಾರು ಮುಂದೆ ನಡೆಸಲು ಬರದಿರಲು ಕಾರಣ ಇವರು ಸ್ವಾತಂತ್ರ್ಯ ಬಂದು ಅರವತ್ತೆರಡು ವರ್ಷಗಳಾದರೂ ಸಮಸ್ಯೆಗಳು ಅಂದಿನಿಂದ ಇಂದಿನವರೆಗೂ ಹಾಗೆ ಉಳಿದುಕೊಂಡು ಬಂದಿವೆ.

ಆದರೆ ಇಂದು ಸಂಬಳಕ್ಕೆ ಬರುವ ಪ್ರತಿ ಸಂಬಳದಾಳು ತನ್ನ ಬೇಡಿಕೆಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿದ್ದಾನೆ. ಯಾವುದೇ ವ್ಯಕ್ತಿ ಒಬ್ಬರ ಕುರಿಯನ್ನು ಸಾಕಲು ಅಥವಾ ಸಂಬಳಕ್ಕೆ ಬರಲು ಕನಿಷ್ಟ ಐವತ್ತು ಸಾವಿರದಿಂದ ಒಂದು ಲಕ್ಷದವರೆಗೂ ಮುಂಗಡ ಹಣವನ್ನು ತೆಗೆದುಕೊಳ್ಳುತ್ತಿರುವುದು ಇಂದು ಸಾಮಾನ್ಯವಾಗಿದೆ. ಜೊತೆಗೆ ಚಪ್ಪಲಿ, ಕಂಬಳಿ ಹೀಗೆ ಅವನ ಎಲ್ಲಾ ನಿತ್ಯ ಖರ್ಚು, ವೆಚ್ಚಗಳನ್ನು ಬರಿಸುವಂತಾಗಬೇಕಿದೆ. ಇಲ್ಲವಾದರೆ ಮಧ್ಯದಲ್ಲೆ ಕುರಿ ಮಂದೆಯನ್ನು ಬಿಟ್ಟು ಹೊರ ನಡೆಯುತ್ತಾರೆ.

ಈ ರೀತಿಯಲ್ಲಿ ಸಂಬಳಕ್ಕೆ ಬಂದಂಥ ವ್ಯಕ್ತಿಯ ಸುಮಾರು ಐದು ವರ್ಷಗಳು ಇಲ್ಲವೇ ಅವರ ಸಂಬಂಧ ಅನ್ಯೂನ್ಯವಾಗಿದ್ದರೆ ಹತ್ತು-ಹದಿನೈದು ವರ್ಷಗಳಿಗೂ ಇದು ಮುಂದುವರೆಯುತ್ತದೆ. ಅಷ್ಟು ಹೊತ್ತಿಗೆ, ಯಜಮಾನ ಹಾಗೂ ಸಂಬಳದ ಕುರಿಗಳು ಸಮಸಮವಾಗಿರುತ್ತವೆ. ನಂತರದ ದಿನಗಳಲ್ಲಿ ಇಷ್ಟವಿದ್ದರೆ ಮುಂದುವರೆಯುತ್ತಾರೆ ಇಲ್ಲವಾದರೆ ಸಂಬಳದ ವ್ಯಕ್ತಿ ತನ್ನದೇ ಆದ ಸ್ವಂತ ಕುರಿ ಮಂದೆಯನ್ನು ಮಾಡಿಕೊಳ್ಳುತ್ತಾನೆ. ನಂತರ ಅವನು ಕುರಿಮಂದೆಯನ್ನು ಹೆಚ್ಚಿಸುತ್ತಾ ಆರ್ಥಿಕ ಬದುಕನ್ನು ಸುಧಾರಿಸುವಲ್ಲಿ ಶ್ರಮಿಸುತ್ತಾ ಹೋಗುತ್ತಾನೆ.

### ೪.೨.೩. ಆರ್ಥಿಕಾಭಿವೃದ್ಧಿಯಲ್ಲಿ ಅಲೆಮಾರಿ ಕಾಡುಗೊಲ್ಲ ಮಹಿಳೆಯ ಪಾತ್ರ

ಕಾಡುಗೊಲ್ಲ ಸಮುದಾಯದ ಇತಿಹಾಸಕ್ಕೆ ಮಹಿಳೆಯರೇ ಆಧಾರಸ್ತಂಭ. ಇವರ ವಂಶದ ಅಭಿವೃದ್ಧಿಯಲ್ಲಿ ಇವಳೇ ಮೂಲ. ಮೂಲತಃ ಇವರು ಅನಕ್ಷರಸ್ಥರಾಗಿದ್ದರೂ, ಮಹಿಳೆಯು ಸಮಾಜದ ಅಣತಿ. ಅಣೆಯಂತೆ ಅವರವರ ವೃತ್ತಿಯಲ್ಲಿ ನಿರತರಾಗುತ್ತಾರೆ. ಬೇರೆ, ಬೇರೆ ಬುಡಕಟ್ಟು ಸಮುದಾಯ ಗಳಿಗಿಂತ ತುಂಬಾ ಭಿನ್ನವಾಗಿದೆ. ಇವರು ತಮ್ಮ ಪಾರಂಪರಿಕ ವೃತ್ತಿಯಾದ ಪಶುಪಾಲನೆಗನುಗುಣವಾಗಿ ಹಾಗೂ ಇವರ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಜೀವಿಸುತ್ತಿದ್ದಾರೆ. ಅಲೆಮಾರಿ ಕಾಡುಗೊಲ್ಲ ಕುರಿಗಾರರ ಗೂಡೆಗಳಲ್ಲಿ ಮಹಿಳೆಯದೇ ಪ್ರಮುಖ ಸ್ಥಾನ.

ಕಾಯಕದ ನಿಷ್ಟೆಯಲ್ಲಿ ಈ ಸಮುದಾಯದ ಮಹಿಳೆ ಒಂದು ಹೆಜ್ಜೆ ಮುಂದೆಯೇ ಇದ್ದಾಳೆ. ಸಂಸಾರ ನಿರ್ವಹಿಸುವುದು. ಕುರಿಗಳ ಪಾಲನೆ, ಮಕ್ಕಳ ಲಾಲನೆ, ಹೀಗೆ ನೂರೆಂಟು ಕಾರ್ಯಗಳು ಅವಳು ಇಲ್ಲದೇ ಯಾವುದೊಂದು ಕಾರ್ಯ ಸುಗಮವಾಗದು. ಕುರಿಯ ಮಂದೆಯಲ್ಲಿ ಇವಳೇ ಮುಂದೆ

ಇರುತ್ತಾಳೆ. ಪುರುಷರು ಕುರಿಯಲ್ಲಿ ಮಾರಾಟ ಮಾಡಿ ಹಣವನ್ನು ತರುವುದೊಂದೆ ಕೆಲಸ. ಆದರೆ ಅದನ್ನು ವ್ಯವಸ್ಥಿತವಾಗಿ ವೆಚ್ಚ ಮಾಡುವುದು ಇವಳ ಜವಾಬ್ದಾರಿ. ಆದಷ್ಟು ದುಂದುವೆಚ್ಚಕ್ಕೆ ಕಡಿವಾಣ ಹಾಕುತ್ತಾ, ಆದಷ್ಟು ಕುಟುಂಬಕ್ಕೆ ಅನುಕೂಲವಾಗಿ ಉಳಿಯುವಂತಾಗುವ ಕೆಲಸ ನಿರ್ವಹಿಸುತ್ತಾಳೆ. ಕುರಿಯ ಮಂದೆಯಲ್ಲಿ ಹೆಚ್ಚು ಹೆಚ್ಚು ಜನರು ಒಟ್ಟೊಟ್ಟಾಗಿ ಇರುತ್ತಾರೆ. ಅವರಿಗೆಲ್ಲಾ ಅಡುಗೆ ಮಾಡಿ ಒದಗಿಸುವುದೇ ಒಂದು ದೊಡ್ಡ ಸಾಹಸವಾಗಿರುತ್ತದೆ. ಅಲ್ಲದೆ ಅದನ್ನು ಸಮಯಕ್ಕೆ ಸರಿಯಾಗಿ ತಯಾರು ಮಾಡುವುದು. ಅದು ಹೆಚ್ಚಿಲ್ಲದೆ, ಕಡಿಮೆಯಾಗದಂತೆ ನಿಗದಿತವಾಗಿ ಭತ್ಯೆವನ್ನು ಬಳಸುವುದು ಇವಳ ಪ್ರಮುಖ ಕೆಲಸವಾಗಿದೆ. ಕುರಿಗಳು ಮೇಯಲು ಹೋದಾಗ ಮರಿಗಳನ್ನು ಬೆಳಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ಇವಳದು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅತ್ಯಂತ ವ್ಯವಸ್ಥಿತವಾಗಿ ಸಾಗಿಸುವಲ್ಲಿ ಮಹಿಳೆಯರದೇ ಪ್ರಮುಖ ಪಾತ್ರ. ಒಟ್ಟಾರೆ ಈ ಸಮುದಾಯದ ಪುರುಷರಿಗೆ ತಮ್ಮ ಹೆಂಡತಿ, ತಾಯಿಯ ಮಾತೇ ಪ್ರಮುಖ. ಆದ್ದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾಳೆ.

ಒಟ್ಟಾರೆ ಅಲೆಮಾರಿ ಕಾಡುಗೊಲ್ಲ ಕುರಿಗಾರರ ಆರ್ಥಿಕ ಅಭಿವೃದ್ಧಿಗೆ ಕುರಿ ಮೂಲ ಸಂಗೋಪನೆಯೇ. ಏಕೆಂದರೆ ಇವರು ಬೇರೆ ಯಾವುದೇ ಆರ್ಥಿಕ ಮೂಲ ಹುಡುಕಲಾಗಿಲ್ಲ. ಏಕೆಂದರೆ ಇದರಲ್ಲಿ, ಸಮಯ ದೊರೆಯುವುದಿಲ್ಲ. ಬೇರೆ ವೃತ್ತಿಯತ್ತ ಹೋದರೆ ಇವು ಕೈಗೆ ಸಿಗುವುದಿಲ್ಲ. ಅಲ್ಲದೆ ಇವುಗಳನ್ನು ಸುಧಾರಿಸಲಾಗುವುದಿಲ್ಲ. ಇವು ಅತಿ ಸೂಕ್ಷ್ಮ ಹಾಗೂ ಕೋಮಲವಾದ ಪ್ರಾಣಿಯಾದ್ದರಿಂದ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುವುದರಿಂದ ಇವರ ಜೀವನಕ್ಕೆ ಕುರಿ ಸಂಗೋಪನೆಯ ಆಧಾರ. ಇದರಿಂದಲೇ ಇವರ ಅಲೆಮಾರಿ ಜೀವನ ನಡೆಸುತ್ತಿರುವುದು. ಆದ್ದರಿಂದ ಇವರು ಆರ್ಥಿಕಾಭಿವೃದ್ಧಿಯಲ್ಲಿ ಲಾಭ ಹೊಂದಿದರೂ, ನಷ್ಟ ಹೊಂದಿದರೂ ಕುರಿಯಿಂದಲೇ. ಅದಕ್ಕೆ 'ಕುರಿಸಾಕಿ ಕುಬೇರರಾಗಿ' ಎಂಬ ಗಾದೆ ಮಾತಿನಂತೆ ಕುಬೇರರಾಗಲು ಸಾಧ್ಯವಾಗದಿದ್ದರೂ ಜೀವನಕ್ಕೆ ಇವೇ ಮೂಲವಾಗಿರುವುದರಿಂದ ಜೀವನದ ಪ್ರವಾಹದಲ್ಲಿ ನೆಮ್ಮದಿಯ ನೆಲೆಯನ್ನು ಸ್ವಲ್ಪಮಟ್ಟಿಗೆ ಕಂಡುಕೊಂಡಿದ್ದಾರೆ.

ಅಲೆಮಾರಿ ಕುರಿಗಾರರ ಗೂಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವವರು ಮಹಿಳೆಯರು. ಕುರಿಗಳು ಮೇಯಲು ಹೋದಾಗ ಅರಣ್ಯದಲ್ಲಿ ದೊರೆಯುವ ಈಚಲಗರಿಗಳನ್ನು, ಮುತ್ತುಗದ ಎಲೆಗಳನ್ನು ಸಂಗ್ರಹಿಸುತ್ತಾರೆ. ಇವುಗಳಿಂದ ಚಾಪೆ ಮತ್ತು ಊಟದ ಎಲೆಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಕಾಡಿನಲ್ಲಿ ದೊರೆಯುವ ನವಿಲು ಮೊಟ್ಟೆಯನ್ನು ತಂದು ತಮ್ಮ ಕೋಳಿಗಳ ಜೊತೆಯಲ್ಲಿ ಸಾಕಿ ಮಾರಾಟ ಮಾಡುತ್ತಾರೆ. ಹಾಗೂ ದೊಡ್ಡ ಗಾತ್ರದ ಉಡಗಳನ್ನು ನಾಯಿಗಳ ಸಹಾಯದಿಂದ ಹಿಡಿದು ಬೇಯಿಸಿ ತುಪ್ಪ ತೆಗೆದು ಮಾರಾಟ ಮಾಡುತ್ತಾರೆ. ಇದು ಆಯುರ್ವೇದ ಔಷಧ ತಯಾರಿಕೆಗೆ ಉಪಯುಕ್ತವಾದ ಪ್ರಾಣಿಯಾಗಿದೆ. ಜೊತೆಗೆ ಕಾಡುಹಂದಿ, ಮೊಲ, ಜಿಂಕೆಗಳನ್ನು ಸಹ ಯಾರಿಗೂ ಕಾಣದಂತೆ ಮಾರಾಟ ಮಾಡುತ್ತಾರೆ. ಈ ರೀತಿಯಾಗಿ ಅಲೆಮಾರಿ ಕಾಡುಗೊಲ್ಲರು ಆರ್ಥಿಕವಾಗಿ ಹೆಚ್ಚಿನ

ಸಂಪಾದನೆ ಮಾಡದಿದ್ದರೂ ಅವರ ಜೀವನಕ್ಕೆ ಅಗತ್ಯವಿರುವ ವಸ್ತುವನ್ನು ಗಳಿಸುತ್ತಾರೆಯೇ ವಿನಃ ಹೆಚ್ಚಿನದನ್ನು ಬಯಸುತ್ತಿಲ್ಲದಿರುವುದು ಮುಖ್ಯವಾಗಿದೆ.

## ೪.೩. ಕಾಡುಗೊಲ್ಲರ ಸಾಮಾಜಿಕ ಅಭಿವೃದ್ಧಿ

### ೪.೩.೧. ಅಲೆಮಾರಿ ಕಾಡುಗೊಲ್ಲರ ಕುಲ, ಬಳಿ, ಬೆಡಗು

ಕುಟುಂಬವು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು, ಭಾರತೀಯ ಸಂದರ್ಭದಲ್ಲಿ ಮುಖ್ಯ ಸಾಮಾಜಿಕ ಘಟಕವಾಗಿದೆ. ಭಾರತದಾದ್ಯಂತ ಬುಡಕಟ್ಟುಗಳು ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳನ್ನೇ ಹೊಂದಿವೆ. ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳನ್ನು ಹೊರತುಪಡಿಸಿ ಮತ್ತು ಕೇರಳದ ನಾಯರ್‌ಗಳಲ್ಲಿ ಬಿಟ್ಟರೆ ಎಲ್ಲಾ ಕಡೆಗಳಲ್ಲಿ ಪಿತೃಪ್ರಧಾನ, ಪಿತೃವಂಶೀಯ ಮತ್ತು ಪಿತೃಸ್ಥಾನೀಯ ಕುಟುಂಬಗಳನ್ನು ನೋಡಬಹುದಾಗಿದೆ. ಅದರಂತೆಯೇ ದಕ್ಷಿಣ ಭಾರತದವರಾದ ಕಾಡುಗೊಲ್ಲರು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಅಂದರೆ ಇಲ್ಲಿ ಬಂಧುತ್ವ ಮತ್ತು ಆಸ್ತಿಯ ಹಂಚಿಕೆ ಪುರುಷರ ಮೂಲಕ ಆಗುವುದು. ಜೊತೆಗೆ ಪುರುಷ ಕುಟುಂಬದ ಯಜಮಾನನಾಗಿರುತ್ತಾನೆ. ಕುಟುಂಬದ ಆಗು ಹೋಗುಗಳಿಗೆಲ್ಲಾ ಇವನೇ ಜವಾಬ್ದಾರನಾಗಿರುತ್ತಾನೆ. ಮಹಿಳೆಗೆ ಪೂರ್ಣಸ್ವಾತಂತ್ರವಿರುವುದಿಲ್ಲ. ಆದರೆ ವಾಸ್ತವಿಕವಾಗಿ ಕಾಡುಗೊಲ್ಲರಲ್ಲಿ ಮಹಿಳೆಗೆ ಹೆಚ್ಚಿನ ಗೌರವವಿದೆ. ಪುರುಷನು ಮನೆಯ ಯಜಮಾನನಾದರೂ ಮನೆಯ ಜವಾಬ್ದಾರಿ ಮತ್ತು ಹೆಚ್ಚಿನ ಸ್ಥಾನಮಾನಗಳನ್ನು ಮಹಿಳೆಯರೇ ಹೊಂದಿರುತ್ತಾರೆ. ಇವರಲ್ಲಿ ಮಹಿಳೆಯನ್ನು ಕೀಳಾಗಿ ಕಾಣುವುದಿಲ್ಲ. ಇದು ಬುಡಕಟ್ಟು ಜನರ ಮುಖ್ಯ ಲಕ್ಷಣವಾಗಿದೆ (ಗುರುಲಿಂಗಯ್ಯ ಎಂ., ನಾಗಪ್ಪ ವಿ., ೨೦೦೮:೪೭).

ಕಾಡುಗೊಲ್ಲರಲ್ಲಿ ಅದರಲ್ಲಿಯೂ ಅಲೆಮಾರಿ ಕಾಡುಗೊಲ್ಲರಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚು. ಕುರಿಯನ್ನು ಸಂಗೋಪನೆ ಮಾಡಲು ಹೆಚ್ಚು ಹೆಚ್ಚು ಜನರ ಅವಶ್ಯಕವಿರುವುದರಿಂದ ಈ ಕುಟುಂಬಗಳೂ ಇಂದಿಗೂ ಅವಿಭಕ್ತ ಕುಟುಂಬಗಳ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ ಇಪ್ಪತ್ತಿರಿಂದ ಮೂವತ್ತಕ್ಕೂ ಹೆಚ್ಚು ಸದಸ್ಯರಿರುವ ಅಲೆಮಾರಿ ಕುಟುಂಬಗಳನ್ನು ಸಹ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕಾಡುಗೊಲ್ಲರು ತಮ್ಮ ಬಂಧು ಬಳಗದವರನ್ನು ಸಂಬಂಧಿಕ ಮತ್ತು ಬೀಗರು ಎಂದು ಎರಡು ವಿಧವಾಗಿ ವರ್ಗೀಕರಿಸಿರುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಎಲ್ಲಾ ಪುರುಷರನ್ನು ದಾಯಾದಿಗಳೆಂದೂ ಅಥವಾ ಅಣ್ಣತಮ್ಮಂದಿರೆಂದೂ ಇತರರನ್ನು ಬೀಗರೆಂದೂ ಕರೆಯಲಾಗುತ್ತದೆ. ಕಾಡುಗೊಲ್ಲರಲ್ಲಿ ಈಗಾಗಲೇ ಹೇಳಿದ ಹಾಗೆ ಮುಖ್ಯವಾಗಿ ಚಿತ್ತಮುತ್ತಿ ಮತ್ತು ಚಂದಮುತ್ತಿ ಎಂಬ ಮುಖ್ಯ ಕುಲ, ಬಳಿ, ಪಂಗಡಗಳಿದ್ದು, ಇವುಗಳಲ್ಲಿ ಮತ್ತೆ ಉಪಪಂಗಡಗಳು ಕಂಡುಬರುತ್ತವೆ. ಉದಾ.

ಚಿತ್ತಿಮುತ್ತಿ ಕುಲದಲ್ಲಿ ಕರಡಿಗೊಲ್ಲರು ಮುಖ್ಯವಾದ ಗುಂಪಾದರೆ, ಚಂದಮುತ್ತಿ ಕುಲದಲ್ಲಿ ಅಜ್ಜೋರು, ಕಹಳೆಯವರು, ಸೋಮನವರು, ಕಂಬೇರು ಮುಂತಾದ ಹಲವು ಗುಂಪುಗಳಿವೆ. ಮುಖ್ಯವಾಗಿ ಚಿತ್ತಮುತ್ತಿ ಮತ್ತು ಚಂದಮುತ್ತಿ ಕುಲಗಳಲ್ಲಿ ಬರುವ ಉಪಪಂಗಡದವರ ನಡುವೆ ವಿವಾದ ಸಂದರ್ಭ ಸಾಧ್ಯವಿದೆ. ಅಥವಾ ವಿವಾಹ ಸಂಬಂಧವನ್ನು ಬೆಳೆಸಬಹುದು. ಆದರೆ ಅದೇ ಕುಲದಡಿಯಲ್ಲಿ ಬರುವ ಉಪಪಂಗಡಗಳ ಮಧ್ಯ ವಿವಾಹ ನಿಷಿದ್ಧ. ಅಂದರೆ ಚಂದಮುತ್ತಿ ಕುಲದಡಿಯಲ್ಲಿ ಬರುವ ಹತ್ತಾರು ಪಂಡಗಳ ನಡುವೆ ವಿವಾಹ ಸಂಬಂಧ ನಿಷಿದ್ಧ. ಈ ಹತ್ತಾರು ಉಪಪಂಗಡದವರು ಚಿತ್ತಮುತ್ತಿ ಕುಲದಲ್ಲಿ ಬರುವ ಕರಡಿಗೊಲ್ಲರೊಂದಿಗೆ ವಿವಾಹ ಸಂಬಂಧ ಏರ್ಪಡಿಸಬಹುದು. ಆದರೆ ಕರಡಿಗೊಲ್ಲರು ಚಂದಮುತ್ತಿ ಕುಲದಲ್ಲಿ ಬರುವ ಯಾವುದೇ ಪಂಗಡದೊಂದಿಗೆ ಮದುವೆ ಸಂಬಂಧವನ್ನು ಏರ್ಪಡಿಸಬಹುದು.

ಕಾಡುಗೊಲ್ಲರಲ್ಲಿನ ಉಪಪಂಗಡಗಳು ಅಥವಾ ಕುಲಗಳ ಬಗ್ಗೆ ತೀ.ನಂ.ಶಂಕರನಾರಾಯಣ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ. ಕಾಡುಗೊಲ್ಲರಲ್ಲಿ ಉಪವರ್ಗಗಳನ್ನು ಬೆಡಗುಗಳೆಂದು ಕರೆಯುತ್ತಾರೆ. ಚಿತ್ತಮುತ್ತಿ ಕುಲದವರು, ರಾಮೇಗೌಡನ ಕುಲದವರು ಎಂಬ ಮುಖ್ಯವಾದ ವಿಭಾಗಗಳಿವೆ. ಇವುಗಳಲ್ಲಿ ಒಂದೊಂದು ಕುಲದಲ್ಲಿಯೂ ಕೆಲವರು ಬೆಡಗುಗಳಿವೆ. ಆದರೆ ಬೆಡಗುಗಳು ಎಷ್ಟು ಎಂಬುದು ಖಚಿತವಾಗಿ ತಿಳಿಯುವುದಿಲ್ಲ. ಸಣ್ಣ ಓಬಯ್ಯನವರು "ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ" ಬಗ್ಗೆ ಮಾಡಿದ ಪಿಎಚ್.ಡಿ. ಪ್ರಬಂಧದಲ್ಲಿ ಕಾಡುಗೊಲ್ಲರ ಬೆಡಗುಗಳ ಅಥವಾ ಕುಲಗಳ ಬಗ್ಗೆ ಬರೆದಿದ್ದ ಕಾಡುಗೊಲ್ಲರ ಎಪ್ಪತ್ತೂರು ಬೆಡಗುಗಳನ್ನು ಗುರಿತಿಸಲಾಗಿದೆ.

| | |
|---|---|
| ೧. ಅಜ್ಜಿಯವರ ಗೊಲ್ಲರು | ೩೭. ಜಂಪಾಳರ ಗೊಲ್ಲರು |
| ೨. ಅರಸಿನಕಲ್ಲಿ ಗೊಲ್ಲರು | ೩೮. ಜವಾದಿ ಗೊಲ್ಲರು |
| ೩. ಅರೇನವರ ಗೊಲ್ಲರು | ೩೯. ಜಿವಾಜಿ ಗೊಲ್ಲರು |
| ೪. ಉಪ್ಪಳರಗೊಲ್ಲರು | ೪೦. ತೋಳಯಾನೆನ ಗೊಲ್ಲರು |
| ೫. ಎಗಡಿನವರ ಗೊಲ್ಲರು | ೪೧. ದೇವರೊರ ಗೊಲ್ಲರು |
| ೬. ಎಗಡಿಮತ್ತಿನ ಗೊಲ್ಲರು | ೪೨. ನಂದಿಹಳ್ಳಿ ಗೊಲ್ಲರು |
| ೭. ಎರಿಯರ ಗೊಲ್ಲರು | ೪೩. ನರೆನರ ಗೊಲ್ಲರು |
| ೮. ಒಡೆಯವರ ಗೊಲ್ಲರು | ೪೪. ಪಜುಗಾವರ ಗೊಲ್ಲರು |
| ೯. ಒನಕೆಯವರ ಗೊಲ್ಲರು | ೪೫. ಪದ ಗೊಲ್ಲರು |
| ೧೦. ಓಬೇರ ಗೊಲ್ಲರು | ೪೬. ಪನ್ನೇರ ಗೊಲ್ಲರು |
| ೧೧. ಕಂಬೇರ ಗೊಲ್ಲರು | ೪೭. ಪಲ್ಲೇರ ಗೊಲ್ಲರು |
| ೧೨. ಕಟ್ಟಗೇರ ಗೊಲ್ಲರು | ೪೮. ಪಯ್ನೊರ ಗೊಲ್ಲರು |
| ೧೩. ಕರಡಿಗೊಲ್ಲರು | ೪೯. ಬಳಗೊಳಲರ ಗೊಲ್ಲರು |

೧೪. ಕರಡಿಬುಳ್ಳನಾಯ್ಕ ಗೊಲ್ಲರು
೧೫. ಕರಿಮತ್ತಿ ಗೊಲ್ಲರು
೧೬. ಕಲ್ಲಿಗೊಲ್ಲರು
೧೭. ಕವುಕನ ಗೊಲ್ಲರು
೧೮. ಕಹಳೆಯವರ ಗೊಲ್ಲರು
೧೯. ಕಳ್ಳಿ ಗೊಲ್ಲರು
೨೦. ಕಾಳಿನ ಗೊಲ್ಲರು
೨೧. ಕ್ಯಾತನಾರು ಗೊಲ್ಲರು
೨೨. ಕುರಿಯವರ ಗೊಲ್ಲರು
೨೩. ಕೆಂಗುರಿ ಗೊಲ್ಲರು
೨೪. ಕೆಂಚೆಡೆಯವರ ಗೊಲ್ಲರು
೨೫. ಕೆಂಡಗನ ಗೊಲ್ಲರು
೨೬. ಕೋಣನವರ ಗೊಲ್ಲರು
೨೭. ಚಂದಮತ್ತಿ ಗೊಲ್ಲರು
೨೮. ಚನ್ನೇರ ಗೊಲ್ಲರುರು
೨೯. ಚಿತ್ತಮುತ್ತಿ ಗೊಲ್ಲರು
೩೦. ಚಿತ್ತರ ಗೊಲ್ಲರು
೩೧. ಚೀರವರ ಗೊಲ್ಲರು
೩೨. ಸೀಲುವಾಡಿ ಗೊಲ್ಲರು
೩೩. ಸೋಮುತ್ತಿ ಗೊಲ್ಲರು
೩೪. ಹಬ್ಬು ಗೊಲ್ಲರು
೩೫. ಹರೇನೋರ ಗೊಲ್ಲರು
೩೬. ಹೂವಿನಾರು ಗೊಲ್ಲರು
೫೦. ಬಾಲೇನವರ ಗೊಲ್ಲರು
೫೧. ಬುಗುಡಿನವರ ಗೊಲ್ಲರು
೫೨. ಬೆಳ್ಳೋರ ಗೊಲ್ಲರು
೫೩. ಬೊಮಮ್ಮನವರ ಗೊಲ್ಲರು
೫೪. ಮಲಿನಾರ ಗೊಲ್ಲರು
೫೫. ಮೂಜುಲವರ ಗೊಲ್ಲರು
೫೬. ಮಾನೋನು ಗೊಲ್ಲರು
೫೭. ಮಾರನವರ ಗೊಲ್ಲರು
೫೮. ಮಾಸಿನವರ ಗೊಲ್ಲರು
೫೯. ಮುದ್ದಾರು ಗೊಲ್ಲರು
೬೦. ಮೇರೆನವರ ಗೊಲ್ಲರ
೬೧. ಮೆರಿಯೋರ ಗೊಲ್ಲರು
೬೨. ಮೇಶಿಯೋರ ಗೊಲ್ಲರು
೬೩. ರಾಮೇಗೌಡನರ ಗೊಲ್ಲ
೬೪. ರಾಶಿನವರ ಗೊಲ್ಲರು
೬೫. ಸನ್ನಮುತ್ತಿ ಗೊಲ್ಲರು
೬೬. ಸನ್ನರ ಗೊಲ್ಲರು
೬೭. ಸಣ್ಣೇರ ಗೊಲ್ಲರು
೬೮. ಸೋಮನರ ಗೊಲ್ಲು
೬೯. ಹಟ್ಟಿ ಗೊಲ್ಲರು
೭೦. ಹಬ್ಬೊಳ ಗೊಲ್ಲರು
೭೧. ಹುರುಳೀಯವರ ಗೊಲ್ಲರು
೭೨. ಹೆಗ್ಗಣವರ ಗೊಲ್ಲರು

(ಗುರುಲಿಂಗಯ್ಯ ಎಂ., ನಾಗಪ್ಪ ವಿ., ೨೦೦೮:೨೯)

ಒಂದು ಮಂಕ್ರಿ, ಇದರಲ್ಲಿ ಬ್ಯಾಟರಿ, ಕನ್ನಡಿ, ಬಾಚಣಿಗೆ, ಮಸಾಲೆ ಪದಾರ್ಥಗಳು ಪಕ್ಕದಲ್ಲಿ ಭತ್ಯವು ಗಂಟುಗಳು, ಬಲೆ, ಟಾರ್ ಪಾಲ್, ಕಲ್ಲುಗಳು, ಒಂದು ಹಳೆಯ ಪೆಟಾರ, ಇದರಲ್ಲಿ ಆರ್ಯುವೇದ ಔಷಧಕ್ಕೆ ಸಂಬಂಧಿಸಿದ ಸೊಪ್ಪುಗಳ ಪುಡಿ, ಇವೆಲ್ಲವನ್ನು ಎಂಟು ಕಲ್ಲುಗಳನ್ನು ನಾಲ್ಕು ದಿಕ್ಕುಗಳಲ್ಲಿ ಇಟ್ಟು ಅದರ ಮೇಲೆ ಅಡಿಕೆ ದಬ್ಬೆಗಳನ್ನು ಜೋಡಿಸಿ ಅದರ ಮೇಲೆ ಇವುಗಳೆಲ್ಲವನ್ನು ಹೇರಿರುತ್ತಾರೆ. ಪಕ್ಕದಲ್ಲೇ ಮೂರು ಗುಂಡುಗಳ ಒಲೆ, ಒಂದು ಅಡಿಯ ಉದ್ದ, ಒಂದುವರೆ ಅಡಿ

ಅಗಲದ ಬಂಡೆ, ಐದು ಕಿಲೋ ಗ್ರಾಂನ ಒಂದು ಅಡಿ ಉದ್ದದ ದುಂಡನೆ ರುಬ್ಬುವ(ರೋಣ) ಗುಂಡು ಇವೆಲ್ಲಾ ಗೂಡೆಯ ಪಕ್ಕದಲ್ಲಿ ಇರುತ್ತವೆ. ಹಾಗೂ ಅದರ ಸುತ್ತಾ ಆರು ಬೆಣೆಗಳು ಇವುಗಳ ಮೇಲೆ ಟಾರ್‌ಪಲ್‌ಗಳ ಗುಡಾರವನ್ನು ಹೂಡಿರುತ್ತಾರೆ. ಅದರ ಮುಂದೆ ಹರಿದ, ಮಾಸಿದ, ಕೆದರಿದ ತಲೆ, ಎಷ್ಟೋ ದಿನಗಳಾದರೂ ನೀರು ಕಾಣದ ಮೈ, ಅಲೆಮಾರಿ ಕಾಡುಗೊಲ್ಲ ಕುರಿಗಾರರ ಮಹಿಳೆಯರು, ಚಿಕ್ಕ ಚಿಕ್ಕ ಮಕ್ಕಳೊಂದಿಗೆ ನೆರಳಲ್ಲಿ ಕುರಿಮರಿಗಳನ್ನು ನೋಡಿಕೊಂಡು ಕಾಲ ಕಳೆಯುತ್ತಿರುತ್ತಾರೆ.

ಈ ಸಮುದಾಯದ ಗಂಡಸರು, ಪಟಾಪಟಿ ಅಥವಾ ಖಾಕಿ ನಿಕ್ಕರ್ ಮೊಳಕಾಲಿನವರೆಗೆ ಇಳಿಬಿಟ್ಟಿರುವುದು, ಅದರ ಮೇಲೆ ಬಿಳಿ ಕಾಟನ್ ಲುಂಗಿಯನ್ನು ನಿಕ್ಕರ್ ಕಾಣುವ ಹಾಗೆ ಕಟ್ಟಿಕೊಂಡು, ಬಿಳಿ ಬಣ್ಣದ ಮೊಸಲು ಬಟ್ಟೆಯಾಗಿರುತ್ತದೆ. ಮುಕ್ಕಾಲು ಭಾಗ ತೋಳಿನ ಅಂಗಿ, ಅದಕ್ಕೆ ಮೂರು ಗುಂಡಿ ಅದಕ್ಕೊಂದು ದೊಡ್ಡ ಜೇಬು, ಅದರ ಒಳಗೆ ಅದರಡಿಗೆ ಮತ್ತೊಂದು ಜೇಬು ಹಾಗೂ ಅಡಿಕೆಲೆಯನ್ನು ಹಾಕಿಕೊಳ್ಳಲು ಕಳ್ಳಿ ಜೇಬು. ಕಿವಿಯಲ್ಲಿ 'ಹಾರೆಮುರ' ಅಥವಾ ಬೆಂಡೋಲೆಗಳನ್ನು ಧರಿಸಿರುತ್ತಾರೆ. ಕಾಲಿಗೆ ಮೂತಿಮೆಟ್ಟುಗಳನ್ನು ಧರಿಸಿಕೊಂಡು, ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಕೆಲವರು ಹೆಗಲ ಮೇಲೆ 'ಸಿಪ್ಪುಕೊಡಲಿ' ಇಟ್ಟುಕೊಂಡು ಅದರ ತುದಿಗೆ 'ಸಿಕ್ಕ' (ಊಟದ ಬುಟ್ಟಿ) ನೇತಾಕಿಕೊಂಡು ನಡೆಯುತ್ತಿದ್ದರೆ, ದೇವರು ಕುರಿಯನ್ನೇ ಕಾಯಲು ಇವರಿಗೆ ಜನ್ಮ ನೀಡಿದ್ದಾರೆಂಬ ಭಾವನೆ ಬೇರೂರುತ್ತದೆ. ಅಂತಹ ರೀತಿಯಲ್ಲಿ ಅವರ ವಸ್ತ್ರವಿನ್ಯಾಸ ಇರುತ್ತದೆ. ಇದು ಅಲೆಮಾರಿ ಕಾಡುಗೊಲ್ಲರ ಸಾಮಾನ್ಯ ಚಹರೆಗಳು. ಹಾಗೂ ಸಾಮಾನ್ಯ ಜೀವನದ ಪ್ರಮುಖ ಲಕ್ಷಣಗಳೆನ್ನಬಹುದು.

ಅಲೆಮಾರಿ ಕುರಿಗಾರರ ಜೀವನದ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಅವರ ವಯಸ್ಸಿಗನುಗುಣವಾಗಿ ಕೆಲಸಗಳನ್ನು ವಿಭಾಗಿಸಲಾಗುತ್ತದೆ. ಆದ್ದರಿಂದ ಇಲ್ಲಿ ಯಾರು ಯಾರಿಗೂ ಹಿರಿಯರಲ್ಲ, ಕಿರಿಯರಲ್ಲ ಹಾಗೂ ಬುದ್ಧಿವಂತರಲ್ಲ, ದಡ್ಡರಲ್ಲ, ಅವರವರ ಕೆಲಸಗಳು ಕೇವಲ ಆಜ್ಞಾಪೂರಕವಾಗಿ ನಡೆಸಿಕೊಂಡು ಹೋಗುತ್ತಾರೆ. ಆದ್ದರಿಂದ ಈ ಕುಲ ಕಸುಬು ತಾತಾ, ಮುತ್ತಾತಂದಿರ ಕಾಲದಿಂದ ಸುಸೂತ್ರವಾಗಿ ನಡೆದುಕೊಂಡು ಬರುತ್ತಿದೆ. ಅವರಿಗೆ ಅವರ ಕಸುಬೇ ದೈವ, ಜೀವ, ಅದರಲ್ಲೇ ಆನಂದ, ಕಷ್ಟ, ನಷ್ಟ. ಹೀಗೆ ಜೀವನದ ಎಲ್ಲಾ ರೀತಿಯ ಕಾರಣ ಕಾರ್ಯಗಳನ್ನು ಈ ಕಾಯಕದಲ್ಲಿ ಕಂಡುಕೊಳ್ಳುತ್ತಾರೆ. ಆದ್ದರಿಂದ ಕುರಿಸಂಗೋಪನೆಯು ಕಾಡುಗೊಲ್ಲರ ಪಾರಂಪರಿಕ ಕಸುಬನ್ನಾಗಿಸಿಕೊಂಡಿದ್ದಾರೆ.

ಪ್ರತಿದಿನ ಬೆಳಗಿನ ಐದು ಗಂಟೆಯ ಮುಂಜಾವಿನಿಂದ ಆರಂಭವಾಗುವ ಇವರ ಜೀವನ, ಒಂದು ಚೆಂಬು(ಒಂದು ಲೀಟರ್) ನೀರಿನಿಂದ ಇದ್ದಿಲು, ಮೆತ್ತನೆಯ ಮಣ್ಣು ಅಥವಾ ಬೇವಿನ ಕಡ್ಡಿಯಿಂದ ಹಲ್ಲನ್ನು ಸ್ವಚ್ಛಗೊಳಿಸಿದರೂ ಸರಿ, ಇಲ್ಲಾ ಅಂದ್ರೂ ಸರಿಯೇ ಎನ್ನುವ ಹಾಗೇ ಜೀವನ ನಿತ್ಯ ಕರ್ಮಗಳೊಂದಿಗೆ ಆರಂಭವಾಗುತ್ತದೆ. ಗಂಡಸರು ಟೀ, ಕಾಫಿ, ಪಾನೀಯಗಳಿಗೆ ಹಾಲನ್ನು ಹಿಂಡುವ ಇವರು ಮುಖ ತೊಳೆದುಕೊಂಡು ಸೂರ್ಯನಿಗೆ ನಮಸ್ಕಾರ ಮಾಡಿ ಹಾಗೂ ಕುರಿಯ ಕೆಚ್ಚಲಿನ ಹಾಲನ್ನು

ಹಿಂಡುವಾಗ ಅದಕ್ಕೂ ಕೈ ಮುಗಿಯುತ್ತಾರೆ. ಮಹಿಳೆಯರೂ ಅದೇ ರೀತಿಯಲ್ಲಿ ಒಲೆಯನ್ನು ಮುಟ್ಟಿ ಕೈಮುಗಿದು ತಮ್ಮ ಅಡಿಗೆ ಕೆಲಸಗಳನ್ನು ಆರಂಭಿಸುತ್ತಾರೆ. ಆದರೆ ಇವರು ಎಂದಿಗೂ ಸ್ನಾನ ಮಾಡಿಯೇ ಕೆಲಸಗಳನ್ನು ಆರಂಭಿಸಬೇಕೆಂಬ ನಿಯಮವಿಲ್ಲ. ಏಕೆಂದರೆ ಇವರಿಗೆ ವಿಶ್ರಾಂತಿ ಎನ್ನುವುದು ರಾತ್ರಿ ಮಲಗಿದಾಗಲೇ ವಿನಃ ಅದಕ್ಕೂ ಮುಂಚಿತವಾಗಿ ಅದಕ್ಕೆ ಅರ್ಥವನ್ನು ಕೇಳುತ್ತಾರೆ.

ಸಾಮಾನ್ಯವಾಗಿ ಕಾಡುಗೊಲ್ಲರಲ್ಲಿ ಅವಿಭಕ್ತ ಕುಟುಂಬಗಳನ್ನು ಇಂದಿಗೂ ಕಾಣಬಹುದಾಗಿದೆ. ಶಿರಾ ತಾಲ್ಲೂಕಿನಾದ್ಯಂತ ಅವಿಭಕ್ತ ಕುಟುಂಬಗಳೇ ಹೆಚ್ಚು. ಆದರೂ ಇತ್ತೀಚೆಗೆ ಕಡಿಮೆಯಾಗುತ್ತವೆ. ಪ್ರಮುಖವಾಗಿ ವ್ಯವಸಾಯದ ಜೊತೆಗೆ ಪಶುಸಂಗೋಪನೆಯಂತಹ ಕಸುಬುಗಳನ್ನು ಅವಲಂಬಿಸಿರುವುದರಿಂದ ಇವರಲ್ಲಿ ಹೆಚ್ಚು ದನ, ಕುರಿ ಕಾಯಲು, ವ್ಯವಸಾಯದ ಕೆಲಸಗಳಿಗೆ, ಮನೆಯ ಕೆಲಸ ನೋಡಿಕೊಳ್ಳಲು ಹೆಚ್ಚು ಹೆಚ್ಚು ಜನರ ಅವಶ್ಯಕತೆ ಇರುವ ದೃಷ್ಟಿಯಿಂದ ಹೆಚ್ಚು ಜನರ ಅವಶ್ಯಕತೆ ಇತ್ತು. ಹೀಗಾಗಿ ಒಬ್ಬರು ಒಂದೊಂದು ರೀತಿಯ ಕೆಲಸ, ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಇಂದಿಗೂ ಹೆಣ್ಣು ಮಕ್ಕಳು ಕುರಿಕಾಯಲು ಮತ್ತು ವ್ಯವಸಾಯದಲ್ಲಿ ನೆರವಾಗುತ್ತಿದ್ದಾರೆ. ಕಾಡುಗೊಲ್ಲರಲ್ಲಿ ಹೆಣ್ಣು ಗಂಡುಗಳ ನಡುವೆ ಅಷ್ಟೇನು ತಾರತಮ್ಯ ಕಾಣುವುದಿಲ್ಲ. ಎಲ್ಲರೂ ಸಮಾನರೆಂಬ ಭಾವನೆ ಕಾಣುತ್ತದೆ. ಮೂಲತಃ ಇವರಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಇರುವುದರಿಂದ ಈಗಲೂ ಇಲ್ಲಿ ಕೆಲಸ ಕಾರ್ಯಗಳಲ್ಲಿ ಹೆಂಗಸರು ನೆರವಾಗುತ್ತಾರೆ.

ಮಕ್ಕಳ ವಿಚಾರದಲ್ಲಿ ಇವರಿಗೆ ಸಾಕೆಂಬುದೇ ಇಲ್ಲ. ಆದ್ದರಿಂದ ಇವರಲ್ಲಿ ಮಕ್ಕಳು ಹೆಚ್ಚಾಗಿದ್ದರೆ, "ಹುಟ್ಟಿದ ದೇವರು ಹುಲ್ಲು ಮೇಯಿಸಲ್ಲ" "ಮಳೆ ಬಂದರೆ ಕೇಡೆ, ಮಕ್ಕಳಾದರೆ ಕೇಡೆ" ಎಂಬ ಗಾದೆ ಮಾತನ್ನು ಇವರೆ ಕಟ್ಟಿರಬಹುದು. ಕುರಿಕಾಯಲು, ದನ ಕಾಯಲು ಅವರಿವರನ್ನು ಜೀತಕ್ಕೆ ಇಟ್ಟುಕೊಳ್ಳುವ ಬದಲು ತಮಗೆ ಮಕ್ಕಳಾದರೆ ಇನ್ನು ಒಳ್ಳೆಯದಲ್ಲವೆ ಎನ್ನುತ್ತಾರೆ.

ಇಂದು ಹೆಣ್ಣು ಹುಟ್ಟಿದರೆ ಒಂದು ಸಮಸ್ಯೆಯಾಗಿ ಪರಿಣಮಿಸುವ ಕುಟುಂಬಗಳು ಹೆಚ್ಚು. ಆದರೆ ಕಾಡುಗೊಲ್ಲರಲ್ಲಿ ಯಾವುದೇ ರೀತಿಯಲ್ಲಿಯೂ ಆತಂಕ ಪಡುವುದಿಲ್ಲ. ಅವರಿಗೆ ಮದುವೆ ಒಂದು ಸಮಸ್ಯೆ ಅಲ್ಲ, ಏಕೆಂದರೆ ಅತಿ ಹೆಚ್ಚು ಕಾಡುಗೊಲ್ಲರ ವಿವಾಹಗಳು ಸಂಬಂಧಿಗಳ ಮಧ್ಯೆ ನಡೆಯುವುದರಿಂದ ಬೇರೆ ಕಡೆಗೆ ವರ-ವಧುಗಳನ್ನು ಹುಡುಕುವ ಅವಶ್ಯಕತೆ ಇರುವುದಿಲ್ಲ. ಹಾಗೂ ವರದಕ್ಷಿಣೆಯ ಸಮಸ್ಯೆಯು ಇರುವುದಿಲ್ಲ. ಆದರೆ ಇಂದು ಹಲವಾರು ಕಡೆ ಶಾಲೆಗಳಲ್ಲಿ ಬುದ್ಧಿಮಾಂದ್ಯ ಮಕ್ಕಳು ಕಂಡುಬಂದಿದ್ದಾರೆ. ಏಕೆಂದರೆ ವೈಜ್ಞಾನಿಕವಾಗಿ ಸಂಶೋಧನೆಯ ಪ್ರಕಾರ ಒಳರಕ್ತ ಸಂಬಂಧಗಳಲ್ಲಿ ವಿವಾಹವಾದರೆ ಹುಟ್ಟುವ ಮಕ್ಕಳು ಈ ರೀತಿ ಹುಟ್ಟುತ್ತಾರೆಂದು ದೃಢಪಟ್ಟಿರುವುದರಿಂದ ಅಲ್ಲಲ್ಲಿ ಕಂಡುಬಂದಿದೆ. ಗಂಡ ಸತ್ತಾಗ ಕಾಡುಗೊಲ್ಲ ಹೆಂಗಸರು ತಾಳಿಯನ್ನು ತೆಗೆಯುವುದಿಲ್ಲ. ಏಕೆಂದರೆ ಅವರ ನಂಬಿಕೆಯ ಪ್ರಕಾರ ತಾವು ಮದುವೆಯಾದ ಗಂಡ ಲೌಕಿಕ ಗಂಡ, ಅಲೌಕಿಕ ಗಂಡ ಕೃಷ್ಣ ಪರಮಾತ್ಮ

ಎಂಬ ನಂಬಿಕೆಯಿಂದ ಇವರು ನಿತ್ಯಮುತ್ತೈದೆಯಾಗಿರುತ್ತಾರೆ. ಆದರೂ ಇದನ್ನೆಲ್ಲಾ ಪಕ್ಕಕ್ಕೆ ಇಟ್ಟು ನೋಡಿದಾಗ ಇಂದಿಗೂ ಸಹ, ಕಾಡುಗೊಲ್ಲ ಸಮುದಾಯಗಳ ಕುಟುಂಬಗಳಲ್ಲಿ ಗಂಡ ಹೆಂಡತಿಯರ ಮಧ್ಯೆ ಅನ್ಯೋನ್ಯ ಸಂಬಂಧ, ಪ್ರೀತಿಗಳಿಂದಲೆ ಇಂದು ಅವಿಭಕ್ತ ಕುಟುಂಬಗಳಿವೆ. ಶಿರಾ ತಾಲ್ಲೂಕಿನ ಬೇವಿನಹಳ್ಳಿಯಲ್ಲಿ ಒಂದೊಂದು ಕುಟುಂಬದಲ್ಲಿ ಇಪ್ಪತ್ತರಿಂದ ಮೂವತ್ತರವರೆಗಿನ ಕುಟುಂಬ ಸದಸ್ಯರನ್ನು ಕಾಣಬಹುದಾಗಿದೆ. ಈ ಕುಟುಂಬಗಳಲ್ಲಿ ಮಕ್ಕಳು ಹೆಂಗಸರೇ ಇರುತ್ತಾರೆ. ಎಂತಹ ಸಮಯದಲ್ಲೂ ಹೆಂಗಸರಿಗೆ ಕಷ್ಟ ಬರದ ಹಾಗೆ ನೋಡಿಕೊಳ್ಳುವುದರಿಂದಲೇ ಗಂಡ ಸತ್ತರೂ ಹೆಂಗಸರು ತಾಳಿ ತೆಗೆಯುವುದಿಲ್ಲವೆಂದರೆ, ಅವರ ಮೇಲಿದ್ದ ಪ್ರೀತಿಯೆ ಕಾರಣ. ಈ ಎಲ್ಲಾ ಅಂಶಗಳಿಂದ ಕಾಡುಗೊಲ್ಲ ಸಮುದಾಯದಲ್ಲಿ ಗಂಡ ಸತ್ತ ವಿಧವೆಯರನ್ನು ಯಾವುದೇ ಕಾರಣಕ್ಕೂ ಹೀನಾಯವಾಗಿ ನಡೆಸಿಕೊಳ್ಳದೇ ಇರುವ ಈ ಸಮುದಾಯವು ನಿಜಕ್ಕೂ ಆದರ್ಶ ಪ್ರಾಯವಾಗಿ ಕಾಣಬಹುದಾಗಿದೆ(ಮಾಹಿತಿ: ಚಿತ್ತಮ್ಮ, ಮೇಣಿಗನಹಟ್ಟಿ).

ಇನ್ನೂ ಗಂಡು ಮಕ್ಕಳ ವಿಚಾರಕ್ಕೆ ಬಂದರೆ, ಶಿರಾ ತಾಲ್ಲೂಕಿನಾದ್ಯಂತ(ವಿಶೇಷವಾಗಿ ಕೆಲವೊಂದು ಕುಟುಂಬದ ಹಿರಿಯರನ್ನು ಸಂದರ್ಶಿಸಿದಾಗ, ಎಷ್ಟೇ ಓದಿದರೂ ಕೆಲಸ ಸಿಗೋಲ್ಲ, ಅವರನ್ನು ವಿದ್ಯಾಭ್ಯಾಸ ಮಾಡಿಸಬೇಕಾದರೆ ಖರ್ಚು. ಅದರ ಬದಲಿಗೆ ಅಷ್ಟು ವರ್ಷಗಳು ಕುರಿಕಾದರೆ ಹತ್ತು ಪಟ್ಟು ಕುರಿ ಸಂಪಾದನೆ ಮಾಡಬಹುದು. ಅದರಿಂದ ಅವನು, ಅವನ ಮಕ್ಕಳು ಮೊಮ್ಮಕ್ಕಳ ಕಾಲಕ್ಕೂ ಜೀವನ ಸಾಗಿಸಬಹುದುದೆಂದು ಹೇಳಿದ್ದಾರೆ.) ಇಂದಿಗೂ ಕುರಿಕಾಯುವುದಕ್ಕೆ ತೊಡಗಿಸುವುದಕ್ಕೆ ಗಂಡು ಮಕ್ಕಳನ್ನು ಪ್ರೇರೇಪಿಸುತ್ತಿದ್ದಾರೆ. ಆದ್ದರಿಂದ ಅವರ ಮಕ್ಕಳ ಉದ್ಯೋಗದ ಬಗ್ಗೆ ಯೋಚಿಸುವುದೇ ಕಡಿಮೆ ಎಂದು ಹೇಳಬಹುದು. ಆದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನನ್ನ ಮಗ ಇಂಜಿನಿಯರ್, ಡಾಕ್ಟರ್ ಆಗಬೇಕೆಂದು ಕನಸು ಕಾಣುವ ತಂದೆ ತಾಯಿಗಳಲ್ಲಿ ನಮ್ಮ ಮಕ್ಕಳು ನಮ್ಮ ಕಣ್ಣ ಮುಂದೆ, ಮನೆಯ ಕೆಲಸ ನಿರ್ವಹಿಸಿಕೊಂಡು ಇರು ಎಂದು ಹೇಳುವ ಇವರೆಲ್ಲಿ?

### ೪.೩.೨. ಅಲೆಮಾರಿ ಜೀವನದಲ್ಲಿ ಕುರಿ ಸಂಗೋಪನೆ

ಕುರಿಯ ದೇಹವು ಸೂಕ್ಷ್ಮವಾದುದು, ಅಲ್ಲದೆ ಕೋಮಲತೆಯಿಂದ ಕೂಡಿದಾಗಿದೆ. ಅವುಗಳಿಗೆ ಅಂಟು-ಮುಂಟು ಹಾಗೂ ಮುಟ್ಟಾದವರ ನೆರಳು ಸಹ ತಾಗದಂತೆ ಅತೀ ಎಚ್ಚರಿಕೆಯನ್ನು ವಹಿಸುತ್ತಾರೆ. ಮಳೆಗಾಲದಲ್ಲಿ ಮಾತ್ರ ಊರುಗಳ ಹತ್ತಿರ ರೊಪ್ಪಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಮಳೆಗಾಲ ಕಳೆದು ದೀಪಾವಳಿಯ ಹೊತ್ತಿಗೆ ಮೇವು ನೀರು ದೊರೆಯುವ ಹೊಸನೆಲೆಗಳನ್ನು ಹುಡುಕುತ್ತಾ ದೂರದ ಊರುಗಳಾದ ಚನ್ನರಾಯಪಟ್ಟಣ, ಬಾಣಾವರ, ಹಾಸನ, ಹಳೇಬೀಡು, ಬೇಲೂರು, ಹರಿಹರ, ದಾವಣಗೆರೆ, ಭದ್ರಾವತಿ, ಶಿವಮೊಗ್ಗ, ಬಾಳೆಹೊನ್ನೂರು, ಧರ್ಮಸ್ಥಳ, ಆಗುಂಬೆ ಮುಂತಾದ

ಭಾಗಗಳಲ್ಲಿ ಹಾಗೂ ಸಂಪೂರ್ಣ ಅವಧಿಯ ಅಲೆಮಾರಿಗಳು ಹೆಚ್ಚಾಗಿ ಮೈಸೂರಿನ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಶಿರಾ, ಮಾದೇನಹಳ್ಳಿ, ಶ್ರೀರಾಂಪುರ, ಹಾಗಲವಾಡಿ, ಸಿಂಗದಳ್ಳಿ, ಕೂರಕೊಂಡ್ಲಿಕ್ರಾಸು, ಅಮ್ಮಸಂದ್ರ, ಕಡವಳ್ಳಿ, ಬೆಳಗುನೂಲು, ಬಿದರಕೆರೆ, ನಾಗಮಂಗಲ, ಬೆಳ್ಳೂರು, ಮಾರಸಂದ್ರ, ಕೆ.ಆರ್.ಪೇಟೆ, ಸಾಲಿಗ್ರಾಮ, ಬೇರ್ಯಾ, ಕೆ.ಆರ್.ನಗರ, ಹುಣಸೂರು, ದರ್ಗ ಒಂದು ಮಾರ್ಗವಾದರೆ ಮತ್ತೊಂದು ಮಾರ್ಗವೆಂದರೆ ಕುಶಾಲ ನಗರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಮಡಿಕೇರಿ, ಬಸ್ಸಾಪುರ, ಕಂಪ್ಲಾಪುರ, ಸಿಲಕುಂದ.

ಕೆಲವು ಗುಂಪುಗಳು ಹಿರಿಯೂರು, ಶಿರಾ ತಾಲ್ಲೂಕಿನಾದ್ಯಂತ ಹುಳಿಯಾರು ಹಾಗೂ ತಿಪಟೂರು, ಚಿಕ್ಕನಾಯಕನಹಳ್ಳಿ, ತಾಲ್ಲೂಕಿನಾದ್ಯಂತ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಇದರಲ್ಲಿ ಶಿರಾ ತಾಲ್ಲೂಕಿನ ಬೇವಿನಹಳ್ಳಿ, ಹೊಸೂರು ಮುದ್ದೇನಹಳ್ಳಿ, ಗೊಲ್ಲರಹಟ್ಟಿಗಳು ಪ್ರಮುಖವಾಗಿವೆ.

"ಅಲೆಮಾರಿ ಕುರಿಗಾರರು ಅನುಭವಿಸುವ ಕಷ್ಟ ದೇವರಿಗೆ ಮುಟ್ಟದೆ" ಎಂದು ಅವರು ತಮ್ಮ ನೋವುಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಪ್ರತಿ ಊರು, ಪ್ರತಿ ಪ್ರದೇಶ ಹೊಸ ಹೊಸ ರೀತಿಯ ಹೊಸ ಹೊಸ ಜನರನ್ನು ಪರಿಚಯಿಸುತ್ತಾ ಹೋಗುವ ಇವರ ಬದುಕು, ಮುಳ್ಳಿನ ಹಾಸಿಗೆಯೋಪಾದಿಯಲ್ಲಿರುತ್ತದೆ. ಪ್ರತಿದಿನ, ಪ್ರತಿರಾತ್ರಿಗಳು ಆತಂಕದ ನಡುವೆಯೇ ಜೀವನ ಸವೆಸಬೇಕಾಗುತ್ತದೆ ರಾತ್ರಿಯ ವೇಳೆ ಕಳ್ಳರ ಭಯ, ಕಿರುಬನ ಭಯ, ತೋಳಗಳ ಕಾಟ ಸಹ ಹೇರಳವಾಗಿರುತ್ತದೆ. ಇದರಿಂದ ಇವರು ರಾತ್ರಿಯಲ್ಲಿ ರಕ್ಷಣೆ ಪಡೆಯಲು ಕುರಿಮಂದೆಯ ಸುತ್ತ ಬಲೆಯನ್ನು ಹೂಡುತ್ತಾರೆ. ಸುತ್ತಾ ಬೇಲಿಯೋಪಾದಿಯಲ್ಲಿ 'ಗೂಟ'ಗಳನ್ನು ನೆಡುತ್ತಾರೆ.(ಹೂಳುತ್ತಾರೆ) ಅದರ ಸುತ್ತಾ ಬಲೆಗಳನ್ನು ಹಾಕುತ್ತಾರೆ. ರಾತ್ರಿ ಒಂಬತ್ತು ಗಂಟೆಗೆ ಸರ್ತೆ(ಪಹರೆ) ಶುರುವಾಗುತ್ತದೆ. ಹನ್ನೆರಡು ಗಂಟೆಯವರೆಗೆ ಮತ್ತು ಮೂರು ಗಂಟೆಯವರೆಗೆ ನಂತರ ಆರು ಗಂಟೆಯವರೆಗೂ ಸರ್ತೆ ಕಾಯಬೇಕು. ಇವರು ಪ್ರತಿಯೊಂದು ದಿಕ್ಕಿನಲ್ಲಿ ಕಂಬಳಿಯನ್ನು ಹೊದ್ದು ಕಾವಲು ಕೂರುತ್ತಾರೆ. ಜೊತೆಗೆ ಪ್ರತಿಯೊಬ್ಬರ ಹತ್ತಿರ ಒಂದೊಂದು ನಾಯಿಯನ್ನು ಜೊತೆಯಲ್ಲಿ ಇಟ್ಟುಕೊಂಡಿರುತ್ತಾರೆ. ನಾಯಿಗಳು ಅತ್ಯಂತ ಸೂಕ್ಷ್ಮತೆಯಿಂದ ಎಚ್ಚರವಹಿಸುತ್ತವೆ. ರಾತ್ರಿಯ ಸಮಯದಲ್ಲಿ ಯಾರೆ ಹೊಸಬರು ಬಂದರೆ ಸಾಮಾನ್ಯವಾಗಿ ಬಿಡುವುದಿಲ್ಲ. ಏಕೆಂದರೆ ಅವುಗಳು ಅಷ್ಟೊಂದು ಎಚ್ಚರಿಕೆಯಿಂದ ಕಾವಲು ಕಾಯುತ್ತವೆ. ಸಾಮಾನ್ಯವಾಗಿ ಯಾರನ್ನು ಸೇರಿಸುವುದಿಲ್ಲ. ಇನ್ನು ಪ್ರತಿ ಕುರಿಯ ಮಂದೆಯಲ್ಲಿ ಕತ್ತೆಗಳನ್ನು ಸಾಮಾನುಗಳ 'ಹೇರು'ಗಳನ್ನು ಹೊತ್ತೊಯ್ಯಲು ಸಾಕಿ ಕೊಂಡಿ ರುತ್ತಾರೆ. ಅವು ತೋಳ ಮತ್ತು ಕಿರುಬಗಳು ಬಂದಾಗ ವಾಸನೆಯಿಂದ ಸೂಕ್ಷ್ಮವಾಗಿ ಗ್ರಹಿಸಿ ಜೋರಾಗಿ ಶಬ್ದ ಮಾಡುತ್ತವೆ. ಅಂತಹ ಸಮಯದಲ್ಲಿ ಕುರಿಗಳಿಗೆ ರಕ್ಷಣೆ ಹೊದಗಿಸುತ್ತವೆ. ಅಲ್ಲದೆ ಇವುಗಳನ್ನು ತೋಟಗಳಲ್ಲಿ ತೆಂಗಿನ ಮರಕ್ಕೆ ಕಟ್ಟುತ್ತಾರೆ. ಪ್ರತಿ ರಾತ್ರಿಗೆ ಐದು ರೂ. ಒಂದುಕತ್ತೆಗೆ ನೀಡುತ್ತಾರೆ.

ಏಕೆಂದರೆ ಇದರ ಗಂಜಳ, ಲದ್ದಿಯಲ್ಲಿ ಯೂರಿಯ ಅಂಶದಿಂದ ಮರಗಳ ಬೆಳವಣಿಗೆಗೆ ಹೆಚ್ಚು ಅನುಕೂಲವಾಗುತ್ತದೆ. ಇಂತಹ ಕೆಲಸಗಳಿಗೆ ಕತ್ತೆಗಳನ್ನು ಐವತ್ತರಿಂದ ನೂರು ಕತ್ತೆಗಳನ್ನು ಸಾಕಿರುವುದನ್ನು ಶಿರಾ ತಾಲ್ಲೂಕಿನ ಮರಡಿಗುಡ್ಡ, ರಾಮಲಿಂಗಾಪುರ, ತಿಪಟೂರಿನಲ್ಲಿ ಕತ್ತೆ ಕರಿಯಣ್ಣ ಅತ್ಯಂತ ಪ್ರಸಿದ್ಧಿಯಾದ ವ್ಯಕ್ತಿಯಾಗಿದ್ದಾರೆ. ಇವರು ಸಹ ಊರೂರಿಗೆ ಅಲೆಯುತ್ತ ತೋಟಗಳಿಗೆ ಕತ್ತೆಗಳನ್ನು ಕಟ್ಟುವ ಕಾರ್ಯದಲ್ಲಿ ತೊಡಗಿದ್ದಾರೆ.

ಇನ್ನೂ ರಾತ್ರಿಯ ವೇಳೆ ಹಾಗೂ ಹಗಲು ಹೊತ್ತಿನಲ್ಲೇ ಕಳ್ಳತನದ ಬಗ್ಗೆ ರೋಚಕತೆಯನ್ನು ನೋಡಬಹುದು. ಕುರಿಮಂದೆಯಿಂದ ಕುರಿಮರಿಗಳನ್ನು ಬೇರ್ಪಡಿಸಿ ಮೇಯಿಸುತ್ತಾರೆ. ಚಿಕ್ಕಮಂಗಳೂರು, ಶಿವಮೊಗ್ಗ ಜಿಲ್ಲೆಗಳಾದ್ಯಂತ ಮೇಯಿಸುವ ಸಮಯದಲ್ಲಿ ಮಧ್ಯಾಹ್ನ, ಸಾಯಂಕಾಲದ ಹೊತ್ತಿನಲ್ಲಿ ನೀರು ಕುಡಿಸಲು, ಕಾಲುವೆ, ಕೆರೆ, ಕುಂಟೆಗಳಿಗೆ ಹೋದಾಗ ಅಲ್ಲಿ ಮಹಿಳೆಯರು, ಪುರುಷರು, ಮೀನು ಹಿಡಿಯುವ ನೆಪದಲ್ಲಿ ಅಲ್ಲಿಗೆ ಕುರಿಮರಿ ಬರುವ ದಾರಿಯನ್ನು ಕಾಯುತ್ತಿರುತ್ತಾರೆ. ಅಲ್ಲಿಂದ ಬಂದ ಕುರಿಮರಿಯನ್ನು ನೀರಿನಲ್ಲಿ ಕಾಲಿನಲ್ಲೇ ತುಳಿದುಕೊಂಡು ನೀರಿನಲ್ಲಿ ನಿಂತಿರುತ್ತಾರೆ. ಅದರೆ ಇದನ್ನು ಸೂಕ್ಷ್ಮವಾಗಿ ಗಮನಿಸದೆ ಹೋದರೆ ಆ ವಸ್ತು ನಮ್ಮದಲ್ಲ. ಇದೇ ರೀತಿ ರಾತ್ರಿಯ ವೇಳೆ ಚಡ್ಡಿಯೊಂದನ್ನು ಧರಿಸಿ ಮೈ ತುಂಬಾ ತಂಕಟೆ, ಸೊಪ್ಪನ್ನು ಸುತ್ತಿಕೊಂಡು ಉರುಳು ಸೇವೆಯೋಪಾದಿಯಲ್ಲಿ ಉರುಳುತ್ತಾ ಕುರಿ ಮಂದೆಯ ಹತ್ತಿರಕ್ಕೆ ಬರುತ್ತಾರೆ. ಅದೇ ರೀತಿಯಲ್ಲಿ ಕುರಿಗಳನ್ನು ಹಿಡಿದು, ಅದರ ನಾಲಿಗೆಗೆ ಕಾರೇಮುಳ್ಳುಗಳನ್ನು ಚುಚ್ಚಿ ಹರಚಿದಂತೆ ಮಾಡಿ ಅದನ್ನು ಉರುಳಿಸುತ್ತಾ ಕೊಂಡೊಯ್ಯುವ ಮಹಾ ಚತುರ ಕಳ್ಳರನ್ನು ಸಹ ಅಲೆಮಾರಿ ಕುರಿಕಾರರು ಹಿಡಿದು ತಕ್ಕ ಶಿಕ್ಷೆಯನ್ನು ನೀಡಿದ್ದನ್ನು ಕಣ್ಣಾರೆ ಕಂಡಿದ್ದೇನೆ.

ಇನ್ನೂ ಉಳಿದಂತೆ ಇವರು ಕುರಿ ಮೇಯಿಸಲು ಮಂದೆಯಿಂದ ಹೊರ ಹೋದಾಗ ಅನುಭವಿಸು ವಂತಹ ಸಮಸ್ಯೆಗಳೆಂದರೆ, ಇವರು ಅಲೆಮಾರಿಗಳೆನ್ನುವುದು ಹಾಗೂ ಬೇರೆಯ ಕಡೆಯಿಂದ ಬಂದವ ರಾಗಿದ್ದರಿಂದ ಸ್ಥಳೀಯರಿಂದ ಹಲವು ರೀತಿಯಲ್ಲಿ ವಿರೋಧವನ್ನು ಹೆದರಿಸುತ್ತಾರೆ. ಮೊದಲಿಗೆ ಆ ಊರಿನ ಎಮ್ಮೆ, ದನ ಕಾಯುವವರಿಂದ ತೀವ್ರ ವಿರೋಧವನ್ನು ಎದುರಿಸಬೇಕಾಗುತ್ತದೆ. ಏಕೆಂದರೆ ಕುರಿಗಳು ಚಿಕ್ಕ ಚಿಕ್ಕ ಹುಲ್ಲನ್ನು ತಿನ್ನುತ್ತವೆ. ಆದರೆ ಎಮ್ಮೆ, ದನಗಳಿಗೆ ಎತ್ತರವಾಗಿ ಬೆಳೆದ ಹುಲ್ಲು ಬೇಕಾಗುತ್ತದೆ. ಆದರೆ ಅದನ್ನು ಎತ್ತರವಾಗಿ ಬೆಳೆಯಲು ಬಿಡದೆ ಹಾಗೆ ಹುಲ್ಲನ್ನು ತಿನ್ನುವ ಕುರಿಗಳಿಂದ ನಮ್ಮ ಎಮ್ಮೆ ದನಗಳಿಗೆ ಹುಲ್ಲು ಸಿಗದಂತಾಗುತ್ತದೆ ಎಂಬ ಕಾರಣದಿಂದ, ರಸ್ತೆ ಬದಿಯಲ್ಲಿನ ಪ್ರದೇಶಕ್ಕೆ ಕೆರೆ, ಕುಂಟೆಗಳ ಅಂಗಳ ಹಾಗೂ ಗೋಮಾಳಗಳಿಗೆ ಕುರಿಗಾರರು ಪ್ರವೇಶ ಮಾಡದಂತೆ ಹೆದರಿಸಿ ಓಡಿಸುತ್ತಾರೆ.

ಮತ್ತೆ ಆ ಪ್ರದೇಶದ ಕುರಿಗಾರರು ತಮ್ಮ ಕುರಿಗಳಿಗೆ ಮೇವು ಇಲ್ಲದಂತಾಗುತ್ತದೆ. ಹಾಗೂ ಪ್ರತಿ ಕುರಿಗಾರರು ಹೆದರೋದು 'ಜಾಡು'ಗಳಿಗೆ ಅಂದರೆ ಮಂತ್ರ-ತಂತ್ರಗಳು. ಇದರಿಂದ ಬೇರೆ ಕುರಿಗಳು

ಆ ಕುರಿಗಳ ಹೆಜ್ಜೆ-ಗಂಜುಗಳನ್ನು ತುಳಿದರೆ ಸಾಕು 'ಕಂದು' ಹಾಕಿಕೊಳ್ಳುತ್ತವೆ. ಹಾಗೂ ಪಿಚ್ಚಿಗೆಯನ್ನು ಹಾಕದೆ ತೆಳ್ಳಗೆ ಸಗಣಿ ಹಾಕುವುದು. ಗಂಜು ಹಳದಿಯ ಮಿಶ್ರಿತ ಕೆಂಪು ಬಣ್ಣದ ಗಂಜನ್ನು ಹೊಯ್ಯುತ್ತವೆ. ಅಲ್ಲದೆ ಹಲವು ರೀತಿಯ ರೋಗಗಳಿಗೆ ಬಲಿಯಾಗುತ್ತವೆ. ಆದ್ದರಿಂದ ಪರ ಊರಿನ ಕುರಿಗಳು ಬಂದರೆ ಬೇರೆ ಕುರಿಗಳನ್ನು ಊರಿನ ಸುತ್ತ ಮುತ್ತಲಿನ ಪ್ರದೇಶಕ್ಕೆ ಬಿಟ್ಟು ಕೊಡುವುದಿಲ್ಲ. ಆ ಪ್ರದೇಶದವರನ್ನು ಹಿಡಿದು ಚೆನ್ನಾಗಿ ಥಳಿಸಿದ ಹಲವಾರು ಪ್ರಸಂಗಗಳು ಇವೆ. ಇದರಿಂದ ಊರಿನಲ್ಲಿ ಪಂಚಾಯಿತಿ ನಡೆದ ಹಲವು ಪ್ರಸಂಗಗಳು ನಿದರ್ಶನವಾಗಿರುವುದು ಕಂಡುಬರುತ್ತದೆ.

ಇನ್ನು ಕುರಿಗಳು ಹೊಲದ ಪಕ್ಕದಲ್ಲಿ ಹೋದರೆ ಅಥವಾ ಆಕಸ್ಮಿಕವಾಗಿ ಕುರಿಗಳು ಹೊಲಗಳಲ್ಲಿ ಹೋದಾಗಲಂತೂ ಪ್ರಾಣ ಹಿಂಸೆಯನ್ನು ನೀಡಿದ ಹಲವು ಪ್ರಸಂಗಗಳು ಇವೆ. ಇಂತಹ ಹಲವಾರು ರೀತಿಯ ಸಮಸ್ಯೆಗಳನ್ನು ಕುರಿಗಾರರು ಎದುರಿಸುತ್ತಾರೆ. ಕೆಲವೊಂದು ಸಮಯದಲ್ಲಿ ಜೀವ ಹೋದಂತಹ ಉದಾಹರಣೆಗಳು ಸಹ ಇವೆ.

ಕುರಿ ಮಂದೆಯು ಊರು, ಊರು ಸುತ್ತುತ್ತಾ ಹೋಗುವ ದಾರಿಯಲ್ಲಿ ಆ ಪ್ರದೇಶದಲ್ಲಿ ರಾತ್ರಿಯ ವೇಳೆ ತೋಟ, ಹೊಲಗಳಲ್ಲಿ ಮಂದೆಯನ್ನು ತಡೆಯುತ್ತಾರೆ. ಈ ಕುರಿಮಂದೆಯನ್ನು ನಿರ್ವಹಿಸುವ ಅಥವಾ ಯಜಮಾನನ ಪ್ರಮುಖ ಕೆಲಸವೆಂದರೆ ಪ್ರತಿದಿನವೂ ಹಗಲಿನ ವೇಳೆಯಲ್ಲಿ ಎಲ್ಲಿ ಯಾರು ಮಂದೆಯನ್ನು ಪಡೆಯಬೇಕೆಂದುಕೊಳ್ಳುತ್ತಾರೋ, ಆ ಊರಿನ ರೈತರನ್ನು ಕೇಳಿ ಮಂದೆಯ ಬಗ್ಗೆ ವಿವರಿಸಿ ಮಂದೆ ತಡೆಯಲು ವ್ಯವಸ್ಥೆ ಮಾಡುತ್ತಾನೆ. ರಾತ್ರಿಗೆ ಐವತ್ತು ರೂಪಾಯಿಂದ ಐನೂರು ರೂಪಾಯಿಗಳ ವರೆಗೂ ನೀಡುತ್ತಾರೆ. ಆಯಾ ಹೊಲದ ಯಜಮಾನನ ಮೇಲೆ ಇದು ಅವಲಂಬಿತವಾಗಿರುತ್ತದೆ. ಅವರಿಗೇನಾದರೂ ಖುಷಿಯಾದರೆ ಹೆಚ್ಚು ಹೆಚ್ಚು ನೀಡುತ್ತಾರೆ. ಹತ್ತು ಸೇರಿನಿಂದ ಇಪ್ಪತ್ತೈದು ಸೇರಿನವರೆಗೂ ರಾಗಿಯನ್ನು ಎರಡರಿಂದ ಐದು ಸೇರಿನವರೆಗೂ ಅಕ್ಕಿಯನ್ನು ನೀಡುತ್ತಾರೆ.

ಇಲ್ಲಿ ಒಂದು ಪ್ರಮುಖವಾದುದೆಂದರೆ ಎಂಬತ್ತರ ದಶಕದಲ್ಲಿ (ಕೆಲವು ಮಂದೆಗಳಲ್ಲಿ ಇಂದಿಗೂ) 'ಅನ್ನ' ಎಂದರೆ ಸತ್ತ ಜೀವ ಎದ್ದು ಬರುತ್ತಿತ್ತು ಕಾಡುಗೊಲ್ಲರಿಗೆ. ಏಕೆಂದರೆ ಇವರಿಗೆ ಅನ್ನ ಇದ್ದರೆ ಒಂದು ತುತ್ತು ಹಿಟ್ಟು ಗಂಟಲೊಳಕ್ಕೆ ಹೋಗೂದು ಅಂತಾರೆ. ಮುದ್ದೆ ಎಷ್ಟೇ ಉಂಡರು ಸಮಾಧಾನ ಆಗಲ್ಲ. ಅಷ್ಟೊಂದು ಆಸೆಯನ್ನು ಅನ್ನದ ಮೇಲೆ ತೋರಿಸುತ್ತಾರೆ. ಕೆಲವು ಸಂಬಳದಾಳುಗಳು ಯಾರ ಕುರಿ ಮಂದೆಯಲ್ಲಿ ಹೆಚ್ಚು ಅನ್ನ, ಒಳ್ಳೆಯ ವಗ್ಗರಣೆ ಹಾಕಿ ಸಾಂಬಾರು ಮಾಡುತ್ತಾರೋ ಅಂಥವರ ಕುರಿ ಮಂದೆಯಲ್ಲಿ ಸಂಬಳಕ್ಕೆ ಇರಲು ಇಷ್ಟಪಡುತ್ತಾರೆ.

ಒಂದು ರಾತ್ರಿಯು ಹೊಲದಲ್ಲಿ ಹಾಕುವ ಪಿಚ್ಚಿಗೆಯಿಂದ, ಗಂಜು ಹೊಯ್ಯುವುದರಿಂದ ಬೆಳೆಯು ಸಮೃದ್ಧವಾಗಿ ಬೆಳೆಯಲು ಅನುಕೂಲವಾಗುತ್ತದೆ. ಒಟ್ಟಾರೆ ಒಂದು ಸಾವಿರ ಕುರಿಮಂದೆಗೆ ಒಂದು

ಪಲ್ಲ(ಒಂದು ಕ್ವಿಂಟಾಲ್) ದವಸವನ್ನು ನೀಡುತ್ತಾರೆ. ಹೀಗೆ ಊರಿಂದ ಊರಿಗೆ ಮಂದೆ ಸಾಗುತ್ತಿರುತ್ತಾರೆ. ಇಂತಹ ಸಮಯದಲ್ಲಿ ಹೆಚ್ಚು ಹೆಚ್ಚು ಧವಸ ಧಾನ್ಯಗಳು ಸಂಗ್ರಹಿಸುತ್ತಿರುವಾಗ ಆಗಾಗ ಹೆಚ್ಚಾದ ದವಸಗಳನ್ನು ಸ್ವಂತ ಊರಿಗೆ ಸಾಗಿಸುತ್ತಿರುತ್ತಾರೆ. ಇದರಿಂದ ಮನೆಯಲ್ಲಿರುವ ವಯಸ್ಸಾದ ತಂದೆ-ತಾಯಿಗಳು, ಚಿಕ್ಕ-ಚಿಕ್ಕ ಮಕ್ಕಳಿಗೆ ಆಹಾರಕ್ಕೆ ಅನುಕೂಲವಾಗುತ್ತದೆ.

ಇನ್ನೂ ರಾತ್ರಿಯ ವೇಳೆ ಕಾಯುವವರು, ಕಾಯುವುದು ಬಹಳ ಕಷ್ಟದ ಕೆಲಸ. ಅದಕ್ಕೆ ಅವರು ಆಕಾಶದಲ್ಲಿನ ನಕ್ಷತ್ರಗಳನ್ನು, ಬೆಳ್ಳಿಚುಕ್ಕೆ, ಕೂರಗೆದಾಳು ಮುಂತಾದವನ್ನು ಎಣಿಸುತ್ತಾ ಅವು ಜಾರಿದಂತೆ ಅದಕ್ಕೆ ಸಮಯವನ್ನು ನಿಗದಿಪಡಿಸಿಕೊಳ್ಳುತ್ತಾರೆ. ರಾತ್ರಿಯ ವೇಳೆಯಲ್ಲಿ ದೇವರ ಪದಗಳನ್ನು ಹಾಡುವುದು, ಗಣೆ ಊದುವುದು, ಇಲ್ಲವೆ ಕೊಳಗಳನ್ನು ನುಡಿಸುವುದು. ಇವರ ವಾಡಿಕೆಯಾಗಿದೆ.

ಹೊರಗಿನವರಿಗೆ ನೋಡಲು ಒಂದೇ ತರಹ ಕಾಣುವ ಸಾವಿರ ಕುರಿಗಳ ಮಂದೆಯಲ್ಲಿ ಕಾವಲಿನವರು ಪ್ರತಿ ಕುರಿಯನ್ನು ಥಟ್ಟನೆ ಗುರುತಿಸಬಲ್ಲರು. ಕಾಣೆಯಾಗಿರುವುದನ್ನು ಕೂಡಲೆ ಗುರುತಿಸ ಬಲ್ಲರು. ತಮ್ಮ ಪ್ರೀತಿಯ ಕುರಿಗಳಿಗೆ ಅಡ್ಡ ಹೆಸರುಗಳಿಂದ ಹೆಸರಿಟ್ಟು ಕರೆಯುತ್ತಾರೆ. ಇದರಲ್ಲಿ ಕೆಲವೊಂದು ಕುರಿಗಳಿಗೆ ಮುದ್ದೆ ತಿನ್ನುವುದನ್ನು ರೂಢಿ ಮಾಡಿರುತ್ತಾರೆ. ಇದನ್ನು ಮುದ್ದುಕುರಿ ಎಂದು ಕರೆಯುತ್ತಾರೆ. ಅದನ್ನು ದೇವರ ಗುಡಿ, ಆವಿನಗೂಡು ಸುತ್ತರಿಸಲು ಮೈತೊಳೆಯುವ ಸಂದರ್ಭಗಳಲ್ಲಿ ಮುಂದೆ ಹೋಗಲು ಇವುಗಳನ್ನು ಬಳಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಹಿಂಡುಗಳಲ್ಲಿ ಅವುಗಳ ಬಣ್ಣ ಮಚ್ಚೆಗಳ ಆಧಾರದ ಮೇಲೆ ಕುರಿಗಳನ್ನು ಕರೆಯುತ್ತಾರೆ.

ವರ್ಷಕ್ಕೊಮ್ಮೆ ಮುಂಗಾರು ಮಳೆ ಆರಂಭವಾದಾಗ ಹೊಸದಾಗಿ ಹುಟ್ಟಿದ ಮರಿಗಳ ಹಾಗೂ ಸಂಬಳದಾಳುಗಳಿಗೆ ಬಿಟ್ಟಂತಹ ಕುರಿಗಳ ಕಿವಿ, ಬಾಲವನ್ನು ಕೊಯ್ದು ಗುರುತು ಮಾಡುತ್ತಾರೆ. ಹೆಣ್ಣು ಗಂಡುಗಳೆನ್ನದೆ ಅವುಗಳ ರೂಪಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ಗುರುತಿಸಲಾಗುತ್ತದೆ.

ಬಿಂಜ(ಕಿವಿಯು ಮೊಟಗಿದ್ದು ಸುರುಳಿಯೋಪಾದಿಯಲ್ಲಿರುತ್ತದೆ.) ಕರಿಯ ಬಿಳಿಯ, ಉಂಡ, (ಮುಖದ ಮೇಲೆ ನಾಮದೋಪಾದಿಯಲ್ಲಿರುತ್ತದೆ) ಹೊಟ್ಟು ಸಳಕ(ಹೊಟ್ಟೆಯ ತಳದಲ್ಲಿ ಹುಲಿಯ ಬಣ್ಣದ್ದು) ಬಾರ್ ಸೊಳಕ, ಕಣ್ ಮಸರ್ (ಮೈಯೆಲ್ಲಾ ಕೆಂಚಗೆ, ಮುಖದ ಮೇಲೆ ಮಚ್ಚೆಯ ತರಹ) ನೆರೆಂಡ ಕೆಂಚಾಂಡ (ಮೂಕಪೂತಿರ ನಾಮದಂತೆ ಬೆಳ್ಳಗೆ, ಜನ್ನ ಸೂಳಕ (ಹೊಟ್ಟೆಯಡಿ ಬಿಳಿ ಮಚ್ಚೆ) ಬೀಜ (ಮಾಳಗಿವಿ, ಚಿಕ್ಕ ಕಿವಿ) ಗಲ್ದಂಡ (ತಲೆ ಪೂರ್ತಿ ಬಿಳಿ ಮಚ್ಚೆ), ಮೂಗುಂಡ (ಕುರಿಯ ಇಡೀ ಆಕಾರ ಒಂದು ಬಣ್ಣ ಇದ್ದು ಮೂಗಿನ ಮೇಲೆ ಮಾತ್ರ ಬಿಳಿಯ ಗುರುತು), ಸುಕ್ಕು(ಹಣೆಯ ಮೇಲೆ ಚುಕ್ಕೆ), ಕಾಲ್ ಕಣಬ (ಕುರಿಯ ಆಕಾರ ಕೆಂಚಗೆ, ಹಿಂದಿನ ಕಾಲು ಮಾತ್ರ ಬಿಳಿದು), ಜನ್ನ-ಜನ್ನಮ್ಮ (ಹೊಟ್ಟೆಯ ಕೆಳಗೆ ಕರಿಬಿಳಿ ಮಚ್ಚೆ), ಹೂಬಾಲ (ಬಾಲದ ಕುಚ್ಚು ಮಾತ್ರ ಬೆಳ್ಳಗೆ) ಇತ್ಯಾದಿ.

ಕುರಿ ಸಾಕಾಣಿಯು ತನ್ನ ಪಾಲಕರಿಂದ ಅಹರ್ನಿಶಿ(ಹಗಲಿರುಳು) ಎಚ್ಚರ ಹಾಗೂ ಶ್ರಮವನ್ನು ನಿರೀಕ್ಷಿಸುತ್ತದೆ. ವಿವಿಧ ಋತುಮಾನಗಳಲ್ಲಿ ಚಳಿ ಮಳೆಗಾಲಗಳನ್ನು ಲೆಕ್ಕಿಸದೆ ಅವರು ಸದಾ ಬಯಲಿನಲ್ಲಿ ಇರಬೇಕಾಗುತ್ತದೆ. ಅದರೂ ಸಹ ಈ ಬದುಕು ಕಾಡುಗೊಲ್ಲರಿಗೆ ಅಪ್ಯಾಯಮಾನವಾಗಿದೆ. ಆರ್ಥಿಕವಾಗಿಯೂ ಕೂಡ ಬೇಸಾಯಕ್ಕಿಂತ ಹೆಚ್ಚು ಲಾಭದಾಯಕವಾಗಿರುವ ಈ ವೃತ್ತಿಯನ್ನು ಪ್ರಧಾನವಾಗಿ ಆವರಿಸಿಕೊಂಡಿರುವ ಕಾಡುಗೊಲ್ಲರು ಕುರಿಗಳನ್ನು ತಮ್ಮ ತಾಯ್ತಂದೆಗಳೀಗೆ ಸಮಾನವಾಗಿ ಕಾಣುತ್ತಾರೆ. ಈ ಬಗೆಯ ತುಂಬು ಭಾವನೆಗಳ ಮೂಲಕ ಅವರಿಗಿರುವ ನೆಮ್ಮದಿಯು ಅವರ ಜೀವನ ಕ್ರಮದಲ್ಲಿನ ಅನೇಕ ಪ್ರಾಥಮಿಕ ಅವಶ್ಯಕತೆಗಳ ಕೊರತೆಗಳನ್ನು ಸಹ ಗೌಣಗೊಳಿಸಿದೆ.

ಕಾಡುಗೊಲ್ಲರು ದನ-ಕುರಿಗಳ ಜೊತೆಗೆ ಎಮ್ಮೆ, ಮೇಕೆ, ನಾಯಿ, ಬೆಕ್ಕು, ಕತ್ತೆ, ಗಿಳಿ, ಕೌಜುಗ, ಮೊಲ, ನವಿಲು, ಹುಲ್ಲೆ ಅಥವಾ ಜಿಂಕೆ ಮರಿ ಮುಂತಾದ ಪ್ರಾಣಿಗಳನ್ನು ಸಾಕಿರುತ್ತಾರೆ. ಅರಣ್ಯ ಪ್ರದೇಶದಲ್ಲಿ ಆಕಸ್ಮಿಕವಾಗಿ ಸಿಕ್ಕಿದ ಹುಲ್ಲೆ ಮರಿಗಳನ್ನು ಕುರಿಯ ಮೊಲೆ ಹಾಲು ಕುಡಿಸಿ ಒಗ್ಗಿಸಿಕೊಂಡು ಕುರಿಗಳ ಜೊತೆಯಲ್ಲಿ ಬೆಳಸುತ್ತಾರೆ. ಕಾಡಿನಲ್ಲಿ ದೊರೆತ ನವಿಲಿನ ಮೊಟ್ಟೆಗಳನ್ನು ತಂದು ಊರಿನಲ್ಲಿ ಕೋಳಿ ಸಾಕಿರುವವರ ಬಳಿ ನೀಡಿ ನವಿಲು ಮರಿಗಳನ್ನು ಬೆಳೆಸುತ್ತಾರೆ. ರಾತ್ರಿ ತಮ್ಮ ಕುರಿ ಮಂದೆಯ ಕಾವಲಿನ ಸಂಗಾತಿತನಕ್ಕಾಗಿ ನಾಯಿಗಳನ್ನು ಪ್ರೀತ್ಯಾದರಗಳಿಂದ ಸಲಹುತ್ತಾರೆ. ಪ್ರತಿ ಮಂದೆಯಲ್ಲಿಯೂ ನಾಲ್ಕೈದು ನಾಯಿಗಳಿರುತ್ತವೆ. ತೋಳ, ಕಿರುಬ ಮತ್ತು ಕಳ್ಳಕಾಕರ ವಾಸನೆ ಹಿಡಿದು, ಶಬ್ದ ಕೇಳಿ ಆ ಎದುರಾಳಿಗಳ ಮೇಲೆ ದಾಳಿ ಮಾಡುತ್ತವೆ. ಇವುಗಳಲ್ಲಿ ಕೆಲವು ಬೇಟೆಯನ್ನು ಕಲಿತ ನಾಯಿಗಳಾಗಿರುತ್ತವೆ. ಮೊಲಗಳನ್ನು ಅಡ್ಡಾ ಹಾಕಿ ಇಲ್ಲವೆ ಓಡಿಸಿಕೊಂಡು ಹೋಗಿ ಹಿಡಿಯುತ್ತವೆ. ಹಾಗೂ ದೊಡ್ಡ ದೊಡ್ಡ ಮಿಕಗಳನ್ನು ಅಡ್ಡಹಾಕಿ ತಮ್ಮ ಒಡೆಯರು ಬರುವವರೆಗೂ ಸೆಣಸುತ್ತವೆ. ದೂಡ್ಡ ದೊಡ್ಡ ಉಡಗಳನ್ನು ಹಿಡಿಯುವುದರಲ್ಲಿ ಎತ್ತಿದ ಕೈ. ಈ ನಾಯಿಗಳನ್ನು ಹೆಸರು ಹಿಡಿದು ಕರೆದರೆ ಎರಡು ಸೆಕೆಂಡ್‌ನಲ್ಲಿ ಹಾಜರ್ ಹಾಗುತ್ತವೆ. ಗಂಡುನಾಯಿಗಳಿಗೆ ಸಿದ್ದ, ರಾಜ, ಭೈರ, ಕರಿಯ, ಜಾಣ, ಈರ. ಹೆಣ್ಣು ನಾಯಿಗಳಿಗೆ ಮಲ್ಲಿ, ಜಾಣಿ, ಲಕ್ಕಿ, ಪುಟ್ಟಿ ಹೀಗೆ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಮಕ್ಕಳು ಮರಿಗಳ ಮೇಲೆ ಅಕ್ಕರೆಯನ್ನು ಈ ಎಲ್ಲಾ ಸಾಕು ಪ್ರಾಣಿಗಳ ವಿಷಯದಲ್ಲೂ ಈ ಜನರು ಭಾವನಾತ್ಮಕ ಸಂಬಂಧ ಹೊಂದಿರುವುದನ್ನು ನಾವು ಕಾಣುತ್ತೇವೆ. ಇದರ ಜೊತೆಗೆ ದಿನಬೆಳಗಾದರೆ ಅರಣ್ಯ-ಹೊಲಗದ್ದೆ, ತೋಟಗಳಲ್ಲಿ, ಹುಲ್ಲು ಗಾವಲುಗಳಲ್ಲಿ ಅಲೆಯುವ ಈ ಕಾಡುಗೊಲ್ಲರು  ಬಗೆ ಬಗೆಯ ಹಾವುಗಳನ್ನು ಸಹ ಬಲ್ಲವರಾಗಿದ್ದಾರೆ. ಕರಡಿಗೊಲ್ಲರು ಹಾವನ್ನು ಹೊಡೆಯುವುದಿಲ್ಲ. ಅದು ಜುಂಜಪ್ಪನ ಪ್ರತಿರೂಪವೆಂದು ಭಾವಿಸಿದ್ದಾರೆ. ಹಾವಿನ ಸಂತತಿಯಲ್ಲಿರುವ ಅನೇಕ ವಿಧಗಳನ್ನು ತಮಗೆ ತಿಳಿದ ಜ್ಞಾನದಿಂದ ಗುರುತಿಸುತ್ತಾರೆ. ಯಾವ ಯಾವ ಬಗೆಯ ಹಾವುಗಳು ಕಚ್ಚಿದರೆ ಯಾವ ಬಗೆಯ ಪರಿಣತಿಗಳು ಉಂಟಾಗುತ್ತದೆ ಎಂಬುದನ್ನು ಸಹ ತಿಳಿಸಿದ್ದಾರೆ. ಹಾವುಗಳಲ್ಲಿ ಗ್ಯಾರೆ ಗೂಡ್ಡು ಅಥವಾ

ಗ್ಯಾರೆ ಹಾವು ಕಚ್ಚುವುದಿಲ್ಲ, ಬದಲಿಗೆ ಬಾಲದಲ್ಲಿ ಚಾಟಿಯೋಪಾದಿಯಲ್ಲಿ ಸೆಳೆಯುತ್ತದೆ. ಅದನ್ನು ಚೆನ್ನಾಗಿ ಬಲ್ಲರು. ಉರಿ ಮಂಡಲ ಕಚ್ಚಿದರೆ ಮೈಯೆಲ್ಲಾ ಉರಿಯುತ್ತಿರುತ್ತದೆ. ಕೊಳಕು ಮಂಡಲ ಕಚ್ಚಿದರೆ ಕಾಲೆಲ್ಲ ಕೊಳೆಯುತ್ತದೆ. ರಕ್ತ ಮಂಡಲ ಕಚ್ಚಿದರೆ ರಕ್ತ ಕಾರುವಿಕೆ ಆರಂಭವಾಗುತ್ತದೆ. 'ಮಿಡಿನಾಗರ' ಇದು ಕೇವಲ ಹನ್ನೆರಡು ಸೆಂ.ಮೀ ಮಾತ್ರ ಇರುತ್ತದೆ. ಇದು ಕಪ್ಪೆಯ ಹಾಗೆ ಜಿಗಿಯುತ್ತದೆ. ಇದು ಮರಗಳ ರೆಂಬೆಗಳಲ್ಲಿ ಹುಲ್ಲು, ಒಳಗಿದ ತರಗೆಲೆಗಳಲ್ಲಿ ಅಡಗಿರುತ್ತದೆ. ಇದು ಹಿಡಿದರೆ ನೆತ್ತಿಯ ಸುಳಿಗೆ ಬಾಯಿ ಹಾಕಿ ಹಿಡಿಯುತ್ತದೆ. ಸತ್ತರೂ ಬಿಡುವುದಿಲ್ಲ, ಕುರಿ ಮೇಕೆಗಳನ್ನು ನುಂಗುವ ಹೆಬ್ಬಾವುಗಳನ್ನು ಸಹ ಕಾಡುಗೊಲ್ಲರು ಬಲ್ಲವರಾಗಿದ್ದಾರೆ. ಹಾಗೆಯೇ ಕಾಡಿನಲ್ಲಿ ಕಂಡುಬರುವ, ತೋಳ, ಕರಡಿ, ಕಿರುಬ, ನರಿ ಮುಂತಾದ ಪ್ರಾಣಿಗಳು ಹಾಗೂ ಮರಗಿಡಗಳಲ್ಲಿ ವಾಸಿಸುವ ವಿವಿಧ ಸ್ಥರಗಳ ಪಕ್ಷಿಗಳು ಅನುಸರಿಸುವ ಜೀವನ ವಿಧಾನವನ್ನು ಅವುಗಳ ಸ್ವಭಾವಗಳ ಸಮೇತ ಚೆನ್ನಾಗಿ ಅರಿತಿದ್ದಾರೆ. ಕೋಗಿಲೆಯನ್ನು 'ಮಳೆ ಗುವೆ'(ಪಕ್ಷಿ) ಎಂದು ಕರೆಯುತ್ತಾರೆ. ಬೆಳಗಿನ ವೇಳೆಯಲ್ಲಿ ಅದು ಕೂಗಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಇದೆ. ಈ ಎಲ್ಲವುಗಳ ನಡುವೆಯೂ ಜಾಗರೂಕತೆಯಿಂದ ಆನಂದದಿಂದ ಬದುಕಬೇಕಾದ ಅನಿವಾರ್ಯ ಸ್ಥಿತಿಯನ್ನು ಒಪ್ಪಿಕೊಂಡು ಇವರು ಕಾರ್ಯ ತತ್ಪರಾಗಿದ್ದಾರೆ.

### ೪.೩.೩. ಕಾಡುಗೊಲ್ಲ ಕುರಿಗಾರರ ಆಹಾರ ಪದ್ಧತಿ

ಕಾಡುಗೊಲ್ಲ ಕುರಿಗಾರರ ಗೂಡೆಗಳಲ್ಲಿ ಅಡುಗೆ ಪದ್ಧತಿ ಅತ್ಯಂತ ಪ್ರಮುಖ ಹಾಗೂ ವಿಶಿಷ್ಟ ವಾಗಿದೆ. ಇವರಿಗೆ ಪ್ರತಿದಿನ ರಾಗಿ ಮುದ್ದೆಗೆ ನವಣೆ ನುಚ್ಚನ್ನು ಹಾಕಿ ಮುದ್ದೆ ಮಾಡುತ್ತಾರೆ. ಒಂದೊಂದು ಮುದ್ದೆ ಅರ್ಧ ಕಿ.ಲೋ.ನಷ್ಟು ಭಾರವಿರುತ್ತದೆ. ಇದು ದಪ್ಪ ಮತ್ತು ಗಟ್ಟಿಯಾಗಿರುತ್ತದೆ. ಏಕೆಂದರೆ ಹಗಲೆಲ್ಲಾ ಬಿಸಿಲಿನಲ್ಲಿ ತಿರುಗುವ ಕಾರಣದಿಂದ ಹೊಟ್ಟೆಯು ಗಟ್ಟಿಯಾಗಿರಬೇಕು ಎಂಬ ಕಾರಣದಿಂದ ಹೆಚ್ಚು ರಾಗಿ ಅಸಿಟ್ಟನ್ನು ಹಾಕಿ ಆದಷ್ಟು ಗಟ್ಟಿಯಾಗಿರುವಂತೆಯೇ ಮಾಡುತ್ತಾರೆ. ಒಬ್ಬೊಬ್ಬರು ಎರಡರಿಂದ ಮೂರು ಮುದ್ದೆಯನ್ನು ಊಟ ಮಾಡುತ್ತಾರೆ. ಕುರಿಕಾಯುವವರಿಗೆ ಸಾಮಾನ್ಯವಾಗಿ 'ಅನ್ನ' ಎಂದರೆ ಸತ್ತ ಪ್ರಾಣ ಎದ್ದು ಬರುತ್ತದೆ. ಏಕೆಂದರೆ "ಎಷ್ಟೇ ಮುದ್ದೆ ಉಂಡರೂ ನೆಮ್ಮದಿಯಾಗಲ್ಲ, ಒಂದೇ ಒಂದು ಪಿಡಿಸೆ ಅನ್ನ ಉಂಡರೆ ಸ್ವಲ್ಪ ಸಮಾಧಾನ ಆಗತ್ತೈತೆ" ಎಂದು ಕುರಿಕಾಯುವವರು ಹೇಳುತ್ತಾರೆ. ಕೆಲವೊಂದು ಸಂಬಳದಾಳುಗಳು ಯಾರ ಗೂಡೆಯಲ್ಲಿ 'ಅಂಬ್ರಾ; ಅನ್ನ ಚೆನ್ನಾಗಿ ಮಾಡ್ತರೋ ಅವರಲ್ಲಿ ಸಂಬಳಕ್ಕೆ ಇರುವುದನ್ನು ಇಂದಿಗೂ ಕಾಣಬಹುದು.

ಮುದ್ದೆಗೆ ಹೊಂದಿಕೆಯಾಗುವಂತೆ ಹುಳ್ಳಿಕಾಳು ಖಾರ, ಪಟ್ಟಿಗೂರ್ಜ ಸೊಪ್ಪು, ಬಳೆಡಕನ ಸೊಪ್ಪು, ಹರಿವೆ ಸೊಪ್ಪು, ಜಣಮಿನೂವು, ಹುಂಚೆಸಿಗುರು, ಅಡವಿ ಸೀಗೆಸೊಪ್ಪು, ಹಣಬಿ, ಮಜ್ಜಿಗೆ ಅಂಬ್ರಾ, ಮಳಿಕೆಹುಳ್ಳಿ ಕಾಳೂ ಸಾರು, ಬನ್ನೆಕಾಯಿ ಖಾರ, ತಮಟೆ ಹಣ್ಣಿನ ಗೊಜ್ಜು, ಕೆಂಗಾರ, ಇವುಗಳಿಂದ ರುಚಿ ಹಿತಪಲ್ಯೆಗಳನ್ನು ಮತ್ತು ಅತ್ಯಂತ ಪ್ರಮುಖವಾದ ಸಾಂಬಾರು(ಸಾಂಬಾರ್)ಗಳನ್ನು

ಮಾಡುತ್ತಾರೆ. ಇವರಿಗೆ ಇವುಗಳಿಗೆ ಖಾರ ರುಬ್ಬುವ ಪರಿಸ್ಥಿತಿ ಮಾತ್ರ ಬಹಳ ದಯನೀಯ ಪರಿಸ್ಥಿತಿಯಾಗಿರುತ್ತದೆ. ಖಾರೆ ಅರೆಯುವ ಬಂಡೆ, ಗುಂಡುಗಳು ಚಿಕ್ಕದಾಗಿರಲು ಕಾರಣವೆಂದರೆ ಅವುಗಳನ್ನು ಇವರ ಹಿಂದೆಯೇ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಭಾರವಿಲ್ಲದೆ ಇರುವುದನ್ನು ಆಯ್ದುಕೊಂಡಿರುತ್ತಾರೆ. ಕೆಲವು ಬಾರಿ ಖಾರ ರುಬ್ಬುವುದು ಬೇಜಾರು ಏನಿಸಿದಾಗ ಖಾರದ ಪುಡಿ ಹಾಗೂ ಕೊತ್ತಂಬರಿ ಪುಡಿಯನ್ನು ಉದುರಿಸಿ ಸಾಂಬಾರನ್ನು ಮಾಡುತ್ತಾರೆ.

ಸಿಹಿ ಅಡುಗೆಯನ್ನು ಕುರಿ ಹಾಲಿನೊಂದಿಗೆ ಅಕ್ಕಿ ಬೆಲ್ಲದ ಪಾಯಸವನ್ನು ರುಚಿಯಾಗಿ ಮಾಡುತ್ತಾರೆ. ಸಂಜೆಯ ಸಮಯದಲ್ಲಿ ರಾಗಿರೊಟ್ಟಿ, ಕಡಲೇ ಬೀಜದ ಖಾರ ಅದ್ಭುತವಾದ ರುಚಿ ನೀಡುತ್ತದೆ. ಅಪರೂಪಕ್ಕೆಂಬುವಂತೆ ಉಪ್ಪಿಟ್ಟು, ಚಿತ್ರನ್ನ, ಸಹ ಹುಣಸೆ ಹಣ್ಣಿನ ಹುಳಿ ಹಾಕಿ ತಯಾರಿಸುತ್ತಾರೆ. ಸಾಮಾನ್ಯವಾಗಿ ಕುರಿಯ ಗೂಡೆಗಳಲ್ಲಿ ಸುಲಭವಾಗಿ ಬೇಗನೆ ತಯಾರಾಗುವ ಅಡುಗೆಗಳನ್ನು ಮಾಡುತ್ತಾರೆ.

'ಸಿಚ್ಚಿಅಂಬ್ರಾ'(ಮಾಂಸಾದೂಟ)ದ ಅಡುಗೆಯನ್ನು ಮುಖ್ಯವಾಗಿ ಗಿಡದ ದ್ಯಾವರಿಗೆ ಬಲಿಕೊಡುವುದು, ಕರಿಯಮ್ಮ, ಮಾರಮ್ಮ, ಹಾಗೂ ಭೂತಪ್ಪನ ಹರಕೆ ತೀರಿಸಲು ಬಲಿಕೊಡುತ್ತಾರೆ. ಇಲ್ಲಾಂದ್ರೆ ತೊಳ ಕಡಿದಾಗ, ಜೋಳದ ಸಿಗುರು, ಬಿಸಿಲಲ್ಲಿ ಅಥವಾ ಹೆಚ್ಚಾಗಿ ಔಡಲ ಸೊಪ್ಪನ್ನು, ಬೇಲದ ಹಸಿ ಕಾಯಿಯನ್ನು ತಿಂದಾಗ ಕುರಿಗಳು 'ಸರಗಿದ' ಸಂದರ್ಭಗಳಲ್ಲಿ ಹಾಗೂ ಮೊಲಗಳು, ಹುಲ್ಲೆ ಮರಿಗಳು, ಉಡಗಳನ್ನು ಕಾಡು ಹಂದಿಯನ್ನು ನಾಯಿಗಳು ಬೇಟೆಯಾಡಿದಾಗ, ಕೌಜುಗದ ಹಕ್ಕಿ ಸಿಕ್ಕಿದಾಗ, ಬೆಳ್ಳಿಳಿಲಿ, ಗದ್ದೆ ಬದುಗಳಲ್ಲಿ ಸಿಗುವ ಕೊಕ್ಕುಗಳು ಇವರಿಗೆ ಮಾಂಸಾಹಾರದ ಅಡುಗೆ ಮುಖ್ಯವಾಗಿ ಮಾಡುತ್ತಾರೆ. ಸಾಮಾನ್ಯವಾಗಿ ತೋಟಗಳಲ್ಲಿ ಮಂದೆ ತಡೆದಾಗ ಊಟಕ್ಕೆ 'ಅಡಿಕೆ ಪಟ್ಟೆ'ಗಳನ್ನು ತಟ್ಟೆಗೆ ಬದಲು ಬಳಸುತ್ತಾರೆ. ಆ 'ಸಿಚ್ಚಿ' ಅಂಬ್ರಾನಾ ಅಡಿಕೆಪಟ್ಟೆಗೆ ಬಿಡಿಸಿಕೊಂಡು ಜೊತೆಗೆ ರಾಗಿ ಹಿಟ್ಟು ತಿನ್ನುವಾಗ ಸ್ವರ್ಗವೇ ಬಂದಂತೆ ಇರುತ್ತದೆ. ಅಷ್ಟೊಂದು ರುಚಿಯಾಗಿರುತ್ತದೆ. ಇದನ್ನು ತಯಾರು ಮಾಡಬೇಕೆಂದರೆ ಹುಟ್ಟಿದ ದಿನ ಕಂಡುಬರುತ್ತದೆ. ಈ ರೀತಿಯಾಗಿ ಇವರು ಮಂಸಾಹಾರವನ್ನು ಹಲವು ರೀತಿಯ ಪ್ರಾಣಿಗಳ ಮಾಂಸವನ್ನು ಆಹಾರವಾಗಿ ಬಳಸುತ್ತಾರೆ. ಇದು ಜೀವನದ ಪ್ರಮುಖ ಅಂಶವಾಗಿದೆ.

## ೪.೪. ಶೈಕ್ಷಣಿಕ ಅಭಿವೃದ್ಧಿ

### ೪.೪.೧. ಶಿಕ್ಷಣ ಮತ್ತು ಅರ್ಥ

'ಶಿಕ್ಷಣ' ಎಂಬುದು ಕಲಿಯುವ ಕ್ರಿಯೆ, ಶಿಕ್ಷಣವು ಪ್ರಮುಖವಾಗಿ ಭವಿಷ್ಯಕ್ಕೆ ಸಂಬಂಧಿಸಿದ ವಿಷಯ. ವ್ಯಕ್ತಿಯ ಮಾನವೀಯ ಸೌಕರ್ಯಾಭಿವೃದ್ಧಿಯ ಸರ್ವತೋಮುಖದ ಜೊತೆಗೆ ಅದು

ಸಾಮಾಜಿಕ ಜೀವನಕ್ಕಾಗಿ ಮಾಡುವ ಪೂರ್ವಸಿದ್ಧತೆ. ಅದು ಸುಶಿಕ್ಷಿತ ಸಮಾಜ ನಿರ್ಮಿಸುವ ಕಾರ್ಯವು ಆಗಿದೆ. ಶಿಕ್ಷಣ ಎಂದರೆ ಕೇವಲ ಪ್ರಾಥಮಿಕ ಶಿಕ್ಷಣ ನೀಡುವಷ್ಟಕ್ಕೆ ಸೀಮಿತವಾಗಿದೆ. ಉನ್ನತ ಶಿಕ್ಷಣ ದವರೆಗೆ ಎಲ್ಲ ಜಾತಿ ವರ್ಗ, ಪಂಗಡ, ಧರ್ಮದವರಿಗೆ ಹೇಗೆ ಸಾಧ್ಯ ಎಂಬುವವರೆಗೂ ಇದರ ವ್ಯಾಪ್ತಿ ಅಡಗಿದೆ. ಪ್ರತಿಯೊಬ್ಬರಿಗೂ ಶಿಕ್ಷಣದಿಂದ ಬದುಕುವ, ಶಿಕ್ಷಣ ಪಡೆಯುವ ಹಕ್ಕಿದೆ. ಮಾನವ ಜನಾಂಗದ ಸಂಸ್ಕೃತಿ, ನಾಗರಿಕತೆಗಳು ಉಳಿದು, ಬೆಳೆದು ಜೀವನದಲ್ಲಿ ಸುಖಶಾಂತಿ ನೆಲೆಸುವಂತೆ ಮಾಡುವ ಮೂಲಭೂತ ಹೊಣೆಗಾರಿಕೆಯನ್ನು ಶಿಕ್ಷಣ ನಿರ್ವಹಿಸುತ್ತದೆ. ರಾಷ್ಟ್ರದ ನೇರ ಹೊಣೆಗಾರಿಕೆಯಲ್ಲಿ ಜನತೆಯನ್ನು ಪಾಲ್ಗೊಳ್ಳುವಂತೆ ಮಾಡುವುದು ಇಂದಿನ ದಿನಗಳಲ್ಲಿ ಶಿಕ್ಷಣದ ಜವಾಬ್ದಾರಿಯ ಜೊತೆಗೆ ಪ್ರಜಾಸತ್ತೆಯನ್ನು ಬಲಗೊಳಿಸುವುದು ಸಹ ಶಿಕ್ಷಣದ ಮುಖ್ಯ ಜವಾಬ್ದಾರಿಯಾಗಿದೆ.

ಪ್ರಜಾಪ್ರಭುತ್ವದ ಭಾವಶಾಲಿ ಹಾಗೂ ಸದೃಢವಾಗಿ ನೆಲೆಗೊಳ್ಳುವಂತೆ ಮಾಡುವಲ್ಲಿ ಶಿಕ್ಷಣದ ಪಾತ್ರ ಅಷ್ಟೇ ಮುಖ್ಯವಾಗಿರುತ್ತದೆ. ಪ್ರಜಾಸತ್ತೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವಂತೆ ಮಾಡಲು ವ್ಯಕ್ತಿಗಳಿಗೆ ಅರಿವು ನೀಡುವುದರ ಜೊತೆಗೆ ಶಿಕ್ಷಣದಿಂದ ಜನಸಾಮಾನ್ಯರ ರಾಜಕೀಯ ಪ್ರಜ್ಞೆಯು ಬಲಗೊಳ್ಳುವುದು. ಇದರಿಂದ ಪ್ರಜಾಸತ್ತೆಯು ಹೆಚ್ಚು ಪ್ರಭಾವಶಾಲಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು. ಸಾರ್ವಜನಿಕರ ನೆಮ್ಮದಿಗೂ, ಕ್ಷೇಮಾಭ್ಯುದಯಕ್ಕೂ ಅಗತ್ಯವೆನಿಸುವ ಸೇವಾ ವ್ಯವಸ್ಥೆಯನ್ನು ಏರ್ಪಡಿಸಿಕೊಂಡು ಬರುವುದು ರಾಷ್ಟ್ರದ ಆದ್ಯ ಕರ್ತವ್ಯ. ಅದಕ್ಕಾಗಿಯೇ ಸರಕಾರವು ಅದರ ವಿವಿಧ ಶಾಖೆಗಳ ವ್ಯವಸ್ಥೆಯಾಗಿರುವುದು ಅಂಥ ಸೇವಾ ಸೌಲಭ್ಯಗಳಲ್ಲಿ ಶಿಕ್ಷಣವೂ ಒಂದು ಪ್ರಧಾನ ಅಂಶ ಅದು ಒಂದು ರಾಷ್ಟ್ರದ ಜನತೆಯ ಶಕ್ತಿ ಸಾಮರ್ಥ್ಯಗಳು ವರ್ಧಿಸಿ, ಅಭಿರುಚಿ, ಅಸಕ್ತಿಗಳು ಬೆಳೆದು ಫಲಕಾರಿಯಾಗುವಂತೆ ನೋಡಿಕೊಳ್ಳುವುದು. ಅಲ್ಲದೇ ಪ್ರಜಾಪ್ರಭುತ್ವವನ್ನು ಹೊಂದಿದ ರಾಷ್ಟ್ರ ಜೀವನದಲ್ಲಿ ಪೌರರು, ವಿವೇಕಿಗಳೂ ಜಾಣರು ಆಗಿ ಪರಿಣಾಮಕಾರಿಯಾಗಿ ಪಾತ್ರವಹಿಸುವಂತೆ ಮಾಡುವುದು.

ಜಗತ್ತಿನ ಪ್ರತಿಯೊಂದು ರಾಷ್ಟ್ರ ಎಲ್ಲಾ ವಿಧದ ಸಮಸ್ಯೆಗಳ ನಿವಾರಣೆಗೆ ಶಿಕ್ಷಣವೊಂದೇ ಸಾಧನವೆಂದು ಮನಗಂಡಿವೆ. ಜೊತೆಗೆ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿವೆ. ಶಿಕ್ಷಣದಿಂದ ಅಭಿವೃದ್ಧಿಯ ಜೊತೆಗೆ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿ, ಜನತೆಯ ಜೀವನ ಮಟ್ಟ ಉತ್ತಮಗೊಳ್ಳುವುದು ಎಂಬುದನ್ನು ಮುಂದುವರಿದ ರಾಷ್ಟ್ರಗಳು ಕಾರ್ಯ ಸಾಧನೆಗೈದು ತೋರಿಸಿವೆ. ಓದು ಬರಹ ಮಾತ್ರ ಶಿಕ್ಷಣವಾಗಲಾರದು. ಮಾನವನ ಸರ್ವಾಂಗೀಣ ಪ್ರಗತಿಯನ್ನು ಕಾಣುವಂತೆ ಮಾಡುವುದು ಶಿಕ್ಷಣ.

ಒಂದು ದೇಶದ ಸರ್ವತೋಮುಖವಾದ ಬೆಳವಣಿಗೆಗೆ ಪರಿಣಾಮಕಾರಿಯಾದ ಶಿಕ್ಷಣ ವ್ಯವಸ್ಥೆಯು ಒಂದು ಕಾರಣ. ಉತ್ತಮ ಪ್ರಜಾಸತ್ತಾತ್ಮಕ ಸಮಾಜ ರಚನೆಯು, ಸುಶಿಕ್ಷಿತವಾದ ಪ್ರಜೆಗಳಿಂದ ಮಾತ್ರಸಾಧ್ಯ. ಸುಶಿಕ್ಷರಾದ ಪೌರರನ್ನು ತಯಾರಿಸುವುದು ಶಿಕ್ಷಣದ ಮುಖ್ಯಗುರಿಯಾಗಿದೆ. ಅಲ್ಲದೇ

ಜನ ಸಮುದಾಯದ ಹಿತರಕ್ಷಣೆ ಕಾಪಾಡುವುದು ಸಹ ಪ್ರತಿಯೊಂದು ಸರಕಾರದ ಆದ್ಯ ಕರ್ತವ್ಯವಾಗಿದೆ. ಪ್ರಜೆಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವುದು ಪ್ರತಿಯೊಂದು ಸರಕಾರದ ಗುರಿಯೂ ಆಗಿರುತ್ತದೆ. ಮಾನವನ ಇಡೀ ಬದುಕಿನ ಸಾಧನೆಯೇ ತನ್ನ ಜೀವನವನ್ನು ಸಮತೋಲನದಲ್ಲಿಡಲು ಪ್ರಯತ್ನ ಮಾಡುವುದು. ಆ ಪ್ರಯತ್ನಕ್ಕೆ ನೆರವಾಗುವುದೇ ಶಿಕ್ಷಣ.

೧. ಒಳ್ಳೆಯ ನಡತೆ, ಧೃಢಮನಸ್ಸು, ಬುದ್ಧಿಶಕ್ತಿ ಹಾಗೂ ತನ್ನಕಾಲಿನ ಮೇಲೆ ತಾನು ನಿಲ್ಲುವುದು, ಈ ಗುಣಗಳನ್ನು ಮೂಡಿಸುವುದೇ ಶಿಕ್ಷಣ ಎಂಬುದು ಸ್ವಾಮಿವಿವೇಕಾನಂದರ ಕಲ್ಪನೆ.

೨. ಡಾ. ರಾಧಾಕೃಷ್ಣನ್ ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂದು ದೈವಿಕ ಕಿಡಿ ಅಥವಾ ಬೆಳಕಿನ ಕಿಡಿ ಇದೆ. ಮನುಷ್ಯ ಜೀವನದ ಅಂತಿಮವಾದ ಉದ್ದೇಶ ಈ ದೈವಿಕತೆಯ ಸಾಕ್ಷಾತ್ಕಾರವೇ ಆಗಿದೆ. ಆದ್ದರಿಂದ ಜೀವನಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶವನ್ನು ಸಾಕ್ಷತರಿಸಿಕೊಂಡು ಜೀವನವನ್ನು ಉದ್ಧಾರಣೆ ಮಾಡಿಕೊಳ್ಳಲು ಅನುವು ಮಾಡಿಕೊಡುವುದೇ ಶಿಕ್ಷಣದ ಪರಮೋದ್ದೇಶ.

### ೪.೪.೨. ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ

ಶಿಕ್ಷಣವು ಅಭಿವೃದ್ಧಿಯ ಮೂಲ ಮಂತ್ರ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲ ಸಾಧನವಾಗಿದೆ. "ಪ್ರಾಣಿ ರೂಪದಲ್ಲಿರುವ ಮಾನವನನ್ನು ಮಾನವತ್ವದೆಡೆಗೆ ಒಯ್ಯುವ ಸಾಧನ"(ಎಚ್ಚಾರ್ಕೆ, ೨೦೦೩, ೫೦೬) ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು ಮೇಲ್ಮುಖ ಚಲನೆಗೆ ಅನುವು ಮಾಡಿಕೊಡುವುದರ ಜೊತೆಗೆ ವ್ಯಕ್ತಿ ವೈಯಕ್ತಿಕವಾಗಿಯೇ ಆಗಲಿ, ಸಾಮಾಜಿಕವಾಗಿಯೇ ಆಗಲಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಶಿಕ್ಷಣದ ಕೊರತೆಯು ವ್ಯಕ್ತಿ ಮತ್ತು ಸಮಾಜ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿಯಲು ಕಾರಣವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದರೆ ಶಿಕ್ಷಣ ಅತ್ಯಂತ ಅಗತ್ಯವಾಗಿದೆ.

ಶಿಕ್ಷಣವು ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವವನ್ನು ಹೊಂದಿದೆ. ಮಾನವ ಮನೋವೃತ್ತಿ ಕೌಟುಂಬಿಕ ಗಾತ್ರ ಮತ್ತು ಸಂಪ್ರದಾಯಗಳ ಮೇಲೆ ಮಾಡುವ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಬಂಡವಾಳ ನಿರ್ಮಾಣವನ್ನು ಹೆಚ್ಚಿಸುತ್ತದೆ. ವ್ಯಕ್ತಿಗಳ ದಕ್ಷತೆಯ ಕೊರತೆಯು ಆರ್ಥಿಕ, ಸಾಮಾಜಿಕ ಬೆಳವಣಿಗೆಗಳಿಗೆ ಗಂಭೀರ ತೊಡಕಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜ್ಞಾನವು ಒಂದು ಪ್ರಮುಖ ಕೊರತೆಯ ಸಂಪನ್ಮೂಲವೆಂದು ಯೋಜನೆಗಳ ಅನುಭವಗಳಿಂದ ತಿಳಿದುಬರುತ್ತದೆ.

ಅಲೆಮಾರಿ ಕಾಡುಗೊಲ್ಲರ ಸಮುದಾಯದ ಶಿಕ್ಷಣ ಪ್ರಮಾಣ ಪ್ರಾಥಮಿಕ ಹಂತದಲ್ಲಿ ಶೇ.೨೯.೦೪ ಮಾಧ್ಯಮಿಕ ಹಂತದಲ್ಲಿ ಶೇ.೨೪.೨೮, ಪ್ರೌಢಶಿಕ್ಷಣದಲ್ಲಿ ಶೇ.೪೦.೦೨, ಪ.ಪೂರ್ವ ಶಿಕ್ಷಣದಲ್ಲಿ

ಶೇ.೩.೮, ಪದವಿಯೇತರ ಶೇ.೧.೯೧ರಷ್ಟು, ಉನ್ನತ ಶಿಕ್ಷಣ ಶೇ.೦.೪೭ ಹೊಂದಿದ್ದಾರೆ. ಅಲೆಮಾರಿ ಕಾಡೊಗಲ್ಲರು ಪ್ರಾಥಮಿಕ ಶಿಕ್ಷಣದಲ್ಲಿ ಉತ್ತಮವಾಗಿದ್ದರೂ ಲಿಂಗಪ್ರಮಾಣವನ್ನು ಗಮನಿಸಿದಾಗ ಪುರುಷರು ಶೇ.೬೧, ಸ್ತ್ರೀಯರು ಶೇ.೨೪.೭೩.ರಷ್ಟು ಕಂಡುಬರುತ್ತದೆ.

**ಸಮೀಕ್ಷೆಗೊಳಪಟ್ಟವರ ಶೈಕ್ಷಣಿಕ ಸ್ಥಾನಮಾನ**

| ಶಿಕ್ಷಣದ ಹಂತಗಳು | ಒಟ್ಟು ಕುಟುಂಬ ಗಳು ೧೦೦ | ಗಂಡು | ಶೇಕಡ ವಾರು | ಹೆಣ್ಣು | ಶೇಕಡ ವಾರು | ಒಟ್ಟು | ಶೇಕಡ ವಾರು |
|---|---|---|---|---|---|---|---|
| ೦-೪ ವಯೋಗುಂಪಿನವರು | - | ೨೭ | ೭.೩೧ | ೨೦ | ೬.೫೧ | ೪೭ | ೬.೯೫ |
| ಶಿಕ್ಷಣ ಪಡೆಯಲು ಅರ್ಹತೆಯುಳ್ಳವರು | - | ೩೪೨ | ೯೨.೬೯ | ೨೮೭ | ೯೩.೪೯ | ೬೨೯ | ೯೩.೦೫ |
| ಪ್ರಾಥಮಿಕ ಶಿಕ್ಷಣ | - | ೩೮ | ೩೨.೪೭ | ೨೩ | ೨೪.೭೩ | ೬೧ | ೨೯.೦೪ |
| ಮಾಧ್ಯಮಿಕ ಶಿಕ್ಷಣ | - | ೨೫ | ೨೧.೩೬ | ೨೬ | ೨೭.೯೫ | ೫೧ | ೨೪.೨೮ |
| ಪ್ರೌಢಶಿಕ್ಷಣ | - | ೪೮ | ೪೧.೦೨ | ೩೬ | ೩೮.೦೭ | ೮೪ | ೪೦.೦೨ |
| ಪದವಿ ಪೂರ್ವ ಶಿಕ್ಷಣ | - | ೦೩ | ೦೨.೫೬ | ೫ | ೦೫.೩೮ | ೮ | ೦೩.೦೮ |
| ಪದವಿ | - | ೦೩ | ೦೩.೨೩ | ೧ | ೦೮.೦೬ | ೪ | ೦೧.೯೧ |
| ಸ್ನಾತಕೋತ್ತರ | - | ೦೧ | ೦೮.೦೬ | - | - | ೧ | ೦೪.೪೭ |

ಆಧುನಿಕ ಔಪಚಾರಿಕ ಶಿಕ್ಷಣ ಜಾರಿಗೆ ಬಂದಮೇಲೆ ರಾಜ್ಯದ ಬೇರೆ ಬೇರೆ ಸಮುದಾಯಗಳು ಅವರವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗೆ ತಕ್ಕಂತ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗುತ್ತಿದ್ದಾರೆ. ಆದರೆ ಅಲೆಮಾರಿ ಕಾಡುಗೊಲ್ಲರಿಗೆ ಔಪಚಾರಿಕ ಶಿಕ್ಷಣಾವಕಾಶವೆ ಸಿಗಲಿಲ್ಲ. ಅಲ್ಲದೆ ಅವರು ಸ್ವಂತ ನೆಲೆಗಳು ಊರಿನಿಂದ ದೂರ, ಬದುಕು ಅಲೆಮಾರಿತನದಲ್ಲಿ ಇವರು ಎಲ್ಲಾ ರೀತಿಯಲ್ಲಿ ಹಿಂದುಳಿದ ತಮ್ಮ ಜೀವನೋಪಾಯಕ್ಕಾಗಿ ಇಡೀ ಸಂಸಾರ ಸಮೇತ ಕುರಿ ಮಂದೆಯನ್ನು ಹೊಡೆದುಕೊಂಡು ಅರಣ್ಯ, ಬೆಟ್ಟ, ಗುಡ್ಡ, ಹೊಲ, ಗದ್ದೆ ಮುಂತಾದ ಸ್ಥಳಗಳಲ್ಲಿ ಗಾಳಿ, ಬಿಸಿಲಿಗೆ ಎದೆಯೊಡ್ಡಿ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ಇವರ ಮಕ್ಕಳನ್ನು ಶಾಲೆಗೆ ಕಲಿಯಲು ಕಳುಹಿಸಲಾಗುತ್ತಿಲ್ಲ. ಮುಖ್ಯವಾಗಿ ಈ ಸಮುದಾಯದಲ್ಲಿ ತಮ್ಮ ತಂದೆ-ತಾಯಿಗಳೆ ಶಾಲೆಗೆ ಕಳುಹಿಸಲು ಉತ್ಸಾಹ ತೋರುತ್ತಿಲ್ಲ. ಅಲ್ಲದೆ ತಮ್ಮ ತಾಯಿ ತಿಂಗಳ ಮುಟ್ಟಾದಾಗ ಮೂರು ದಿವಸ ಹೆಣ್ಣುಮಕ್ಕಳು ಶಾಲೆಗೆ ಹೋಗಲೂ ಸಾಧ್ಯವಾಗುವುದಿಲ್ಲ. ಕುರಿಸಂಗೋಪನೆ ಹೆಚ್ಚು ಹೆಚ್ಚು ಮನೆ ಸದಸ್ಯರಿದ್ದರೆ ಚೆನ್ನಾಗಿ ಹಿಂಡು ಬೆಳೆಯಲು ಸಾಧ್ಯವಾದ್ದರಿಂದ ಚಿಕ್ಕ ಮಕ್ಕಳನ್ನು ಕುರಿಮರಿಯನ್ನು ನೋಡಿಕೊಳ್ಳಲು, ಹುಲ್ಲು ತರಲು ಇಂತಹ

ಕೆಲಸಗಳಿಗೆ ನೇಮಿಸಿಸುತ್ತಾರೆ. ನಂತರ ಕುರಿ ಕಾಯಲು ಕಳುಹಿಸುತ್ತಾರೆ. ಆದ್ದರಿಂದ ಇವರ ಮಕ್ಕಳಿಗೆ ಶಿಕ್ಷಣ ಎನ್ನುವುದು ಗಗನ ಕುಸುಮವಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಲೆಮಾರಿ ಕಾಡುಗೊಲ್ಲರ ಕುಟುಂಬದ ಮುಖ್ಯಸ್ಥರಿಗೆ ಶಾಲೆಗೆ ಕಳುಹಿಸುವುದರ ಬಗ್ಗೆ ಪ್ರಶ್ನಿಸಿದಾಗ

೧. 'ಸರಿ ಶಾಲಿಗೆ ಹೋಗ್ತೀವೀ - ಅವು ಸಾಯಂತಕಾನೂ ಓದಿದರೂ ಕೆಲಸ ಸಿಗಲ್ಲ. ಅದು ಗೊತ್ತಿದ್ದು ಯಾಕೆ ಓದಾಕ ಮಕ್ಕಳನ್ನು ಕಳಿಸಬೇಕು.'

೨. ಓದಿನಲ್ಲಿ ಕಳೆಯೋ ಸಮಯನ ಕುರಿಕಾದರೆ ಒಂದು ಸಾವಿರ ಕುರಿ ಆಗ್ತವೆ. ಇದರಿಂದ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ತನಕ ಬದುಕಬಹುದು.

೩. ಈ ಸಮುದಾಯದ ಹಿರಿಯರ ಪ್ರಕಾರ ಓದಿದ ಮೇಲೆ ಹಳ್ಳಿಯಲ್ಲಿ ಅವರು ಬದುಕಲ್ಲ ಎಲ್ಲಾ ಪಟ್ನ ಸೇರುತ್ತಾರೆ. ವಯಸ್ಸಾದ ತಂದೆ-ತಾಯಿಗಳ ಗತಿ, ಈ ಕುರಿ, ಹೊಲ, ಮನೆ, ಬದುಕು ಎಲ್ಲಾ ಯಾರು ನೋಡೋರು?

೪. ಊರಿಂದ ಹೊರ ಹೋದ ಮೇಲೆ ಸಂಸ್ಕೃತಿ ಸಂಪ್ರದಾಯ ದೇವರು ಎಲ್ಲಾ ಮರೆತು ಬಿಡುತ್ತಾರೆ.

೫. ಇವತ್ತು ದುಡ್ನು ಇರೋರು ಮಾತ್ರ ಓದಬೇಕು ಅಷ್ಟೇ.

೬. ನಮ್ಮ ಹುಡುಗ್ರು ಓದೋಕೆ ಹೋಗಿ ಕೆಟ್ಟುವೋದ್ರು ಸ್ವಾಮಿ(ಮಾಹಿತಿ: ಉತ್ತಣ್ಣಮೇಣಿಗನಹಟ್ಟಿ)

ಈ ಅಂಶಗಳನ್ನು ಗಮನಿಸಿದಾಗ ಇವರು ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದು, ಸಂಪ್ರದಾಯಗಳು ನಂಬಿಕೆಗಳ ಬಗ್ಗೆ ಇರುವ ಭಯದಿಂದ ಇವರು ಸಂಪೂರ್ಣ ಹೊರಬರಲಾಗುತ್ತಿಲ್ಲವಾದ್ದರಿಂದ ಇವರು ಶಿಕ್ಷಣದಿಂದ ದೂರವೇ ಉಳಿದಿದ್ದಾರೆ. ಕೆಲವೊಬ್ಬ ವೃದ್ಧ ಸಂಪ್ರದಾಯಿಗಳ ಅಳಲು, ಉನ್ನತ ಶಿಕ್ಷಣ ಪಡೆದವರು ನಗರಗಳಲ್ಲೆ ವಾಸ್ತವ್ಯ ಹೂಡುತ್ತಾರೆ. ಆಚಾರ-ವಿಚಾರಗಳಲ್ಲಿ ಅವರು ನಂಬಿಕೆ ಕಳೆದು ಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆಂಬುದು ಮುಖ್ಯವಾದ ಅಂಶವಾಗಿದೆ. ಆದ್ದರಿಂದ ಇಂತಹವರನ್ನು ಸಂಪೂರ್ಣ ಸಾಕ್ಷರನ್ನಾಗಿಸದೆ ಸಂಪ್ರದಾಯ ಬದ್ಧ ಜೀವನದಿಂದ ಹೊರಬರಲು ಸಾಧ್ಯವಿಲ್ಲದ ಮಾತು. ಇದರ ಜೊತೆಯಲ್ಲಿ ಸರ್ಕಾರಗಳು ಇವರಿಗೆ ಇಂತಹ ಯೋಜನೆಗಳನ್ನು ಜಾರಿಗೊಳಿಸಿದರೆ ಇವರು ಅಭಿವೃದ್ಧಿಯಾಗುತ್ತಾರೆಂಬುದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜೊತೆಗೆ ಸಮಾಲೋಚನೆ ಮಾಡಬೇಕಿದೆ.

### ೪.೪.೩. ಶಿಕ್ಷಣದತ್ತ ಕಾಡುಗೊಲ್ಲರು

ಶಿಕ್ಷಣವು ಒಂದು ಸಾಮಾಜಿಕ ಬದಲಾವಣೆಯ ನಿಯೋಗಿಯಾಗಿದೆ. ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು, ಮೇಲ್ಮುಖ ಚಲನೆಗೆ ಅನುವು ಮಾಡಿಕೊಡುತ್ತದೆ. ಆದರೆ ಅಲೆಮಾರಿಗಳಲ್ಲಿ ಇದು

ವಿರುದ್ಧವಾಗಿದೆ. ಏಕೆಂದರೆ ಶಿಕ್ಷಣದಿಂದ ತಮ್ಮ ಸಂಸ್ಕೃತಿ ಸಂಪ್ರದಾಯಗಳು ನಾಶವಾಗುತ್ತಿವೆ. ಶಿಕ್ಷಣವು ವ್ಯಕ್ತಿಯ ಅಂತಸ್ತಿನ ನಿರ್ಧಾರಕ ಅಂಶವಾಗಿದೆ. ಶಿಕ್ಷಣ ಅಭಿವೃದ್ಧಿಯೇ ಮೂಲ ಮಂತ್ರ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲಸಾಧನವಾಗಿದೆ. "ಪ್ರಾಣಿರೂಪದಲ್ಲಿರುವ ಮಾನವನನ್ನು ಮಾನವತ್ವದೆಡೆಗೆ ಒಯ್ಯುವ ಸಾಧನ." ಒಂದು ದೇಶದ ಜನಾಂಗದ ಸರ್ವತೋಮುಖ ಅಭಿವೃದ್ಧಿಯು ಶಿಕ್ಷಣವನ್ನು ಅವಲಂಬಿಸಿದೆ. ಶಿಕ್ಷಣವಿಲ್ಲದ ವ್ಯಕ್ತಿ ವೈಯಕ್ತಿಕರಾಗಲಿ ಸಾಮಾಜಿಕವಾಗಲಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಶಿಕ್ಷಣದ ಕೊರತೆಯು ವ್ಯಕ್ತಿ ಮತ್ತು ಸಮಾಜ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿಯಲು ಕಾರಣವಾಗುತ್ತದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಮುಖ್ಯವಾಹಿನಿಗೆ ಬರಬೇಕೆಂದರೆ ಶಿಕ್ಷಣ ಅತ್ಯಂತ ಅಗತ್ಯವಾಗಿದೆ.

ಶಿಕ್ಷಣವು ಮಾನವನ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವವಾದ ಪರಿಣಾಮವನ್ನು ಬೀರಿದೆ. ಮಾನವ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಾಸ್ತ್ರ ಮತ್ತು ಸಂಪ್ರದಾಯಗಳ ಮೇಲೆ ಮಹತ್ತರವಾದ ಪರಿಣಾಮ ಬೀರಿ ಬದಲಾವಣೆ ತರುವಲ್ಲಿ ಯಶಸ್ವಿಯಾಗುತ್ತದೆ. ಅನುಭೋಗದ ಆದ್ಯತೆ ಹಾಗೂ ಸಮುದಾಯದಲ್ಲಿ ನಡೆಸುವ ಅನಗತ್ಯ ವೆಚ್ಚಗಳ ಮೇಲೆ ಕಡಿವಾಣ ಹಾಕುತ್ತದೆ. ಇದರಿಂದ ಬಂಡವಾಳ ವೃದ್ಧಿಸುವುದು ಹಾಗೂ ವೈಯಕ್ತಿಕ ದಕ್ಷತೆಯ ಕೊರತೆಯು ಆರ್ಥಿಕ, ಸಾಮಾಜಿಕ, ಬೆಳವಣಿಗೆಗಳ ಮೇಲೆ ಗಂಭೀರ ತೊಡಕಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜ್ಞಾನವು ಒಂದು ಪ್ರಮುಖ ಕೊರತೆಯ ಸಂಪನ್ಮೂಲವೆಂದು ಯೋಜನೆಗಳ ಅನುಭವಗಳಿಂದ ತಿಳಿದುಬರುತ್ತದೆ.

ರಾಜ್ಯದ ಅಲೆಮಾರಿ ಕಾಡುಗೊಲ್ಲ ಸಮುದಾಯವು ಶಿಕ್ಷಣ ರಂಗದಲ್ಲಿ ಮತ್ತು ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿದೆ. ಇವರ ಸಾಕ್ಷರತೆ ಶೇ.ಹತ್ತರಷ್ಟು ಎಂದು ಅಂದಾಜಿಸಬಹುದು. ಅಂದರೆ ರಾಜ್ಯದ ಸರಾಸರಿ ಸಾಕ್ಷರತೆಗಿಂತ ಕಡಿಮೆ ಎಂದು ಹೇಳಬಹುದು. ಈ ಸಮುದಾಯದಲ್ಲಿ ಓದು ಬರಹ ಗೊತ್ತಿಲ್ಲದವರೆ ಹೆಚ್ಚು ಎನ್ನಬಹುದು. ಇಂದು ಮಕ್ಕಳು ತಮ್ಮ ತಂದೆ-ತಾಯಿ ಮತ್ತು ಕುಟುಂಬದ ಸದಸ್ಯರಿಂದ ಅನೌಪಚಾರಿಕ ಶಿಕ್ಷಣವನ್ನು ಕೆಲಸ ಕಾರ್ಯಗಳ ಮೂಲಕ ಪಡೆಯುತ್ತಿದ್ದರು. ಅಂದರೆ ಹೊಲ ಊಳುವುದು. ಕುರಿ, ಮೇಕೆ, ದನಗಳನ್ನು ಸಾಕುವುದು ಇದರ ಬಗ್ಗೆ ತಮ್ಮ ಕುಟುಂಬ ಸದಸ್ಯರಿಂದಲೆ ಅನೌಪಚಾರಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಇತರೆ ಔದ್ಯೋಗಿಕ ಶಿಕ್ಷಣವನ್ನು ಕುಟುಂಬದ ಮತ್ತು ಸಮುದಾಯದ ಜನರೊಂದಿಗೆ ಬೆರೆತು ಕಲಿಯುತ್ತಿದ್ದರು. ಕಾಡುಗೊಲ್ಲ ಸಮುದಾಯದ ಮಕ್ಕಳಿಗೆ ಶಾಲಾ-ಕಾಲೇಜುಗಳೆ ತಿಳಿದಿರಲಿಲ್ಲ.

ಶೈಕ್ಷಣಿಕ ಉನ್ನತಿ ಎಂಬುದು ಯಾವುದೇ ಹಿಂದುಳಿದ ಸಮುದಾಯ ತನ್ನನ್ನು ಅಭಿವೃದ್ಧಿಗೊಳಿಸಿ ಕೊಳ್ಳಲು ಇರುವದಾರಿ. ಗೊಲ್ಲ ಸಮುದಾಯವು ತನ್ನನ್ನು ರಾಜ್ಯದ ಮುಖ್ಯವಾಹಿನಿಯಲ್ಲಿರುವ ಸಮುದಾಯವನ್ನಾಗಿ ರೂಪಿಸಿಕೊಳ್ಳಬೇಕೆಂದರೆ ಈ ಶೈಕ್ಷಣಿಕ ಪ್ರಗತಿಯ ಪ್ರಯತ್ನಗಳನ್ನು ಕೈಗೊಳ್ಳಬೇಕಿದೆ.

ಹಲವಾರು ಲಿಂಗಾಯತ ಮಠಗಳು ಆಯಾ ಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಶಾಲೆ, ಕಾಲೇಜು, ಹಾಸ್ಟೆಲ್‌ಗಳನ್ನು ಒಂದು ಪೂಜಾ ಕಾರ್ಯವೆಂಬಂತೆ ಆಯಾ ಪ್ರದೇಶಗಳಲ್ಲಿ ಶೈಕ್ಷಣಿಕ ಪ್ರಗತಿ ತಂದಿದ್ದು ಯಾರಿಗಾದರೂ ಮಾದರಿಯಂತಿದೆ (ಬಂಜೆಗೆರೆ ಜಯಪ್ರಕಾಶ, ೨೦೦೮:೫೧). ಆದರೆ ಇಂದು ಗೊಲ್ಲ ಸಮುದಾಯಗಳು ತಮ್ಮ ಉದರ ಪೋಷಣೆಯ ಒಂದು ಉದ್ಯೋಗವಾಗಿದೆ. ಇವರ ಸಾಮಾಜಿಕ ಸ್ಥಿತಿಯು ಎಲ್ಲಾ ಸಮುದಾಯಗಳಿಗಿಂತ ಭಿನ್ನವಾದ ಸಂಪ್ರದಾಯ ಆಚರಣೆಗಳಿಂದ ನಾಗರೀಕ ಸಮಾಜಗಳಿಂದ ದೂರ ಉಳಿದುದರಿಂದಲೆ ಈ ಸಮುದಾಯವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಹಾಗೂ ಈ ಸಮುದಾಯದಲ್ಲಿ ಒಗ್ಗಟ್ಟಿನ ಸಮಸ್ಯೆಯು ಎತ್ತಿ ತೋರುತ್ತದೆ. ಕೆಲವರು ಕೂಲಿಯಿಂದ ಕೃಷಿಕರಾಗಿ, ಅಲೆಮಾರಿ, ಅರೆ ಅಲೆಮಾರಿಗಳಾಗಿ ಭಿನ್ನ ಭಿನ್ನವಾಗಿ ಈ ಸಮುದಾಯದವರು ಚದುರಿ ಹೋಗಿರುವುದು ಸಹ ಪ್ರಮುಖ ಸಮಸ್ಯೆಯಾಗಿದೆ. ಇದಕ್ಕೆ ಒಂದು ಉದಾಹರಣೆಯೆಂದರೆ ತಮಿಳು ನಾಡಿನಲ್ಲಿ ನಾಡರ್ ಜಾತಿಯವರ ಪರಿಸ್ಥಿತಿಯೂ ಸ್ವಾತಂತ್ರ್ಯ ಕಾಲದವರೆಗೂ ತೀರ ಹಿಂದುಳಿದಿತ್ತು. ಈ ಸಮುದಾಯದವರ ಸಂಘಟಿತ ಪ್ರಯತ್ನದಿಂದಾಗಿ ಇಂದು ಆ ಸಮುದಾಯದವರು ತಮಿಳು ನಾಡಿನಲ್ಲಿ ಬಹಳಷ್ಟು ಕ್ಷೇತ್ರದಲ್ಲಿ ಪ್ರಬಲರಾಗಿದ್ದಾರೆ. ರಾಜಕೀಯ, ಸಿನಿಮಾ, ಉದ್ಯಮ ಮುಂತಾದ ಕ್ಷೇತ್ರದಲ್ಲಿ ನಾಡಾರ್ ಸಮುದಾಯವು ಐದಾರು ದಶಕದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಯಿತೆಂದರೆ ಅದು ಇತರೆ ಸಮುದಾಯಗಳಿಗೂ ಸಾಧ್ಯವಿದೆ. ಪ್ರಶ್ನೆಯೆಂದರೆ ಆ ಬಗೆಯಲ್ಲಿ ಶ್ರಮಿಸುವ ಪಂಗಡಾತೀತವಾದ ಸಂಘಟಿತ ಪ್ರಯತ್ನ ಮಾಡುವುದಕ್ಕೆ ಸಿದ್ಧವಿರುವವರು ಯಾರು ಎಂಬುದು. ಆದರೆ ಕಾಡುಗೊಲ್ಲ ಸಮುದಾಯದಲ್ಲಿನ ದೌರ್ಬಲ್ಯವೆನ್ನಬಹುದು(ಬಂಜೆಗೆರೆ ಜಯಪ್ರಕಾಶ, ೨೦೦೮:೫೨). ಆದ್ದರಿಂದ ಪ್ರಮುಖವಾಗಿ ಶಿಕ್ಷಣವನ್ನು ಅಭಿವೃದ್ಧಿಪಡಿಸಲು ಅದಕ್ಕೆ ಆರ್ಥಿಕ ಪರಿಸ್ಥಿತಿಯು ಸುಧಾರಿಸಬೇಕಾಗಿದೆ. ಅದ್ದರಿಂದ ಇವರಿಗೆ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಜಾರಿಗೊಳಿಸಬೇಕಾಗಿದೆ.

ಕಾಡುಗೊಲ್ಲ ಸಮುದಾಯದಲ್ಲಿ ಈವರೆಗೆ ಶಕ್ತಿವಂತರು ದೇಣಿಗೆ ಕೊಟ್ಟು ನಡೆಸುತ್ತಿರುವ ಹಾಸ್ಟೆಲ್‌ಗಳು ಎಷ್ಟು? ಖಾಸಗಿಯಾಗಿ ನಡೆಸುತ್ತಿರುವ ತಾಂತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳು ಎಷ್ಟು? ಒಂದಾದರೂ ಇಂಜಿನಿಯರಿಂಗ್ ಕಾಲೇಜು ಈ ಸಮುದಾಯದ ಒಡೆತನದಲ್ಲಿದೆಯೇ? ಇತ್ಯಾದಿ ಪ್ರಶ್ನೆಗಳನ್ನು ಈಗಲಾದರೂ ಕೇಳಿಕೊಳ್ಳುವಂತಾಗಬೇಕು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಗ್ರಾಮೀಣ ಪ್ರದೇಶದಲ್ಲಿ ಈ ಸಮುದಾಯ ಕೊಡುತ್ತಿರುವ ಪ್ರೋತ್ಸಾಹ ಯಾವ ಪ್ರಮಾಣದಲ್ಲಿದೆ? ಅವರಿಗಾಗಿ ನಡೆಯುತ್ತಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು? ಇವೆಲ್ಲಾ ತುಂಬಾ ತುರ್ತಿನ ಪ್ರಶ್ನೆಗಳಾಗಿವೆ. ಇಂದು ರಾಜ್ಯಾದ್ಯಂತ, ದೇಶಾದ್ಯಂತ ಆಯಾ ಸಮುದಾಯಗಳಲ್ಲಿ ಶ್ರೀಮಂತರು ತಮ್ಮ ಹಣವನ್ನು ಖರ್ಚು ಮಾಡುವ ಬಗೆ ತಿಳಿಯದೆ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವುದು, ಹಾಸ್ಟೆಲ್‌ಗಳಿಗೆ ಲಕ್ಷಾಂತರ ರೂಪಾಯಿ ಗಳನ್ನು ದೇಣಿಗೆಯನ್ನಾಗಿ ನೀಡುವುದು, ಒಟ್ಟಾರೆ ಆ ಸಮುದಾಯಗಳಲ್ಲೂ ಶಿಕ್ಷಣದ ಮಟ್ಟವನ್ನು

ಹೆಚ್ಚಿಸುವುದು ಪ್ರಮುಖ ಗುರಿಯಾಗಿದೆ(ಬಂಜೆಗೆರೆ ಜಯಪ್ರಕಾಶ, ೨೦೦೮:೫೩). ಆದರೆ ಕಾಡುಗೊಲ್ಲ ಸಮುದಾಯದಲ್ಲಿ ಇದಕ್ಕೆ ವಿರುದ್ಧವಾಗಿದೆ. ಏಕೆಂದರೆ ಕೆಲವೇ ಕೆಲಮಂದಿ ಹಣ ಸಂಗ್ರಹಿಸಿದ್ದಾರೆ. ಆದರೆ ಅದನ್ನು ಊರಿನ ಜಮೀನ್ದಾರರಿಗೆ ಬಚ್ಚಿಹಿಡಲು(ಬಡ್ಡಿ ಇಲ್ಲದೆ) ಕೊಡುತ್ತಾರೆ. ಹಾಗೂ ಅವರಿಗೆ ಖರ್ಚು ಮಾಡಿದರೆ ನಮಗೇನು ಬರುತ್ತದೆ ಎಂಬ ಮನೋಭಾವವನ್ನು ಹೊಂದಿದ್ದಾರೆ. ಉಳಿದವರು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರು ಕೂಲಿ, ದನ, ಕುರಿಗಳನ್ನು ಕಾಯವುದರಲ್ಲೇ ನಿರತರಾಗಿದ್ದಾರೆ. ಆದ್ದರಿಂದ ಇಂದು ಅವರ ನಾಗರಿಕತೆಯ ಸಮಾಜಕ್ಕೆ ಹತ್ತಿರವು ಬರದಾಗಿದೆ.

ಸಮುದಾಯದ ನಾಯಕರೆನಿಸಿಕೊಳ್ಳುವವರು ತಮ್ಮ ರಾಜಕೀಯ ಆಕಾಂಕ್ಷೆಗಳಿಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಈ ಸಮುದಾಯದ ಶೈಕ್ಷಣಿಕ ಪ್ರಗತಿಗೆ, ಸಾಮಾಜಿಕ ಪ್ರಗತಿಗೆ ಕೊಡಲು ಸಿದ್ಧರಿದ್ದಾರೆಯೇ? ಸಾಮಾಜಿಕ ವಿಕಾಸದ ಒಂದು ಕಾಲಘಟ್ಟದಲ್ಲಿ ಕಾಡುಗೊಲ್ಲ ಸಮುದಾಯವು ಬುಡಕಟ್ಟು ಸಂಸ್ಕೃತಿಯನ್ನು ಹೊಂದಿರುವುದು ವಾಸ್ತವ. ಆದರೆ ಅದರ ಪ್ರಾಚೀನತೆಯ ಹೆಮ್ಮೆಯೊಂದೇ ಅವರ ವರ್ತಮಾನದ ಅಗತ್ಯಗಳನ್ನು ಈಡೇರಿಸಲಾರದು. ಅದನ್ನೊಂದು ಪ್ರಜ್ಞಾಪೂರ್ವಕ ಪ್ರಯತ್ನವಾಗಿಸಿಕೊಂಡು ಹಳೆ ಬೇರಿನ ಮೇಲೆ ಹೊಸ ಚಿಗುರನ್ನು ಪಲ್ಲವಿಸುವಂತೆ ಮಾಡಬೇಕಾಗಿದೆ. ಹಿಂದುಳಿದಿರುವಿಕೆ ಹೆಚ್ಚಿರುವ ಕಡೆಯಲ್ಲೇ ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಹೆಚ್ಚಿಗೆ ಇರುತ್ತವೆಯೇ ಅಲ್ಲಿ ತನ್ನ ವಿಂಗಡಣಾ ಪ್ರಜ್ಞೆಯನ್ನು ಅಥವಾ ತನ್ನ ಮೈಲಿಗೆಯ ಭಾವನೆಯನ್ನು ತೋರ್ಪಡಿಸುತ್ತಾ ಬಂದಿದ್ದಾರೆ. ಇದು ಕೆಲವರಿಗೆ ಲಾಭದಾಯಕವಾಗಿದೆ. ಆದರೆ ಸಮಾಜದ ಅಸಂಖ್ಯಾತ ಬಡವರಿಗೆ ಇದರಿಂದ ಏನೂ ಪ್ರಯೋಜನವಿಲ್ಲವಾಗಿದೆ. ಇದು ನಿಷ್ಠುರ ಆತ್ಮ ವಿಮರ್ಶೆಯಿಂದ ಮಾತ್ರ ಬದಲಿಸಬಹುದಾದ ದೋಷವಾಗಿದೆ. ಇಂದು ಈ ಕಾಡುಗೊಲ್ಲ ಸಮುದಾಯ ತನ್ನ ಬುಡಕಟ್ಟು ಜೀವನ ಶೈಲಿಯಲ್ಲಿ ಯಾವುದೇ ಮಾರ್ಪಾಡುಗಳಿಲ್ಲದೆ ಅತ್ಯಂತ ಕಟ್ಟುನಿಟ್ಟಾಗಿ ಬದುಕುತ್ತಿರುವುದು, ಜೊತೆಗೆ ತನ್ನ ಪರಂಪರೆಯ ವೃತ್ತಿಯಾದ ಪಶುಪಾಲನೆಯನ್ನು ಸಂಪ್ರದಾಯಕವಾಗಿ ನಡೆಸಿಕೊಳ್ಳುತ್ತಾ ಬರುತ್ತಿದೆ. ಅಲ್ಲದೆ ಶಿಕ್ಷಣದ ಮಟ್ಟ ಕಡಿಮೆ ಇರುವ ಪ್ರದೇಶಗಳಲ್ಲಿ ಆಚರಣೆ, ನಂಬಿಕೆಗಳು ಹೆಚ್ಚಾಗಿ ಸಾರುವುದು ಸಂಶೋಧನೆಯಿಂದ ತಿಳಿದುಬಂದಿರುವ ಅಂಶವಾಗಿದೆ. ಆದ್ದರಿಂದ ಇವರನ್ನು ಮಾನಸಿಕವಾಗಿ ಬದಲಾಯಿಸಿದಾಗ ಮಾತ್ರ ಇವರನ್ನು ಬದಲಾವಣೆಯತ್ತ ತರುವುದು ಸಾಧ್ಯವಾಗಿದೆ.

ಕಾಡುಗೊಲ್ಲ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ತನ್ನದೇ ಆದ ಸಾಮಾಜಿಕ ಸಂಘಟನೆಯನ್ನು ಹೊಂದಿದೆ. ಇತ್ತೀಚೆಗೆ ಮಹಿಳಾ ಸಮಾಜದಲ್ಲಿ ಉಂಟಾದ ಪರಿವರ್ತನೆಯಿಂದಾಗಿ ಗೊಲ್ಲ ಸಮುದಾಯವು ಸಾಮಾಜಿಕ ಸಂಚಲನವನ್ನು ಹೊಂದಿದೆ. ಮೂಲ ಸಂಸ್ಕೃತಿಯನ್ನು ಹೊಂದಿರುವ ಈ ಸಮುದಾಯವು ಇತಿಹಾಸ ಮತ್ತು ಸಂಸ್ಕೃತಿ

ಬೇರೆ ಸಮುದಾಯಗಳಿಗಿಂತ ಭಿನ್ನವೂ ವಿಶಿಷ್ಟವೂ ಆಗಿದೆ.

೧. ಕಾಡುಗೊಲ್ಲ ಸಮುದಾಯದ ಇತಿಹಾಸಕ್ಕೆ ಮಹಿಳೆಯೇ ಆಧಾರಸ್ತಂಭ.

೨. ಕಾಡುಗೊಲ್ಲರ ವಂಶದ ಅಭಿವೃದ್ಧಿಯಲ್ಲಿ ಇವಳೇ ಮೂಲ.

೩. ಕಾಡುಗೊಲ್ಲ ಸಮುದಾಯದವರು ಮೂಲತಃ ಅನಕ್ಷರಸ್ಥರಾಗಿದ್ದರೂ ಮಹಿಳೆಯ ಅಣತಿಯಂತೆ ಅವರವರ ವೃತ್ತಿಯಲ್ಲಿ ನಿರತರಾಗುತ್ತಾರೆ.

೪. ಬೇರೆ ಬೇರೆ ಬುಡಕಟ್ಟು ಸಮುದಾಯಗಳಿಗಿಂತ ಈ ಸಮುದಾಯ ತುಂಬಾ ಭಿನ್ನವಾಗಿದೆ. ಇವರು ತಮ್ಮ ಪಾರಂಪರಿಕ ವೃತ್ತಿಯಾದ ಪಶುಪಾಲನೆಗೆ ಅನುಗುಣವಾಗಿ ವೃತ್ತಿ, ಮನೆಗಳನ್ನು ನಿರ್ಮಿಸುವುದು ಹಾಗೂ ಇವರ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವಂತೆ ಜೀವಿಸುತ್ತಿದ್ದಾರೆ. ಅವರ ಜೀವನವೆಲ್ಲ ಹೊಲ, ತೋಟ, ಗದ್ದೆಗಳ ಬಳಿ, ಗುಡಾರಗಳಲ್ಲೆ ಜೀವನ ಸವೆಸುವ ಇರುವ ಹಿಂದುಳಿದ ಬುಡಕಟ್ಟು ಮತ್ತು ಅಲೆಮಾರಿ ಜನರಾಗಿರುವುದರಿಂದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಹಿಂದುಳಿದಿದ್ದಾರೆ.

ಕರ್ನಾಟಕದ ಕಾಡುಗೊಲ್ಲ ಸಮುದಾಯವು ಮಹಿಳೆಗೆ ವಿಶೇಷವಾದ ಮಹತ್ವವನ್ನು ನೀಡಿದ್ದಾರೆ. ಅವಳು ಮನೆಯ ಒಡತಿ. ಜೀವನದ ದೂರದೃಷ್ಟಿಗೆ ಬೆಳಕಾಗಿ, ಗಂಡನ ಕಾಯಕದಲ್ಲಿ ಸಹಭಾಗಿಯಾಗಿ, ಜೀವನದ ಪ್ರತಿಹೆಜ್ಜೆಗಳಲ್ಲಿಯೂ ಸಹಕಾರಿಯಾಗಿ ಕುಟುಂಬವನ್ನು ಯಶಸ್ವಿಯಾಗಿ ನಿಭಾಯಿಸುವಲ್ಲಿ ಇವಳು ಅತ್ಯಂತ ಪ್ರಮುಖಳು. ಇಂದು ಈ ಸಮುದಾಯವನ್ನು ಸಂಪ್ರದಾಯಗಳು ನಂಬಿಕೆಗಳನ್ನು ನೆನೆದರೆ ಅದು ಈ ಸಮುದಾಯದ ಮಹಿಳೆಯನ್ನು ಮಾತ್ರ ವಾಸಸ್ಥಳದಿಂದ ಹಿಡಿದು, ಆಹಾರ, ಉಡುಗೆ, ತೊಡುಗೆ, ಭಾಷೆ ಇತರೆ ಜನಾಂಗಗಳೊಡನೆ ಸಂಬಂಧ, ಸಾಮಾಜಿಕ ಭದ್ರತೆ, ಆರ್ಥಿಕ ಏಳಿಗೆ, ಶೈಕ್ಷಣಿಕ ಮಟ್ಟ, ಸುಧಾರಣೆ, ಸಾಂಸ್ಕೃತಿಕ ಆಚರಣೆಗಳು ಪ್ರತಿಯೊಂದು ಮಹಿಳೆಯ ಮೂಲ ಪಾತ್ರದಿಂದ ಕೂಡಿರುವುದನ್ನು ಕಾಣಬಹುದಾಗಿದೆ.

ಈ ಸಮುದಾಯದಲ್ಲಿ ಪುರುಷನಷ್ಟೇ ಮಹಿಳೆ ಮನೆಯ ಹೊರಗಿನ ಕೆಲಸಕಾರ್ಯಗಳನ್ನು ಸಶಕ್ತ ಮಾಡುತ್ತಾಳೆ. ಹಾಗೆಯೇ ಮನೆಯೊಳಗಿನ ಕೆಲಸಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾಳೆ. ಕುಟುಂಬದ ಕೆಲಸ ನಿರ್ವಹಿಸುವುದು, ಪಶುಗಳ ಪಾಲನೆ, ದವಸಧಾನ್ಯದ ಕೆಲಸ, ಮಕ್ಕಳ ಲಾಲನೆ ಪಾಲನೆ ಹೀಗೆ ನೂರೆಂಟು ಬಗೆಯ ಕಾರ್ಯಗಳು ಮಹಿಳೆಯಿಲ್ಲದೇ ಪೂರ್ಣತನವನ್ನು ಪಡೆಯಲಾರವು. ಇಷ್ಟೆಲ್ಲ ಮಹಿಳೆಯರ ಪಾತ್ರ ಪ್ರಮುಖ ಇದ್ದರೂ ಅವಳು ಶಿಕ್ಷಣದಲ್ಲಿ ಮಾತ್ರ ಹಂತ ಹಂತವಾಗಿ ಹಿಮ್ಮುಖ ವಾಗುತ್ತಿದ್ದಾಳೆ. ಸಮುದಾಯದಲ್ಲಿರುವ ಸಂಪ್ರದಾಯ ನಂಬಿಕೆಗಳಿಗೆ ಅಂಟಿಕೊಂಡಿರುವುದೇ ಪ್ರಮುಖ ಕಾರಣವಾಗಿದೆ. ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ ಋತುಮತಿ ಮತ್ತು ಮುಟ್ಟು ಇವೆರಡು ಕ್ರಿಯೆಗಳು

ಶೈಕ್ಷಣಿಕ ಸಂದರ್ಭದಲ್ಲಿ ಸಮಸ್ಯೆಯನ್ನು ತರುವ ಮುಖ್ಯ ಅಂಶಗಳಾಗಿವೆ. ಮಹಿಳೆಯು ಶೈಕ್ಷಣಿಕವಾಗಿ ಪ್ರಾಥಮಿಕ ಹಂತದಲ್ಲಿರುವ ಶೇಕಡಾವಾರು ಪ್ರೌಢಶಾಲೆಯ ಹಂತಕ್ಕೆ ಬರುತ್ತಿದ್ದಂತೆ ಶೇ.ಎಪ್ಪತ್ತರಷ್ಟು ಕಡಿಮೆಯಾಗುತ್ತದೆ. ಇಂತಹ ಆಚರಣೆಗಳಿಂದ ಮುಕ್ತವಾಗಿರಲು ಸಾಧ್ಯವಾಗುತ್ತಿಲ್ಲ. ಋತುಮತಿಯಾಗುತ್ತಲೇ ಕೆಲವೊಬ್ಬರು ಮದುವೆ ಮಾಡಿಬಿಡುತ್ತಾರೆ. ಇಲ್ಲವಾದರೆ ಆ ಹಸಿಮೈ ಎಂದು ಮನೆಯಿಂದ ಹೊರಗೆ ಕಳುಹಿಸುವುದಿಲ್ಲವಾದ್ದರಿಂದ ಶಿಕ್ಷಣ ಕಲಿಯಲು ಸಾಧ್ಯವಾಗುವುದಿಲ್ಲ ಮತ್ತು ಮುಟ್ಟಿನಂತಹ ಸಮಯದಲ್ಲಿ ಅವಳು ಭೌತಿಕವಾಗಿ ತೀರ ಕುಗ್ಗಿ ಹೋಗುತ್ತಾಳೆ. ಅಲ್ಲದೆ ಇಂತಹ ಸಮಯದಲ್ಲಿ ಯಾರು ಇವಳ ನೆರಳನ್ನು ಸಹ ಸೋಕಿಸಬಾರದು ಎಂಬ ಕಟು ನಿಯಮ ಮತ್ತು ಅವಳು ಇರುವ ಪ್ರಸೂತಿ ಗೃಹದ ಕಡೆಗೂ ತುಳಿಯಬಾರದು ಎಂಬಂಥ ಕಠಿಣ ನಿಯಮಗಳಿರುವುದರಿಂದ ಮನೆಯಲ್ಲಿ ತಂದೆತಾಯಿಗಳು ಕಲಿಸಲು ಹಿಂದೇಟು ಹಾಕುತ್ತಾರೆ. ಆದ್ದರಿಂದ ಈ ಸಮುದಾಯದ ಮಹಿಳೆಯ ಶಿಕ್ಷಣದಲ್ಲಿ ಹಿಮ್ಮುಖವಾದ ಅಭಿವೃದ್ಧಿಯನ್ನು ಕಾಣಬಹುದಾಗಿದೆ.

ಆದರೂ ಕೆಲವೊಂದು ಪ್ರದೇಶಗಳಲ್ಲಿ ಶಿಕ್ಷಣದಲ್ಲಿ ಪ್ರಗತಿ ಹೊಂದಿದವರು ಮುಂದುವರಿಯುತ್ತಿದ್ದಾರೆ. ಈ ಸಮುದಾಯದ ಮಹಿಳೆಗೆ ಸರ್ಕಾರದ ಶೇ.ಮೂವತ್ತರ ಮೀಸಲಾತಿಯನ್ನು ಪಡೆಯಲು ಕನಿಷ್ಠ ಐವತ್ತು ವರ್ಷಗಳಾದರು ಬೇಕಾಗಬಹುದು ಎಂಬುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಸತ್ಯವಾಗಿದೆ.

### ೪.೪.೪. ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳು

ಶಿರಾ ತಾಲ್ಲೂಕಿಗೆ ಸಂಬಂಧಿಸಿದಂತೆ ಶಿಕ್ಷಣದ ಅಭಿವೃದ್ಧಿಗೆ ಅದು, ವಿಶೇಷವಾಗಿ ಬುಡಕಟ್ಟು ಹಾಗೂ ಹಿಂದುಳಿದ ವರ್ಗಗಳಲ್ಲಿ ಶಿಕ್ಷಣದ ಪ್ರಮಾಣವನ್ನು ಹೆಚ್ಚಿಸುವಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ವ್ಯಾಪ್ತಿಯಲ್ಲಿ ಸರ್ವಶಿಕ್ಷಣಾಭಿಯಾನದ ಯೋಜನೆಗಳ ಅಡಿಯಲ್ಲಿ ಕೈಗೊಳ್ಳಲಾಗಿದೆ. ತಾಲ್ಲೂಕಿನಾದ್ಯಂತ ಕಾಡುಗೊಲ್ಲ, ಜೋಗಿ, ಸಮುದಾಯಗಳು ಅಲೆಮಾರಿ ಪಟ್ಟಿಯಲ್ಲಿ ಪ್ರಮುಖ ಸ್ಥಾನದಲ್ಲಿವೆ. ಜೋಗಿ ಸಮುದಾಯವು ಹದಿನೈದರಷ್ಟು ಉಳಿದಂಥ ಕಾಡುಗೊಲ್ಲ ಸಮುದಾಯವೇ ಹೆಚ್ಚು ಸಂಖ್ಯೆಯಲ್ಲಿದೆ. ಆದ್ದರಿಂದ ಇವರ ಮಕ್ಕಳಿಗೆ ಶಿಕ್ಷಣದಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿ ಕಾಡುಗಲ್ಲರ ಹಟ್ಟಿಗೂ ಒಂದು ಕಿರಿಯ ಪ್ರಾಥಮಿಕ ಶಾಲೆಯನ್ನು ನಿರ್ಮಿಸುವುದು ಅಲ್ಲದೆ ತಾಲ್ಲೂಕಿನ ಮೇಕೆರಹಳ್ಳಿ, ಭೂತೇಶ್ವರ ನಗರ, ಎತ್ತಪ್ಪನ ಹಟ್ಟಿ, ಹಣಸುಹಳ್ಳಿ, ಮಾರನಗೆರೆ ಗೊಲ್ಲರಹಟ್ಟಿ, ಈ ನಾಲ್ಕು ಗ್ರಾಮಗಳಲ್ಲಿ 'ಋತುಮಾನದ ವಸತಿಯುತ ಕಾರ್ಯಗಾರ' (SRBC : Sezional Residence Bridge Course) ಕಾರ್ಯಕ್ರಮದಡಿಯಲ್ಲಿ ಅಲೆಮಾರಿ ಮಕ್ಕಳಿಗೆ ಉಚಿತ ವಸತಿ, ಶಿಕ್ಷಣ, ಆಹಾರ, ಹೀಗೆ ಎಲ್ಲಾ ರೀತಿಯ ಜವಾಬ್ದಾರಿಯನ್ನು ಕ್ಷೇತ್ರಶಿಕ್ಷಣಾಧಿಕರಿಗಳ ಹಾಗೂ ಜಿಲ್ಲಾ ಜವಾಬ್ದಾರಿ ವಹಿಸಿಕೊಂಡಿರುತ್ತಾರೆ. ಇಲ್ಲಿ ವಿಶೇಷವಾಗಿ ಕಾಡುಗೊಲ್ಲ ಹಾಗೂ ಜೋಗಿ ಸಮುದಾಯದ ಮಕ್ಕಳಿಗೆ ವರ್ಷಪೂರ್ತಿ ವಸತಿಯುತ ಯೋಜನೆಯನ್ನು ಜಾರಿಗೊಳಿಸಿದ್ದಾರೆ.

ಜೋಗಿಯ ಸಮುದಾಯದ ಅಲೆಮಾರಿಗಳು ನಿರ್ಗತಿಕರು ಮತ್ತು ಊರು ಅಲೆಯುತ್ತಾ ಹೋಗುತ್ತಿರುತ್ತಾರೆ. ಆದ್ದರಿಂದ ಅವರ ಮಕ್ಕಳನ್ನು ಇವರ ವಶಕ್ಕೆ ತೆಗೆದುಕೊಂಡು, ಅವರಿಗೆ ಉಚಿತವಾಗಿ ಎಲ್ಲ ಸೌಲಭ್ಯವನ್ನು ನೀಡುತ್ತಿದ್ದಾರೆ. ವಲಸೆ ಹೋದ ತಂದೆ ತಾಯಿಗಳು ಆರು ತಿಂಗಳಿಗೊಮ್ಮೆ ಕ್ಷೇಮ ಸಮಾಚಾರ ವಿಚಾರಿಸಲು ಬರುತ್ತಾರೆ. ಅಲೆಮಾರಿ ತನವನ್ನು ಕಡಿಮೆ ಮಾಡಲು ಅವರಿಗೆ ತಾಲ್ಲೂಕು ಪಂಚಾಯಿತಿ ವತಿಯಿಂದ ಉಚಿತ ನಿವೇಶನಗಳನ್ನು ಹಾಗೂ ತಾಲ್ಲೂಕು ಶಾಸಕರ ಅನುದಾನದಡಿಯಲ್ಲಿ ನವಗ್ರಾಮಗಳ ಯೋಜನೆಯಲ್ಲಿ ವಸತಿಯನ್ನು ನಿರ್ಮಾಣ ಮಾಡಿಕೊಡಲಾಗುತ್ತದೆ. ಆದ್ದರಿಂದ ಇವರು ಜೀವನದಲ್ಲಿ ಹಲವಾರು ಬದಲಾವಣೆಯನ್ನು ಕಾಣುತ್ತಿದ್ದಾರೆ. ಮಾರನಗೆರೆ ಗೊಲ್ಲರ ಹಟ್ಟಿಯಲ್ಲಿ ಎರಡು ಕೇಂದ್ರಗಳನ್ನು ನಡೆಸಲಾಗುತ್ತಿದ್ದು ತಿರಸ್ಕೃತ ಸಮಾಜಗಳಿಗೂ ಶಿಕ್ಷಣ ದೊರಕಿಸಿಕೊಡುವಲ್ಲಿ ಇಂತಹ ಯೋಜನೆಗಳು ಯಶಸ್ವಿಯಾಗುತ್ತಿರುವುದು ಸಂತೋಷಕರವಾದ ವಿಷಯವಾಗಿದೆ(ಮಾಹಿತಿ: ಕಲ್ಲಪ್ಪ ಬಿ.ಆರ್.ಪಿ., ೦೭.೦೮.೨೦೦೮).

ಹಿಂದುಳಿದ ವರ್ಗಗಳ ಇಲಾಖೆಯಿಂದ ತಾಲ್ಲೂಕಿನಲ್ಲೂ ಅತಿ ಹಿಂದುಳಿದ ಹಾಗೂ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಗ್ರಾಮಗಳನ್ನು ಆಯ್ದುಕೊಂಡು ಆಶ್ರಮ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವುಗಳೆಂದರೆ ಹೊನ್ನಗೊಂಡನಹಳ್ಳಿ ಗೊಲ್ಲರ ಹಟ್ಟಿ, ಮೂಗನಹಳ್ಳಿ ಗೊಲ್ಲರ ಹಟ್ಟಿ, ಬೇವಿನಹಳ್ಳಿ, ಇವು ಪ್ರಮುಖವಾದ ಗ್ರಾಮಗಳಾಗಿವೆ. ಪ್ರತಿ ಕೇಂದ್ರದಲ್ಲಿ ಇಪ್ಪತ್ತೈದು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಾಗುತ್ತಿದ್ದು, ಅವರಿಗೆ ಆಹಾರ ಮತ್ತು ವಸತಿಗಳನ್ನು ಉಚಿತವಾಗಿ ನೀಡಲಾಗುತ್ತಿವೆ. ಇದರಿಂದ ಆಸಕ್ತರಿಗೆ ಶಿಕ್ಷಣ ಸುಲಭವಾಗಿ ದೊರೆಯುತ್ತಿದೆ. ಇದರಿಂದ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಇಂದು ಪ್ರತಿ ಗೊಲ್ಲರ ಹಟ್ಟಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಯತ್ತ ಸಾಗುತ್ತಿರುವುದನ್ನು ಕಾಣಬಹುದು. ಅದರೂ ಕೆಲವೊಂದು ಕುಟುಂಬಗಳಿಗೆ ತೀವ್ರತರವಾಗಿ ಕಾಡುತ್ತಿರುವ, ಆರ್ಥಿಕ ಸಮಸ್ಯೆ, ಗೃಹಕೃತ್ಯಗಳು, ಕುರಿಸಂಗೋಪನೆ, ಸಂಪ್ರದಾಯ, ನಂಬಿಕೆಗಳಿಗೆ ಅಂಟಿಕೊಂಡಿರುವುದರಿಂದ ಸಮಾಜದ ಅಭಿವೃದ್ಧಿಗೆ ಮುಖ ಮಾಡುವುದು ಆಮೆಯಗತಿಯಲ್ಲಿ ಚಲಿಸಿದೆ.

ಈ ಎಲ್ಲಾ ಸೌಲಭ್ಯಗಳ ಜೊತೆಗೆ ದೂರದಿಂದ ಶಾಲೆಗೆ ಬರುವ ಮಕ್ಕಳಿಗೆ ಅನುಕೂಲವಾಗುವಂತೆ ಪ್ರತಿ ತಿಂಗಳಿಗೆ ನೂರ ಐವತ್ತು ರೂಪಾಯಿಗಳಂತೆ ಸಾರಿಗೆ ವೆಚ್ಚವನ್ನು ಸಹ ನೀಡಲಾಗುತ್ತಿದೆ. ಹಾಗೂ ತೀರ ನಿರ್ಗತಿಕ ಮಕ್ಕಳಿಗೆ ವಿದ್ಯಾರ್ಥಿನಿಯಲವನ್ನು ನೀಡಲಾಗುತ್ತಿದೆ. ಈ ಸೌಲಭ್ಯಗಳಿಂದ ಅಲೆಮಾರಿ ಸಮುದಾಯಗಳನ್ನು ಹೊರತುಪಡಿಸಿ ತಾಲ್ಲೂಕಿನ ಎಲ್ಲಾ ಸಮುದಾಯಗಳಲ್ಲಿ ಪ್ರಾಥಮಿಕ ಶಿಕ್ಷಣ ನೂರಕ್ಕೆ ನೂರರಷ್ಟು ಸಾಧ್ಯವಾದರೂ ಈ ಸಮುದಾಯಗಳು ಮಾತ್ರ ಮೀನಾ-ಮೇಷ ಎಣಿಸುವಂತಿದೆ ಇದಕ್ಕೆ ಸಂಬಂಧಪಟ್ಟವರು ಜಾಣಕುರುಡರಾಗುತ್ತಿದ್ದಾರೆ.

### ೪.೪.೫. ಶಿಕ್ಷಣದ ಸಮಸ್ಯೆಗಳಿಗೆ ಪರಿಹಾರೋಪಾಯಗಳು

೧. ಅಲೆಮಾರಿಗಳು ಒಂದೆಡೆ ಮೊದಲು ನೆಲೆಸುವಂತಾಗಬೇಕು

೨. ಅಭಿವೃದ್ಧಿಗೆ ಶಿಕ್ಷಣವು ಪ್ರಮುಖ ಅಂಶವಾದರೆ ಇವರ ಕುರಿಸಂಗೋಪನೆ ಸಮುದಾಯದ ಪಾರಂಪರಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಮೂಲ. ಆದ್ದರಿಂದ ಇವರ ವೃತ್ತಿಗೆ ಸೂಕ್ತ ಭದ್ರತೆ ಒದಗಿಸಬೇಕು.

೩. ಪಾರಂಪರಿಕ ವೃತ್ತಿಯಿಂದ ಕುಟುಂಬ ಸಮೇತ ಕುರಿ ಒಂದೆ ಹೋಗದಂತಾಗಲು ಇವರಿಗೆ ಆರ್ಥಿಕ ಭದ್ರತೆಯ ಯೋಜನೆಗಳನ್ನು ಜಾರಿಗೊಳಿಸಬೇಕು.

೪. ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಯತ್ನಿಸುವುದು.

೫. ಸಮುದಾಯವನ್ನು ಬಹುದಿನಗಳ ಕನಸಾದ ಪರಿಶಿಷ್ಟ ಬುಡಕಟ್ಟಿಗೆ ಸೇರಿಸುವ ಪ್ರಯತ್ನಕ್ಕೆ ಒತ್ತುಕೊಟ್ಟು ಸಾಮೂಹಿಕವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರುವುದು. ಇದಕ್ಕೋಸ್ಕರ ವೈಜ್ಞಾನಿಕವಾಗಿ ಸಮುದಾಯದ ಅಧ್ಯಯನಗಳು ನಡೆದಿರುವುದರಿಂದ ಅವುಗಳ ವರದಿಯನ್ನು ಮತ್ತು ವಿದ್ವಾಂಸರುಗಳ ಸಲಹೆಗಳನ್ನು ಸಮುದಾಯಕ್ಕೆ ಮತ್ತು ಸರ್ಕಾರಕ್ಕೆ ತಿಳಿಯಪಡಿಸಬೇಕಾಗುತ್ತದೆ. ಇದಕ್ಕೆ ಸಂಘಟಿತ ಮತ್ತು ಬದ್ಧತೆಯ ಪೂರ್ವ ಅವಶ್ಯಕಗಳು ಬೇಕಾಗುತ್ತವೆ.

೬. ಜಾಗತೀಕರಣದ ಈ ಸಂದರ್ಭಗಳಲ್ಲಿ ಸರ್ಕಾರಿ ಮತ್ತು ಅರೆಸರ್ಕಾರಿ ಹುದ್ದೆಗಳು ಕಡಿಮೆಯಾಗುತ್ತಿರುವುದರಿಂದ ಗುಣಾತ್ಮಕ ಶಿಕ್ಷಣ ಪಡೆದು ವಿಶೇಷ ಕೌಶಲ್ಯ ಸಂಪಾದಿಸಿಕೊಂಡು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ತೆರನಾದ ಕೌಶಲ್ಯಧಾರಿತ ಕಸುಬನ್ನು ಮಾಡುವಂತೆ ಯುವಕರು ತಯಾರಾಗಬೇಕು.

೭. ಉನ್ನತ ಶಿಕ್ಷಣವು ಬೌದ್ಧಿಕ ಪ್ರಗತಿಗೆ ಸಹಾಯಕವಾಗುವುದರಿಂದ ಸಮುದಾಯದ ಮಹಿಳೆಯರನ್ನು ಒಳಗೊಂಡಂತೆ ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸುವುದು.

೮. ಕಾಡುಗೊಲ್ಲ ಸಮುದಾಯವು ಒಂದು ಅಲೆಮಾರಿ ಬುಡಕಟ್ಟಾದ್ದರಿಂದ ಕೇಂದ್ರ ಸರ್ಕಾರ ಸಂವಿಧಾನದಲ್ಲಿ ತಿದ್ದುಪಡಿ ತಂದು ಅಲೆಮಾರಿ ಪಟ್ಟಿ ತಯಾರಿಸಿ, ಅಲೆಮಾರಿ ಪಟ್ಟಿಗೆ ಕಾಡುಗೊಲ್ಲರನ್ನು ಸೇರಿಸುವುದು.

೯. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸಿ ಅವರ ಕಲ್ಯಾಣಕ್ಕೆ ಪ್ರಯತ್ನಿಸುವುದು.

೧೦. ಜಾನಪದ ಸೊಗಡನ್ನೇ ತಮ್ಮ ಜೀವನದ ಹಾಸುಹೊಕ್ಕಾಗಿ ಮಾಡಿಕೊಂಡಿರುವ ಇವರ ಕಲೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವಂತಾಗಬೇಕು.

## ೫.೫. ರಾಜಕೀಯಾಭಿವೃದ್ಧಿ

### ೫.೫.೧. ಆಡಳಿತದ ಬಗೆ

ಆದಿ ಮಾನವನಿಂದ ಈವರೆಗಿನ ಸಮಾಜವು ಅನೇಕ ರೀತಿಯ ಆಡಳಿತ ವ್ಯವಸ್ಥೆಗಳನ್ನು ರೂಪಿಸಿಕೊಂಡಿದೆ. ಇದು ಮಾನವ ವಿಕಾಸದ ಚರಿತ್ರೆಯೇ ಆಗಿದೆ. ಆಡಳಿತ ವ್ಯವಸ್ಥೆಯು ರೂಪುಗೊಳ್ಳಲು ಮಾನವನ ಬುದ್ಧಿ ಕುಶಲತೆಗಳೇ ಮುಖ್ಯ ಕಾರಣವಾದ್ದರಿಂದ ಬುದ್ಧಿ ಕುಶಲತೆ ಬೆಳೆದುದರ ಅನುಗುಣವಾಗಿ ಆಡಳಿತ ವ್ಯವಸ್ಥೆಗಳು ರೂಪಿತವಾಗಿ ಚರಿತ್ರೆಯಲ್ಲಿ ಮಾನವನ ಆಡಳಿತ ವ್ಯವಸ್ಥೆಗಳು ಚಾರಿತ್ರಿಕ ಸಂದರ್ಭಕ್ಕಾನುಗುಣವಾಗಿ ಹುಟುಕೊಂಡಿವೆ. ಕೆಲವು ಆಡಳಿತ ವ್ಯವಸ್ಥೆಗಳು ಯಶಸ್ವಿಯಾಗಿವೆ. ಕೆಲವು ವಿಫಲವಾಗಿವೆ. ಇನ್ನೂ ಕೆಲವು ಪ್ರಯೋಗದಲ್ಲಿವೆ. ಈ ಆಡಳಿತ ವ್ಯವಸ್ಥೆಗಳು ಆಯಾ ಸಮಾಜ ತನ್ನ ಭದ್ರತೆ ರಕ್ಷಣೆ ನ್ಯಾಯಕ್ಕಾಗಿ ರೂಪಿಸಿಕೊಂಡ ನೀತಿ ನಿಯಮಗಳು ಆಗಿರುವುದರಿಂದ ಆಡಳಿತ ವ್ಯವಸ್ಥೆಗಳು ತಮ್ಮದೇ ಆದ ಸಂವಿಧಾನವೊಂದನ್ನು ರೂಪಿಸಿಕೊಂಡಿರುತ್ತವೆ.

ಅಲೆಮಾರಿ ಕಾಡುಗೊಲ್ಲ ಕುರಿಗಾರರು ಯಾವುದೇ ಶಿಕ್ಷಣವಿಲ್ಲದೆ ತಮ್ಮ ಜೀವನದಲ್ಲಿ ಅಲಿಖಿತ ಸಂವಿಧಾನೋಪಾದಿಯಲ್ಲಿ ಇಂತಹ ಆಡಳಿತ ವ್ಯವಸ್ಥೆಯನ್ನು ತಮ್ಮ ಜೀವನದಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಯಾವುದೇ ಪಂಚಾಯಿತಿ ಸದಸ್ಯರು ಇರುವುದಿಲ್ಲ. ಬದಲಿಗೆ ಎಲ್ಲಾ ಆಯಾ ಸಮಯಕ್ಕೆ ಸರಿಯಾಗಿ ಕೆಲಸಗಳು ನಿರ್ವಹಿಸುತ್ತಾ ಹೋಗುತ್ತವೆ. ಇದರಲ್ಲಿ ರಾಜಕೀಯದ ಅಖಾಡವೇ ಅವರ ಕುರಿ ಮಂದೆ, ಮತದಾರರೇ ಕುರಿಗಳು. ಅದರಲ್ಲಿನ ಸದಸ್ಯರು, ಹೀಗಾಗಿ ಅವರ ಆಡಳಿತ ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿರುತ್ತಾರೆ. ಇವರ ಕುಟುಂಬಗಳಲ್ಲಿ ಯಜಮಾನನೇ ಎಲ್ಲಾ ನಿರ್ವಹಿಸಿಕೊಂಡು ಹೋಗುತ್ತಾನೆ.

ಅಲೆಮಾರಿ ಕಾಡುಗೊಲ್ಲರಲ್ಲಿ ತಮ್ಮ ಜೀವನದ ಪ್ರತಿಯೊಂದು ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಲು ಅವರ ಆಡಳಿತ ಪದ್ಧತಿಯ ಇದಕ್ಕೆ ಕಾರಣ. ಇಲ್ಲಿ ಯಾವುದೇ ಪಕ್ಷಗಳಿರುವುದಿಲ್ಲ. ಇದ್ದರೆ ಶ್ರಮದಾನವೆಂಬ ಕುರಿಮಂದೆ. ಇಲ್ಲಿ ಎಲ್ಲರೂ ಆಡಳಿತ ನಡೆಸುವವರೇ. ಏಕೆಂದರೆ ಪ್ರತಿದಿನ ಮುಂಜಾನೆ ಐದು ಗಂಟೆಯಿಂದ ಆರಂಭವಾಗುವ ಇವರ ಜೀವನ ಕುರಿಮರಿಗೆ ಹಾಲು ಕುಡಿಸುವುದರಿಂದ ಕುರಿಗಳ ರೋಗಕ್ಕೆ ವೈದ್ಯ ಉಪಚಾರ, ಕುರಿಮರಿಗಳಿಗೆ ಸೊಪ್ಪು ತರುವುದು, ಅಡಿಗೆ ಮಾಡಲು ಕಟ್ಟಿಗೆ ನೀರು ತರುವುದು, ನಂತರ ಗೂಡೆಯನ್ನು ಸ್ಥಳಾಂತರಿಸುವುದು, ನಾಯಿಗಳಿಗೆ ಆಹಾರ ಹಾಕುವುದು, ಕುರಿಗಳನ್ನು ಅತ್ಯಂತ ಜವಾಬ್ದಾರಿಯಿಂದ ಕಾಯ್ದುಕೊಂಡು ಬರುವುದು, ರಾತ್ರಿ ವೇಳೆ ಸರ್ತೆ ಕಾಯುವುದು ಇವೇ ಇವರ ಪ್ರತಿನಿತ್ಯದ ಆಡಳಿತದ ಬಗೆಗಳು. ಇದರಲ್ಲಿ ಎಲ್ಲರಿಗೂ ಸಮಪಾಲು. ಇಲ್ಲಿ ಮೇಲು ಕೀಳು ಎಂಬ ಭೇದ ಭಾವವಿಲ್ಲ. ಇಷ್ಟಪಟ್ಟವರು ಮಾತ್ರ ಇಲ್ಲಿ ಇರುತ್ತಾರೆ. ಕಷ್ಟದಿಂದ ಇಲ್ಲಿ ಯಾರೂ ಇರುವುದಿಲ್ಲ.

ಆದ್ದರಿಂದ ಇವರು ತಮ್ಮ ಅಲೆಮಾರಿ ಜೀವನವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ(ಮಾಹಿತಿ: ಉತ್ತಣ್ಣ, ಮೇಣಿಗನಹಟ್ಟಿ).

### ೫.೫.೨. ನ್ಯಾಯ ಪದ್ಧತಿ

ಅಲೆಮಾರಿ ಕಾಡುಗೊಲ್ಲರಲ್ಲಿ ಯಾರು ಕೂಡ ಯಾವುದೇ ರಾಜಕೀಯ ಪಕ್ಷದಲ್ಲಿ ದೊಡ್ಡ ಪದವಿಯನ್ನು ಗಳಿಸಲಿಲ್ಲ. ಆದರೂ ಅಲೆಮಾರಿಗಳ ನ್ಯಾಯ ಪಂಚಾಯಿತಿಯು ಮಾತ್ರ ಇಂದಿಗೂ ವಿಶಿಷ್ಟವಾಗಿದೆ. ಕಾಡುಗೊಲ್ಲ ಕುರಿಗಾರರಲ್ಲಿ ಪ್ರಮುಖವಾಗಿ ತಲೆದೂರುವ ಸಮಸ್ಯೆಗಳೆಂದರೆ, ಸಾಮಾನ್ಯವಾಗಿ ಮೂರರಿಂದ ನಾಲ್ಕು ಕುರಿ ಹಿಂಡುಗಳ (ಗುಂಪುಗಳ) ಕುರಿಮಂದೆಯನ್ನು ಅಲ್ಲಲ್ಲಿ ತಡೆದಿರುತ್ತಾರೆ. ಆದ್ದರಿಂದ ಪ್ರತಿದಿನ ಅಕ್ಕಪಕ್ಕದಲ್ಲಿ ಕುರಿಗಳು ಬೇರೆ ಮಂದೆಗಳಲ್ಲಿ ಸೇರಿಕೊಳ್ಳುತ್ತವೆ. ಅಂತಹವುಗಳನ್ನು ಕೆಲವರು ಕಳ್ಳತನದಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ. ಆಗ ವಿಷಯ ವನ್ನು ಆ ಮಾರ್ಗದಲ್ಲಿ ಸಂಚರಿಸುವ ಬಸ್ಸಿನ ನಿರ್ವಾಹಕ, ಚಾಲಕರ ಸಹಾಯದಿಂದ, ಆ ಪ್ರದೇಶದ ಮಾರುಕಟ್ಟೆಯ ವ್ಯಾಪಾರಿಗಳಿಂದ, ದಲ್ಲಾಳಿಗಳಿಂದ, ಕಟುಕ ರಿಂದ, ಮಾಂಸಾಹಾರ ಹೋಟಲ್‌ಗಳ ಮಾಲೀಕರಿಂದ ವಿಷಯವನ್ನು ಸಂಗ್ರಹಿಸಿ, ಪಂಚಾಯಿತಿಗೆ ಸಾಕ್ಷಾಧಾರಗಳ ಸಹಿತ ಹಾಜರಪಡಿಸುತ್ತಾರೆ. ಆ ಕುರಿ ಮಂದೆಗಳಿಗೆಲ್ಲ ಒಬ್ಬ ಹಿರಿಯನಿರುತ್ತಾನೆ. ಅವರ ಜೊತೆಗೆ ನಾಲ್ಕು ಜನ ಮುಖಂಡರಿರುತ್ತಾರೆ. ಯಾವುದೋ ಒಂದು ಬೆಳಗಿನ ಸಮಯದ ಎಂಟು ಗಂಟೆಯ ಸಮಯಕ್ಕೆ ಪಂಚಾಯಿತಿ ಸೇರುತ್ತಾರೆ. ಅಪರಾಧಿಗಳು ತಪ್ಪನ್ನು ಒಪ್ಪಿಕೊಂಡರೆ ಅವರ ಕುರಿಯನ್ನು ಬದಲು ನೀಡಿ, ಒಂದರಿಂದ ಎರಡು ಸಾವಿರ ರೂಪಾಯಿಗಳವರೆಗೆ ದಂಡವನ್ನು ವಿಧಿಸುತ್ತಾರೆ. ಕುರಿಗಾರರು ಯಾವುದೇ ಕಾರಣಕ್ಕೂ ಪೋಲೀಸ್ ಠಾಣೆ ಮೆಟ್ಟಿಲು ಹತ್ತುವುದಿಲ್ಲ. ಒಂದು ವೇಳೆ ಶಿಕ್ಷೆಯನ್ನು ನೀಡುವ ಸಮಯ ಬಂದರೆ, 'ಹುಣಸೇ ಬರಲಿ'ನಿಂದ ಹಾಗೂ ಕಮರದ ಬರಲು(ಕಡ್ಡಿ)ನಿಂದ ಬರಿ ಮೈಯಲ್ಲಿ ನಿಲ್ಲಿಸಿ ಹೊಡೆಯುತ್ತಾರೆ. ನಂತರ ಅಪರಾಧಿ ತಪ್ಪಾಯಿತೆಂದು ಮೂರು ಬಾರಿ ಹೇಳಿ ದೇವರಿಗೆ ಹಾಲು ಮೀಸಲು ನೀಡಬೇಕಾಗುತ್ತದೆ(ಮಾಹಿತಿ: ದ್ಯಾವರನಾಗಣ್ಣ, ಮೇಣಿಗನಹಟ್ಟಿ).

ಇನ್ನೊಂದು ಬಗೆಯೆಂದರೆ ಕುರಿಗಳು ಹೆಚ್ಚು ಹೆಚ್ಚು ಸಮೃದ್ಧವಾಗಿ ಬೆಳೆಯುತ್ತಿರುವುದನ್ನು ಕೆಲವರು ಸಹಿಸುವುದಿಲ್ಲ. ಆದ್ದರಿಂದ ಜಾಡು ಅಥವಾ 'ಧಾಟು' ತೆಗಿಸಿ 'ಸೊಪ್ಪನ್ನು' ಹಾಕಿದರೆ ಮಂದೆ ಮಂದೆಯೇ ಸತ್ತು ಬೀಳುತ್ತವೆ. ಇಂತಹ ಸಮಯದಲ್ಲಿ ಆದ ನಷ್ಟವನ್ನು ಪಡೆದು ಅವರನ್ನು ಅವರ ಮಂದೆಗಳಿಂದಲೇ ಬಹಿಷ್ಕಾರ ಹಾಕುತ್ತಾರೆ. ಯಾವುದೇ ಕಾರಣಕ್ಕೂ ಅವರನ್ನು ಯಾವುದೇ ಹಬ್ಬ, ದೇವರ ಆಚರಣೆಗಳಲ್ಲಿ ಜೊತೆಯಲ್ಲಿ ಭಾಗವಹಿಸುವುದಿಲ್ಲ. ಯಾರನ್ನೂ ಅವರು ಮಾತನಾಡಿಸುವಂತೆಯೂ ಇಲ್ಲವಾಗಿರುತ್ತದೆ.

ಈ ಎಲ್ಲಾ ಪ್ರತಿನಿತ್ಯ ಜೀವನದಲ್ಲಿ ನಡೆಯುವ ಕೆಲಸಗಳಲ್ಲಿ ಕುರಿ ಮಂದೆ ಯಜಮಾನನೇ ಇಲ್ಲಿ ಅಧಿಕಾರಿಯೋಪಾದಿಯಲ್ಲಿ ಆಡಳಿತ ನಡೆಸುತ್ತಿರುತ್ತಾನೆ. ಇಲ್ಲಿ ಯಾವುದೇ ಸಮಯದಲ್ಲಿ ಯಾವುದೇ ಕಾರಣಕ್ಕೂ ಯಾವುದರಲ್ಲೂ ಚಾಚು ತಪ್ಪಬಾರದಂತೆ ಜೀವನ ನಡೆಸಿಕೊಂಡು ಹೋಗುತ್ತಿರುತ್ತಾರೆ. ಆದರೂ ಆಧುನಿಕ ಜಗತ್ತಿನ ಪ್ರಕಾರ ರಾಜಕೀಯ ಅಭಿವೃದ್ಧಿ ಎಂದರೆ ಅನೇಕ ಬಗೆಯ ಅರ್ಥಗಳನ್ನು ನಾವು ಕಾಣಬಹುದಾಗಿದೆ. ಅದರೆ ಇಲ್ಲಿ ಯಾರಿಗೂ ಯಾವುದೇ ಅಧಿಕಾರವನ್ನು ಹಂಚಿರುವುದಿಲ್ಲ. ಅವರವರ ಜವಾಬ್ದಾರಿಗಳನ್ನು ಸಾರಾಗವಾಗಿ ನಡೆಸಿಕೊಂಡು ಹೋಗುತ್ತಿರುತ್ತಾರೆ. ಯಾವ ಸಮಯಕ್ಕೆ ಯಾವ ಕೆಲಸ ಮಾಡಿಸಬೇಕು ಎಂಬುದೇ ಇವರ ಧ್ಯೇಯವಾಗಿರುತ್ತದೆ. ಆದ್ದರಿಂದ ಇವರ ಜವಾಬ್ದಾರಿ (ಅಧಿಕಾರ) ಶಾಶ್ವತವಾಗಿ ಉಳಿದು, ಬೆಳೆಯುತ್ತಾ ಬಂದಿದೆ. ಕುರಿಗಾರರು ಹಿಂದಿನಿಂದ ಯಾವ ರೀತಿಯಲ್ಲಿ ನಿರ್ವಹಿಸುತ್ತಾ ಬಂದಿದ್ದಾರೆಯೂ ಇಂದಿಗೂ ಅದೇ ರೀತಿಯಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಇಂದಿಗೂ ಯಾವುದೇ ಬದಲಾವಣೆಗಳಿಲ್ಲ. ಇಲ್ಲಿನ ಪ್ರಮುಖ ಜವಾಬ್ದಾರಿಗಳೆಂದರೆ ಕುರಿಮಂದೆಯನ್ನು ಅತಿ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಹಾಗೂ ಜವಾಬ್ದಾರಿಯಾಗಿ ನೋಡಿಕೊಳ್ಳುವುದು, ಹುಲ್ಲು, ನೀರುಗಳನ್ನು ಸರಿಯಾಗಿ ಸರಿಯಾದ ಪ್ರದೇಶಗಳ ಆಯ್ಕೆ ಮಾಡಿಕೊಳ್ಳುವುದು, ಮಳೆ, ಬಿಸಿಲುಗಳಿಂದ ರಕ್ಷಿಸಿಕೊಳ್ಳುವುದು. ಅಡುಗೆ ಕೆಲಸಕ್ಕೆ ಭತ್ಯೆಗಳನ್ನು ಸಮಯಕ್ಕೆ ಸರಿಯಾಗಿ ಜೋಡಿಸಿ ಕೊಳ್ಳುವುದು. ಇವುಗಳು ಅತ್ಯಂತ ಪ್ರಮುಖವಾದ ವಿಕೇಂದ್ರಿಕರಣಗೊಂಡ ಅಧಿಕಾರದ ರೂಪಗಳಾಗಿವೆ. ಆದರೆ ಇಲ್ಲಿ ಅವುಗಳನ್ನು ಯಾರು ಬೇಕಾದರು ನಿರ್ವಹಿಸಬಹುದಾಗಿರುತ್ತದೆ(ಮಾಹಿತಿ: ಬಡರಾಮಪ್ಪ, ಧರಗ).

ಆಧುನಿಕ ರಾಜಕೀಯಕ್ಕೆ ಸಂಬಂಧಿಸಿದಂತೆ ಇವರಿಗೆ ಓಟ್ ಕಾರ್ಡಗಳನ್ನು ನೀಡಿರುತ್ತಾರೆ. ಇವರು ಇದಕ್ಕೆ ಒಪ್ಪಲು ಪ್ರಮುಖ ಕಾರಣವೆಂದರೆ ತಮ್ಮ ಪೋಟೋಗಳನ್ನು ಉಚಿತವಾಗಿ ತೆಗೆದುಕೊಡುತ್ತಾರೆಂಬ ಒಂದೇ ಕಾರಣದಿಂದ ಅರೆಬರೆ ಗಡ್ಡ ಇರುವ, ಬಿಸಿಲಿಗೆ ಕಪ್ಪಾಗಿ ಸೊರಗಿರುವ ಬಡಕಲು ದೇಹ, ಕೊಳಕು ಬಿಟ್ಟಯೊಂದಿಗೆ ಇಂದಿನ ಎಲ್ಲಾ ಓಟ್ ಕಾರ್ಡ್‌ಗಳಿಗೆ ನೀಡಿರುವ ಪೋಟೋಗಳನ್ನು ನೋಡಬಹುದು. ಅವರು ಎಂದಿಗೂ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ. ಯಾರಾದರೂ ಸಿಕ್ಕಾಗ 'ಏಯ್ ಓಟಾಕಕೆ ಬಾರಲೇ ಇಲ್ಲಂದ್ರ ನೀನು ಗೌರ್‌ಮೆಂಟ್‌ನ ಲೆಕ್ಕದಂಗೆ ಸತ್ತಂಗೆ ಅದಕ್ಕೆ ಓಟು ಹಾಕು'' ಎಂದು ಹೇಳಿದರೆ ಅಯ್ಯೋ ರಾಮ ಅದರಿಂದ ನನ್ನಗೆ ಬರೋದು ಏನು ಇಲ್ಲ. 'ಓಟೂ ಹಾಕಿದ್ರೆ ಏನಾದರೂ ಕುರಿಕಾಯುವುದು ತಪ್ಪುತ್ತಾ, ಈಟು ದೂರದಿಂದ ಒಂದು ಓಟು ಹಾಕಿ ಅವರ್ನ ಯಾಕೆ ಉದ್ಧಾರ ಮಾಡಬೇಕು' ಎಂಬ ವಾದವನ್ನು ಮಂಡಿಸುತ್ತಾರೆ. ಆದ್ದರಿಂದ ಸರ್ಕಾರಗಳ ಅಲೆಮಾರಿಗಳ ಅಭಿವೃದ್ಧಿಗಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ರಾಜಕೀಯವಾಗಿ ಮೀಸಲಾತಿಗಳನ್ನು, ನೀಡಿದರೂ ಇವರಿಗೆ ಅವುಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿಲ್ಲ. ಕಾರಣ ಇವರಿಗೆ ಆಧುನಿಕ ಪ್ರಜಾಪ್ರಭುತ್ವದ ಅಧಿಕಾರಕ್ಕಿಂತ ಇವರ ಪಾರಂಪರಿಕ ಯಾವುದೇ ಮೇಲು, ಕೀಳು ಎಂಬ ಭೇದ ಭಾವ ಇಲ್ಲದೇ ಇರುವ ಕುರಿ ಮಂದೆಯ

ಆಡಳಿತವೇ ಇವರಿಗೆ ಒಪ್ಪಿರುವ ರಾಜಕೀಯ ಆಡಳಿತ ಇಲ್ಲಿ ಕಾಯ್ದೆಗಳಿಲ್ಲ. ಅದರೂ ಅದಕ್ಕಿಂತ ಹೆಚ್ಚಿನದಾಗಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಾರೆ. ಶಿಕ್ಷೆಗಳ ಭಯವಿಲ್ಲ ಆದರೂ ಶಿಕ್ಷಿಸುತ್ತಾರೋ ಎಂಬ ಭಯವಿದೆ. ಇವರಿಗೆ ಯಾವುದೇ ಓಟ್ ಕಾರ್ಡ್, ಚುನಾವಣೆ, ಪಡಿತರ ಚೀಟಿ, ಯಾವುದೂ ಬೇಕಾಗಿಲ್ಲ. ಆದರೂ ಸಮಯಕ್ಕೆ ಸರಿಯಾಗಿ ಜವಾಬ್ದಾರಿಯುತ ಆಡಳಿತ ದವಸ ದಾನ್ಯಗಳು ದೊರೆಯುತ್ತಿರುವಾಗ ಯಾವ ರಾಜಕೀಯ ನಮಗೆ ಬೇಕು ಎಂಬ ಮನೋಭಾವವನ್ನು ಹೊಂದಿದ್ದಾರೆ. ಆದ ಕಾರಣ ಆಧುನಿಕ ರಾಜಕೀಯಕ್ಕಿಂತ ಪಾರಂಪರಿಕ ರಾಜಕೀಯವಾಗಿಯೇ ಹೆಚ್ಚು ಅಭಿವೃದ್ಧಿ ಹೊಂದಿರುವುದನ್ನು ನೋಡಬಹುದು.

ಶಿರಾ ತಾಲ್ಲೂಕಿಗೆ ಸಂಬಂಧಿಸಿದಂತೆ ಕಾಡುಗೊಲ್ಲರ ೫೪,೮೩೪ರ ಜನಸಂಖ್ಯೆಯನ್ನು ಹೊಂದಿರುವ ಈ ಸಮುದಾಯ ಗ್ರಾಮಪಂಚಾಯಿತಿ ತಾಲ್ಲೂಕ್ ಪಂಚಾಯಿತಿ ಮಟ್ಟದಲ್ಲಿ ಸದಸ್ಯರನ್ನು ಹೆಚ್ಚು ಹೊಂದಿದ್ದರೂ ತಾಲ್ಲೂಕಿನ ಅಧಿಕಾರ ಮಾತ್ರ ಮೇಲ್ವರ್ಗಗಳಿಗೆ ಸೀಮಿತವಾಗಿದೆ. ಇವರು ಅಧಿಕಾರದಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದ ಹಾಗೆ ಇದ್ದಾರೆ. ಆದ್ದರಿಂದ ಈ ಸಮುದಾಯದಲ್ಲಿ ಅಲೆಮಾರಿ ಕುರಿಗಾರರ ಸ್ಥಿತಿಯು ಮಾತ್ರ ಸುಧಾರಿಸುವ ಮಟ್ಟದಲ್ಲಿ ಇಲ್ಲವಾಗಿದೆ. ಇವರು ಪ್ರತಿದಿನ ಹೊಸ ಹೊಸ ಪ್ರದೇಶಗಳನ್ನು ಸುತ್ತುತ್ತಾ ಕುರಿ ಮಂದೆಯ ಹಿಂದೆ ಹೊರಟರೆ ಈ ರಾಕ್ಷಸವೆಂಬ ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವೆ. ಹಾಗೂ ಇವರ ಅಭಿವೃದ್ಧಿ ಎಂದು ಬಾಯಿ ಬಡಿಯುತ್ತಿರುವ ಸರ್ಕಾರಗಳ ಈ ಎಲ್ಲಾ ಯೋಜನೆಗಳು ಯಾರ ಪಾಲಾಗುತ್ತಿವೆ ಎಂಬುದು ಪ್ರಶ್ನಾರ್ಹವಾಗಿದೆ?

## ೪.೬. ಕಾಡುಗೊಲ್ಲರ ಧಾರ್ಮಿಕಾಭಿವೃದ್ಧಿ

### ೪.೬.೧. ಕುರಿಸಂಗೋಪನೆಯಲ್ಲಿ ಧಾರ್ಮಿಕತೆ

ಎಲ್ಲ ಧರ್ಮಗಳಿಗೂ ಬುಡಕಟ್ಟು ಧರ್ಮವೇ ತಳಹದಿ. ಮಾನವನಲ್ಲಿಯ ಅಗಾಧವಾದ ಬುದ್ಧಿಶಕ್ತಿಯೆ ಈ ಧರ್ಮಗಳ ಉಗಮಕ್ಕೆ ಕಾರಣ. ಕಾಡುಗೊಲ್ಲರು ಬೇಟೆಗಾರಿಕೆ ಮತ್ತು ಕಾಡು ಮೂಲದಿಂದ ಕವಲೊಡೆದು ಪಶುಪಾಲನೆಗೆ ಕೂಡಿಕೊಂಡ ಒಂದು ಬುಡಕಟ್ಟು. ಪಶುಪಾಲನೆಯಲ್ಲಿ ಮೂಲತಃ ಮೇಷ ಪಾಲಕರಾಗಿ ಆಮೇಲೆ ದನಗಾಹಿಗಳಾಗಿರಲು ಸಾಧ್ಯ. ಇಂದಿಗೂ ಇವರಲ್ಲಿ ಮೇಷ, ಮೇಕೆಗಳಿಗೆ ವಿಶೇಷ ಸ್ಥಾನವುಂಟು. ಇವರು ಹಬ್ಬ, ಹರಿದಿನ, ಜಾತ್ರೆ ಇತ್ಯಾದಿ ಆಚರಣೆಗಳಲ್ಲಿ ಜನ್ನಿಗೆ ಕುರಿಯು ಮಹತ್ವದ ಪಾತ್ರವಹಿಸುತ್ತದೆ.

ಪಶುಪಾಲನೆಯಲ್ಲಿ ಮೇಷ(ಕುರಿ) ಅಥವಾ ಮೇಕೆ ಪಾಲನೆಯೇ ಮೊದಲೆಂಬುದನ್ನು ರಾಶಿ ಚಕ್ರದ ಪ್ರಥಮ ಮೇಷ ರಾಶಿಯು ಹಾಗೂ ಆಮೇಲೆ ದನ ಕರುಗಳ ಪಾಲನೆಯು ಎಂಬುದಕ್ಕೆ ರಾಶಿ ಚಕ್ರದ ದ್ವಿತೀಯ 'ವೃಷಭರಾಶಿ' ರಾಶಿಯು ಸಾಬೀತುಪಡಿಸುವುದು. ಹೀಗಾಗಿ ಕಾಡುಗೊಲ್ಲ ಸಮುದಾಯದವರು ಬೇಡರಿಂದ, ಕುರುಬರಾಗಿ ಗೊಲ್ಲಸಮುದಾಯವಾದಂತಾಯಿತು.

ಯಾವುದೇ ಒಂದು ಸಮುದಾಯ ಬಹುಕಾಲ ಒಂದೇ ಕಸುಬಿನಲ್ಲಿ ಸ್ಥಗಿತಗೊಂಡಾಗ ಆ ಕಸುಬಿನ ಹೆಸರಿಂದಲೇ ಆ ಸಮುದಾಯವನ್ನು ಗುರುತಿಸಿ ಕರೆಯುವುದು ಲೋಕರೂಢಿಯಾಗಿತ್ತು. ಸಮಾಜ ಚಲನಶೀಲವಾಗಿರುವುದರಿಂದ ಕಸುಬಾಧಾರಿತ ಜಾತಿಗಳ ಸೃಷ್ಟಿಗೆ ಕಾರಣವಾದವು. ಆದರೆ ಇಂದು ಕಸುಬಾಧಾರಿತ ಜಾತಿಗಳನ್ನು ಪರಿಚಯಿಸುವುದು ಕಷ್ಟ ಸಾಧ್ಯ ಕಾರಣ ಬೇಡರು ಬೇಡರಾಗಿರದೆ, ಅವರು ಪಶುಪಾಲಕರೂ, ಕೃಷಿಕರೂ ಆಗಿರುವವರು. ಕುರುಬರು ಕುರುಬರಾದರೆ, ದನಗಾಹಿಗಳೂ, ಕೃಷಿಕರೂ, ಆಗಿರುವವರು ಅಷ್ಟೇ ಅಲ್ಲ ಅವರಲ್ಲಿ ವಿದ್ಯಾವಂತರಾದವರು ಸಾರ್ವಜನಿಕ ಸೇವೆಗಳಲ್ಲಿದ್ದಾರೆ. ಇಂದು ಅವರನ್ನು ಕಳ್ಳುಬಳ್ಳಿ ಅಧಾರಿತ ಸಾಮಾಜಿಕ ಸಂಘಟನೆಯಿಂದ ಹಾಗೂ ಅವರು ಆಚರಿಸುವ ಆಚರಣೆಗಳಿಂದ ಪರಿಚಯಿಸಬಹುದಾಗಿದೆ(ಮೇತ್ರಿ ಕೆ.ಎಂ., ೨೦೦೦:೨-೩).

### ೪.೬.೨. ನಿತ್ಯ ಬದುಕಿನಲ್ಲಿ ಧಾರ್ಮಿಕತೆ

ಅಲೆಮಾರಿ ಕಾಡುಗೊಲ್ಲರು ಧಾರ್ಮಿಕತೆಯಲ್ಲಿ ತಮ್ಮದೇ ಆದ ವಿಶೀಷ್ಟ ಚಾಪನ್ನು ಮೂಡಿಸಿಕೊಂಡಿದ್ದಾರೆ. ಭಾರತದ ಯಾವುದೇ ಬುಡಕಟ್ಟುಗಳಲ್ಲಿಲ್ಲದ ಧಾರ್ಮಿಕತೆ ಈ ಸಮುದಾಯದಲ್ಲಿ ಕಾಣಬಹುದಾಗಿದೆ. ಇವರಿಗೆ ಇವೇ ಇವರ ಜೀವಾನಾಧಾರ. ಇವುಗಳಲ್ಲದೆ ಇವರು ಜೀವನ ನಿರ್ವಯಿಸುವುದು ಸಹ ಸಾಧ್ಯವಿಲ್ಲದ ಮಾತು. ಆದ್ದರಿಂದ ಇವರ ಜೀವನದ ಪ್ರತಿ ಹೆಜ್ಜೆಯಲ್ಲೂ ಸಂಪ್ರದಾಯದ ಹಜ್ಜೆಯನ್ನೆ ಇಡುತ್ತಾರೆ. ಅಲೆಮಾರಿ ಕಾಡುಗೊಲ್ಲ ಕುರಿಗಾರರು ಪ್ರಮುಖವಾದ ಧಾರ್ಮಿಕ ಆಚರಣೆಗಳೆಂದರೆ, ಇವರು ದೇವರನ್ನು ಅತ್ಯಂತ ಭಯ, ಭಕ್ತಿಯಿಂದ ನಂಬುತ್ತಾರೆ. ಪೂಜೆ, ಪುನಸ್ಕಾರಗಳಿಗೆ ವಿಶೇಷ ಮಾನ್ಯತೆ ನೀಡುತ್ತಾರೆ. ಬೆಳಗಿನ ಸೂರ್ಯ ನಮಸ್ಕಾರದಿಂದ ಹಿಡಿದು ಸಾಯಂಕಾಲದ ಪೂಜೆಯವರೆಗೂ ಇವರು ದೇವರಿಗೆ ಕೈಯನ್ನು ಮುಗಿಯುತ್ತಲೇ ಇರುತ್ತಾರೆ.

ಕಾಡುಗೊಲ್ಲರು ತಮ್ಮ ಕುರಿಮಂದೆಯಲ್ಲಿ ಕಾಫಿ ಅಥವಾ ಟೀ ಪಾನೀಯವನ್ನು ಕುಡಿಯಲು ಹಾಲು ಕರೆಯುತ್ತಾರೆ. ಆಗ ಮುಖವನ್ನು ತೊಳೆದುಕೊಂಡು ಸೂರ್ಯನಿಗೆ ನಮಿಸಿ ಹಾಗೂ ಕುರಿಯ ಕೆಚ್ಚಲಿಗೆ ಕೈ ಮುಗಿದು ಹಾಲನ್ನು ಕರೆದುಕೊಳ್ಳುತ್ತಾರೆ. ಅವರು ಬೇಡುವುದೆಂದರೆ ನಮ್ಮ ಹಿಂಡು ಚೆನ್ನಾಗಿ ಬೆಳೆಯಲಿ ಯಾವುದರಿಂದ ತೊಂದರೆಯಾಗದಿರಲಿ ಎಂದು ಅಲ್ಲಿಂದ ಅಡುಗೆ ಮಾಡಲು ತಯಾರಾದಾಗ ಮೊದಲು ಮೂರು ಕಲ್ಲುಗಳನ್ನು ಜೋಡಿಸುತ್ತಾರೆ. ಒಲೆಗೆ ಬೆಂಕಿ ಹಾಕುವಾಗ ದೇವರಿಗೆ ನಮಿಸಿ ಬೆಂಕಿ ಹಾಕುತ್ತಾರೆ. ಯಾವಾಗಲೂ ನಮ್ಮ ಆಹಾರ ಪದಾರ್ಥ ಕೆಡದೆ ಹಾಗೂ ಬರಿದಾಗದೆ ಕಾಪಾಡು ಎಂದು ಕೇಳಿಕೊಳ್ಳುತ್ತಾರೆ. ಆದ್ದರಿಂದಲೋ ಏನೋ ಕುರಿಮಂದೆಯಲ್ಲಿ ಯಾವಾಗಲೂ ಊಟಕ್ಕೆ ಎಂದೂ ತೊಂದರೆ ಬರುವುದಿಲ್ಲ. ಇನ್ನು ಒಲೆಗೆ ಉರುವಲು ಬಳಕೆಗೆ ಬಳಸುವ ಕಟ್ಟಿಗೆಗಳಲ್ಲಿ ಬೇವಿನ ಕಟ್ಟಿಗೆಯನ್ನು ಇಡುವುದಿಲ್ಲ. ಏಕೆಂದರೆ ಅದರಲ್ಲಿ ಕರಿಯಮ್ಮ ವಾಸವಾಗಿದ್ದಳೆಂಬ ನಂಬಿಕೆಯಿಂದ ಹಾಗೂ ಕೆಲವೊಂದು ಕಡೆ ಜುಂಜಪ್ಪನ ಬಸವನ ಗುಡ್ಡೆಯ ಮೇಲೆ ಇವುಗಳನ್ನು ಬೆಳೆಸಿರುವುದರಿಂದ

ಅದು ಬಸವನ ಪ್ರತಿರೂಪ ಎನ್ನುವ ಕಾರಣದಿಂದ ಇದರ ಕಟ್ಟಿಗೆಯನ್ನು ಇಡುವುದಿಲ್ಲ. ಇನ್ನೂ ಅಡುಗೆಯಲ್ಲಿ ತಯಾರಿಸಿದ ಮೇಲೆ ಪಾತ್ರೆಗಳಿಗೆಲ್ಲ ವಿಭೂತಿಯ ತರಹ ಬೂದಿಯನ್ನು ಮೂರು ಬೆರಳಿನಲ್ಲಿ ಬಳಿಯುತ್ತಾರೆ. ನಂತರ ಕೈಮುಗಿದು ಪಕ್ಕದಲ್ಲಿ ಇಡುತ್ತಾರೆ. ಇವರು ಯಾವುದೇ ಕಾರಣಕ್ಕೂ ಕಾಲಿನಿಂದ ಪಾತ್ರೆಗಳನ್ನು ಮುಟ್ಟದಂತೆ ಎಚ್ಚರವಹಿಸುತ್ತಾರೆ. ಅಲ್ಲದೆ ಊಟ ಮಾಡುವಾಗ ಎಡಗೈಯಿಂದ ಊಟದ ತಟ್ಟೆಯನ್ನು ಮುಟ್ಟುವಂತಿಲ್ಲ. ಒಂದು ವೇಳೆ ಆ ರೀತಿ ಎಡಗೈಯಲ್ಲಿ ಮುಟ್ಟಿದರೆ ಕೈತೊಳೆದು ಬೇಕಾದಾಗ ಬೇರೆಯವರಿಂದ ಕೈಗೆ ನೀರು ಹೊಯ್ಸಿಕೊಳ್ಳುತ್ತಾರೆ. ನಂತರ ಬೂದಿಯಿಂದ ತಟ್ಟೆಯನ್ನು ಸ್ವಚ್ಛಗೊಳಿಸುತ್ತಾರೆ ಮತ್ತು ಕುರಿಯ ಮಂದೆಯೊಳಕ್ಕೆ ಹಾಗೂ ಗೊಡೆಯ ಹತ್ತಿರಕ್ಕೆ ಯಾವುದೇ ಕಾರಣಕ್ಕೆ ಚಪ್ಪಲಿಗಳನ್ನು ಮೆಟ್ಟಿ ಬರುವುದಿಲ್ಲ. ಒಂದು ವೇಳೆ ಏನಾದರೂ ಊಟ ಮಾಡುವ ಸಮಯದಲ್ಲಿ ಎಡಗೈ ಬಲಗೈಗಳಲ್ಲಿ ಮುಟ್ಟುವುದು, ಚಪ್ಪಲಿ ಮೆಟ್ಟಿಕೊಂಡು ಗೋಡೆಯ ಹತ್ತಿರಕ್ಕೆ ಹಾಗೂ ಮಂದೆಯೊಳಕ್ಕೆ ಹೋಗುವುದರಿಂದ ಅಂಟು-ಮುಂಟಾಗುತ್ತದೆ. ಇದಲ್ಲದೆ ಹೆಂಗಸರು ತಿಂಗಳ ಮುಟ್ಟಾದಾಗ ಕಡ್ಡಾಯವಾಗಿ ಹೊರಗೆ ಹೋಗುತ್ತಾರೆ. ಮರದನೆರಳು ಮಳೆ, ಗಾಳಿ, ಬಿಸಿಲಿಗೆ ಆಸರೆಯಾಗಿರುತ್ತದೆ. ಇವುಗಳನ್ನು ಸರಿಯಾಗಿ ಆಚರಿಸದಿದ್ದರೆ, ಕುರಿಗಳಿಗೆ ಕಾಯಿಲೆ ಬರುವುದು ಆಕಸ್ಮಿಕವಾಗಿ ಕಾಲು ಮುರಿಯುವಂತೆ, ಕಲ್ಲುಗಳಿಂದ ಹೊಡೆಯುವುದು, ಕುರಿಗಳಿಗೂ ಮನುಷ್ಯರಿಗೂ ಚೇಳು, ಹಾವು ಕಚ್ಚುವುದು, ಅನಾರೋಗ್ಯಕ್ಕೆ ತುತ್ತಾಗುವುದು, ಪ್ರಮುಖ ಲಕ್ಷಣಗಳಾಗಿವೆ. ಆದ್ದರಿಂದ ಅಂಟು-ಮುಂಟಾಗದೆ ಇವರು ಊರಿನಿಂದ ಅಥವಾ ಹೊರಗಿನ ಪ್ರದೇಶದಿಂದ ಬಂದಾಗ ಮುಖ, ಕೈ, ಕಾಲು ತೊಳೆದುಕೊಂಡು ಗೋವಿನ ಗಂಜನ್ನು ಸೋಕಿಸಿಕೊಂಡು ಕುರಿಯ ಮಂದೆ ಹತ್ತಿರ ಹೋಗುತ್ತಾರೆ. ಯಾರೇ ಹೊಸಬರು ಬಂದರೆ ಯಾವುದೇ ಕಾರಣಕ್ಕೂ ಕುರಿಮಂದೆಯೊಳಕ್ಕೆ ಬಿಡುವುದಿಲ್ಲ ಹಾಗೂ ಹೆಂಗಸರಿಗೂ ಮಂದೆಯೊಳಕ್ಕೆ ಪ್ರವೇಶ ನಿಷಿದ್ಧ (ಮಾಹಿತಿ:ದಾಸಪ್ಪ, ತರೀಕೆರೆ).

ಕುರಿಗಳಿಗೆ ಯಾವುದೇ ಸಮಸ್ಯೆಗಳು ಬರದೇ ಇರಲೆಂದು ಮೂರು ಗೊಡೆ ಮುಸುರೆಯನ್ನು ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಹಾಕುತ್ತಾರೆ. ಏಕೆಂದರೆ ಇದರಿಂದ ಕುರಿಗಳಿಗೆ ದೇವರ ಅನುಗ್ರಹ. ಅಲ್ಲದೇ ಯಾವುದೇ ಜಾಡುಗಳಿಗೆ ತಗುಲುವುದಿಲ್ಲವಾದ್ದರಿಂದ ಮುಸುರೆಯನ್ನು ಕಡ್ಡಾಯವಾಗಿ ಹಾಕುತ್ತಾರೆ. ಇನ್ನು ಕುರಿ ಮಂದೆಯಲ್ಲಿ ಜನಿಸುವ ಕುರಿಮರಿಗಳಲ್ಲಿ ಗಂಡು ಮರಿಗಳನ್ನು, ಕರಿಯಮ್ಮ, ಮಾರಮ್ಮ, ಭೂತಪ್ಪ, ಸಿದ್ಧಯ್ಯ, ದೇವರುಗಳಿಗೆ ಹರಕೆಯಾಗಿ ಬಿಡುತ್ತಾರೆ. ಇದರಲ್ಲಿ ಕರಿಯಮ್ಮ ಮತ್ತು ಮಾರಮ್ಮ, ದೇವತೆಗಳಿಗೆ ಮೇಕೆಹೋತಗಳನ್ನು ಬಿಡುತ್ತಾರೆ. ಏಕೆಂದರೆ ಸಿಡುಬು, ಅಮ್ಮಗಳ ಕಾಯಿಗಳಿಗೆ ಪರಿಹಾರ ಈ ಹೆಣ್ಣು ದೇವತೆಗಳೆ ಪ್ರಮುಖ ಆಧಾರ ಎಂಬುವ ನಂಬಿಕೆಯಿಂದ, ಕುರಿಮಂದೆಯನ್ನು ರಕ್ಷಿಸಲು ಹಾಗೂ ಭೂತಪ್ಪ, ಸಿದ್ಧಯ್ಯ ಇವರು ಒಟ್ಟು ರಕ್ಷಣೆಗೋಸ್ಕರ ಇವರಿಗೆ ಹರಕೆಯನ್ನು ಬಿಡುತ್ತಾರೆ. ಇದರಲ್ಲಿ ವಿಶೇಷವಾಗಿ ಸಿದ್ಧಯ್ಯ ದೇವರಿಗೆ 'ಭೂರಿ ಬಿಡುವುದು' ಎನ್ನುವುದು ವಿಶೇಷವಾಗಿದೆ. ಈ ಸಂಪ್ರದಾಯ ಈ ದೇವರಿಗೆ ಮಾತ್ರ ವಿಶೇಷವಾಗಿ ಹರಕೆ ಸಲ್ಲಿಸುತ್ತಾರೆ. 'ಭೂರಿ' ಎಂದರೆ ಬಹುಜನಕ್ಕೆ

ದಾನ ಮಾಡುವುದು, ಸಾಮೂಹಿಕದಾನ ಮಾಡುವುದು. ಹಾಗೂ ಅಧಿಕ ಸಂಖ್ಯೆಯಲ್ಲಿ ಹೆಚ್ಚಾಗುವುದು ತಮ್ಮ ಕುರಿ ಹಿಂಡು ಹೆಚ್ಚಾಗುವಂತೆ ಬೇಡಿ ಈ ದೇವರಿಗೆ ಈ ರೀತಿಯ ಹರಕೆಯನ್ನು ತೀರಿಸುತ್ತಾರೆ.

ಈ ಹರಕೆಗೆ ಟಗ್ಗು ಕುರಿ ಮರಿಯನ್ನು ಒಂದರಿಂದ ಎರಡು ವರ್ಷ ಬೆಳೆಸುತ್ತಾರೆ. ಯಾವುದೋ ಒಂದು ಭಾನುವಾರಕ್ಕೆ ಹರಕೆಯ ದಿನ ನಿಗದಿಗೊಳಿಸಿಕೊಳ್ಳುತ್ತಾರೆ. ಅಂದು ರಾತ್ರಿ ಹನ್ನೆರಡು ಗಂಟೆಯ ಸಮಯಕ್ಕೆ ಸರಿಯಾಗಿ ಅದನ್ನು ಬಲಿ ನೀಡುತ್ತಾರೆ. ಇಲ್ಲಿ ಇನ್ನೊಂದು ವಿಶೇಷ ಎಂದರೆ ದೇವರ ಪೂಜಾರಿಗಳು ಸೂರೆ ಬುರುಡೆಯನ್ನು ಪಾತ್ರೆಯೋಪಾದಿಯ ರೀತಿಯಲ್ಲಿರುವ ಮೂರು ಬುರುಡೆಗಳನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಹರಕೆಯ ಸಮಯದಲ್ಲಿ ಆ ಮೂರು ಪಾತ್ರಗಳಿಗಾಗುವಷ್ಟು ಎಡೆಯನ್ನು ಸಲ್ಲಿಸುತ್ತಾರೆ. ಅಂದಿನ ಹಬ್ಬದ ಆಚರಣೆಯನ್ನು ರಾತ್ರಿಯೇ ಮುಗಿಸುತ್ತಾರೆ. ಯಾವುದೇ ಕಾರಣಕ್ಕೂ ಬೆಳಗಿನ ಜಾವಕ್ಕೆ ಉಳಿಸಿಕೊಳ್ಳುವುದಿಲ್ಲ. ಇದು ಹರಕೆಯಲ್ಲಿ ಪ್ರಮುಖವಾದುದು(ಮಾಹಿತಿ ಹೊಟ್ಟೆ ಈರಣ್ಣ, ಪೆನ್ನೊಬನಹಳ್ಳಿ ಗೊಲ್ಲರಹಟ್ಟಿ).

ಭೂತಪ್ಪ ದೇವರಿಗೆ ಪ್ರತಿವರ್ಷ ಬಲಿ ನೀಡುತ್ತಾ ಬರುತ್ತಾರೆ. ಈ ದೇವರಿಂದ ಪ್ರತ್ಯಕ್ಷ ರಕ್ಷಣೆ ಹಾಗೂ ಯಾವಾಗಲೂ ಪ್ರಕೃತಿಯಲ್ಲಿ ಜೀವನ ನಡೆಸುವ ಇವರಿಗೆ ಮೇಲು ದೆವ್ವ, ಪಿಶಾಚಿ. ಗಾಳಿಗಳಿಂದ ನಮ್ಮನ್ನು ಮಕ್ಕಳನ್ನು ರಕ್ಷಿಸುವಂತೆ ಹರಕೆ ಸಲ್ಲಿಸಲು ಭೂತಪ್ಪ ಸ್ವಾಮಿಗೆ ಹರಕೆ ತೀರಿಸುತ್ತಾರೆ. ಯಾವುದೇ ಕುರಿಮಂದೆಗೆ ಹೋದರೂ ಈ ದೇವರುಗಳ ಹರಕೆಯ ಪಟ್ಟಿಗಳು ಇರುತ್ತವೆ. ಈ ಆಚರಣೆಯ ಜೊತೆಗೆ 'ಗಿಡದ ದೇವರು' ಅತ್ಯಂತ ಪ್ರಮುಖ ಆಚರಣೆಯಾಗಿದೆ. ಯಾವಾಗಲೂ ಪ್ರಕೃತಿಯಲ್ಲಿರುವ ಇವರು ಮಳೆ, ಗಾಳಿ, ಬಿಸಿಲಿನಿಂದ ಪ್ರಕೃತಿಯಲ್ಲಿ ರಕ್ಷಣೆಗೋಸ್ಕರ ಗಿಡದ ದ್ಯಾವರನ್ನು ಮಾಡುತ್ತಾರೆ. ಈ ದೇವರಿಗೆ ಒಂದು ತಂಕಟ ಗಿಡಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ. ಆ ಗಿಡದ ಮುಂದೆ ಸಗಣಿಯಿಂದ ನೆಲವನ್ನು ಸ್ವಚ್ಛಗೊಳಿಸಿ, ಅದಕ್ಕೆ ರಾಗಿ ಹಿಟ್ಟು, ಇಪ್ಪಿಲಿನ ಮುಗ್ಗು ಹಿಟ್ಟಿನಿಂದ ರಂಗೋಲಿ ಹಾಕಿ, ಹಚ್ಚರಾಗಿ ಮುದ್ದೆಯನ್ನು ಮಾಡಿ ಎಡೆಯನ್ನು ಅರ್ಪಿಸುತ್ತಾರೆ. ಇದಕ್ಕೆ ಇಂತಹದೇ ಎಂಬುದು ಇಲ್ಲ. ಕುರಿ, ಮೇಕೆ, ಪಟ್ಟಿ ಮರಿ ಹೀಗೆ ಎಲ್ಲಾ ರೀತಿಯ ಕುರಿಗಳನ್ನು ಬಲಿ ನೀಡುತ್ತಾರೆ. ಇದರಿಂದ ಇವರು ಪ್ರಕೃತಿಯಲ್ಲಿ ನೆಮ್ಮದಿಯಿಂದ ಬದುಕಬಹುದು ಎಂಬ ನಂಬಿಕೆ ಇದೆ. ಯಾವುದೇ ಒಂದು ವರ್ಷ ಆಕಸ್ಮಿಕವಾಗಿ ಮಾಡದಿದ್ದರೆ ಆ ವರ್ಷ ಏನಾದರೂ ಆಕಸ್ಮಿಕ ಘಟನೆಗಳು ಸಂಭವಿಸಿದರೆ ಅದಕ್ಕೆ ಇದೇ ಹೊಣೆ ಎಂದು ನೊಂದುಕೊಂಡು ನಂತರ ತಪ್ಪದೇ ಆಚರಿಸುತ್ತಾರೆ.

ಬಲಿ ಹರಕೆ ತೀರಿಸಿದಲ್ಲದೆ ಇವರು ಆಚರಿಸುವ ಹಬ್ಬಗಳೆಂದರೆ 'ಹಾಲು ಕರೆಯುವುದು' ಅಲೆಮಾರಿ ಕುರಿಗಾರರು ತಮ್ಮ ಮನೆ ದೇವರಿಗೆ ಹಾಲು ಮೀಸಲನ್ನು ಪ್ರತಿವರ್ಷ ಹಾಗೂ ಕೆಲವೊಂದು ದೇವರ ಕುರಿಗಳು ಈದಾಗ ಮೀಸಲನ್ನು ಒಪ್ಪಿಸುತ್ತಾರೆ. ಇದಕ್ಕೆ ಹಿಂದಿನ ರಾತ್ರಿಯೇ ಮರಿಯ ಹಾಲನ್ನು ಕುಡಿಯದ ಹಾಗೆ 'ಮೊಸರಿ'ಯನ್ನು ಪಿಟ್ಟಿಗೆಯನ್ನು ಹಾಲಿನಿಂದ ಕಲಸಿ ಬಿಳಿ ಬಟ್ಟೆ ಬಳ್ಳಿನಲ್ಲಿ ಆ

ಮಿಶ್ರಣವನ್ನು ಜೊತೆಗೆ ಸೇರಿಸಿ ಕುರಿ ಮಾಲೆಗಳಿಗೆ ಈ ನೊಸರಿಯನ್ನು ಸುತ್ತುತ್ತಾರೆ. ಇದರಿಂದ ಕುರಿ ಮರಿಯು ಹಾಲು ಕುಡಿಯಲು ಹೋದಾಗ ಬಟ್ಟೆಯು ಬಾಯಿಯೊಳಕ್ಕೆ ಬಿದ್ದಾಗ ಕುಡಿಯಲು ಸಾಧ್ಯವಾಗುವುದಿಲ್ಲ. ಮತ್ತೆ ಬೆಳಗಿನ ಜಾವ ಐದು ಗಂಟೆಗೆ ಸ್ನಾನ ಮಾಡಿ ಒಂದು ಮಣ್ಣಿನ ಮಡಿಕೆ ಅಥವಾ ಹಿತ್ತಾಳೆ ಚಂಬಿನಲ್ಲಿ ಹಾಲನ್ನು ಕರೆದುಕೊಂಡು ಬರೀಕಾಲಿನಲ್ಲಿ ಅವರ ಊರಿಗೆ ತಂದು ದೇವರ ಗುಡಿಗೆ ಅರ್ಪಿಸುತ್ತಾರೆ. ಈ ಹಬ್ಬ ವಿಶೇಷವಾಗಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ಆಚರಿಸುತ್ತಾರೆ. ಇಲ್ಲಿನ ವಿಶೇಷವೆಂದರೆ ದೇವರ ಗುಡಿ ಎಷ್ಟೇ ದೂರ ಇದ್ದರೂ ಮೀಸಲು ಹಾಲನ್ನು ಬಟ್ಟೆಯ (ಬ್ಯಾಗ್), ಕೈಚೀಲದಲ್ಲಿ ತೆಗೆದುಕೊಂಡು ಯಾವುದೇ ಊರುಗಳ ಒಳಕ್ಕೆ ಹೋಗದೆ, ಯಾರನ್ನು ಮಾತನಾಡಿಸದೆ, ಮುಖ್ಯ ದಾರಿಯನ್ನು ಬಿಟ್ಟು ಕಾಲುದಾರಿಯಲ್ಲೇ ನಡೆದುಕೊಂಡು ಬರುತ್ತಾರೆ. ಇದರಲ್ಲಿ ವಿಶೇಷವಾಗಿ ಎತ್ತಪ್ಪ, ಚಿತ್ರದೇವರು, ಕರಿಯಮ್ಮ, ಈರಣ್ಣ, ಈ ದೇವರಿಗೆ ಹಾಲು ಮೀಸಲು ವಿಶೇಷವಾಗಿ ಸಲ್ಲಿಸುತ್ತಾರೆ(ಮಾಹಿತಿ:ರಂಗನಾಥಪ್ಪ, ದೊಡ್ಡಬಾಣಗೆರೆ).

ಯುಗಾದಿ ಮತ್ತು ದೀಪಾವಳಿ ಹಬ್ಬಗಳಲ್ಲಿ ಕುರಿ ಮಂದೆಯಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಹಬ್ಬದ ದಿನ ಬೆಳಿಗ್ಗೆಯೇ ಎದ್ದ ನಂತರ ಮಂದೆಯ ಮುಂದೆ ಕಂಬಳಿಯ ಮೂರು ಮಡಿಕೆಯಲ್ಲಿ ಮಡಚಿ ಜಾಡಿ ಹಾಸುತ್ತಾರೆ. ಅದರ ಮೇಲೆ ಅಕ್ಷತೆ, ಹೊಂಬಾಳೆ, ವಿಭೂತಿ, ಕುಂಕುಮ, ಅರಿಶಿಣ, ಹಾಗೂ ಅವರ ಕುರಿ ಸಂಗೋಪನೆಯ ಪ್ರಮುಖ ಪಾತ್ರವಹಿಸುವ, ಕುರಿಕಾಯುವ ಕೋಲು, ಗಣೆ ಅಥವಾ ಕೊಳಲು, ಕುಡುಗೋಲು ಸಿಕ್ಕ(ಊಟದ ಬುಟ್ಟಿ) ಇಟ್ಟು ಕಾಯಿ ಹೊಡೆದು ಪೂಜೆ ಸಲ್ಲಿಸುತ್ತಾರೆ ತೀರ್ಥವನ್ನು ಬೆಳಿಗ್ಗೆ ಸಾಯಂಕಾಲ ಕುರಿಯ ಮಂದೆಯ ಮೇಲೆ ಚಿಮುಕಿಸುತ್ತಾರೆ.

**ಗೋವಿನ ಗೂಡು ತಿರುಗಿಸುವುದು**

ವರ್ಷಕ್ಕೊಮ್ಮೆ ಅಚರಿಸುವ ಪ್ರಮುಖ ಹಬ್ಬಗಳಲ್ಲಿ ಯುಗಾದಿ ಹಾಗೂ ದೀಪಾವಳಿಯ ಸಮಯದಲ್ಲಿ ದೊಡ್ಡ ದೇವರ ಆಚರಣೆಯನ್ನು ಆಚರಿಸುತ್ತಾರೆ. ಅಂತಹ ಸಮಯದಲ್ಲಿ ಅಲೆಮಾರಿ ಕುರಿಗಾರರು ಎಲ್ಲೇ ಇದ್ದರು. ಆ ಸಮಯಕ್ಕೆ ತಮ್ಮ ಮೂಲ ನೆಲೆಗಳಿಗೆ ಹಿಂತಿರುಗಿ ಈ ಆಚರಣೆಯ ಭಾಗವಹಿಸುತ್ತಾರೆ. ಆ ದಿನ ಎರಡು ಮೂರು ದಿನ ಆಚರಿಸುವ ಈ ದೊಡ್ಡ ದೇವರ ಆಚರಣೆಯಲ್ಲಿ ಕೊನೆಯ ದಿವಸ ಸಾಯಂಕಾಲ ಸಮುದಾಯದ ಎಲ್ಲಾ ದೇವರು ಒಂದು ನಿಗದಿತ ಸ್ಥಳ, ಮನೆದೇವರ ನೆಲೆ ಅಥವಾ ಪ್ರಮುಖ ಹಳ್ಳಿಗಳ ಬಳಿ ಸೇರುತ್ತವೆ. ಅಲ್ಲಿ ಎಲ್ಲಾ ದೇವರುಗಳಿಗೆ ಗಂಗಾಪೂಜೆ ಮಾಡಿ, ನಂತರ ಆ ಊರಿನ ಅಲ್ಲದೆ ಸುತ್ತಮುತ್ತಲಿನ ಪಶುಗಳು, ಮಂದೆಗಳೆಲ್ಲವು ಭಾಗವಹಿಸುತ್ತವೆ. ಆಗ ಉರುಮೆಯನ್ನು ಜೋರಾಗಿ ಬಡಿಯಲು ಆರಂಭಿಸುತ್ತಾರೆ. ಆಗ ಮುಂದೆ ಒಂದು ಕುರಿಯನ್ನು ಕರೆದುಕೊಂಡು ಸಿಳ್ಳೇ ಹಾಗೂ ಕೇಕೆಗಳಿಂದ ಹರ್ಷೋದ್ಗಾರದಿಂದ ಮೂರು ಸುತ್ತ ದೇವರನ್ನು ಪ್ರದಕ್ಷಿಣೆ ಹಾಕಿ ಪೂಜೆ ಸಲ್ಲಿಸುತ್ತಾರೆ. ಇದರಿಂದ ಯಾವುದೇ ಕಷ್ಟ ಬಂದರೂ ಸುಲಭವಾಗಿ ನಿವಾರಣೆಯಾಗುತ್ತವೆ

ಎಂಬ ನಂಬಿಕೆಯಿಂದ ಈ ಸಮಯದಲ್ಲಿ ತಮ್ಮ ನೆಲೆಗಳಿಗೆ ಹಿಂದಿರುಗಿ ಹರಕೆ ತೀರಿಸುತ್ತಾರೆ. ಇದು ವರ್ಷಕ್ಕೊಮ್ಮೆ ಇಲ್ಲವೆ, ಐದು ಹಾಗೂ ಹತ್ತು ವರ್ಷಗಳಿಗೊಮ್ಮೆ ಅಪರೂಪವೆಂಬಂತೆ ಆಚರಿಸುತ್ತಾರೆ. ಇವು ದೇವರ ಹರಕೆ ತೀರಿಸುವ ಆಚರಣೆಗಳಾದರೆ, ಇನ್ನು ಸಮುದಾಯದ ಆಚರಣೆಗಳೆಂದರೆ, ಕುರಿಯ ಮಂದೆಯ ಜೊತೆಗೆ ಮಹಿಳೆಯರು ಪ್ರಮುಖವಾಗಿ ಪಾತ್ರವಹಿಸುತ್ತಾರೆ. ಆದ್ದರಿಂದ ಮಹಿಳೆಯರ ಮುಟ್ಟು ಇಲ್ಲಿ ಅತ್ಯಂತ ಮುಖ್ಯವಾದ ಆಚರಣೆಯಾಗಿದೆ. ಕುರಿಯ ಮಂದೆಯ ಸಮಯದಲ್ಲಿ ಮಹಿಳೆಯರು ಮುಟ್ಟಾದ ಸಮಯದಲ್ಲಿ ಮಂದೆಯಿಂದ ಒಂದು ಕಿ.ಮೀ. ದೂರವೇ ಇರುತ್ತಾರೆ. ಯಾವುದೇ ಕಾರಣಕ್ಕೂ ಕುರಿ ಜಾಡಿಗೂ ಬರುವುದಿಲ್ಲ. ಅವರ ನೆರಳು ಸಹ ಅತ್ತ ಕಡೆ ಬರದ ಹಾಗೆ ನೋಡಿಕೊಳ್ಳುತ್ತಾರೆ. ಇವರ ಊಟವನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ದೊಡ್ಡ ದೊಡ್ಡ ಮರಗಳ ನೆರಳು ಹಾಗೂ ಮಳೆ, ಗಾಳಿಗಳಿಂದ ರಕ್ಷಣೆಯನ್ನೊದಗಿಸಿಕೊಳ್ಳುತ್ತಾರೆ. ಇಂತಹ ಸಮಯದಲ್ಲಿ ಒಂಟಿ ದೆವ್ವದ ಹಾಗೆ ಗಾಳಿ ಬಿಸಿಲಲ್ಲಿ ತಿರುಗಾಡುವಂತಾಗುತ್ತದೆ. ಇನ್ನೂ ಕೆಲ ಮಂದೆಗಳಲ್ಲಿ ಮುಟ್ಟಾದ ಹೆಂಗಸರನ್ನು ಸಹ ಮಾತನಾಡಿಸುವುದಿಲ್ಲ. ಉಳಿದಂತೆ ಋತುಮಾನ, ಹೆರಿಗೆ ಸಮಯಗಳು ಬಂದಾಗ ಮೂಲ ನೆಲೆಗಳಿಗೆ ಹಿಂತಿರುಗಿ ಬರುತ್ತಾರೆ. ಏಕೆಂದರೆ ಈ ಆಚರಣೆಗಳು ಇಲ್ಲಿ ಸಾಧ್ಯವಿಲ್ಲದಾಗಿರುತ್ತವೆ.

### ಧಾರ್ಮಿಕತೆಯಲ್ಲಿ ಜೆನ್ನಿಗೆ ಕುರಿಯ ಪಾತ್ರ

ಕಾಡುಗೊಲ್ಲರು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಮೀಸಲಾಗಿ ಬಿಟ್ಟಿರುವ ಕುರಿಗೆ ಜೆನ್ನಿಗೆ ಅಥವಾ ಜೆನಿಗೆ ಕುರಿ ಎಂದು ಹೆಸರು. ಜೆನ್ನಿಗೆ ಕುರಿ ಕಾಡುಗೊಲ್ಲರಲ್ಲಿ ಮಾತ್ರ ಉಂಟು. ಈ ಬಗ್ಗೆ ಎಚ್.ವಿ.ನಂಜುಂಡಯ್ಯನವರು ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ''Jannige Kuri is marked out by three longitudinal cuts in its ears. It is supposed to be sacred and any person touches it, he will hare to wash his hands with cows urine in front of the village temple dedicated to Jungappa their diety. If a person wantonly touches it he loses his eyes and if after swearing on it to tell the truth he utters falsehood his family is ruined. All hamlets do not posses such a sheep and when required they borrow it from others's on the death of his sheep one of its female lambs is installed in its place''. ಇಲ್ಲಿ ತಿಳಿಸಿರುವ ಕಠಿಣವಾದ ನಿಯಮಗಳಲ್ಲಿ ಜೆನ್ನಿಗೆ ಕುರಿಯನ್ನು ಮುಟ್ಟಿದವನು ಜುಂಜಪ್ಪನ ದೇವಸ್ಥಾನದ ಎದುರಿಗೆ ಗೋವಿನ ಗಂಜಲದಿಂದ ಶುದ್ಧಿ ಮಾಡಿಕೊಳ್ಳುವ ಸಂಪ್ರದಾಯ ಇಂದು ಉಳಿದಿಲ್ಲ. ಜೆನ್ನಿಗೆ ಕುರಿಯನ್ನು ಮುಟ್ಟಿದರೆ ಕಣ್ಣು ಹೋಗುತ್ತದೆ ಎಂಬ ನಂಬಿಕೆಯೂ ಇಂದು ಉಳಿದಿಲ್ಲ. ಆದರೆ ಜೆನ್ನಿಗೆ ಕುರಿಯ ಮೇಲೆ ಆಣೆ ಮಾಡಲು ಇಂದಿಗೂ ಕಾಡುಗೊಲ್ಲರು ಹೆದರುರುತ್ತಾರೆ. ಅದರ ಮೇಲೆ ಆಣೆ ಉಟ್ಟು ಸುಳ್ಳು ಹೇಳಿದರೆ ತನ್ನ ವಂಶ ನಾಶವಾಗುವುದೆಂಬ ನಂಬಿಕೆ ಇಂದಿಗೂ ಉಳಿದಿದೆ. ಆದರೆ

ಎಲ್ಲಾ ಹಟ್ಟಿಗಳಲ್ಲಿಯೂ ಜೆನ್ನಿಗೆ ಕುರಿ ಇರುವುದಿಲ್ಲ ಎಂದು ಲೇಖಕರು ಹೇಳಿರುವುದು ಸರಿಯಾಗಿದೆ. ಎಲ್ಲೋ ಕೆಲವು ಹಟ್ಟಿಗಳಲ್ಲಿ ಮಾತ್ರ ಜೆನ್ನಿಗೆ ಕುರಿಯನ್ನು ಬಿಟ್ಟಿರುತ್ತಾರೆ. ಉಳಿದ ಹಟ್ಟಿಗಳ ಜನ ತಮಗೆ ಅಗತ್ಯ ಬಿದ್ದಾಗ ಈ ಹಟ್ಟಿಯಿಂದ ಜೆನ್ನಿಗೆ ಕುರಿಯನ್ನು ತೆಗೆದುಕೊಂಡು ಹೋಗುತ್ತಾರೆ. ಜೆನ್ನಿಗೆ ಕುರಿ ಹತ್ತಿರದ ಹಟ್ಟಿಯಲ್ಲಿಯೇ ಇದ್ದರೆ ಹಾಲನ್ನು ಕರೆದುಕೊಂಡು ಬರುತ್ತಾರೆ. ಜೆನ್ನಿಗೆ ಕುರಿಯ ಕಿವಿಯನ್ನು ಉದ್ದುದ್ದವಾಗಿ ಮೂರು ಕಡೆ ಕತ್ತರಿಸುತ್ತಾರೆ. ಜೆನ್ನಿಗೆ ಕುರಿ ಎಂದು ಗುರುತಿಸುವುದಕ್ಕೆ ಇದೇ ಗುರುತು. ಈ ಕುರಿ ಸತ್ತು ಹೋದ ನಂತರ ಇದರ ಹೆಣ್ಣು ಮರಿಯನ್ನು ಕುರಿಯನ್ನಾಗಿ ಮಾಡಿಕೊಳ್ಳುತ್ತಾರೆ.

ಕಾಡುಗೊಲ್ಲರ ಸಂಪ್ರದಾಯದಲ್ಲಿ ಜೆನ್ನಿಗೆ ಕುರಿ ವಿಶೇಷವಾದ ಪಾತ್ರವಹಿಸುತ್ತದೆ. ಈ ಕುರಿಯ ಹಾಲು ಪವಿತ್ರವಾದುದೆಂದು ಭಾವಿಸುತ್ತಾರೆ. ಹೆಂಗಸರು ಮಗುವನ್ನು ಹೆತ್ತ ಮೂರು ತಿಂಗಳ ಕಾಲ ಹಟ್ಟಿಯಿಂದ ಹೊರಗೆ ಇರುತ್ತಾಳೆ. ಮೂರು ತಿಂಗಳು ತುಂಬಿದ ದಿನ ಬಾಣಂತಿ ಮತ್ತು ಮಗು ಹಟ್ಟಿಯೊಳಕ್ಕೆ ಬರುವ ಸಂದರ್ಭದಲ್ಲಿ ಹಟ್ಟಿಯಸುತ್ತ ಹಾಕಿರುವ ಕಳ್ಳೆ ಬೇಲಿಯ ಮೂಡಲ ತುದಿಯಲ್ಲಿ ಅವಳಿಗೆ ಮತ್ತು ಮಗುವಿಗೆ ಜೆನ್ನಿಗೆ ಹಾಲನ್ನು ತೀರ್ಥದಂತೆ ಕುಡಿಸುತ್ತಾರೆ. ಇಲ್ಲಿ ಕುಡಿಸುವ ಜೆನ್ನಿಗೆ ಹಾಲನ್ನು ಹೊರ ಜೆನ್ನಿಗೆ ಎಂದು ಕರೆಯುತ್ತಾರೆ. ಅನಂತರದ ದೇವಸ್ಥಾನದ ಸುತ್ತ ಇರುವ ಕಳ್ಳೆಯ ಬೇಲಿಯನ್ನು ದಾಟಿ ಅಲ್ಲಿನ ಬಾಗಿಲಿಗೆ ಬಂದಾಗ ಅಲ್ಲಿ ಮತ್ತು ಸಲ ಮಗು ಮತ್ತು ಬಾಣಂತಿಗೆ ಜೆನ್ನಿಗೆ ಹಾಲನ್ನು ಕುಡಿಸುತ್ತಾರೆ. ಇದನ್ನು ಒಳ ಜೆನ್ನಿಗೆ ಎಂದು ಕರೆಯುತ್ತಾರೆ. ಹೀಗೆ ಹೊರ ಜೆನ್ನಿಗೆ ಮತ್ತು ಒಳ ಜೆನ್ನಿಗೆ ಅದ ನಂತರ ಮಗುವಿಗೆ ಮತ್ತು ಬಾಣಂತಿಗೆ ಬಂದಿದ್ದ ಸೂತಕ ಹೋಗಿ ಅವರು ಪರಿಶುದ್ಧರಾದರೆಂದು ನಂಬುತ್ತಾರೆ. ಜೆನ್ನಿಗೆ ಕುರಿಯ ಹಾಲಿನ ಬಳಕೆಯಾಗುವುದು ಈ ಒಂದು ಸಂದರ್ಭದಲ್ಲಿ ಮಾತ್ರ ಉಳಿದಂತೆ ಇದರ ಬಳಕೆಯಿರುವುದಿಲ್ಲ.

ಬಾಣಂತಿಗೆ ಮತ್ತು ಮಗುವಿಗೆ ಜೆನ್ನಿಗೆ ಹಾಲನ್ನು ಮಗುವಿನ ತಂದೆ ಕುಡಿಸಬೇಕು. ಇವನು ಒಂದು ಹೊತ್ತು ಉಪವಾಸವಿದ್ದು ತಣ್ಣೀರಿನಲ್ಲಿ ಮುಳುಗಿ, ಒದ್ದೆ ಬಟ್ಟೆಯನ್ನುಟ್ಟು ಜೆನ್ನಿಗೆ ಕುರಿಯ ಹಾಲನ್ನು ಕರೆಯುತ್ತಾನೆ. ಈ ಒಂದು ಸಂದರ್ಭವನ್ನು ಬಿಟ್ಟು ಬೇರೆ ಯಾವುದೇ ಸಂದರ್ಭದಲ್ಲಿಯೂ ಜೆನ್ನಿಗೆ ಹಾಲನ್ನು ಕರೆಯುವುದು ತಪ್ಪು. ಆಕಸ್ಮಾತ್ ಕರೆದರೂ ಹಾಲನ್ನು ಹಟ್ಟಿಯ ಸುತ್ತ ಹಾಕಿರುವ ಕಳ್ಳೆ ಬೇಲಿಗೆ ಚೆಲ್ಲಬೇಕು. ಇಲ್ಲವೆ ಬಾವಿಯೊಳಕ್ಕೆ ಚೆಲ್ಲಬೇಕು. ಬೇರೆ ಎಲ್ಲಿಯೂ ಚೆಲ್ಲ ಕೂಡದು. ಕುಡಿಯಲೂ ಕೂಡದು. ಚೆಲ್ಲಿದ ನಂತರ ತಣ್ಣೀರಿನಲ್ಲಿ ಮುಳುಗಿ, ಒದ್ದೆ ಬಟ್ಟೆಯನ್ನುಟ್ಟು ಜುಂಜಪ್ಪ, ಸಿದ್ಧಯ್ಯ, ದೇವರಿಗೆ ನಮಸ್ಕಾರ ಮಾಡಿ ಒಂದು ಹಣವನ್ನು ತಪ್ಪು ಮುಡಿಪು ಕಟ್ಟಬೇಕು. ಹಟ್ಟಿಯಲ್ಲಿರುವ ಕುರಿಗಳಲ್ಲಿ ಯಾವುದನ್ನು ಜೆನ್ನಿಗೆ ಕುರಿಯನ್ನಾಗಿ ಆರಿಸಬೇಕೆಂದು ಕಾಡುಗೊಲ್ಲರು ದೇವರನ್ನು ಶಾಸ್ತ್ರ ಕೇಳುತ್ತಾರೆ. ಕೆಲವೊಂದು ಕಡೆಯಲ್ಲಿ ದೇವರನ್ನು ಹೂ ಅಥವಾ ಹೇಳಿಕೆ ಮೂಲಕ ಕೇಳುತ್ತಾರೆ. ದೇವರ ಹೂವಿನ ಪ್ರಸಾದದ ಮೂಲಕವಾಗಲಿ ಗಣೆಯ ಮೂಲಕವಾಗಲಿ, ಯಾವ

ಕುರಿಯನ್ನು ಸೂಚಿಸುವುದೆ ಅದನ್ನೇ ಜೆನ್ನಿಗೆ ಕುರಿಯಾಗಿ ಆರಿಸುತ್ತಾರೆ. ಈ ಜೆನ್ನಿಗೆ ಕುರಿ ಹೆಣ್ಣು ಕುರಿಯಾಗಿರಬೇಕು. ಇದರ ಬಲಗಿವಿಯನ್ನು ಉದ್ದುದ್ದಕ್ಕೆ ಮೂರು ನಾಮಗಳಂತೆ ಸೀಳುತ್ತಾರೆ. ಈ ಕುರಿಯನ್ನು ಪ್ರತ್ಯೇಕವಾಗಿ ಉಳಿದ ಕುರಿಗಳೊಡನೆ ಸಾಕುತ್ತಾರೆ. ಇದು ಯಾವ ಗಂಡು ಕುರಿಯೊಡನೆಯಾದರೂ ಲೈಂಗಿಕ ಸಂಬಂಧವನ್ನು ಪಡೆಯಬಹುದು. ಯಾವ ಕುರಿ ಮಂದೆಯಲ್ಲಿ ಬೇಕಾದರೂ ಇರಬಹುದು. ಎಲ್ಲಿ ಬೇಕಾದರೂ ಮೇಯಬಹುದು. ಇದನ್ನು ಯಾರೂ ಕೂಡ ದಂಡಿಸುವಂತಿಲ್ಲ. ಕುರುಬರು ಉಳಿದ ಕುರಿಗಳ ತುಪ್ಪಟವನ್ನು ಕತ್ತರಿಸಿಕೊಂಡು ಹೋಗುವಾಗ ಇದರ ತುಪ್ಪಟವನ್ನು ಕತ್ತರಿಸಿಕೊಂಡು ಹೋಗುತ್ತಾರೆ. ಅಂದರೆ ಉಳಿದೆಲ್ಲ ಕುರಿಗಳಂತೆಯೇ ಈ ಕುರಿಯನ್ನು ಸಾಕುತ್ತಾರೆ. ಜೆನ್ನಿಗೆ ಕುರಿಗೆ ಹೆಣ್ಣುಮರಿ ಹುಟ್ಟಿದರೆ ಅದರ ಬಲಗಿವಿಯನ್ನು ನಾಮದ ಆಕಾರದಲ್ಲಿ ಮೂರು ಕಡೆ ಉದ್ದವಾಗಿ ಸೀಳಿ ಅದನ್ನು ಜೆನ್ನಿಗೆ ಕುರಿಯನ್ನಾಗಿ ಮಾಡುತ್ತಾರೆ. ಗಂಡುಮರಿ ಹುಟ್ಟಿದರೆ ಅದನ್ನು ಮಾರಿ ಅದರಿಂದ ಬಂದ ಹಣವನ್ನು ದೇವರ ಹೆಸರಿನಲ್ಲೂ ಹಾಗೆಯೇ ಇಟ್ಟು ದೇವರಿಗೆ ಕಾಣಿಕೆಯಾಗಿ ಅರ್ಪಿಸುತ್ತಾರೆ.

ಜೆನ್ನಿಗೆ ಕುರಿ ಸತ್ತಾಗ ಇದರ ಮಾಂಸವನ್ನು ಕಾಡುಗೊಲ್ಲರು ತಿನ್ನುತ್ತಾರೆ. ಆದರೆ ಇದರ ಯಾವ ಭಾಗವೂ ಕೂಡ ನಾಯಿ ನರಿಗಳ ಪಾಲಾಗದಂತೆ ಎಚ್ಚರಿಕೆ ವಹಿಸುತ್ತಾರೆ. ಜೆನ್ನಿಗೆ ಕುರಿಯನ್ನು ತಿನ್ನದೆಯೇ ಹಾಗೆಯೇ ಬಿಡುವ ಪರಿಸ್ಥಿತಿ ಬಂದರೆ ಇದಕ್ಕೆ ಒಂದು ದೊಡ್ಡ ಕಲ್ಲನ್ನು ಕಟ್ಟಿ ಕೆರೆಯೊಳಗೋ ಬಾವಿಯೊಳಕ್ಕೋ ಮುಳುಗಿಸಿ ಬಿಡುತ್ತಾರೆ. ಇತ್ತೀಚಿಗೆ ಬಾವಿಗಳಲ್ಲಿ ನೀರಿಲ್ಲದ ಕಾರಣ, ಹಾಳು ಬಾವಿಗಳಿಗೆ ಅಥವಾ ಹಳೆಯ ಗುಂಡಿಗೆ ಹಾಕುತ್ತಾರೆ. ಕಾಡುಗೊಲ್ಲರು ಈ ಕುರಿಯನ್ನು ತಿನ್ನುವ ಮೊದಲು ತಲೆಯನ್ನು ಕತ್ತರಿಸಿ ಒಂದು ಆಳವಾದ ಗುಂಡಿಗೆ ಹಾಕಿ ಮುಚ್ಚಿ ಆನಂತರ ಉಳಿದ ಭಾಗದ ಮಾಂಸವನ್ನು ತಿನ್ನುತ್ತಾರೆ. ಒಟ್ಟಾರೆ ತುಂಬಿಕೊಂಡ ತಿಪ್ಪೆಯಲ್ಲಿ ಆಳವಾದ ಗುಂಡಿಯನ್ನು ತೋಡಿ, ಅದರೊಳಕ್ಕೆ ಎಂಜಲನ್ನು ಹಾಕಿ ಮಣ್ಣು ಮುಚ್ಚಿ ಬಿಡುತ್ತಾರೆ. ಅದರ ಮೇಲೆ ಕುರಿಗೊಬ್ಬರವನ್ನು ಹಾಕುತ್ತಾ ಹೋಗುತ್ತಾರೆ. ಗುರಿತಿಗೆಂದು ಒಂದು ಮುಳ್ಳಿನ ಕೊನೆಯನ್ನು ನೆಡುತ್ತಾರೆ (ಶಂಕರನಾರಾಯಣ ತೀ.ನಂ., ೧೯೮೨:೧೪೫-೬).

## ಗ್ರಾಮ ದೇವತೆಗಳು

"ಇಡೀ ಕರ್ನಾಟಕದಲ್ಲಿ ಮತ್ತು ಆಂಧ್ರ ಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ಮಾತೃ ಆರಾಧನೆ ಇಂದಿಗೂ ಜನಪ್ರಿಯವಾಗಿದೆ. ಕರ್ನಾಟಕ ರಾಜ್ಯವೊಂದರಲ್ಲಿ ಸುಮಾರು ಸಾವಿರದನೂರು ಗ್ರಾಮದೇವತೆಗಳಿವೆ. ಹಿಂದೂ ಧರ್ಮದ ಮುಖ್ಯ ದೇವತೆಗಳಿಗಿಂತ ಗ್ರಾಮದೇವತೆಗಳೇ ಜನರಿಗೆ ಹೆಚ್ಚು ಹತ್ತಿರವಾಗಿವೆ ಮತ್ತು ಜನರ ಕಷ್ಟ ಸುಖಗಳಿಗೆ ಕಿವಿಗೊಡುತ್ತವೆ. ಜನಪದ ಧರ್ಮದ ಮೂಲಧಾತುವನ್ನು ನಿರ್ಮಿಸಿದರು ಈ ಗ್ರಾಮದೇವತೆಗಳೇ ಆಗಿದ್ದಾರೆ." ಈ ಗ್ರಾಮದೇವತೆಗಳು ಮಾತೃಪೂಜೆಯ ಪರಂಪರೆ ಇದ್ದಿತು ಎಂಬುದು ಐತಿಹಾಸಿಕ ಸಂಗತಿ. ಇದಕ್ಕೆ ದ್ರಾವಿಡರಲ್ಲಿ ಕಾಣುತ್ತಿದ್ದ ಮಾತೃ ಪ್ರಧಾನ ಕೌಟುಂಬಿಕ

ವ್ಯವಸ್ಥೆಯೇ ಜನ್ಮ ತಳೆದ ಗ್ರಾಮದೇವತೆಯ ಆರಾಧನೆಯ ಮೂಲಕ ಜನ್ಮ ತಳೆದು ಗ್ರಾಮದ ದೇವಾರಾಧನೆಗೆ ದ್ರಾವಿಡರ ಕೊಡುಗೆ ಬಹು ಮುಖ್ಯವಾದದ್ದೆಂಬುದು ಬಹುಜನರ ಅಭಿಪ್ರಾಯ.

ಮಗುವೊಂದು ಹುಟ್ಟಿದಾಗಿನಿಂದ ಅದು ಬೆಳೆದು ಸ್ವತಂತ್ರವಾಗುವವರೆಗೂ ತಾಯಿಯ ಜೊತೆ ಕರುಳಬಳ್ಳಿ ಸಂಬಂಧವನ್ನು ಹೊಂದಿರುತ್ತದೆ. ಆದರೆ ಸಂಪೂರ್ಣ ಪಾಲನೆ-ಪೋಷಣೆ ರಕ್ಷಣೆ ಎಲ್ಲವನ್ನು ಸಮರ್ಥವಾಗಿ ನಿರ್ವಹಿಸುವ ತಾಯಿಯ ಪಾತ್ರ ಮಹತ್ತರವಾದುದು. ಮಗು ಬೆಳೆದ ಮೇಲೂ ತನಗೆ ಆಪತ್ತು, ಆತಂಕ, ನೋವು ಆದಾಗಲೆಲ್ಲಾ ಕೂಗುವುದು ಅಮ್ಮ ಎಂದೇ. ಅಮ್ಮ ಮಕ್ಕಳ ಸಂಬಂಧ ಕ್ರಮೇಣ ದೇವತೆ, ಭಕ್ತರ ಸಂಬಂಧವಲ್ಲ ತನ್ನ ಪಾವಿತ್ರ್ಯವನ್ನು ಅಗತ್ಯವನ್ನು ಅನಿವಾರ್ಯತೆಯನ್ನು ಗುರುತಿಸಿಕೊಂಡಿದೆ ಎನ್ನಬಹುದು.

ಆದರೆ ಮಾತೃಮೂಲದ ಈ ದೇವತೆಗಳಿಗೆ ಉಗ್ರರೂಪವನ್ನು ಕಲ್ಪಿಸಿದ ಹಿನ್ನೆಲೆಯಾದರೂ ಏನು? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಶ್ನೆಯಷ್ಟೇ ಉತ್ತರ ಸರಳವಲ್ಲ. ತನ್ನ ಮಕ್ಕಳಿಗೆ ಆಪತ್ತು, ಆತಂಕಗಳು ಎದುರಾದಾಗ ಅವರನ್ನು ಅದರಿಂದ ರಕ್ಷಿಸುವ ಸಂದರ್ಭದಲ್ಲಿ ತಾಯಿ ಸಹಜವಾಗಿ ತನ್ನ ಮೃದುತನದಿಂದ ಹೊರ ಬಂದು ಉಗ್ರ ಸ್ವರೂಪಿಣಿಯಾಗಿ ಶತ್ರುವನ್ನು ಹೆದರಿಸಿ ಓಡಿಸುತ್ತಾಳೆ. ಮಕ್ಕಳನ್ನು ಕಾಪಾಡುತ್ತಾಳೆ. ತಮ್ಮ ಮಕ್ಕಳನ್ನು ರಕ್ಷಿಸುವ ಸಂದರ್ಭದಲ್ಲಿ ಅವು ಶಕ್ತಿ ಮೀರಿ ಹೋರಾಡುತ್ತವೆ. ಭಯಾನಕವಾಗಿ ಆರ್ಭಟಿಸಿ ನಿಲ್ಲುತ್ತದೆ. ಉದಾ : ಈರಿದ ಪುಲಿಯಾವೂಲಿರ್ದಳ್ ಮಕ್ಕಳ ತಂಟೆಗೆ ಬಂದ್ರೆ ನಾನು ಮಾರಿಯಾಗುತ್ತೇನೆ'' ಎಂಬ ಮಾತುಗಳು ಇದಕ್ಕೆ ಒಳ್ಳೆಯ ನಿದರ್ಶನಗಳಾಗುತ್ತವೆ.

ಇಂದಿಗೂ ಸಹ ಕಾಡುಗೊಲ್ಲರ ಸಮುದಾಯಗಳಲ್ಲಿ ತಾಯಿಯೆ ಪ್ರಮುಖವಾಗಿರುವುದನ್ನು ಕಾಣಬಹುದಾಗಿದೆ. ಈಗಲೂ ಒಂದು ಕುಟುಂಬದಲ್ಲಿ ತಾಯಿಯು ಪ್ರಬಲಳಾಗಿದ್ದರೆ, ಆ ಕುಟುಂಬಕ್ಕೆ ಅವಳೆ ಆಸರೆಯಾಗಿರುತ್ತಾಳೆ. ತಂದೆಯು ಪ್ರಬಲನಾಗಿದ್ದರೆ, ಅವನ ಮೊರೆ ಹೋಗುವುದು ಸಹಜವಾಗಿದೆ. ಎಲ್ಲಿ ಶಕ್ತಿ ಸಾಮರ್ಥ್ಯಗಳಿರುತ್ತವೆಯೋ ಅಲ್ಲಿ ತಮಗೆ ಆಸರೆ ಸಿಗುತ್ತದೆ ಎಂದು ಭಾವಿಸಿದ ಮನಸ್ಸು ನಮ್ಮ ರಕ್ಷಕ ದೇವತೆಗೆ ಉಗ್ರರೂಪವನ್ನು ಕಲ್ಪಿಸಿದೆ. ಇದಕ್ಕೆ ದ್ರಾವಿಡ ಮಾತೃ ಪ್ರಧಾನ ಕುಟುಂಬದ ಹಿನ್ನೆಲೆಯೂ ಇಲ್ಲದಿಲ್ಲ. ಆದರೆ ತಾಯಿಯೂ ಯಾವಾಗಲೂ ಹೀಗೆ ಇರಲಾರಳು. ಇರಬೇಕಾಗಿಯೂ ಇಲ್ಲ. ಅವಳ ಸೌಮ್ಯ ಗುಣವೂ, ಕೋಮಲತೆಯೂ, ಪ್ರಸನ್ನತೆಯೂ ಇದೆಯಲ್ಲದೆ, ಅದನ್ನು ಬೇರೆ ರೂಪಗಳಲ್ಲಿ ಆರಾಧಿಸುವುದೂ ಇದೆ. ಸೌಮ್ಯ ದೇವತೆಗಳನ್ನು ಲಕ್ಷ್ಮಿ, ಸರಸ್ವತಿ ಎಂದು ಪೂಜಿಸುವುದಿದೆ. ಆದರೆ ಸಾಮಾಜಿಕ ನಿಯಂತ್ರಣ ಶಕ್ತಿಯಾಗಿ ದೇವರ ಅಗತ್ಯ ಬಿದ್ದಾಗ ಆಕೆ ಎಲ್ಲರನ್ನು ಹೆದರಿಸಿ ಹದ್ದು ಬಸ್ತಿನಲ್ಲಿಡಬೇಕಾದಳೆಂದೂ ಅದಕ್ಕಾಗಿ ಅವಳು ಉಗ್ರ ರೂಪದಲ್ಲಿದ್ದಾಗ ಜನ ಹೆದರಿ ನಿಯಂತ್ರಣರಾಗು ತ್ತಾರೆಂದು ಭಾವಿಸಿರುವಂತಿದೆ.

ಹೀಗೆ ಸಮಾಜದ ನಿಯಂತ್ರಕ ಶಕ್ತಿಗಳಾಗಿ ದೇವತೆಗಳು ಸೃಷ್ಟಿಗೊಂಡು ಯಶಸ್ಸನ್ನು ಪಡೆದವು. ಕಾಲ ಕ್ರಮೇಣ ಆರ್ಯ ಮೂಲದ ಸಮಾಜದ ಮೇಲ್ವರ್ಗ ವರ್ಣವ್ಯವಸ್ಥೆಯನ್ನು ಹುಟ್ಟು ಹಾಕಿತು. ವರ್ಣವ್ಯವಸ್ಥೆಯನ್ನು ಒಪ್ಪದ ಜನರು ಅದನ್ನು ಉಲ್ಲಂಘಿಸುತ್ತಿದ್ದ ಪ್ರಕರಣಗಳು ಹೆಚ್ಚಾಗ ತೊಡಗಿದವೆಂದು ಕಾಣುತ್ತದೆ. ಆಗ ತಾವು ಹೇಳುವುದಕ್ಕಿಂತ ಈ ಜನರು ಅವಲಂಬಿಸಿರುವ ಗ್ರಾಮ ದೇವತೆಗಳ ಆರಾಧನಾ ವಿಧಾನದಲ್ಲಿಯೇ ವರ್ಣವ್ಯವಸ್ಥೆಯನ್ನು ಅಳವಡಿಸಿದರು. ಹೀಗಾಗಿ ಎಲ್ಲ ದೇವತೆಗಳಿಗೂ ಒಂದೊಂದು ಪುರಾಣಗಳನ್ನು ಸೃಷ್ಟಿಸಿದರು. ಆ ಪುರಾಣಗಳು ಪುನರ್ ರಚನೆಯಾಗಿ ''ಚಾತುರ್ವರ್ಣ ನೀತಿಯನ್ನು ಧಾರ್ಮಿಕ ಭೀತಿಯ ಹಿನ್ನೆಲೆಯಲ್ಲಿ ಬೇರೂರಿಸುವ, ಗಟ್ಟಿಗೊಳಿಸುವ ಆಚರಣಾ ವಿಧಿ ಈ ಮಾರಿ ಜಾತ್ರೆ. ಅನ್ಯ ಸಂಸ್ಕೃತಿಯೊಂದು ತನ್ನ ಮೇಲೆ ಹೇರಿದ ಆಕ್ರಮಣ ಶೀಲನೀತಿ ತತ್ವವನ್ನೇ ಶ್ರದ್ಧೆ ಭಕ್ತಿಗಳ ಆಚರಣಾ ವಿಧಿಯಾಗಿಸಿಕೊಂಡು ಬಾಳು ಹೊರೆಯುವ ಕೆಲ ಸಮಾಜಗಳ ಬದುಕಿನ ದುರಂತ. ವ್ಯಂಗ್ಯಕ್ಕೆ ಒಂದು ಕೈಗನ್ನಡಿ ಈ ಜಾತ್ರೆ ಹಾಗೂ ಮಾರಿ ಹಬ್ಬಗಳು.

ಈ ಹಿನ್ನೆಲೆಯಲ್ಲಿ ಹುಟ್ಟಿರುವ ಕೆಲವು ನುಡಿಗಟ್ಟುಗಳನ್ನು ಗಮನಿಸಬಹುದು. 'ಜನರಿದ್ದರೆ ಜಾತ್ರೆ' 'ಜನಜಾತ್ರೆ' 'ಜನ ಮರುಳೋ ಜಾತ್ರೆ ಮರುಳೋ' ಇವುಗಳಲ್ಲಿ ಇರುವ ಅರ್ಥ. ಜನರಿಲ್ಲದೇ ಜಾತ್ರೆ ಸಾಧ್ಯವಿಲ್ಲ ಎಂಬುದು ತಿಳಿಯುತ್ತದೆ. ಆದರೆ ಬೇರೆ ಯಾವುದೇ ಕಾರಣಕ್ಕಾಗಿ ಜನ ಸೇರಿದರೆ ಜಾತ್ರೆ ಎನಿಸುವುದಿಲ್ಲ. ಧಾರ್ಮಿಕ ಉದ್ದೇಶಗಳಿಂದ ಅಂದರೆ ತಮ್ಮ ದೇವತೆಯ ಉತ್ಸವಕ್ಕಾಗಿ ಜನ ಸೇರಿದರೆ ಜಾತ್ರೆ ಎನ್ನಬಹುದು. ಒಟ್ಟಾರೆ ಜನ ಸೇರುವುದಕ್ಕೆ ಜಾತ್ರೆಗೂ ಒಂದು ಸಹಜ ಸಂಬಂಧವಿದೆ ಎನ್ನುವುದು ವಾಸ್ತವ ಸತ್ಯ. ಜನಪದ ಬದುಕಿಗೂ ಜಾತ್ರೆಗೂ ಇರುವ ಸಂಬಂಧ ಮಹತ್ವದ ಕೊಂಡಿ ಎಂದರೆ ಜನಪದರ ಶ್ರದ್ಧೆ, ಧರ್ಮ ಮತ್ತು ಅದಕ್ಕೆ ಸಂಬಂಧಿಸಿದ ಹಬ್ಬಗಳು.

ಜಾತ್ರೆಗೆ ದೇವರಾಧನೆಯ ದರ್ಶನ ಹಿನ್ನೆಲೆಯಷ್ಟೇ ಅಲ್ಲದೇ ಬೇರೆ ಉದ್ದೇಶವೂ ಇದ್ದಂತೆ ಕಾಣುತ್ತದೆ. ಪ್ರಾಚೀನ ಕಾಲದಲ್ಲಿ ಜನಪದರು ತಾವು ತಯಾರಿಸುವ ಕರಕುಶಲ ವಸ್ತುಗಳನ್ನು ಮಾರಿ ತಮಗೆ ಅಗತ್ಯವಾದ ಇತರರಿಂದ ಅಥವಾ ಬೆಳೆದ ವಸ್ತುಗಳನ್ನು ಕೊಳ್ಳುವ ವಿನಿಮಯ ಪದ್ಧತಿಯ ಹಿನ್ನೆಲೆಯಲ್ಲಿಯೂ ಜಾತ್ರೆಯನ್ನು ಕಾಣಬೇಕಾಗುತ್ತದೆ.

ಅಂದರೆ ವ್ಯಾಪಾರ ವಹಿವಾಟು, ಮನೋರಂಜನಾ ಕಾರ್ಯಕ್ರಮಗಳ ಪ್ರದರ್ಶನ, ಕಲೆಗಳು ಇಲ್ಲದ ಜಾತ್ರೆಗಳೇ ಇಲ್ಲವೆನ್ನಬಹುದು. ಹೀಗೆ ದೇವರ ಉತ್ಸವ ಕಾಲದಲ್ಲಿ ಸ್ಥಳೀಯ ಜನಪದ ಕಲೆಗಳು ವಿಜೃಂಭಿಸಿದವು. ನಾನಾ ನಂಬಿಕೆಗಳು, ಪದ್ಧತಿಗಳು, ಆಚರಣೆಗಳು ರೂಢಿಗೆ ಬಂದವು. ಒಂದೊಂದು ದೇವನೆಲೆಯೂ ಒಂದೊಂದು ಸಂಸ್ಕೃತಿಯ ಕೇಂದ್ರವಾಗಿ ಬಲಗೊಂಡಿತ್ತು. ಕಾಲಬದ್ಧವಲ್ಲದ ಈ ದೈವಾರಾಧನೆಯ ಯಾತ್ರೆ ನಿಶ್ಚಿತ ಕಾಲಬದ್ಧತೆಗೆ ಒಳಗಾಯಿತು. ದೇವರ ವಿಶೇಷ ಆರಾಧನೆಗೆ ಮತ್ತು ತತ್ಸಂಬದ್ಧವಾದ ಕಲೆಗಳ ಆಚರಣೆಗೆ ಒಂದು ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಿದರು. ಜಾತ್ರೆಗಳನ್ನು

ನಡೆಸಿದರು. ತೇರುಗಳನ್ನು ಹರಿಸಿದರು. ಜನಪದರ ಬದುಕಿನಲ್ಲಿ ಜಾತ್ರೆಗೆ ಒಂದು ಮಹತ್ವದ ಸ್ಥಾನವಿದೆ. ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ಜನಪದರ ಬದುಕನ್ನೇ ಜಾತ್ರೆಯಲ್ಲಿ ನಾವು ಕಾಣಬಹುದು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಿರಾ ತಾಲ್ಲೂಕಿನ ಜಾತ್ರೆಗಳನ್ನು ಅಭ್ಯಸಿಸಬಹುದು. ಶಿರಾ ತಾಲ್ಲೂಕಿನ ಕಾಡುಗೊಲ್ಲರು ಅನೇಕ ಜಾತ್ರೆ-ಹಬ್ಬಗಳನ್ನು ಆಚರಿಸುವಲ್ಲಿ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಾಣಬಹುದು. ಅದರಲ್ಲಿ ಎರಡು ವಿಧಗಳನ್ನು ಕಾಣಬಹುದು. ರಥೋತ್ಸವ ನಡೆಯುವ ಜಾತ್ರೆಗಳು ಒಂದು ಬಗೆಯಾದರೆ; ದೇವರನ್ನು ಭುಜದ ಮೇಲೆ ನಾಲ್ಕು ಜನ ಹೊತ್ತು ಇಲ್ಲವೇ ಗೊಡೆಯಲ್ಲಿ ಕುಳ್ಳಿರಿಸಿದ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ಮೆರೆಸುವ ಆಚರಣೆ ಇನ್ನೊಂದು ಬಗೆ. ಅಂತೆಯೇ ರಥೋತ್ಸವ ನಡೆಯುವ ಜಾತ್ರೆಗಳಲ್ಲಿ ನಾಲ್ಕು ಚಕ್ರದ ಕಲ್ಲುಗಾಲಿ ರಥವೂ ಇದೆ. ಪಟ್ಟನಾಯಕಹಳ್ಳಿ, ಮಾಗೋಡುಗಳಲ್ಲಿ ಇಂತಹ ಜಾತ್ರೆಗಳು ನಡೆಯುತ್ತವೆ. ಇತ್ತೀಚಿಗೆ ತಾಲ್ಲೂಕಿನ ತಾವರೆಕೆರೆಯಲ್ಲಿ ಸಹ ಭಾರಿ ದನಗಳ ಜಾತ್ರೆ ಹಾಗೂ ರಥೋತ್ಸವ 'ರಂಗಾಧಾಮ' ಸ್ವಾಮಿಯ ರಥೋತ್ಸವ, ಮರಡಿ ರಂಗನಾಥನ ರಥೋತ್ಸವ ಹಾಗೂ ಧನಗಳ ಜಾತ್ರೆಗಳು ಶಿರಾ ತಾಲ್ಲೂಕಿನಲ್ಲಿ ಪ್ರಮುಖ ಜಾತ್ರೆಗಳೆಂದು ಹೇಳಬಹುದು(ಚಿಕ್ಕಣ್ಣಯೆಣ್ಣೆಕಟ್ಟೆ, ೨೦೦೩:೩).

ಉಳಿದಂತೆ ಮೂಗೋಡು ರಂಗನಾಥ, ಕಾಡುಗೊಲ್ಲರ ಹಾಗೂ ಎಲ್ಲಾ ಜಾತಿಯವರು ನಡದು ಕೊಳ್ಳುವ ಆರಾಧ್ಯ ದೈವವಾಗಿದ್ದಾನೆ. ಗಂಡಿಹಳ್ಳಿ ಮಠದ ಬುಡೇನ್ ದತ್ತಾತ್ರೇಯ ಮೊಹರಂ ಜಾತ್ರೆ. ಜುಂಜಪ್ಪನ ಜಾತ್ರೆ, ಬೇವಿನಹಳ್ಳಿ ಕರಿಯಮ್ಮನ ಹಬ್ಬ, ಹೀಗೆ ಹಲವು ರೀತಿಯ ಜಾತ್ರೆ, ಹಬ್ಬ ಆಚರಣೆ ಗಳನ್ನು ಆಚರಿಸುವಲ್ಲಿ ಕಾಡುಗೊಲ್ಲ ಸಮುದಾಯದವರು ಪ್ರಮುಖರಾಗಿದ್ದಾರೆ.

### ೪.೬.೩. ಬರಗಾಲ ಬಂದಾಗ ದೇವರ ನೆನೆಯುವ ಪರಿ

ಪರಿಸರದಲ್ಲಿ ಉಂಟಾಗುವ ಅಕಾಲಿಕ ಬರಗಾಲ ಬಂದಾಗ ಕತ್ತೆರಾಯನಿಗೆ ಪೂಜೆ ಮಾಡುತ್ತಾರೆ. ಹಾಗೂ ಗಂಡು ಮತ್ತು ಹೆಣ್ಣು ಕತ್ತೆಗಳಿಗೆ ಮದುವೆ ಮಾಡುತ್ತಾರೆ. ಹಾಗೂ ಪಿಳ್ಳೇರಾಯನಿಗೆ ವಿಶೇಷ ಪೂಜೆ ಮಾಡುತ್ತಾರೆ. ಅಲ್ಲದೆ ಗಣೆ ನುಡಿಸುತ್ತಾರೆ. ರಾತ್ರಿಯೆಲ್ಲ ದೇವರ ಪದವನ್ನು ಹಾಡಿ ದೇವರನ್ನು ಭಕ್ತಿಯಿಂದ ನೆನೆಯುತ್ತಾರೆ. ಅದರಲ್ಲಿ ಪ್ರಮುಖವಾಗಿರುವ ಪದ

ಎ ನಡಿಗೆ ಮಾಡುತ್ತಿದ್ದ ಹೋದಂತ ಮಳೆರಾಯ
ಕಾಲೂರಿ ಬರುವಾಗ ನಾ ಎದುರು ನೊಡುತ್ತಿದೆ
ಹಂದಿ ತಿಂಬೋ ತೌಡು ರೆಂಬೇರು ತಿಂದಾರು
ಮುಂದಾಲ ರಾಯ ಕರುಣಿಸೋ ||
ಲೋಕದ ಮೇಲೆ ರಂಬೇರೆ ಬಾಯಿ ಬಿಡುತಾರೆ

ನಾಯಿ ತಿಂಬೋ ತೌಡು ನಾರಿಯರು ತಿಂದಾರು
ಲೋಕದ ಮೇಲೆ ನ್ಯಾರಿಯರು ಬಾಯಿಬಿಡ್ತಾರೊ
ಸತಿ ಕೇಳೆ ಸಂಗಾತಿ ಕಥೆ ಮಾಡಿ ಇರುಳಲ್ಲಿ||
ರತ್ನ ಕಂಬಳಿ ಮುಸುಕಿಟ್ಟು
ಮಳೆರಾಯ ಕಥೆ ಮಾಡಿ ಇರುಳೆಲ್ಲ
ನಕ್ಕಾರೆ ಬರೋನೆ, ಸಕ್ಕಂದಗಾರನೆ
ಅಕ್ಕ ನೀಹೋಗಿ ಕರೆತಾರೆ
ವನಗೇ ಬಿಗಿಯ ಜತ್ತಿನ ಗಾವ್ಪನೆ ಮಳೆರಾಯ||
ಕರೆದಾರೆ ಬರೂದ, ಕೈಸನ್ನೆ ಗಾರನೆ
ತಾಯಿ ನೀ ಹೋಗಿ ಕರೆತಾರೆ
ಏನಗೇ ಬಿಗಿಯ ಜೋಲುಗೈಯವನೆ ಮಳೆರಾಯ||
ಗುಡುಗುಟ್ಟಿ ಮಳೆಬಂದು ಗಿಡ ಹಚ್ಚಾಗ್ಯಿವು ||
ಬಡವುಗುಮ್ಮಯ್ಯ ಹಾದಾವೂ
ಭತ್ತನುಳ್ಳ ಕರಮಿಗೆ ಚಿಂತೆಗಾದವು
ಮಳೆರಾಯ ನಿನ್ನ ಕರೆ ಸ್ಯಾಕೆ ಗೌಡರು
ಗುಡುಗು ಮಿಂಚ ಏಡಗೊಂಡು
ಅಣ್ಣಾನ ಅರಗಿದ ಹೊಲಕೆ ಹದವಾಗಿ(ಮಾಹಿತಿ:ದೊಡ್ಡಕ್ಕ, ಪೆನ್ನೋಬನಹಳ್ಳಿ).

ಈ ರೀತಿಯಾಗಿ ಭೂಮಿ ಲೋಕದ ಮೇಲಿನ ಸಮಸ್ಯೆಯನ್ನು ಮಳೆ ರಾಯನಿಗೆ ಪರಿಪರಿಯಾಗಿ ಬೇಡಿಕೊಳ್ಳುತ್ತಾರೆ. ನಂತರ ಹದವಾದ ಮಳೆ ಅರಗಿದ ಹೊಲಕ್ಕೆ ಹದವಾಗುವಂತೆ ಮಳೆ ಬರುತ್ತದೆ. ಭೂಮಿಯ ಮೇಲಿನ ಸಕಲ ಚರಾಚರಗಳಿಗೂ ಅನುಕೂಲವಾಗಲೆಂಬುದೇ ಇದರ ಆಶಯ.

ಬರಗಾಲವು ೧೯೬೦-೬೫ರ ಅಸುಪಾಸಿನಲ್ಲಿ ದೇಶ ಕಂಡ ಅತ್ಯಂತ ಭೀಕರ ಬರಗಾಲ ಬಂದು ಪಶುಗಳು, ಕುರಿಗಳೆಲ್ಲ ಸಾಯುತ್ತಿದ್ದವು. ಆಗ ಬರೀ ಹೊಂಗೆ ಎಲೆ, ತುಗ್ಗಲಿಸೊಪ್ಪನ್ನು ತಿಂದು ಬದುಕುವಂತಹ ಸಮಯ. ಆದರೆ ಆ ಸೊಪ್ಪಿಗೂ ಬರಗಾಲ ಬಂದು ಮರಗಿಡಗಳೆಲ್ಲ ಒಳಗಿ ಹೋಗುತ್ತಿದ್ದವು. ಅಂತಹ ಸಮಯದಲ್ಲಿ ಈ ಶಿರಾ ಭಾಗದ ದನ-ಕುರಿಗಳೆಲ್ಲ ಸತ್ತು ಹೋಗಿ ಅಂದು ಅಳಿದುಳಿದ ಸಂಪತ್ತೆ ಇಂದು ಸಂಗೋಪನೆ ಮಾಡುತ್ತಿರುವ ಪಶುಸಂಪತ್ತು. ವಿಶೇಷವಾಗಿ ಅಲೆಮಾರಿಗಳು, ಕುರಿಗಾರರು ಇಂತಹ ಸಂಕಷ್ಟಗಳ ಸಮಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸುವುದು ಬಲಿ ನೀಡುವುದು ಸಹ ಮುಖ್ಯವಾಗಿದೆ.

### ಧಾರ್ಮಿಕಾಚರಣೆಗಳಲ್ಲಿ ಅಭಿವೃದ್ಧಿಯ ಚಹರೆ

ಅಲೆಮಾರಿ ಕಾಡುಗೊಲ್ಲರಿಗೆ ಪ್ರಮುಖ ಧಾರ್ಮಿಕ ಆಚರಣೆಗಳೆ ಪ್ರಮುಖವಾಗಿವೆ. ಆದರೆ ಇದರಲ್ಲಿ ಅಭಿವೃದ್ಧಿಯ ಪರಿಯ ಹೇಗೆ? ಅಂದರೆ ಇಂದಿನ ಆಧುನಿಕ ಸಮಾಜದ ಪ್ರಕಾರ ಅಭಿವೃದ್ಧಿಯ ಪರಿಕಲ್ಪನೆಯ ಪ್ರಕಾರ ನಾಗರೀಕ ಸಮಾಜಗಳು, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದವರು, ಇಂತಹ ಅಲೆಮಾರಿ ಸಮುದಾಯಗಳು ಆಚರಿಸುವ, ನಂಬಿಕೆ, ಸಂಪ್ರದಾಯಗಳೆಂಬ, ಮೌಢ್ಯತೆಗಳಿಂದ ಹೊರ ಬಂದವರು ಅಭಿವೃದ್ಧಿ ಹೊಂದಿದವರು ಎಂದು ಹೇಳುತ್ತಾರೆ. ಆದರೆ ಅಲೆಮಾರಿ ಸಮುದಾಯಗಳು ಆಚರಿಸುವ ನಂಬಿಕೆಗಳು ಸಂಪ್ರದಾಯಗಳು ಇಂದಿನ ಆಧುನಿಕ ಸಮಾಜದಲ್ಲಿ ಅಧ್ಯಾತ್ಮಿಕತೆಯಲ್ಲಿ ವೈಜ್ಞಾನಿಕತೆಯ ಸತ್ಯಗಳನ್ನು ಕಾಣಬಹುದಾಗಿದೆ. ಯೋಗ ಮತ್ತು ಅಧ್ಯಾತ್ಮಗಳು ಸಹ ಧಾರ್ಮಿಕತೆಯ ಮತ್ತೊಂದು ಮುಖಗಳಾಗಿವೆ. ಧ್ಯಾನ ಮತ್ತು ಯೋಗದಿಂದ ಇಂದು ನಾವು ದೇಹದ ಆರೋಗ್ಯವನ್ನು ಸುಸ್ಥಿತಿಯಲ್ಲಿಡಬಹುದು. ಈ ಕಲ್ಪನೆಯು ಅಂದೇ ಬುಡಕಟ್ಟುಗಳಲ್ಲಿದ್ದ ಒಂದು ಭಕ್ತಿಯ ಪರಿಯೇ ಈ ಧ್ಯಾನ. ಹಾಗೂ ಹೆರಿಗೆ ಯಾದಾಗ ಮೂರು ತಿಂಗಳುಗಳ ಕಾಲ ಹೊರಗಿರುತ್ತಿದ್ದವರು, ಇಂದು ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುತ್ತಿದ್ದಾರೆ. ಏಕೆಂದರೆ ಸರ್ಕಾರಿ ಯೋಜನೆಗಳು ಇಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಉತ್ತರ ಕರ್ನಾಟಕದ ಭಾಗಗಳಲ್ಲಿ ಇದ್ದ ಜೋಗಮ್ಮನ ಪದ್ಧತಿಯೂ ಜಡೆ ಬಿಡುವ ಸಂಪ್ರದಾಯದಲ್ಲಿ ಯಾರಿಗೂ ಅನುಕೂಲವಾಗುತ್ತಿತ್ತು. ಆದ್ದರಿಂದ ಇದು ಸಂಪ್ರಾದಾಯ ಹಾಗೂ ದೇವರ ಮೇಲಿನ ಅಪಾರ ಭಕ್ತಿಯ ರೂಪ. ಆದರೆ ಇಂದು ಈ ಭಾಗಗಳಲ್ಲಿ ಶಿಕ್ಷಣದ ಮಟ್ಟ ಹೆಚ್ಚಿ ಇದು ಹಂತ ಹಂತವಾಗಿ ಕಡಿಮೆಯಾಗುತ್ತಿವೆ. ಅಂದರೆ ಇವರು ಸಂಪ್ರದಾಯದಲ್ಲಿ ಅಭಿವೃದ್ಧಿ ಹೊಂದಿದ್ದಾರೆಂಬುದು ಸತ್ಯವಾಗಿದೆ(ಮಾಹಿತಿ:ಡಾ.ಕೋಟ್ರೇಶ್ ಎಂ., ಕವಿವಿಹಂ).

ಕಾಡುಗೊಲ್ಲ ಬುಡಕಟ್ಟು ಸಮುದಾಯವು ಇಂದಿಗೂ ಕೆಲವೊಂದು ಪ್ರದೇಶದಲ್ಲಿ ತನ್ನ ಸಂಪ್ರದಾಯಗಳಲ್ಲಿ ಅತ್ಯಂತ ಬಿಗುವಿನ ನಿಲುವನ್ನು ತಾಳುತ್ತಿತ್ತು. ಅಂದರೆ ಇವುಗಳನ್ನು ಅಂಕಿ-ಅಂಶ ಗಳನ್ನು ಗುಣಿಸಿದಾಗ ದಶಕಗಳ ಹಿಂದೆ ಇದ್ದ ನಿಲುವಿಗೂ ಇಂದಿಗೂ ಇರುವ ನಿಲುವಿಗೂ ಬಹಳಷ್ಟು ವ್ಯತ್ಯಾಸವನ್ನು ಕಾಣಬಹುದಾಗಿದೆ. ಋತುಮತಿಯಾದ ಒಂದು ತಿಂಗಳು ಅಥವಾ ಎರಡು ತಿಂಗಳಿಗೆ ಮದುವೆ ಮಾಡಿ ಬಿಡುತ್ತಿದ್ದರು. ಅಲ್ಲದೆ ಯಾವುದೇ ಕಾರಣಕ್ಕೂ ಮನೆಯಿಂದ ಹೊರಗೆ ಬಿಡುತ್ತಿರಲಿಲ್ಲ. ಆದರೆ ಇಂದು ಅದೆಲ್ಲ ಕಣ್ಮರೆಯಾಗಿ ಇಂದು ಶಿಕ್ಷಣ ಹಾಗೂ ವಯಸ್ಸನ್ನು ಅವಲಂಬಿಸಿದೆ. ಅಂದರೆ ಅವರು ಇಂದು ಇವುಗಳಿಂದ ಹೊರ ಬಂದಿದ್ದಾರೆಂಬುದು ಹಾಗೂ ಸಾಂಪ್ರದಾಯಿಕತೆಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೆಂದು ಹೇಳಬಹುದು. ಆದರೆ ಕುರಿಗಾರರಲ್ಲಿ ಬರುವ ಕೆಲವೊಂದು ಇಂತಹ ಸಂಪ್ರದಾಯಗಳ ಸಮಯಕ್ಕೆ ಮೂಲ ನೆಲೆಗಳಿಗೆ ಹಿಂದಕ್ಕೆ ಕಳುಹಿಸಿಬಿಡುತ್ತಾರೆ. ಏಕೆಂದರೆ ಅನವಶ್ಯಕವಾದ ತೊಂದರೆಯೆಂದು.

ನಂಬಿಕೆಗಳ ಮತ್ತು ಸಂಪ್ರದಾಯಗಳು ದೇವರ ಸುತ್ತಾ ಸುತ್ತುತ್ತವೆ. ಆದರೆ ವೈಜ್ಞಾನಿಕತೆ ಇದರ ಆಚೆಗಿನ ಸತ್ಯವನ್ನು ಹುಡುಕಲು ಪ್ರಯತ್ನಿಸುತ್ತವೆ. ಉದಾ : ಪೂರ್ವದವರ ಪ್ರಕಾರ ಮಕ್ಕಳನ್ನು ದೇವರು ಕೊಡುತ್ತಾನೆ. ಹುಟ್ಟಿಸಿದ ದೇವರು ಹುಲ್ಲನ್ನು ಮೇಯಿಸುವುದಿಲ್ಲವೇ ಎಂಬ ನಂಬಿಕೆಯನ್ನು ಹೊಂದಿದ್ದರು. ಆದರೆ ಇಂದು ಮಕ್ಕಳ ಹುಟ್ಟಿಗೆ ಕಾರಣ ಹಾಗೂ ಹೆಚ್ಚು ಮಕ್ಕಳಾದರೆ ಎಂತಹ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಅರಿತಿದ್ದಾರೆ. ಅದು ವೈಜ್ಞಾನಿಕತೆ ಎನ್ನಬಹುದು. ಹಿಂದೆ(ಇಂದೂ) ಋತುಮತಿ, ಮುಟ್ಟು, ಹೆರಿಗೆ ಸೂತಕದ ಪ್ರಕಿಯೆಗಳಾಗಿದ್ದು, ಅವುಗಳ ಆಚರಣೆಯು ಅಷ್ಟು ಕಟ್ಟುನಿಟ್ಟಿನಿಂದ ಕೂಡಿತ್ತು. ಆದರೆ ಇಂದಿನವರುಗಳಿಗೆ ಯಾವುದೇ ಕಟ್ಟುನಿಟ್ಟುಗಳು ಅರಿವಿಗೆ ಬರುವುದಿಲ್ಲ. ಹೆರಿಗೆಯೊಂದನ್ನು ಬಿಟ್ಟರೆ ಆಧುನಿಕ ಮಹಿಳೆಗೆ ಉಳಿಕೆಯವು ಮಹಾ ಎಂದು ಅನಿಸುವುದೇ ಇಲ್ಲ. ಅಂದರೆ ಇವರು ಸಂಪ್ರಾದಾಯ ಧಾರ್ಮಿಕತೆಯಿಂದ ವೈಜ್ಞಾನಿಕತೆಯತ್ತ ಹಾಗೂ ಅಭಿವೃದ್ಧಿಗೆ ಹೋಗುತ್ತಿದ್ದಾರೆಂಬುದು ಅಭಿವೃದ್ಧಿಪರ ಚಿಂತಕರ ವಾದವಾಗಿದೆ.

ಕಾಡುಗೊಲ್ಲ ಬುಡಕಟ್ಟು ಸಮುದಾಯದಲ್ಲಿ ಅಂದು ವರ್ಷಕ್ಕೊಮ್ಮೆ ಹಾಲು ಮೀಸಲು ಹಾಗೂ ದೇವರ ಗುಡಿಯ ಪೌಳಿಗೆ ಕಳ್ಳೆಯನ್ನು ಹಾಕಲು ಪ್ರತಿ ಮನೆಯಿಂದ ಒಬ್ಬರಂತೆ ಎತ್ತು ಗಾಡಿಯನ್ನು ಹೊಡೆದುಕೊಂಡು ಹೋಗಿ ಕಳ್ಳೆ ಕಡಿದುಕೊಂಡು ಹೋಗಿ ಗುಡಿಯ ಪಾಳಿಗೆ ಹಾಕುತ್ತಿದ್ದರು. ಆದರೆ ಇಂದು ಕಳ್ಳೆ ಗುಡಿಗಳ ಬದಲಿಗೆ ಇಟ್ಟಿಗೆ, ಕಲ್ಲಿನ ಗೋಡೆಗಳನ್ನು ಹಾಗೂ ಮಾಳಿಗೆ ಗುಡಿಯ ದೇವಾಲಯಗಳನ್ನು ನಿರ್ಮಾಣವಾಗಿವೆ. ಆದ್ದರಿಂದ ಇಂದು ಕಳ್ಳೇ ಹಾಕುವ ಸಂಪ್ರದಾಯ ಹಂತ ಹಂತವಾಗಿ ಕಡಿಮೆಯಾಗಿ ಬರುತ್ತಿದೆ. ಉಳಿದಂತೆ ಹಾಲು ಮೀಸಲು ಪದ್ಧತಿ ಅಲ್ಪಸ್ವಲ್ಪ ಉಳಿದಿದೆ. ಆದರೆ ಈ ಸಮುದಾಯದಲ್ಲಿ ಹಾಲು-ಮೀಸಲು ಸಂಪ್ರದಾಯ ಅತಿ ಶುದ್ಧ ಸತ್ಯದ ಪ್ರತಿರೂಪದ, ದೊಡ್ಡ ಆಚರಣೆಯಾಗಿ ಆಚರಿಸುತ್ತಾರೆ. ಏಕೆಂದರೆ ಈ ಸಂಪ್ರದಾಯದಲ್ಲಿ ಅನೇಕ ವೈಜ್ಞಾನಿಕ ಸತ್ಯಗಳು ಸಹ ಇವೆ. ಆದರೆ ಇಂದು ಅದು ಕಣ್ಮರೆಯಾಗಿ ಸಾಮಾನ್ಯವಾಗುತ್ತಿದೆ. ಅಂದರೆ ಇಷ್ಟೊಂದು ಜಿಡ್ಡುಗಟ್ಟಿದ ಆಚರಣೆಗಳನ್ನು ಹೊಂದಿದ ಸಮುದಾಯ ಇಂದು ವೈಜ್ಞಾನಿಕತೆಯತ್ತ ತೆರೆದುಕೊಳ್ಳುತ್ತಿದೆ.

ಅಲೆಮಾರಿ ಕುರಿಗಾರರು ವಿಶೇಷವಾಗಿ ಕಾಡುಗೊಲ್ಲರು ಪೂರ್ವದಲ್ಲಿ ಕುರಿಮಂದೆಯ ಹತ್ತಿರಕ್ಕೆ ಅನ್ಯ ಜಾತಿಯರ ನೆರಳು ತಾಕದ ಹಾಗೆ ನೋಡಿಕೊಳ್ಳುತ್ತಿದ್ದರು. ಕುರಿ ಮರಿಗಳನ್ನು ಮಾರುವ ಸಮಯದಲ್ಲಿ ಬಸ್ಸಿನಲ್ಲಿ ಹೋಗಬೇಕು, ಪಟ್ಟಣದಲ್ಲಿ ಹೋಟೆಲ್ ತಿಂಡಿ ತಿನಿಸುಗಳನ್ನು ತಿನ್ನಬೇಕಲ್ಲ ಎನ್ನುವ ಕಾರಣದಿಂದಲೇ ಕುರಿಮರಿಯನ್ನು ಅಲ್ಲಿಗೆ ಬರುವ ದಲ್ಲಾಳಿಗಳಿಗೆ ಕೊಡುತ್ತಿದ್ದರು ಅಲ್ಲದೆ ಮರಿಗಳನ್ನು ಮಂದೆಯಿಂದ ದೂರ ಹೊಡೆದುಕೊಂಡು ಬರುತ್ತಿದ್ದರು. ವ್ಯವಹಾರ ಕುದುರಿದ ಮೇಲೆ ಅವರು ಕೊಡುವ ಹಣದ ಮೇಲೆ ಗಂಜಲನ್ನು ಚಿಮುಕಿಸಿಕೊಂಡು ಪಡೆದುಕೊಳ್ಳುತ್ತಿದ್ದರು. ಆದರೆ ಇಂದು ಇವೆಲ್ಲಾ ಸಂಪೂರ್ಣವಾಗಿ ಬದಲಾಗಿವೆ. ಮೂಲ ಆಚರಣೆ ಸಂಪ್ರದಾಯಗಳಲ್ಲಿ ಬದಲಾವಣೆಯಾಗುತ್ತಿವೆ.

ಕಾಡುಗೊಲ್ಲ ಅಲೆಮಾರಿ ಕುರಿಗಾರರ ಇಪ್ಪತ್ತು ವರ್ಷಗಳ ಹಿಂದೆ ಕುರಿಕಾಯುವಾಗ ಕಾಟನ್ ಬಟ್ಟೆಯ ಹೊಟ್ಟೆ ಜೋಬಿನ ಬಾಡಿ(ಬನಿಯನ್) ಮೊಣ ಕಾಲಿನವರೆಗೆ ಸಂಲ್ಯಾನಾ(ಚಲ್ಲಾಣ) ನಿಕ್ಕರೋಪದಿಯಲ್ಲಿ ಅದನ್ನು ಮೂರು ನಾಲ್ಕು ಸುತ್ತು ಮೇಲಕ್ಕೆ ಮಡಚಿಕೊಂಡು, ಕಿವಿಯಲ್ಲಿ ಬೆಂಡೋಲೆ ಹಾಕಿಕೊಂಡು, ತಲೆಯ ಮೇಲೆ ಎರಡು ಮೂರು ಮೀಟರ್‌ನ ಶಲ್ಯವನ್ನು ಪೇಟದ ಹಾಗೆ ಸುತ್ತಿಕೊಂಡು, ಹೆಗಲ ಮೇಲೆ ಕರಿಕಂಬಳಿಯನ್ನು ಹಾಕಿಕೊಂಡು, ಅದರ ಮೇಲೆ 'ಸಿಪ್ಪು ಕೊಡಲಿ'ಯನ್ನು ಇಟ್ಟುಕೊಂಡು, ಅದರ ತುದಿಯಲ್ಲಿ 'ಸಿಕ್ಕ'ವನ್ನು ನೇತಾಕಿಕೊಂಡು ಒಂದುವರೆ ಅಡಿಯ ಮೂತಿ ಮೆಟ್ಟನ್ನು ಮೆಟ್ಟಿಕೊಂಡು, ಸೊಂಟದಲ್ಲೊಂದು ಎಲೆ ಅಡಕೆ ಚೀಲವನ್ನು ಇಟ್ಟುಕೊಂಡು ದವಡೆಯಲ್ಲಿ ಅಡಿಕೆಲೆ ತಾಂಬೂಲವನ್ನು ವತ್ತರಿಸಿಕೊಂಡು ದಾರಿಯಲ್ಲಿ ಹೋಗುತ್ತಿದ್ದ ಇವರನ್ನು ಅನ್ಯಜಾತಿಯವರು ಪ್ರೀತಿಯಿಂದ ನೋಡ್ರೇ ಗೌಲ್ಲಗೌಡ ಹೋಗುತ್ತಿದ್ದಾನೆ. ಅಂದರೆ ಕೆಲವರು ಅಲ್ಲೋಡ್ರೋ ಗೊಲ್ರನು (ಕೊಳಕ ಎಂಬ ಅರ್ಥ) ಹೋಗ್ತಾ ಇದಾನೆ. ಅಂದರೆ ಅವರು ತಿಂಗಳಿಗೊಮ್ಮೆ ಸ್ನಾನ, ಕ್ಷೌರ, ಬಟ್ಟೆ ತೊಳೆಯುವುದೆ ಅಪರೂಪವಾದ್ದರಿಂದ ಅವರು ಯಾವಾಗಲೂ ಮಾಸಿದ ಬಟ್ಟೆಯನ್ನೇ ಧರಿಸಿಕೊಂಡು ಹೋಗುತ್ತಿದ್ದರು. ಆದ್ದರಿಂದ ಇವರನ್ನು ಕೊಳಕು ಜನ ಎಂದು ಮೊದಲಿಸುತ್ತಿದ್ದರು. ಇದು ಜನರ ಅಭಿಪ್ರಾಯ ಮಾತ್ರ. ಆದರೆ ಇದೇ ಕಾಡುಗೊಲ್ಲರ ಅಭಿಪ್ರಾಯವೇ ಬೇರೆಯಾಗಿತ್ತು.

ಕಾಡುಗೊಲ್ಲ ಸಮುದಾಯದಲ್ಲಿ ಯಾರು ಹೆಚ್ಚು ಹಣವನ್ನು ಹೊಂದಿರುತ್ತಿದ್ದರೋ ಅವರು ಕೊಳಕು ಬಟ್ಟೆ, ತಲೆಯಲ್ಲಿ 'ಯೇನು' 'ಕೊರೆ'ಗಳಿಂದ ತುಂಬಿರುತ್ತಿತ್ತು. ಅದು ಅವರ ಅದೃಷ್ಟ ಎಂದೇ ಪರಿಗಣಿಸುತ್ತಿದ್ದರು. ಇದರಲ್ಲಿ ಒಂದು ವಿಶೇಷವೆಂದರೆ ಕಿವಿಯಲ್ಲಿ 'ಬೆಂಡೋಲೆ' ಅಥವಾ 'ಕಾಮಾಕ್ಷಿಮುರ'ನ್ನು ಕಿವಿಯಲ್ಲಿ ಹಾಕಿಕೊಳ್ಳುತ್ತಿದ್ದರು. ಇವು ದೇವರಿಗೆ 'ಹರಕೆ' ತೀರಿಸಿಕೊಳ್ಳುವ ಸಲುವಾಗಿ ಗಂಡು ಮಕ್ಕಳಾಗದಿದ್ದರೆ ಅವರ ಮನೆದೇವರಿಗೆ ಸಿದ್ದಯ್ಯ ಹಾಗೂ ಕದಿರಿ ನರಸಿಂಹ ಸ್ವಾಮಿಗೆ 'ಹರಕೆ' ಹೊತ್ತಾಗ ಜನಿಸಿದ ಮಕ್ಕಳಿಗೆ ಕಿವಿಯಲ್ಲಿ ''ಹಾರೆ ಮುರ''ಗಳನ್ನು ಹಾಕುತ್ತಾರೆ. ಅವು ಅವರು ಸಾಯುವವರೆಗೂ ಕಿವಿಯಲ್ಲೇ ಇರುತ್ತವೆ.

ಆದರೆ ಇಂದು ಇವುಗಳ ಜಾಗದಲ್ಲಿ ಜೀನ್ಸ್ ಹಾಗೂ ಕಾಟನ್ ಬರ್ಮುಡ ಚಡ್ಡಿಗಳು, ಟರಿಕಾಟ್, ಪಾಲಿಸ್ಟಾರ್ ಬಟ್ಟೆಯ, open lungi ರಾರಾಜಿಸುತ್ತಿವೆ. ಇನ್ನು ಹುಡುಗರು ಕುರಿಕಾಯಲು ತಲೆಗೆ ಪ್ಯಾಷನ್ ಟೋಪಿ, ಕೈಯಲ್ಲಿ ಕೋಲಿಗೆ ಬದಲು ಮೊಬೈಲು, ಟೀಶರ್ಟ್‌ಗಳನ್ನು ಧರಿಸಿಕೊಂಡು ಕುರಿ ಕಾಯುತ್ತಿರುವುದು ಸಾಮಾನ್ಯವಾಗಿದೆ.

ಕಾಡುಗೊಲ್ಲ ಸಮುದಾಯದ ಮಹಿಳೆಯರು ಕೈ ಕಡೆಗೆ ಪಶುಪಾಲನೆಯ ಸಂಕೇತವಾಗಿತ್ತು. ಹಂಚಿನ ಸೊಸೈಟಿ ಸೀರೆ ಹಾಗೂ ಇಂದಿರಾ ಗಾಂಧಿ ಸೀರೆಗಳನ್ನು ಉಡುತ್ತಿದ್ದರು. ಕುಪ್ಪಸಗಳನ್ನು

ತೊಡುತ್ತಿರಲಿಲ್ಲ. ಇದು ಇವರ ಸಂಪ್ರದಾಯ ಜೀವನ. ಆದರೆ ಇಂದು ಎಲ್ಲ ಮಹಿಳೆಯಲ್ಲಿ ಇವುಗಳು ಕಾಣೆಯಾಗುತ್ತಿವೆ. ಸಾಮಾನ್ಯವಾಗಿ ಅಡುಗೆ ಮನೆ ಸೀಮಿತವಾದ ಈ ಸಮುದಾಯದ ಮಹಿಳೆಯರು ಇಂದು ಎಲ್ಲಾ ರಂಗಗಳ ಕಡೆಯಲ್ಲಿ ದಾಪು ಕಾಲಿಡುತ್ತಿದ್ದಾಳೆ. ಶಿಕ್ಷಣ ಪಡೆಯುತ್ತಿದ್ದಾಳೆ. ಶಿಕ್ಷಣ ಹೆಚ್ಚಿದಂತೆ ಇವರ ಸಂಪ್ರದಾಯ ಜೀವನ ಚೂರು ಚೂರಾಗುತ್ತಿವೆ. ಆದರೆ ಇವರ ಸ್ವಚ್ಛಂದವಾದ, ಕಲ್ಮಶವಿಲ್ಲದ, ಅಪಾರವಾದ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದ ಈ ಸಮುದಾಯ ಅಭಿವೃದ್ಧಿಯ ಹೆಸರಿನಲ್ಲಿ ತನ್ನ ನಾಶವನ್ನು ತಾನೇ ಮಾಡಿಕೊಳ್ಳುತ್ತಿದೆ ಎನಿಸುತ್ತದೆ. ಏಕೆಂದರೆ ಈ ಎಲ್ಲಾ ಅಂಶಗಳು ಧಾರ್ಮಿಕ ಅಭಿವೃದ್ಧಿ ಎಂದು ವಿಶ್ಲೇಷಿಸಿದಾಗ ಇಲ್ಲಿ ಒಂದು ಅಂಶ ಮರೆಯಾಗುತ್ತದೆ ಮತ್ತೊಂದು ಒಳಬರುತ್ತಿದೆ. ಇದರಿಂದ ಒಂದು ಸಮುದಾಯದ ಅನೇಕ ಪಳೆಯುಳಿಕೆಗಳು ನಾಶವಾಗಿ ಕೇವಲ ಅಲ್ಪಕಾಲ ಬಾಳುವ, ತಾತ್ಕಾಲಿಕ ಜೀವನಕ್ಕೆ ಮನುಷ್ಯ ಹಾತೊರೆಯುತ್ತಿರುವುದು ವಿಷಾದನೀಯವಲ್ಲವೇ?

## ೪.೭. ಕಾಡುಗೊಲ್ಲರ ಸಾಂಸ್ಕೃತಿಕ ಅಭಿವೃದ್ಧಿ

### ೪.೭.೧. ಪಶುಪಾಲನೆಯಲ್ಲಿ ಸಾಂಸ್ಕೃತಿಕತೆ

ಕಾಡುಗೊಲ್ಲರಲ್ಲಿ ಪಶುಪಾಲನೆ ವಿರಳವಾಗುತ್ತಿದೆ. ಕುರಿಸಾಕಾಣಿಕೆಯೊಂದಿಗೆ ವ್ಯವಸಾಯ ಮೊದಲಾದ ವೃತ್ತಿಗಳನ್ನು ಅವಲಂಬಿಸಿಕೊಳ್ಳುತ್ತಿದ್ದಾರೆ. ಗುಡಿಸಲುಗಳು ಮಾತ್ರ ಇಂದಿಗೂ ಹಲವೆಡೆ ಹಾಗೆಯೇ ಇವೆ. ಅಲ್ಲಲ್ಲಿ ಮನೆಗಳು ನಿರ್ಮಾಣವಾಗುತ್ತವೆ. ಗುಟ್ಟುಗಳು ಕಣ್ಮರೆಯಾಗಿ ಗುಡಿಗಳನ್ನು ಕಟ್ಟಲಾಗುತ್ತದೆ. ಹಟ್ಟಿಗಳ ಸ್ಥಾನದಲ್ಲಿ ಊರುಗಳು(ಅರೆಬರೆ ಬೆಂದ ಹಾಗೆ) ಹುಟ್ಟಿಕೊಳ್ಳುತ್ತವೆ. ವಿದ್ಯಾವಂತರೂ ಹೆಚ್ಚುತ್ತಿದ್ದಾರೆ. ಅದರೆ ಅವರ ಸಾಂಪ್ರದಾಯಿಕ ಜೀವನದಲ್ಲಿ ಹೆಚ್ಚು ಬದಲಾವಣೆ ಕಾಣುತ್ತಿಲ್ಲ.

ತಮ್ಮದೇ ಆದ ಸಾಂಸ್ಕೃತಿಕ ಆವರಣದಲ್ಲಿ ಬದುಕುವ ಕಾಡುಗೊಲ್ಲರಲ್ಲಿ ಅವರ ನೈಜ ಸಂಸ್ಕೃತಿಯನ್ನು ಚಿತ್ರಿಸುವ ಅವರ ಜಾನಪದ ಸಹಜವಾಗಿ ಸಂಶೋಧಕರಿಗೆ ಅಸಕ್ತಿಯನ್ನು ಕೆರಳಿಸುತ್ತದೆ. ಅವರಲ್ಲಿ ಜನಪದ ಸಾಹಿತ್ಯ ಸಮೃದ್ಧವಾಗಿದೆ. ಸಾಂಸ್ಕೃತಿಕ ಸಾಹಿತ್ಯಿಕ ದೃಷ್ಟಿಯಿಂದ ಅವರ ಹಾಡುಗಳು, ಹಾಡ್ಗತೆಗಳೂ ಮಹತ್ವಪೂರ್ಣವೆನಿಸುತ್ತವೆ. ಇತರ ಬುಡಕಟ್ಟುಗಳು ಜನಪದ ಸಾಹಿತ್ಯಗಳಲ್ಲಿ ಕಂಡುಬರದ ನೈಸರ್ಗಿಕ ಆವರಣ ಇವರ ಕಾವ್ಯಗಳ ಒಂದು ವೈಶಿಷ್ಟ್ಯ. ಈ ಕಾವ್ಯಗಳಲ್ಲಿ ಬೆಟ್ಟ ಗುಡ್ಡಗಳ ಕಣಿವೆ ಕಾಡುಗಳ ನಡುವಿನ ಅವರ ಪ್ರಾಚೀನ ಜೀವನ ವಿಧಾನದ ಸಹಜ ಚಿತ್ರಣ ತಮ್ಮ ಚಿತ್ರಣಗಳಂತೂ ರೋಮಾಂಚನಕಾರವಾದವು. ಇವರ ದೈವಗಳನ್ನು ಕುರಿತು ಪುರಾಣ ಕಾವ್ಯಗಳು ಈ ಬುಡಕಟ್ಟಿನ ಧಾರ್ಮಿಕ ಹಿನ್ನೆಲೆಯನ್ನು ವಿವರಿಸುವುದರ ಜೊತೆಗೆ ಉತ್ತಮ ಬುಡಕಟ್ಟು ಕಾವ್ಯಗಳಾಗಿವೆ. ಇವರ ಕಾವ್ಯಗಳೆಲ್ಲ ತ್ರಿಪದಿಯಲ್ಲೇ ದೊರೆಯುವುದು ಗಮನಾರ್ಹ ವಿಷಯವಾಗಿದೆ. ಕಾಡುಗೊಲ್ಲರ ಪ್ರಮುಖ ಕಥೆ ಕಲಿವೀರ

ಜುಂಜಪ್ಪನದು. ಜುಂಜಪ್ಪನ ಪುರಾಣ, ಪದ್ಯದಲ್ಲಿದೆಯಾದರೂ ಪದ್ಯಕ್ಕಿಂತ ಗದ್ಯದಲ್ಲಿರುವುದೇ ಹೆಚ್ಚು. ಚಂಪೂ ಕಾವ್ಯದಲ್ಲಿರುವ ಜುಂಜಪ್ಪನ ಕಾವ್ಯಗಳು ಈಗಾಗಲೇ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಗುಬ್ಬಿ ಹಾಗೂ ಸಿರಾ ತಾಲ್ಲೂಕಿನಾದ್ಯಂತ ಜುಂಜಪ್ಪನಿಗೆ ಸಂಬಂಧಿಸಿದ ಸ್ಥಳಗಳು ಸ್ಮಾರಕಗಳೂ ಕಾಣಸಿಗುತ್ತವೆ. ಧಾರ್ಮಿಕ ಗೀತೆಗಳು ಜೊತೆಗೆ ಅನೇಕ ಲೌಕಿಕ ಕಾವ್ಯಗಳೂ ಧಾರ್ಮಿಕ ರೀತಿಯ ಅಂತ್ಯ ವನ್ನು ಸಾಧಿಸಿಕೊಳ್ಳುತ್ತವೆ. ಇವುಗಳ ಜೊತೆಗೆ ಶುದ್ಧ ಲೌಖಿಕ ಎನ್ನಬಹುದಾದ ಕಾವ್ಯಗಳೂ ಇವೆ. ಮಹಾಭಾರತದ ಕೆಲವು ಪ್ರಸಂಗಗಳನ್ನು ಚಿತ್ರಿಸುವ ಹಾಡುಗಳು ಇವರಲ್ಲಿ ಲಭ್ಯವಾಗುತ್ತವೆ(ಮೇತ್ರಿ ಕೆ.ಎಂ., ೨೦೦೦:೮). ಕಾಡುಗೊಲ್ಲರಲ್ಲಿ ವಿಶೇಷವಾದ ಜನಪದ ಸಾಹಿತ್ಯ ನೋಡಬಹುದಾಗಿದ್ದು ಅವುಗಳಲ್ಲಿ ಮುಖ್ಯವಾದವುಗಳೆಂದರೆ ಎತ್ತಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಚಿತ್ರಲಿಂಗೇಶ್ವರನ ಕಾವ್ಯ, ಇವು ಅತ್ಯಂತ ಪ್ರಮುಖವಾದವುಗಳಾಗಿವೆ.

ಕಾಡುಗೊಲ್ಲರ ಮುಖ್ಯವಾದ ವಾದ್ಯ 'ಗಣೆ' ಎರಡು ಮೊಳ ಉದ್ದದ ದೊಡ್ಡ ಆಕಾರದ ಕೊಳಲು ಇದು. ಇನ್ನೊಂದು ಉಸಿರಾಡುವಾಗ ಬಳಸುವ ಗೂಂಡೇವುಗಳಿಂದ ಲೋಹದ ನಾಗರ ಹೆಡೆಯಿಂದ, ನವಿಲುಗಳಿಂದ ಅಲಂಕರಿಸಿದ ದೊಡ್ಡ ಗಣೆ. ಇದರ ತುದಿಯಲ್ಲೊಂದು ಗಂಟೆ ಇರುತ್ತದೆ. ಊದು ಗಣೆಗಳನ್ನು ನುಡಿಸುತ್ತಾ ಕೆಲವರು ಕಾವ್ಯಗಳನ್ನು ಹಾಡುತ್ತಾರೆ. ಕೆಲವರು ಗಣೆಯನ್ನು ನುಡಿಸಿ ಅವೇಶಭರಿತರಾಗಿ ಕಣಿ ಹೇಳುತ್ತಾರೆ. ಗಣೆ ಇವರ ಪವಿತ್ರ ವಾದ್ಯ. ಕಾವ್ಯಗಳ ಮೂಲತಃ ಬುಡಕಟ್ಟು ಸಂಸ್ಕೃತಿಯ ಇತಿಹಾಸವನ್ನು ಪ್ರತಿನಿಧಿಸುವ ಮೌಖಿಕ ಚಿತ್ರಗಳು. ಅವು ಸಾರ್ವತ್ರಿಕವಾದವುಗಳು. ವಿಶ್ವದ ಎಲ್ಲಾ ಕಾವ್ಯಗಳಿಗೂ ಬುಡಕಟ್ಟು ವಸ್ತುವೇ ಮೂಲ. ಆ ವಸ್ತುವನ್ನೇ ಬುಡಕಟ್ಟಿನಿಂದ ದೂರಾದ ಜನಪದರು ಜನಪದ ಕಾವ್ಯಗಳೆಂದೂ ಮತ್ತು ಅಲ್ಲಿಂದಲೂ ದೂರಾದ ಶಿಷ್ಟರು ಶಿಷ್ಟ ಕಾವ್ಯಗಳೆಂದು ಕರೆದರು. ಭಾರತದ ಶಿಷ್ಟ ಕಾವ್ಯಗಳೆಂದರೆ ರಾಮಾಯಣ. ಮಹಾಭಾರತಗಳೆಂದು ಎಲ್ಲರನ್ನು ಶಿಷ್ಟಕವಿ ನಂಬಿಸಿದ್ದರು. ರಾಮಾಯಣ ಮತ್ತು ಮಹಾಭಾರತದ ಕಥಾವಸ್ತು ಬುಡಕಟ್ಟಿನಿಂದ ಜನಪದರು ಹಾಗೂ ಜನಪದರಿಂದ ಕೂಡಿದ ಶಿಷ್ಟರು ತಮಗೆ ಮತ್ತು ತಮ್ಮ ಪರಿಸರಕ್ಕೆ ಹಿತವೆನಿಸುವಂತೆ ಸೈ ಎನಿಸಿಕೊಂಡರು, ಮತ್ತು ಸೈ ಎನಿಸಿಕೊಳ್ಳುತ್ತಿದ್ದಾರೆ. ಆದರೆ ಶಿಷ್ಟರಿಂದ ಅನತಿ ದೂರದಲ್ಲಿದ್ದ ಬುಡಕಟ್ಟುಗಳು ಐತಿಹ್ಯ, ಪುರಾಣ, ನಂಬಿಕೆ, ರೂಢಿ ಸಂಪ್ರದಾಯ, ಆಚರಣೆ, ಇತ್ಯಾದಿಗಳು ಒಂದು ಹಂತದ ಇತಿಹಾಸವೆಂದು ನಂಬುವ ಕಾಲ ಇಂದು ಬಂದಿದೆ. ಈ ಹಿನ್ನೆಲೆಯಲ್ಲಿಯೇ ಇಂದಿನ ಇತಿಹಾಸ ತಜ್ಞರು ನಿರ್ಲಕ್ಷಿತ ಇತಿಹಾಸದ ಶೋಧಕಾರ್ಯದಲ್ಲಿ ತೊಡಗಿದ್ದಾರೆ (ಅದೇ, ಪು.೮).

ಬುಡಕಟ್ಟು ಕಥನ ಕಾವ್ಯಗಳು ಎಂದು ಹೆಸರಿಸುವುದರಲ್ಲಿ ಅರ್ಥವಿದೆ. ಮಲೆ ಮಾದೇಶ್ವರ, ಜುಂಜಪ್ಪ, ಮೈಲಾರಲಿಂಗ, ಗಾದ್ರಿಪಾಲ ನಾಯಕ, ಬೀರಪ್ಪ ಮಾಳಿಂಗರಾಯ ಇತ್ಯಾದಿ ಕಾವ್ಯಗಳು ಕೂಡ ಬುಡಕಟ್ಟು ಸಂಸ್ಕೃತಿಯನ್ನೇ ಪ್ರತಿನಿಧಿಸುವ ಕಥನಗಳು. ಹೀಗಾಗಿ ಅವುಗಳು ಸಹ ಮೂಲತಃ ಬುಡಕಟ್ಟು

ಕಾವ್ಯಗಳಾಗಿ ಆಮೇಲೆ ಜನಪದ ಕಾವ್ಯಗಳಾಗಿ ತಮ್ಮ ವ್ಯಾಪ್ತಿ ಹೆಚ್ಚಿಸಿಕೊಳ್ಳುತ್ತಿವೆ. ''ಯಾವುದೇ ಒಂದು ಕಾವ್ಯ ಅಥವಾ ಕಥೆ ಒಂದು ಬುಡಕಟ್ಟಿಗೆ ಸೀಮಿತವಾಗಿರದೆ ಹಲವಾರು ಬುಡಕಟ್ಟುಗಳಿಗೆ ಅಥವಾ ಸಮುದಾಯಗಳಿಗೆ ವಿಸ್ತೃತಗೊಂಡರೆ ಅದು ಬಹುಸಂಖ್ಯಾತರ ಕಥೆಯಾಗಿ ಜನಪದ ಕಥೆಯಾಗುವುದು. ಇಲ್ಲವೆ ಕಾವ್ಯವಾಗುವುದು(ಅದೇ, ಪು.೧೦). ಇದಕ್ಕೆ ಕಾಡುಗೊಲ್ಲರ ಜನಪದ ಕಾವ್ಯಗಳೇ ಪ್ರಮುಖ ಉದಾಹರಣೆಗಳಾಗಿವೆ.

ಈ ಮೌಖಿಕ ಮಹಾಕಾವ್ಯಗಳಲ್ಲಿನ ಮೂಲತಃ ಅಲೆಮಾರಿಗಳೂ ಭೈರಾಗಿಗಳೂ ಆದ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮಾಳಿಂಗರಾಯ, ಮೈಲಾರರು ಒಂದು ಕಡೆ ನೆಲೆಗೊಳ್ಳುವ ತವಕದಲ್ಲಿ ನೆಲೆಗೊಳ್ಳುವ ಪೂರ್ವದ ಸ್ಥಿತಿಯನ್ನು ಮತ್ತು ಸಂದರ್ಭದ ಘರ್ಷಣೆಗಳನ್ನೂ ಹೇಳುವಂಥದ್ದು. ಇರುವುದನ್ನು ವೈಭವಿಕರಿಸುವ ಲಿಖಿತ ಮಹಾಕಾವ್ಯಗಳು ಸತ್ಯದ ಕಡೆಗೆ ಹೆಚ್ಚು ಗಮನ ಕೊಟ್ಟರೆ ಇಲ್ಲದಿರುವುದಕ್ಕೆ ತುಡಿಯುವ ಜನಪದ ಮಹಾಕಾವ್ಯಗಳು ಜೀವನ ಸತ್ಯಕ್ಕೆ ಹೆಚ್ಚು ಒತ್ತು ಕೊಟ್ಟಿವೆ ಎನಿಸುತ್ತದೆ (ಕೇಶವನ್ ಪ್ರಸಾದ್, ೧೯೯೭:ಪ್ರಸ್ತಾವನೆ).

### ೪.೭.೨. ಅಲೆಮಾರಿ ಕಾಡುಗೊಲ್ಲರ ಜನಪದ ಸಂಸ್ಕೃತಿ

ಕಾಡುಗೊಲ್ಲ ಕುರಿಕಾರರನ್ನ ಸಾಂಸ್ಕೃತಿಕ ನೆಲೆಯಲ್ಲಿ ಒಮ್ಮೆ ನೋಡಿದಾಗ ಈ ಸಮುದಾಯವು ಜನಪದ ಗಣಿಯಾಗಿದೆ. ಜನಪದದ ಯಾವುದೇ ಕಲೆಯ ಆನಂದವನ್ನು ಪಡೆಯಬೇಕೆಂದರೆ ಈ ಸಮುದಾಯಗಳಲ್ಲೇ ನೋಡಬೇಕು ಅನಿಸುತ್ತದೆ. ಅಲ್ಲದೆ ಇಂದಿಗೂ ಊರ ಸಂಪರ್ಕವೇ ಇಲ್ಲದಂತೆ ಊರೂರು ಅಲೆಯುತ್ತಿರುವ ಈ ಸಮುದಾಯ ಕಟ್ಟುನಿಟ್ಟಿನ ಸಂಪ್ರದಾಯಗಳೊಂದಿಗೆ ಆಚರಣೆ ನಂಬಿಕೆಗಳ ಜೊತೆಗೆ ಈ ಜನಪದ ಕಲೆಯನ್ನು ಉಳಿಸಿಕೊಂಡು ಬಂದಿರುವುದು ಸ್ವಾಗತಾರ್ಹ. ಇಂತಹ ಅಲೆಮಾರಿ ಕುರಿಗಾರರಲ್ಲಿ ತಮ್ಮ ವೃತ್ತಿಯ ಜೊತೆಯಲ್ಲೇ ಆನಂದ ಪಡುತ್ತಿದ್ದಾರೆಂದರೆ ಇವರ ಕಲೆಯೇ ಅತ್ಯಂತ ಪ್ರಮುಖವಾದ ಸ್ಥಾನವಹಿಸಿದೆ.

ಅಲೆಮಾರಿ ಕುರಿಗಾರರಿಗೆ ಜನಪದ ಕಲೆಯನ್ನು ಅಭಿವ್ಯಕ್ತಪಡಿಸಲು ಇವರಿಗೆ ಯಾವುದೇ ವಿಶೇಷ ಸಮಯವು ದೊರೆಯುವುದಿಲ್ಲ. ಆದರೂ ಇವರು ರಾತ್ರಿಯ ವೇಳೆ ಕುರಿ ಮಂದೆಯ ಸರ್ತೆ ಕಾಯುವಾಗ, ತಮ್ಮ ಬೇಸರವನ್ನು ಹಾಗೂ ನಿದ್ದೆಯಿಂದ ಸದಾ ಎಚ್ಚರವಾಗಿರಲು ಅವರ ಸಾಂಸ್ಕೃತಿಕ ದೈವಗಳ ಮೇಲೆ ಪದಗಳನ್ನು ಹಾಡುತ್ತಾರೆ. ಇದರಲ್ಲಿ ಚಿತ್ರಲಿಂಗ, ಕಾಟಮುಲಿಂಗ, ಜುಂಜಪ್ಪ, ಎತ್ತಪ್ಪ, ಸಿದ್ಧಯ್ಯ, ಈರಣ್ಣ ಕರಿಯಮ್ಮ, ಈ ದೇವರುಗಳ ಮೇಲೆ ಪದಗಳನ್ನು ಕಟ್ಟಿ ಹಾಡುತ್ತಾರೆ. ರಾತ್ರಿಯಲ್ಲಿ ಕುರಿ ಮಂದೆಯ ಮುಂದೆ ಬೆಂಕಿಯನ್ನು ಹಾಕಿಕೊಂಡು ಕಂಬಳಿಯ ಕೊಪ್ಪೆಯನ್ನು ಇಟ್ಟುಕೊಂಡು ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಜೊತೆಗೆ ಗಣೇವಾದಕರು ತಯಾರಾಗಿರುತ್ತಾರೆ. ಕೆಲವೊಮ್ಮೆ ಇಡೀ ರಾತ್ರಿಯಲ್ಲಿ ಮೈತುಂಬಿ ಹಾಡುತ್ತಾರೆ. ಇದರಿಂದ ಅವರ ಮನಸ್ಸಿಗೆ ನೆಮ್ಮದಿ ಮತ್ತು ಆನಂದ ಪಡೆಯುತ್ತಾರೆ.

ಗಣೆಯು ಇಲ್ಲದಿದ್ದಾಗ ಪಿಳುಗೋವಿ(ಕೊಳಲು) ಬಹುತೇಕವಾಗಿ ಬಳಸುತ್ತಾರೆ. ಇದು ರಾತ್ರಿಯ ಸಮಯದಲ್ಲಿಯೂ ಹಗಲು ಹೊತ್ತಿನಲ್ಲಿಯೂ ನುಡಿಸುತ್ತಾರೆ. ಇದರ ರಾಗಕ್ಕೆ ಕುರಿ ಮಂದೆಯು ಪುಂಗಿಯ ನಾದಕ್ಕೆ ಹಾವು ತಲೆದೂಗಿದ ಹಾಗೆ ಕುರಿಗಳು ಆ ನಾದಕ್ಕೆ ತಲೆ ಎತ್ತಿಕೊಂಡು ಕಿವಿ ನಿಮಿರಿಸಿಕೊಂಡು, ಮೂಗಿನ ಪೊಳ್ಳೆಗಳನ್ನು ಹಿಗ್ಗಿಸುತ್ತಾ, ಆನಂದ ಪಡುತ್ತವೆ. ಹಾಗೂ ಈ ನಾದಕ್ಕೆ ಎಂತಹವರು ತಲೆದೂಗುವಂತಿರುತ್ತದೆ. ಜೊತೆ ಗೂಡೆಯಲ್ಲಿರುವ ಮಹಿಳೆಯರು ಸಹ ಸೋಬಾನೆ ಪದಗಳನ್ನು, ಲಾಲಿಹಾಡುಗಳನ್ನು ಸಹ ಹಾಡುತ್ತಾರೆ. ಚಿಕ್ಕ ಚಿಕ್ಕ ಮಕ್ಕಳಿರುವ ಗೊಡೆಗಳಲ್ಲಿ ಪ್ರಕೃತಿಯ 'ಲಾಲಿ' (ತೊಟ್ಟಿಲು) ಅತ್ಯಂತ 'ಸುಂದರ' ಅದು ಎರಡು ಕವಗೋಲುಗಳನ್ನು ಮೂರು, ನಾಲ್ಕು, ಅಡಿಗಳ ಅಂತರಕ್ಕೆ ನಡೆಸುತ್ತಾರೆ. ಅದಕ್ಕೆ ಜೋಡು ಪದರವಾಗಿ ಒಂದು ಹಗ್ಗವನ್ನು ಕಟ್ಟಿ ಅದಕ್ಕೆ ಕಂಬಳಿಯನ್ನು ಅದರ ಮೇಲೆ ಬಟ್ಟೆಯ ರಗ್ಗನ್ನು ಜೋಡಿಸಿ ಅದರಲ್ಲಿ ಮಗುವನ್ನು ಮಲಗಿಸಿ ಇಂಪಾಗಿ ಲಾಲಿ ಹಾಡುಗಳನ್ನು ಹಾಡುತ್ತಾರೆ.

ಒಂದಾನೇ ಗುಣಿಯಾಕೆ ಎರಡಾನೀ ಬಿದ್ದು
ಮೂರನೇ ತಿಂಗಳಿಗೆ ಮುತ್ತೈದರು ಕೇಳಿ ಲಾಲೋ
ಮೂರಾನೆ ತಿಂಗಳಿಗೆ ಮುತ್ತೈದರ ಕೇಳಿ
ನಾಲ್ಕನೆ ತಿಂಗಿಳಿಗೆ ನಾದಿನಿಯರ ಕೇಳಿ ||ಲಾಲೋ||
ಐದನಾ ತಿಂಗಳಿಗೆ ಅತ್ತಮಾವ ಕೇಳಿ
ಆರನೇ ತಿಂಗಳಿಗೆ ಮುತ್ತೈದಕೇಳಿ ಲಾಲೋ
ಏಳಾನೆ ತಿಂಗಳಿಗೆ ತಾಯ್ತೆಂದೆ ಕೇಳಿ
ಎಂಟನೆ ತಿಂಗಳಿಗೆ ನಂಟರು ಕೇಳಿ ||ಲಾಲೋ||
ಒಂಭತ್ತನೆ ತಿಂಗಳಿಗೆ ತುಂಬೈವೆನಮಾಸ
ನಾಕಮೂಲೆಗೆ ನಾಕ ದೀವಿಗೆಯಚ್ಚಿ
ಮೂಲೆ ಮೂಲೆಗೆ ಬ್ಯಾನೆ ತಿಂದವಳೆನಾರಿ
ಮೂರಾನ ತಿಂಗಳಿಗೆ ಮುತ್ತಿನಂತ ಮಗನಾ ಹಡದಾಳಗೋಪಿ ||ಲಾಲೋ||
ಹತ್ತೀನ ಬೆಳ್ಳಳ್ಳಿ ಕಿವಿಯಲ್ಲಿ ಇಟ್ಟು
ಬಾಯಿಗ ತಕ್ಕಂತ ವೀಳ್ಯವು ಮಿದ್ದು
ಕಾಲಿಗೆ ತಕ್ಕಂತ ಸಮ್ಮೇಳಮೆಟ್ಟು
ಎದ್ದಾಳೋ ಎದ್ದಂಗೆ ಎದ್ದಾಳೋ ಗೋಪಿ ||ಲಾಲೋ||
ಬಡಿಗೇರ ಮನೆಗೆ ನಡದಾಳೋಗೋಪಿ
ಎಂದು ಇಲ್ಲದಾ ಗೋಪಿ ಇಂದ್ಯಾಕೆ ಬಂದೆ

ಕಂದಯ್ಯ ಮನಗೋವ ತೊಟ್ಟಿಲ ಬೇಕು ಬಡಿಗಿ
ಎದ್ದನು ಎದ್ದಂತೆ ಎದ್ದನು ಬಡಿಗಿ ||ಲಾಲೋ||
ಉಕ್ಕೇನ ಉಳಬಾಳ್ಸಿ ಹೆಗಲೇರಿ ಬಡಗಿ
ಉಕ್ಕೇನ ಉಳಿಬಾಳ್ಸಿ ಹೆಗಲೇರಿ ಬಡಿಗಿ
ಕಾವೇರಿಗುಡ್ಡಕ್ಕೆ ನಡೆದಾನು ಬಡಿಗಿ
ನಾಕಾ ಮೂಲೆಗೆ ನಾಕ ಮಳಗಳಾ ಬಡಿದ ||ಲಾಲೋ||
ಕಂದಯ್ಯ ಮಲಗೋ ತೊಟ್ಟಿಲ ತಂದ ಬಡಗೀಗೆ
ಹಾಲು ಅನ್ನವ ಮಾಡಿ ಅಗಾಲು ಉಣ್ಣಲಿಡರೊ
ಆದ ಸಾಲದಿದ್ದರೆ ಆನೆಯ ಒಡಕೊಡು ||ಲಾಲೋ||

ಅಲ್ಲದೆ ಕೆಲವು ತೆಲುಗು ಲಾಲಿ ಹಾಡುಗಳನ್ನು ಸಹ ಹಾಡುತ್ತಾರೆ.

ಕಳಿಮಾನಕಿಂದ ಕನಕನ್ನ
ಉಂಡೆ ವಾಡೂಗುಗನ್ನ
ಉಂಡೇದಿ ಪಸಿ ಕುಕ್ಕನ್ನ
ದಾನಿ ಕನ್ನು ಲೊಟ್ಟನ್ನ
ತೂರುಪು ತುಂಬುಷೆಟ್ಟನ್ನ
ಷಟ್ಟಿಕ್ಕಿಂದ ಗಂಡನ್ನ
ನಲ್ಲ ಬಂಡದಿಗುವ ನಾ
ಪಾಲು ಮರೆಸರನ್ನಾ (ಮಾಹಿತಿ:ಶ್ರೀಮತಿ ದೊಡ್ಡಕ್ಕ ಪೆನ್ನೋಬನಹಳ್ಳಿ ಗೊಲ್ಲರಹಟ್ಟಿ)

ಉಳಿದಂತೆ ಕುಟ್ಟುವಾಗ, ಬೀಸುವಾಗ ಹಾಡುವಂಥ ಹಾಡುಗಳನ್ನು ತಮ್ಮ ಬೇಸರವನ್ನು ಹೋಗಲಾಡಿಸಲು ಹಾಡಿಕೊಳ್ಳುತ್ತಾರೆ. ಕಾಡುಗೊಲ್ಲರಲ್ಲಿ ವಿಶೇಷವಾಗಿ 'ಕೋಲಾಟ'ದ ನೃತ್ಯವು ಬಹಳ ವಿಶೇಷವಾಗಿದೆ. ಅದು ರಾತ್ರಿಯ ಹೊತ್ತಲ್ಲಿ ಬೆಂಕಿಯ ಬೆಳಕಿನಲ್ಲಿ ಹಾಗೂ ಕುರಿಯು ಒಳ್ಳೆಯ ಬೀಳಿನಲ್ಲಿ, ಕೆರೆಯ, ಕುಂಟೆ ಅಂಗಳದಲ್ಲಿ ಒಳ್ಳೆಯ ಹುಲ್ಲು ಸಿಕ್ಕಿದಾಗ ಕನಿಷ್ಟ ಪಕ್ಷ ಒಂದು ಇಲ್ಲಿ ಎರಡು ಗಂಟೆಗಳಾದರೂ ಒಂದೇ ಕಡೆ ಮೇಯುತ್ತವೆ. ಅಂತಹ ಸಮಯಗಳಿಗೆ ಕಾಯುವ ಇವರು ತಮ್ಮಲ್ಲಿರುವ ಇಂತಹ ಕಲೆಗಳನ್ನು ಹೊರ ಹಾಕುತ್ತಾರೆ. ಈ ಕೋಲಾಟ ಪದಗಳಲ್ಲಿ ಕೆಲವೊಂದು ಇಲ್ಲಿ ನೋಡಬಹುದು.

೧. ಕಾಯೋ ನಾರಾಯಣ ನಮ್ಮೂರ ದೇವ||
ನಮ್ಮೂರಿಗೆಸರಾದ ಈಶ್ವರ ದೇವನೆ

ಇರಲಪ್ಪ ನಮ್ಮ ಮೇಲೆ ನಿಮ್ಮ ಕರುಣೆ||
ನಮ್ಮೂರಿಗೆಸರಾದ ಗಣಪತಿ ದೇವರೆ
ಇರಲಪ್ಪ ನಮ್ಮ ಮೇಲೆ ನಿಮ್ಮ ಕರುಣೆ ||ಕಾಯೋ||

೨. ಸುಳ್ಳೇ ನಮ್ಮ ದೂರಬೇಡ ನಮ್ಮ ನಿಮ್ಮ ಮಾಯಾಕೃಷ್ಣ
ಗೋಪಾಲಕೃಷ್ಣ ತಿಂದು ಹೋರಟಾನ ಕೇಳಮ್ಮಯ್ಯ||
ಗೋಪಿ ನಿನ್ನ ಮಗನಿಗೆ ಮುದ್ದು ಬಿಟ್ಟು ಬುದ್ಧಿಹೇಳಿ
ಮುದ್ದು ಬಿಟ್ಟು ಬುದ್ಧಿ ಹೇಳಮ್ಮ ಕೇಳಮ್ಮಯ್ಯ
ಅಡುಗೆ ಕೋಣೆ ದೇವರ ಪೂಜೆ ಸಡಗರದಿಂದ ಹೋಳಿಗೆ ಮಾಡಿ||
ಆ ಭೀಮಸೇನ ತಿಂದು ಹೊರಟಾನ ಕೇಳಮ್ಮಯ್ಯ||
ಸುಳ್ಳೇ ನಮ್ಮ ದೂರಬೇಡ ನಮ್ಮ ನಿಮ್ಮ ಮಾಯಕೃಷ್ಣ
ಗೋಪಾಲ ಕೃಷ್ಣ ತಿಂದು ಹೋರಾಟದ ಕೇಳಮ್ಮಯ್ಯ ||ಸುಳ್ಳೇ ನಮ್ಮ||

(ಮಾಹಿತಿ : ಮಲ್ಲೇಶ್, ಯರ್ರಪಾಳ್ಯ, ೧೦.೦೮.೨೦೦೮)

೩. ಗೋವು ಕುಲದಲ್ಲಿ ಪುಟ್ಟಿ
ಗೋವುಗಳಲ್ಲವೂ ಕಾಯ್ದು
ಗೋಪಾಲ ಕೃಷ್ಣನ ತನ ಪತಿಯಾಕಬೇಕೆಂದು
ಎತ್ತಿದಾಳರಾತಿಯ ರುಕ್ಮೀಣಿದೇವಿ ಬೆಳಗಿದಾಳಾರತಿಯ
ಗೊಲ್ಲರ ಮನೆಯಲ್ಲಿ ಸೆಲ್ಲ
ಬೆಣ್ಣೆಯ ಕದ್ದ ಕಳ್ಳಕೃಷ್ಣನೇ
ತನ್ನ ಪತಿಯಾಕಬೇಕೆಂದು
ಎತ್ತಿದಾಳಾರತಿಯ ರುಕ್ಮಿಣಿದೇವಿ
ಬೆಳಗಿದಾಳಾರತಿಯ

೪. ಲೀಲಾ ವಿನೋದನಿಗೆ ಬಾಲೆಂದು ಪಾಲನಿಗೆ
ಕಾಲಕಾಲಾತೀತ ಮಾಕಾಳಿಗೆ
ಹಾಲಾ ಹಲವಧರಿಸಿ ಸುರ ಜಾಲವನಪೊರೆದು
ಮೂಲುಕದೊಡೆಯ ಮಾಲೋನಿಗೆ
ಜಯಮಂಗಳಂ ನಿತ್ಯಶುಭ ಮಂಗಳಂ||
ದುರಿತ ಸಂಹಾರನಿಗೆ ಸುರಪತಿಯ ಸೇವನಿಗೆ
ಹರುಷದೊಳೂ ಮನ್ನಿಸಿದ ಪರದ ಪುರಹರಗೆ

ನಿರತದಲಿ ಸ್ಮರಿಪರಿನು ತೊರಿತದಿಂದಮ್
ಪಾಲಿಪುವ ಪಾಲಿಪುರಿಭರಿತ
ಚಿನ್ಮಯರೂಪ ಪರಮಾತ್ಮಗೆ
ಸಂಗಮೇಶ್ವರ ಸರ್ವ ಸಂಹಾರ
ವಿದ್ಯೇಗೆ ಜಂಗಮ ಪ್ರಣೀರೂಪ ಮಹಾಲಿಂಗಗೇ
ಜಯಮಂಗಳಂ ನಿತ್ಯಶುಭಮಂಗಳಂ||

೫. ಕಟ್ಟಿಸಿದ ಮನೆಯಾಗಿ ಎತ್ತಿಸಿರೆ ಕರಬಾನು
ಎತ್ತಿಸಿರೆ ಮುತ್ತಿನ ಮನಿಮನಿಗಳ
ಸೃಷ್ಟಿಗೀಶ್ವರನ ಶಿವನ ಮಡದಿ ಬರುತಾಳೆಂದು
ಎತ್ತಿ ಹಿಡಿಯರೆ ನವಿಲಗರಿ ತೋರಣಗಳ
ಜಯಮಂಗಳಂ ನಿತ್ಯ ಶುಭಮಂಗಳಂ||
ಮಾಡಿಸಿದ ಮನೆಯಾಗೆ ಎತ್ತಿಸಿರೆ ಕರೆಬಾನ
ಎತ್ತೀರೆ ಮುತ್ತೀನ ಮನಿಮನಿಗಳ
ರೂಢೀಗೀಶ್ವರ ಶಿವನ ಮಡದಿ ಬರುತಾಳೆಂದು
ತೋರಿರೆ ನವಿಲ ಗರಿ ತೋರಣಗಳ
ಜಯಮಂಗಳಂ ನಿತ್ಯಶುಭ ಮಂಗಳಂ||
ಹಾಲಿನಲಿ ಸಾರಿಸಿ ಹವಳದಲಿ ಗುಡಿಕಟ್ಟಿ
ಮಾನಮುತ್ತೀನ ರಂಗೋಲಿನಿಟ್ಟು
ಮಾನಸ್ತರರ ಮಡದಿ ಮಹಾಲಕ್ಷ್ಮಿ ಬರುತಾಳೆಂದು
ಮಾಡಿ ಬೆಳಗೀರೆ ಮುತ್ತೀನಾರತಿಗಳ
ಜಯಮಂಗಳಂ ನಿತ್ಯಶುಭಮಂಗಳಂ||

(ಮಾಹಿತಿ : ದೊಡ್ಡಕ್ಕ ಪೆನ್ನೋಬನಹಳ್ಳಿಗೊಲ್ಲರಹಟ್ಟಿ)

ಈ ಎಲ್ಲ ಪದಗಳಲ್ಲಿ ತಮ್ಮ ರಕ್ಷಣೆಯ ಬಗೆಯೇ ದೇವರುಗಳನ್ನು ಬೇಡಿ ಕೊಳ್ಳುವುದು ಪ್ರಮುಖವಾಗಿದೆ. ಈ ರೀತಿಯಾಗಿ ಪುರುಷರು ಕೋಲಾಟ ಪದಗಳ ಜೊತೆಗೆ ಕುಣಿದು ಕುಪ್ಪಳಿಸುತ್ತಾರೆ. ಹಾಗೂ ಕುರಿಯ ಮಂದೆಯನ್ನು ಬೇರೆ ದೂರದ ಪ್ರದೇಶಗಳಿಗೆ ತಮ್ಮ ಸಾಮಾನುಗಳೊಂದಿಗೆ ಹೋಗುವಾಗ ಎತ್ತಪ್ಪ, ಜುಂಜಪ್ಪ, ದೇವರುಗಳ ಹಾಡನ್ನು ಹಾಡಿಕೊಂಡು ಕೇಕೆ ಹಾಕಿಕೊಂಡು ಓವ್ಹೊ.. ಓವ್ಹೊ..! ಎಂದು ಇಂಪಾಗಿ ಹಾಡುತ್ತಾ ಹೋಗುತ್ತಾರೆ.

### ೪.೭.೩. ಜನಪದ ಮಹಾಕಾವ್ಯಗಳು ಮತ್ತು ಆಚರಣೆಗಳು

ಜನಪದ ಮಹಾಕಾವ್ಯಗಳನ್ನು ಹಾಡುವುದಕ್ಕೆ ಆ ಮಹಾಕಾವ್ಯಗಳ ಕಥಾನಾಯಕ ದೈವಗಳ ಆಚರಣೆಗೂ ಗಾಢವಾದ ಸಂಬಂಧವಿದೆ. ಈ ಮಹಾಕಾವ್ಯಗಳ ಕಥಾನಾಯಕರು ಸಂಬಂಧಪಟ್ಟ ಜಾತಿ, ಬುಡಕಟ್ಟು ಅಥವಾ ಸಮುದಾಯದ ಜನರಿಗೆ ದೇವರೇ ಆಗಿರುವುದರಿಂದ ಈ ಮಹಾಕಾವ್ಯಗಳು ಅವರ ಪಾಲಿಗೆ ಪುರಾಣಗಳಾಗುತ್ತವೆ. ಈ ದೇವತೆಗಳ ಆಚರಣೆಯ ಸಂದರ್ಭದಲ್ಲಿ ಮಹಾಕಾವ್ಯದ ಭಾಗಗಳನ್ನು ಹಾಡಲಾಗುತ್ತದೆ. ಈ ಮಹಾಕಾವ್ಯದ ವೀರರು ಆಯಾ ಜಾತಿಯ ಬುಡಕಟ್ಟಿನ ಜನರಿಗೆ ದೇವರಾಗುವುದರಿಂದ ಈ ಜನ ಈ ಆಚರಣೆಗಳಲ್ಲಿ ಆವೇಶಕ್ಕೆ ಒಳಗಾಗುತ್ತಾರೆ. ಪುರಾಣದ ಭಾವನಾತ್ಮಕ ಪ್ರಸಂಗಗಳನ್ನು ಧಾರ್ಮಿಕ ಆಚರಣೆಯಲ್ಲಿ ಪುರಭಿನಯ ಮಾಡುತ್ತಾರೆ. ಇದು ಪುರಾಣದ ನಾಟಕೀಕರಣ ಆಗಿರುತ್ತದೆ(Dramatization of Myth). ಈ ಬಗೆಯ ನಾಟಕೀಕರಣವನ್ನು ಕೆಲವು ಮಹಾಕಾವ್ಯಗಳಲ್ಲಿ ಕಾಣಬಹುದು. ಉದಾ : ಮೈಲಾರಲಿಂಗನ ಜಾತ್ರೆಯಲ್ಲಿ ಕಂಚಾ ವೀರರು ಕಾಲಿಗೆ ಬಗನಿಗೂಟ ಹೊಡೆದುಕೊಳ್ಳುವುದು, ಶಸ್ತ್ರ ಪವಾಡ ಮಾಡುವುದು, ಸರಪಳಿ ಹರಿಯುವುದು. ನಾಯಿಗಳಂತೆ ಬಗ್ಗಿ ದೊಡ್ಡ ತಟ್ಟೆಯಲ್ಲಿ ಹಾಕಿದ ಪ್ರಸಾದವನ್ನು ನಾಲುಗೆಯಿಂದ ನೆಕ್ಕಿ ತಿನ್ನುವುದು (ಶಂಕರನಾರಾಯಣ ತೀ.ನಂ., ೧೯೯೦:೩೪೧). ಅದೇ ರೀತಿ ಕಾಡುಗೊಲ್ಲರ ಕ್ಯಾತೇದೇವರ ಜಾತ್ರೆಯಲ್ಲಿ ದೇವಾಸ್ಥಾನದ ಮುಳ್ಳಿನ ಬೇಲಿಯನ್ನು ಕುಣಿದಾಡಿಕೊಂಡು ಹತ್ತುವುದು, ಮುಳ್ಳಿನ (ಕಬ್ಬಿಣದ) ಸೆಮಟಿಗೆ(ದೊಡ್ಡ ಗಾತ್ರದ ಸುತ್ತಿಗೆ)ಯಲ್ಲಿ ಬರೀ ಮೈಗೆ ರಕ್ತ ಬರುವ ಹಾಗೆ ಹೊಡೆದುಕೊಳ್ಳುವುದು. ಇಂತಹ ಹಲವಾರು ಉದಾಹರಣೆಗಳನ್ನು ನೋಡಬಹುದಾಗಿದೆ.

ಜನಪದ ಮಹಾಕಾವ್ಯಗಳಿಗೆ ಅವುಗಳ ಮೇಲೆ ರೂಪುಗೊಂಡ ಧಾರ್ಮಿಕ ಆಚರಣೆಗಳಿಗೆ ಗಾಢವಾದ ಸಂಬಂಧಗಳಿವೆ. ಆದರೆ ಕೆಲವು ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಈ ಬಗೆಯ ಪುರಾಣದ ಘಟನೆಗಳ ನಾಟಕೀಕರಣ ಪ್ರಕ್ರಿಯೆ ಇರುವುದಿಲ್ಲ. ಹೀಗಾಗಲು ಕಾರಣವೇನು ಎಂಬುದನ್ನು ವಿಚಾರ ಮಾಡುವುದು ಅಗತ್ಯ. ಜನಪದ ಮಹಾಕಾವ್ಯಗಳು ಮೂರು ಹಂತಗಳಲ್ಲಿ ತಮ್ಮ ಕಾರ್ಯ ನಿರ್ವಹಿಸುತ್ತವೆ. ಮೊದಲ ಹಂತದಲ್ಲಿ ಧಾರ್ಮಿಕ ಆಚರಣೆ, ಎರಡನೆಯ ಹಂತದಲ್ಲಿ ಮಹಾಕಾವ್ಯ ರಚನೆ, ಮೂರನೆಯ ಹಂತದಲ್ಲಿ ಸಂಸ್ಕೃತಿಯ ಪ್ರಸಾರ, ಜನಪದ ಮಹಾಕಾವ್ಯಗಳನ್ನು ಕೇವಲ ಪಠ್ಯದ ಹಿನ್ನೆಲೆಯಲ್ಲಿ ನೋಡಿದಾಗ ಈ ಅಂಶಗಳು ತಿಳಿಯುವುದಿಲ್ಲ. ಈ ಮಹಾಕಾವ್ಯಗಳನ್ನು ಯಾರು, ಯಾವಾಗ, ಏಕೆ ಹೇಗೆ ಹಾಡುತ್ತಾರೆ ಎಂಬುದನ್ನು ಆಚರಣೆಗಳಿಗೆ ಮತ್ತು ಇವುಗಳಿಗೆ ಇರುವ ಸಂಬಂಧವನ್ನು ಅಭ್ಯಾಸ ಮಾಡಿದಾಗ ಮಾತ್ರ ಪುರಾಣಗಳು ಆ ಸಮಾಜದಲ್ಲಿ ಎಷ್ಟು ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತವೆ ಎಂಬುದರ ತಿಳುವಳಿಕೆ ಉಂಟಾಗಲು ಸಾಧ್ಯ(ಅದೇ, ಪು.೩೬). ಈ ಅಂಶಗಳನ್ನು ಗಮನಿಸಿದಾಗ ಪ್ರತಿಯೊಂದು ಬುಡಕಟ್ಟುಗಳು ತನ್ನದೇ ಆದ ಅನನ್ಯತೆಯನ್ನು ಪ್ರಜ್ಞಾಪೂರ್ವಕವಾಗಿಯೋ,

ಅಪ್ರಜ್ಞಾ ಪೂರ್ವಕವಾಗಿಯೋ ಪ್ರಯತ್ನಿಸುತ್ತಲೇ ಇರುತ್ತದೆ. ಹೀಗಾಗಿ ತನ್ನ ಜಾತಿ ಅಥವಾ ಬುಡಕಟ್ಟಿನ ವೀರನೊಬ್ಬನ ಸುತ್ತ ಹೆಣೆದ ಮಹಾಕಾವ್ಯ ಆ ಸಮುದಾಯದ ಅತೃಪ್ತ ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಪ್ರಬಲವಾದ ಒಂದು ಮಾಧ್ಯಮವಾಗುತ್ತದೆ. ಆದ್ದರಿಂದ ಪ್ರತಿ ಬುಡಕಟ್ಟು ಸಮುದಾಯಗಳಿಗೆ ಸ್ವತಃ ಹೆಮ್ಮೆಯೆಂದು ಹೇಳಿಕೊಳ್ಳಲು ಹಾಗೂ ತಮ್ಮ ಸಮುದಾಯವನ್ನು ಪ್ರತಿನಿಧಿಸುವನೊಬ್ಬ ಅಥವಾ ನಮ್ಮನ್ನು ಆಳುವನೊಬ್ಬನಿದ್ದಾನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅಲ್ಲದೆ ಹಲವಾರು ಕಷ್ಟ, ನಿಷ್ಠುರಗಳ ಸಂದರ್ಭಗಳಲ್ಲಿ ಅವನನ್ನು ನೆನೆಯಲು, ಪೂಜಿಸಲು ಇಂದು ಪ್ರತಿಬುಡಕಟ್ಟು ಸಮುದಾಯಗಳಿಗೆ, ಬುಡಕಟ್ಟು ವೀರರು, ಸಾಂಸ್ಕೃತಿಕ ನಾಯಕರು, ಬುಡಕಟ್ಟು/ ಜನಪದ, ಮಹಾಕಾವ್ಯಗಳು ಅವಶ್ಯಕವಾಗಿವೆ.

ಅಲೆಮಾರಿ ಕಾಡುಗೊಲ್ಲ ಸಮುದಾಯಲ್ಲಿ ಅಮೋಘವಾದ ಜನಪದ ಸಾಹಿತ್ಯ ಹಾಗೂ ಜನಪದ ಕಾವ್ಯಗಳಿಂದ ಈ ಸಮುದಾಯದ ಶ್ರೀಮಂತಿಕೆಯನ್ನು ಇಂದಿಗೂ ಸ್ವಚ್ಛಂದವಾಗಿ, ಸಮೃದ್ಧವಾಗಿಯೇ ಇದೆ. ಆದರೆ ಇವರು ತಮ್ಮ ಜೀವನದಲ್ಲಿ ಒಂದು ಕಡೆ ನೆಲೆನಿಲ್ಲದ ಕಾರಣ ಇದು ಒಂದು ಸಂಚಾರಿ ಜನಪದವಾಗಿ ಮಾರ್ಪಡುತ್ತಿದೆ. ಈ ಸಮುದಾಯದಲ್ಲಿ ಕೆಲವೊಂದು ಪ್ರದೇಶಗಳಲ್ಲಿ ನೆಲೆಯೂರಿದ್ದಾರೆ. ಆದರೆ ಅವರ ಕುರಿಗಳನ್ನು ಇಂದು ರಕ್ಷಿಸಲಾಗುತ್ತಿಲ್ಲ. ಸಂಸ್ಕೃತಿಯಿಂದ, ಸಂಪ್ರದಾಯಗಳಿಂದ ವಿಮುಖರಾಗುತ್ತಿದ್ದಾರೆ. ಏಕೆಂದರೆ ಇವರಿಗೆ ಸೂಕ್ತವಾದ ವಾತಾವರಣ ದೊರೆಯುತ್ತಿಲ್ಲ. ಕುರಿಗಳಿಗೆ ಮೇವು-ನೀರು ಸಿಗುವುದೇ ಇಲ್ಲ. ಸಮಯಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಕುರಿಮಂದೆಗಳಿಗೆ ಸುತ್ತಮುತ್ತಲಿನ ಜಮೀನ್ದಾರರ ದೌರ್ಜನ್ಯ, ಸ್ಥಳೀಯರ ವಿರೋಧದಿಂದ ಹಾಗೂ ಸಂಬಳದಾಳುಗಳ ಸಮಸ್ಯೆಯಿಂದ ಕುರಿಕಾಯುವುದೇ ದೊಡ್ಡ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಗಳಿಂದ ಕುರಿಮಂದೆಯೂ ಊರ ಬಳಿ ಹೋದರೆ ಈ ಎಲ್ಲಾ ಸಮಸ್ಯೆ ತಾನೆ? ಆದ್ದರಿಂದ ಈ ಸಮಸ್ಯೆಯೇ ಬೇಡ ಊರಿನಿಂದ ದೂರ ದೂರಕ್ಕೆ, ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ತೋಟಗಳಲ್ಲಿ ನೆಮ್ಮದಿಯಾಗಿ ಜೀವನ ನಡೆಸುತ್ತಾ ತಮ್ಮ ಸಂಪ್ರದಾಯ ನಂಬಿಕೆಗಳಿಗೆ ಯಾವುದೇ ಸಮಸ್ಯೆಗಳಿಲ್ಲದೆ ನೆಮ್ಮದಿಯ ಜೀವನ ನಡೆಸುತ್ತಿದ್ದೆವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

# ಅಧ್ಯಾಯ ೫

# ಅಲೆಮಾರಿ ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

೫

# ಅಲೆಮಾರಿ ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

## ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಬಹುತೇಕ ಸಮುದಾಯಗಳ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ನಗರ, ಹಳ್ಳಿಗಳಲ್ಲಿ ಬದುಕು ನಡೆಸುತ್ತಿದ್ದಾರೆ. ಆದರೆ ಅಲೆಮಾರಿ ಕಾಡುಗೊಲ್ಲ ಸಮುದಾಯದವರು ಸದಾ ಅರಣ್ಯಗಳಲ್ಲಿ, ಹೊಲ, ಗದ್ದೆ, ತೋಟಗಳಲ್ಲಿ ಚಳಿ, ಮಳೆ, ಗಾಳಿ ಎನ್ನದೆ ಬೆಟ್ಟ-ಗುಡ್ಡಗಳಲ್ಲಿ ಇಡೀ ತಮ್ಮ ಸಂಸಾರ ಕಟ್ಟಿಕೊಂಡು ಕುರಿಗಳ ಜೊತೆಯಲ್ಲಿಯೇ ಅಲೆದಾಡುತ್ತಾ ಜೀವನ ಸಾಗಿಸುವ ಇವರು ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳ ಬಗ್ಗೆ ಎಚ್ಚೆತ್ತ ಮಾನವ ಸ್ವಲ್ಪ ಸಮಯ ಯೋಚಿಸಿದಾಗ ಇವುಗಳ ಆಳ ಅರಿವು ತಿಳಿಯುತ್ತದೆ. ಭೂಮಿಯ ಮೇಲಿನ ಎಲ್ಲಾ ಮಾನವ ಜನಾಂಗ, ಒಂದೆ ಗುಂಪಿನಲ್ಲಿ ಒಂದು ಕಡೆಯಲ್ಲಿ ಜೀವನ ನಡೆಸುತ್ತಿದ್ದರೆ ಕಾಡುಗೊಲ್ಲ ಸಮುದಾಯ ಮಾತ್ರ ಎಲ್ಲಾ ಬುಡಕಟ್ಟು, ಸಮುದಾಯಗಳಿಗೆ ಭಿನ್ನವಾಗಿ ಜೀವನ ನಡೆಸುತ್ತಿದ್ದಾರೆ.

ಕಾಡುಗೊಲ್ಲ ಸಮುದಾಯದವರಿಗೆ ತಮ್ಮ ದೇವರ ಮೇಲಿನ ಭಯ, ಭಕ್ತಿ, ನಂಬಿಕೆ, ಆಚರಣೆಗಳೆ ಪ್ರಮುಖವಾಗಿದ್ದು, ಎಂತಹ ಸಮಯದಲ್ಲೇ ಆಗಲಿ ಇವುಗಳನ್ನು ತೊರೆಯಲು ಸಾಧ್ಯವಿಲ್ಲ. ಈ ಸಮುದಾಯಕ್ಕೆ ಕುರುಬರಿಂದ ಕುರಿಗಳು ದೊರಕಿದವು ಎಂಬುದನ್ನು ಉಂಡಾಳು ಪದುಮಣ್ಣನ ಕಥೆ ತಿಳಿಸುತ್ತದೆ. ಆರಂಭದಲ್ಲಿ ಪಶುಪಾಲಕರಾಗಿದ್ದ(ಇವರ ದೇವರೂ ಸಹ) ಈ ಸಮುದಾಯವು ಹಂತ ಹಂತವಾಗಿ ಪಶುಪಾಲ ಕ್ಷೀಣಿಸುತ್ತಾ ಬಂದಿದ್ದು, ಅದರ ಹತ್ತು ಪಟ್ಟು ಕುರಿ ಸಂಗೋಪನೆಯಲ್ಲಿ ಇಂದು ಕರ್ನಾಟಕದಾದ್ಯಂತ ತೊಡಗಿರುವುದನ್ನು ಕಾಣಬಹುದು.

ಈ ಸಮುದಾಯಕ್ಕೆ ಸಂಪ್ರದಾಯ, ನಂಬಿಕೆಗಳೆ ಮೂಲ ನಿಧಿ. ಇವುಗಳಿಂದ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಎಲ್ಲಿ ಮಹಿಳೆಯರಲ್ಲಿ ಶಿಕ್ಷಣಮಟ್ಟ ಹೆಚ್ಚಿದೆಯೋ ಅಲ್ಲಿ ಇಂತಹ ಸಮಸ್ಯೆಗಳು ಇಳಿಮುಖವಾಗಿವೆ. ಉಳಿದಂತೆ ಕುರಿಗಾರರ ಪ್ರಮುಖ ಸಮಸ್ಯೆಗಳೆಂದರೆ.

**೧. ಹುಲ್ಲುಗಾವಲುಗಳ ಕೊರತೆ :** ಕೃಷಿ, ಕೈಗಾರಿಕೆ, ಅಣೆಕಟ್ಟೆನಂತಹ ಅಭಿವೃದ್ಧಿಯ ಹೆಸರಿನಲ್ಲಿ ಇಂದು ಸಾವಿರಾರು ಎಕರೆ ಭೂಮಿಯನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಭೂಮಿಯ ಮೇಲೆ ಇರುವ

ಅರಣ್ಯ ಪ್ರದೇಶ ಮನುಷ್ಯ ಬಳಸಿದರೆ ಉಳಿದಿದ್ದು ಅಣೆಕಟ್ಟುಗಳಿಂದ ಲಕ್ಷಾಂತರ ಎಕರೆಗಳು ನೀರಿನಲ್ಲಿ ಮುಳುಗಡೆಯಾಗಿ ಜನ ನೆಲೆಗಳನ್ನು ಕಳೆದುಕೊಳ್ಳುತ್ತಲಿದ್ದಾರೆ. ಸರ್ಕಾರಿ ಗೋಮಾಳ, ಹುಲ್ಲುಗಾವಲುಗಳ ಇಂದು ಕಣ್ಮರೆಯಾಗುತ್ತಿರುವುದು ಕುರಿಗಾರರಿಗೆ ತುಂಬಲಾರದ ನಷ್ಟವಾಗಿದೆ. ಇದರಿಂದ ಕಾಡುಗೊಲ್ಲರು ಕುರಿಗಳನ್ನು ಮೇಯಿಸಲು ಅರಣ್ಯ, ನೀರು ಮುಕ್ತವಾದ ವಾತಾವರಣ ಎಲ್ಲಿ ದೊರೆಯುತ್ತದೆಯೋ ಅಲ್ಲಿಗೆ ತಮ್ಮ ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದಾರೆ.

೨. **ನೈಸರ್ಗಿಕ ವಿಕೋಪ :** ಅಲೆಮಾರಿಗಳ ಬದುಕು ನೀರಿನಲ್ಲಿ ನಿಂತ ಕಂಬದ ಹಾಗೆ. ಏಕೆಂದರೆ ಇಂತಹ ಪ್ರಸಂಗಗಳು ಯಾವಾಗ ಬರುತ್ತವೆಯೋ ಬಲ್ಲವರ್ಯಾರು? ಪ್ರಕೃತಿಯ ವೈಪರಿತ್ಯದಿಂದ ಆಗುವ ಬದಲಾವಣೆಗಳನ್ನು ತಿಳಿಯಲು ಅಸಾಧ್ಯವಾದುದರಿಂದ ಇವರು ಇಂತಹ ವಿಕೋಪಗಳಿಗೆ ಸುಲಭವಾಗಿ ಬಲಿಯಾಗುತ್ತಾರೆ. ಪ್ರತಿಕ್ಷಣವು ಪ್ರಕೃತಿಯಲ್ಲಿ ಬದುಕು ಸವೆಸುವ ಇವರು ಗುಡುಗು, ಸಿಡಿಲು, ಆಲಿಕಲ್ಲು ಮಳೆ, ನೆರೆ ಹಾವಳಿ, ಅತಿವೃಷ್ಟಿ, ಅನಾವೃಷ್ಟಿ ಇತ್ಯಾದಿಗಳಿಂದ ಪ್ರತಿವರ್ಷವೂ ಮನುಷ್ಯರು, ಕುರಿ, ಮೇಕೆಗಳು ಬಲಿಯಾಗುತ್ತಲೇ ಇರುತ್ತವೆ. ಇನ್ನು ನಗರ ಪ್ರದೇಶಗಳಲ್ಲಿ ವಾಹನಗಳಿಂದ ಡಿಕ್ಕಿ ಹೊಡೆದು ಮರಣವನ್ನಪ್ಪುವ ಪ್ರಸಂಗಗಳು ಹಲವಾರು.

೩. **ಕುರಿಗಳಿಗೆ ಪಾರಂಪರಿಕ ಚಿಕಿತ್ಸೆ :** ಕುರಿಗಳಿಗೆ ಬಂದ ರೋಗಗಳನ್ನು ಸುಲಭವಾಗಿ ಪತ್ತೆ ಹಚ್ಚುವುದರಲ್ಲಿ ಇವರು ನಿಸ್ಸೀಮರು. ಆದರೆ ಇವುಗಳ ಹಾರೈಕೆಯಲ್ಲಿ ಕೆಲವೊಮ್ಮೆ ಎಡವುತ್ತಾರೆ. ಅಂತಹ ಸಮಯದಲ್ಲಿ ಇಡಿ ಮಂದೆಯಲ್ಲಿರುವ ಕುರಿ-ಮರಿಗಳು ಸಾವನ್ನಪ್ಪುತ್ತವೆ. ಸಾಮಾನ್ಯವಾಗಿ ಕುರಿಗಳಿಗೆ ದೊಮ್ಮರೋಗ ಕಾಲು, ಬಾಯಿಜ್ವರ, ತಿಕ್ಕಲು ಆಗೋದು, ಕಣ್ಣು ಕುರಡಾಗೋದು, ಕಂದ ಹಾಕಿಕೊಳ್ಳುದು, ಸತ್ತೆ(ಮಾಸ) ಹಾಕದೆ ಇರುವಾಗ ಇವರೆ ಸ್ವತಃ ತಯಾರಿಸಿದ ಪಾರಂಪರಿಕ ಔಷಧಿಯನ್ನು ನೀಡುತ್ತಾ ಬಂದಿದ್ದಾರೆ. ಆದರೆ ಇವರಿಗೆ ಸರ್ಕಾರಿ ಆಸ್ಪತ್ರೆಗಳಿಂದ ಸಮಯಕ್ಕೆ ಸರಿಯಾಗಿ ಎಲ್ಲಿಯೂ ಔಷಧಿ ದೊರೆಯುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲೂ ಇವರಿಗೆ ದೊರಕುವ ಔಷಧಿ ಎಂದರೆ ಹಸಿರುಪುಡಿ, ಬಿಳಿಪುಡಿ, ಹಸಿರು ಮಿಶ್ರಿತ ಗಾಯದ ಎಣ್ಣೆ, ಅಲ್ಪಸ್ವಲ್ಪ ಪೊಟಾಶಿಯಂ ಪರಮಂಗನೀಟ್. ಇದನ್ನು ಗಾಯದಲ್ಲಿ ಹುಳಬಿದ್ದಾಗ ಬಿಸಿ ನೀರಿನಲ್ಲಿ ಮಿಶ್ರಣ ಮಾಡಿ ತೊಳೆಯಲು ನೀಡುತ್ತಾರೆ. ಆದರೆ ಪ್ರಮುಖವಾದ ರೋಗಗಳಿಗೆ ಸುಲಭವಾಗಿ ಔಷಧ ದೊರೆಯುವುದೆ ಇಲ್ಲ. ಇವರಿಗೆ ಸರ್ಕಾರಿ ಆಸ್ಪತ್ರೆಯ ಔಷಧಿಗಳ ಹೆಸರಿಗಿಂತ ಔಷಧಿ ಅಂಗಡಿಗಳಿಂದ ತಂದ ಹೆಸರುಗಳೆ ಹೆಚ್ಚು ಜ್ಞಾಪಕ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಪಡೆದವರ ಸಂಖ್ಯೆಯನ್ನು ಮಾತ್ರ ನಮೂದಿಸುತ್ತಾರೆಯೆ ವಿನಃ ಇಲ್ಲಿ ಯಾವುದು ಸುಲಭವಾಗಿ ದೊರೆಯುವುದಿಲ್ಲ.

ನಮ್ಮ ದೇಶದ ಬಜೆಟ್‌ನಲ್ಲಿ ಕುರಿಗಳ ಔಷಧಿಗಾಗಿಯೇ ಕೇವಲ ಎಂಟು ಪೈಸೆಯ ಭಾಗವನ್ನು ಮಾತ್ರ ಮೀಸಲಿರಿಸಿದ್ದಾರೆ. ಇದು ದೇಶದ ದೊಡ್ಡ ದುರಂತವೆನ್ನಬಹುದು. ಯಾವುದೇ ಪಶುವೈದ್ಯ ಕುರಿಮಂದೆಗಳಿಗೆ ಚುಚ್ಚುಮದ್ದು ನೀಡಲು ಒಂದು ಕುರಿಗೆ ಎರಡು ರೂಪಾಯಿನಂತೆ ಹಣ ತೆಗೆದುಕೊಳ್ಳುತ್ತಾರೆ.

ಆದರೆ ಅದೆ ಚುಚ್ಚುಮದ್ದನ್ನು ಆಸ್ಪತ್ರೆಯಲ್ಲಿ ನೀಡುವುದಿಲ್ಲ. ಅದನ್ನು ಅಮಾಯಕರಾದ ಇವರು ಕೇಳುವುದೂ ಇಲ್ಲ.

೪. **ಮಾರುಕಟ್ಟೆ ಸಮಸ್ಯೆ :** ಭಾರತದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪ್ರತಿಯೊಬ್ಬರೂ ಈ ಮಾರುಕಟ್ಟೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಪ್ರತಿಯೊಂದಕ್ಕೂ ಜಿಲ್ಲಾ ಹಾಗೂ ತಾಲ್ಲೂಕ ಕೇಂದ್ರಗಳ ಮಾರುಕಟ್ಟೆ ಪ್ರಾಂಗಾಣಕ್ಕೆ ಬರಬೇಕಾಗುತ್ತದೆ. ಆದ್ದರಿಂದ ರೈತರು ವ್ಯಾಪಾರಿಗಳು ತಾವು ಬೆಳೆದ ಫಸಲನ್ನು, ಅಲ್ಲೆ ಇರುವ ದಲ್ಲಾಳಿ ಅಥವಾ ಆ ಊರಿನ ಮುಖ್ಯಸ್ಥನಿಗೆ ಅವರು ಕೇಳಿದ ಬೆಲೆಗೆ ಇಂದು ನೀಡುತ್ತಿದ್ದಾರೆ. ಇಲ್ಲಿ ಮಾರುಕಟ್ಟೆ ಬೆಲೆಗೂ ರೈತರ ಬಳಿ ತೆಗೆದುಕೊಳ್ಳುವ ಬೆಲೆಗೂ ಸಾಕಷ್ಟು ವ್ಯತ್ಯಾಸವಿಟ್ಟುಕೊಂಡೇ ವ್ಯಾಪಾರ ಮಾಡುತ್ತಾರೆ.

೫. **ಕುರಿಗಳ ಭದ್ರತೆಯ ಕೊರತೆ :** ಪ್ರಾಣಿಗಳಲ್ಲಿ ಕುರಿ-ಮೇಕೆಗಳು ಅತ್ಯಂತ ಸೂಕ್ಷ್ಮ ಹಾಗೂ ಕೋಮಲವಾದ ಪ್ರಾಣಿಗಳು. ಇವು ಹೆಚ್ಚು ಚಳಿ, ಮಳೆಯನ್ನು ಎದುರಿಸಲಾರವು. ಹೆಚ್ಚಾಗಿ ಮಳೆ ಬಂದರೆ ಕೆಲವೊಮ್ಮೆ ಇಡೀ ಹಿಂಡು ಸಾವನ್ನಪ್ಪಿರುವ ಉದಾಹರಣೆಗಳಿವೆ. ಹಾಗೂ ಕೆಲವೊಂದು ಸಾಂಕ್ರಮಿಕ ರೋಗಗಳಿಗೆ ತುತ್ತಾಗಿ ಸಾವನ್ನುಪ್ಪುತ್ತವೆ. ರಾತ್ರಿಯ ವೇಳೆ ತೋಳ, ಕಿರುಬ, ಕಳ್ಳಕಾಕರಿಂದ ಇದುವರೆಗು ಯಾವುದೇ ರೀತಿಯ ಭದ್ರತೆಯನ್ನು ಒದಗಿಲ್ಲವಾದ್ದರಿಂದ ಕುರಿಗಾರರು ಆಗಾಗ್ಗೆ ನಷ್ಟ ಅನುಭವಿಸುತ್ತಾರೆ.

೬. **ಮೂಲಭೂತ ಸೌಕರ್ಯ ವಂಚಿತರು :** ಮೂಲತಃ ಅಲೆಮಾರಿಗಳು ಭಾರತದಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಅವರಲ್ಲಿ ಕಾಡುಗೊಲ್ಲರೂ ಸಹ ಇಂದು ಯಾವುದೇ ಯೋಜನೆಗಳನ್ನು ಪಡೆಯದೇ ವಸತಿ, ಶಿಕ್ಷಣ ಇತ್ಯಾದಿ ಮೂಲಭೂತ ಸೌಕರ್ಯಗಳು ಸಿಗದೆ ವಂಚಿತರಾಗಿರುವ ಸಮುದಾಯವಾಗಿದೆ.

**ಕುಡಿಯುವ ನೀರು :** ಅರಣ್ಯ ಅಥವಾ ಪ್ರಮುಖ ಊರಿನ ನೆಲೆಯಿಂದ ದೂರವೆ ವಾಸ ಮಾಡುವ ಇವರು ಇಂದಿಗೂ ಶುದ್ಧವಾದ ನೀರನ್ನು ಕುಡಿಯುವುದಿಲ್ಲ. ಇವರಿಗಾಗಿ ಸರ್ಕಾರ ಕೊರೆಸಿದ ಕೊಳವೆ ಬಾವಿಯಾಗಲಿ ನೀರಿನ ತೊಟ್ಟಿಯಾಗಲಿ ಸಿಗುವುದಿಲ್ಲ. ಕೆರೆ, ಕುಂಟೆ, ವಡ್ಡು ಹಾಗೂ ಚೆಕ್‌ಡ್ಯಾಮ್, ಚೆಲುಮೆ(ಒಯಸಿಸ್)ಗಳ ನೀರು ಇವರಿಗೆ ಆಧಾರವಾಗಿದೆ. ಅದರಿಂದ ಇವರು ಚರ್ಮ ರೋಗ, ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿದ್ದಾರೆ.

**ಶಿಕ್ಷಣ :** ಶಿಕ್ಷಣ ಮಾನವ ಬದುಕಿಗೆ ಅಮೂಲ್ಯವಾದುದು. ಶಿಕ್ಷಣ ಪಡೆಯದ ಮನುಷ್ಯ "ವಿದ್ಯವುಳ್ಳ ವನ ಮುಖವು ಮುದ್ದು ಬರುವಂತಿಹದು. ವಿದ್ಯೆ ಇಲ್ಲದವನ ಬರಿ ಮುಖವು ಹಾಳೂರ ಹದ್ದಿನಂತೆ ಸರ್ವಜ್ಞ" ಸರ್ವಜ್ಞನ ಈ ಮಾತು ಶಿಕ್ಷಣದ ಪ್ರಾಮುಖ್ಯತೆಯನ್ನು ಹೇಳುತ್ತದೆ. ಅಲೆಮಾರಿಗಳಾದ

ಇವರಿಗೆ ಇದರ ಬಗ್ಗೆ ಅರಿವೆ ಇಲ್ಲದ ಹಾಗೆ ತಮ್ಮ ವೃತ್ತಿಯಲ್ಲಿ ನಿರತರಾಗಿ ಕುರಿಗಳ ಯೋಗಕ್ಷೇಮವೇ ನಮ್ಮ ಯೋಗಕ್ಷೇಮ ಎನ್ನುವ ಧ್ಯೇಯದಿಂದ ಇವರು ಹಾಗೂ ಇವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

**ಆರೋಗ್ಯ :** ಕಾಡುಗೊಲ್ಲ ಕುರಿಗಾರರು ಇವರು ಗಾಳಿ, ಮಳೆ, ಚಳಿ, ಬಿಸಿಲು ಎನ್ನದೆ ಎದೆಯೊಡ್ಡಿ ಜೀವನ ಸಾಗಿಸುವ ಇವರು ಎಂದಿಗೂ ಆಸ್ಪತ್ರೆಯ ಚಿಂತೆಯೇ ಮಾಡುತ್ತಿಲ್ಲ. ತೊಂಬತ್ತು ವರ್ಷಗಳಾದರೂ ಸಮುದಾಯದಲ್ಲಿ ಲವಲವಿಕೆಯಿಂದ ಇರುತ್ತಾರೆ. ಆಸ್ಪತ್ರೆ ಎಂದರೆ ಮೂಗು ಮುರಿಯುತ್ತಾರೆ. ಇವರು ಪ್ರಕೃತಿಯೊಂದಿಗೆ ಬೆರೆತು ಜೀವನ ನಡೆಸುವುದರಿಂದ ಇವರು ಆರೋಗ್ಯವನ್ನು ತಾವೇ ರಕ್ಷಿಸಿಕೊಳ್ಳುತ್ತಿದ್ದಾರೆ. ಆದರೂ ಇಂದಿನ ಕಲುಷಿತ ವಾತಾವರಣ ನೀರಿನಿಂದ, ಅನೇಕ ರೋಗಗಳು ಕಾಣಿಸಿಕೊಂಡು ಮರಣವನ್ನಪ್ಪುತ್ತಿದ್ದಾರೆ. ಆದರೂ ಇವರಿಗೆ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುವಷ್ಟು ಸಮಯವಿಲ್ಲದ ಕಾರಣ ಹಾಗೆಯೇ ಇಂದು ಜೀವನ ನಡೆಸುತ್ತಿದ್ದಾರೆ.

ಸರ್ಕಾರ ಕರ್ನಾಟಕ ರಾಜ್ಯದಲ್ಲಿರುವ ಕುರಿಗಾರ ಹಿತರಕ್ಷಣೆ ಕಾಯುವ ಉದ್ದೇಶದಿಂದ ಕುರಿ ತಳಿಗಳ ಸಮಗ್ರ ಅಭಿವೃದ್ದಿಗಾಗಿ ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ೧೯೭೪ ರಲ್ಲಿ ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿದೆ. ಸದರಿ ಮಂಡಳಿಯ ಕಾರ್ಯತತ್ಪರತೆಯಿಂದ ಹಾಗೂ ಕುರಿಗಾರ ಶ್ರಮದಿಂದ ೧೯೯೧ ರಲ್ಲಿ ನಲವತ್ತೇಳು ಲಕ್ಷ ಇಪ್ಪತ್ತನಾಲ್ಕು ಸಾವಿರ ಕುರಿಗಳ ಸಂಖ್ಯೆಯು ೧೯೯೯ ರಲ್ಲಿ ಗಣನೀಯ ಮಟ್ಟದಲ್ಲಿ ವೃದ್ಧಿಕೊಂಡು ಎಂಬತ್ತು ಲಕ್ಷದ ಮೂರು ಸಾವಿರಕ್ಕೇರಿತು. ೨೦೦೩ನೇ ಗಣತಿಯ ಪ್ರಕಾರ ಇಪ್ಪತ್ತೇಳು ಲಕ್ಷದ ಐವತ್ತು ಸಾವಿರಕ್ಕೆ ಇಳಿದಿದೆ. ಆದರೂ ರಾಜ್ಯವು ಕುರಿ ಅಭಿವೃದ್ಧಿಯಲ್ಲಿ ಆರನೇ ಸ್ಥಾನದಲ್ಲಿದೆ. ಕುರಿಯ ಇಳಿಕೆಗೆ ಕಾರಣವೆಂದರೆ ರಾಜ್ಯವು ೨೦೦೦ ರಿಂದ ೨೦೦೪ರವರೆಗೆ ಸತತವಾಗಿ ಬರಗಾಲ, ಮೇವಿನ ಕೊರತೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಮಾಂಸಹಾರಕ್ಕೆ ಬಲಿಕೊಡುವುದು ಇತ್ಯಾದಿ ಮುಂದಿನ ದಿನಗಳಲ್ಲಿ ಕುರಿಗಳ ಸಂಖ್ಯೆ ಮತ್ತು ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ, ಹಾಗೂ ಮಂಡಳಿಯನ್ನು ಬಲಪಡಿಸಿ ಆರ್ಥಿಕವಾಗಿ ಸ್ವಾವಲಂಬಿಯಾಗಿಸಲು ಮಂಡಳಿಯನ್ನು ದಿನಾಂಕ ೦೧-೦೪-೦೭ರಿಂದ ಜಾರಿಗೆ ಬರುವಂತೆ ನಿಗಮವನ್ನು ಪರಿವರ್ತಿಸಲಾಗಿದೆ. ಈ ನಿಗಮವು ಹೊಂದಿರುವ ಪ್ರಮುಖ ಉದ್ದೇಶಗಳು ಇಂತಿವೆ.

- ಕುರಿ ಸಾಕಾಣಿಕೆ, ವ್ಯವಸ್ಥಾಪನೆ ಮತ್ತು ಮೇಯಿಸುವುದು
- ಕುರಿಯತಳಿ ಸಂವರ್ಧನೆ
- ಕುರಿಗಳ ಉಣ್ಣೆ ಕಟಾವಣೆ ಮತ್ತು ಉಣ್ಣೆ ಉತ್ಪನ್ನಗಳ ತಯಾರಿಕೆ

* ಕುರಿ, ಮಾಂಸ, ಉಣ್ಣೆ ಮತ್ತು ಕುರಿಗಳ ಆಹಾರ ಕ್ರಯ ವಿಕ್ರಯ
* ಕುರಿ, ಕುರಿ ಉತ್ಪನ್ನಗಳ ಸಂಗ್ರಹಣೆ ಮತ್ತು ವೈಜ್ಞಾನಿಕ ಮಾರುಕಟ್ಟೆ ಪದ್ಧತಿಗಳನ್ನು ಆವಿಷ್ಕರಿಸುವುದು.
* ಕುರಿ ಸಾಕಾಣೆದಾರರು ಉತ್ಪಾದಿಸುವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆಯ ದರ ದೊರಕಿಸುವುದು.
* ಕುರಿ ಮತ್ತು ಕುರಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳನ್ನು ತಪ್ಪಿಸುವುದು.
* ಕುರಿ ಮತ್ತು ಕುರಿ ಉತ್ಪನ್ನಗಳ ಸಹಕಾರ ಸಂಘಗಳನ್ನು ಬಲಪಡಿಸುವುದು.
* ಕುರಿ ಉಣ್ಣೆ ಅಭಿವೃದ್ಧಿ ನಿಗಮದ ಕಾರ್ಯ ಚಟುವಟಿಕೆಗಳು, ನಿಗಮವು ಕುರಿ-ಮೇಕೆ ಸಂಗೋಪನಾ ಕಾರ್ಯಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆದರೆ ಈ ಅಲೆಮಾರಿ ಕಾಡುಗೊಲ್ಲರ ಕುರಿಗಳಿಗಾಗಿ ಯಾವುದೇ ರೀತಿಯ ಯೋಜನೆಗಳನ್ನು ಕೈಗೊಂಡಿಲ್ಲ. ಆದರೂ ಕೆಲವು ನಿಗಮದ ಅಡಿಯಲ್ಲಿ ಅಲೆಮಾರಿ ಕುರಿಗಾರರನ್ನು ತಲುಪಿರುವ ಕೆಲವೇ ಕೆಲ ಯೋಜನೆಗಳೆಂದರೆ (ಯರ‍್ರಪ್ಪ ಡಿ., ೨೦೦೮:೧೯೦)

**ಕುರಿಗಳ ಆರೋಗ್ಯ ರಕ್ಷಣೆ :** ಕುರಿಗಳಿಗೆ ಕಾಡುವ ಸಾಂಕ್ರಮಿಕ ರೋಗಗಳನ್ನು ನಿಯಂತ್ರಿಸಲು ಮತ್ತು ಮುಂಜಾಗ್ರತ ಕ್ರಮವಾಗಿ ಕುಶಲ ಮತ್ತು ಆರೋಗ್ಯ ಜೈವಿಕ ಸಂಸ್ಥೆ ಬೆಂಗಳೂರು ಇವರ ಸಹಯೋಗದೊಂದಿಗೆ ಸರ್ಕಾರ ಕಡಿಮೆ ಬೆಲೆಯಲ್ಲಿ ಹಾಗೂ ಉಚಿತವಾಗಿ ಔಷದ ಪೂರೈಸಿ, ವಿತರಿಸುವ ಕ್ರಮ ಕೈಗೊಂಡಿದೆ. ಅಲೆಮಾರಿ ಕುರಿಗಾರರಿಗೆ ಸಮಯಕ್ಕೆ ಸರಿಯಾಗಿ ಪೂರೈಸದಿರುವುದು, ಅವಶ್ಯಕತೆಗಿಂತ ಕಡಿಮೆ ಪೂರೈಸುತ್ತಿರುವುದು ಹಾಗೂ ವಿತರಣೆಯಲ್ಲಿ ಗೊಂದಲಗಳಿರುವುದು ಕಂಡುಬರುತ್ತದೆ.

**ಕಂಬಳಿ ನೇಯ್ಗೆ ತರಬೇತಿ :** ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಈ ತರಬೇತಿ ಕೇಂದ್ರಗಳ ಮೂಲ ಉದ್ದೇಶ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗ ಒದಗಿಸುವ ಉದ್ದೇಶದಿಂದ ಇಂತಹ ಕೇಂದ್ರಗಳನ್ನು ಕರ್ನಾಟಕದಲ್ಲಿ ಮೈಸೂರು, ರಾಣಿಬೆನ್ನೂರು, ಘಟಪ್ರಭಾ, ಗುಲ್ಬರ್ಗಾ ಮತ್ತು ಹಾವೇರಿಗಳಲ್ಲಿ ತೆರೆಯಲಾಗಿದೆ. ಹಾಗೂ ಶಿರಾ ತಾಲ್ಲೂಕಿನಲ್ಲಿ ಶಿರಾ, ಪಟ್ಟನಾಯಕನಹಳ್ಳಿ, ಬರಗೂರು ಬೇವಿನಹಳ್ಳಿಗಳಲ್ಲಿ ಸ್ಥಾಪಿಸಲಾಗಿದ್ದರೂ ಅವು ಇಂದು ಸಂಪೂರ್ಣವಾಗಿ ಮುಚ್ಚಲಾಗಿದೆ. ಏಕೆಂದರೆ ಈ ಭಾಗದ ಕುರಿಗಳ ಉಣ್ಣೆಯು ಹೆಚ್ಚು ಗುಣಮಟ್ಟದ್ದಲ್ಲದೇ ಇರುವುದರಿಂದ ಇದಕ್ಕೆ ಬೆಲೆಯೇ ಇಲ್ಲವಾಗಿದೆ. ಆದ್ದರಿಂದ ಇದು ಹೆಚ್ಚು ಬಳಕೆಯಿಲ್ಲದ ಕಾರಣ ಈ ತರಬೇತಿ ಹಾಗೂ ನೂಲು ತಯಾರಿಸುವ ಕೇಂದ್ರಗಳು ಮುಚ್ಚಿ ಹೋಗಿವೆ. ಉಣ್ಣೆಯಲ್ಲಿ ಸುಧಾರಿಸಿದ ತಳಿಗಳ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸಿ ಕಂಬಳಿ ನೇಯ್ಗೆಯನ್ನು ಹೆಚ್ಚಿಸಬೇಕು.

**೨. ವೈಜ್ಞಾನಿಕ ಕುರಿ ಸಂಗೋಪನೆ :** ಕುರಿ ಸಂಗೋಪನೆಯಲ್ಲಿ ತೊಡಗಿರುವ ಕಾಡುಗೊಲ್ಲರು ಪರಂಪರಾಗತ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದರಿಂದ ಆರ್ಥಿಕ ಲಾಭ ಕಡಿಮೆ ಮಟ್ಟದಲ್ಲಿದೆ. ಆದ್ದರಿಂದ

ರಾಜ್ಯದಲ್ಲಿ ಕುರಿ ತಳಿಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಕುದಾಪುರ ಮತ್ತು ಉಳ್ಳಾರ್ತಿ ಕುರಿ ಸಂವರ್ಧನಾ ಕೇಂದ್ರಗಳಲ್ಲಿ ಪ್ರತಿವರ್ಷ ಒಂದು ಸಾವಿರದ ಇನ್ನೂರು ಜನರಿಗೆ ತರಬೇತಿ ನೀಡುವ ಉದ್ದೇಶದಿಂದ, ಪ್ರತಿ ತಂಡದಲ್ಲಿ ಇಪ್ಪತ್ತು ಜನರಂತೆ ಎರಡು ದಿನದ ತರಬೇತಿಯನ್ನು ನೀಡಲಾಗುತ್ತದೆ. ಅಲೆಮಾರಿ ಕಾಡುಗೊಲ್ಲರು ಯಾವಾಗಲೂ ಕುರಿಗಳ ಜೊತೆಯಲ್ಲಿಯೇ ತಿರುಗುವುದರಿಂದ ಇಂತಹ ಅವಕಾಶಗಳು ಇಂದಿಗೂ ದೊರೆತಿಲ್ಲ. ಇದರ ಬಗ್ಗೆ ಹೇಳಿದರೆ ಕುರಿ ಬೆಳೆಸುವುದಕ್ಕೆ ಟ್ರೈನಿಂಗ್ ಬೇರೆ ಎಂಬ ಹಾಸ್ಯಭಾವ ವ್ಯಕ್ತಪಡಿಸುತ್ತಾರೆ.

**೩. ತಳಿ ಅಭಿವೃದ್ಧಿ :** ರಾಜ್ಯದಲ್ಲಿರುವ ಸ್ಥಳೀಯ ಜಾತಿ ಕುರಿಗಳಾದ ಬಳ್ಳಾರಿ, ಡೆಕ್ಕನಿ, ಹಾಸನ, ಕೆಂಗುರಿ, ತಳಿಯ ಕುರಿಗಳಲ್ಲಿ ದೇಹದ ತೂಕ ತುಲನಾತ್ಮಕವಾಗಿ ಕಡಿಮೆ ಇರುವುದರ ಜೊತೆಗೆ ಅವುಗಳಿಂದ ಬರುವ ಉಣ್ಣೆ ಒರಟಾಗಿದೆ. ಇವುಗಳ ಮಾಂಸದ ಪ್ರಮಾಣ ಅಥವಾ ಉಣ್ಣೆಯ ಪ್ರಮಾಣದ ಮಟ್ಟ ಹೆಚ್ಚಿಸುವ ಸಲುವಾಗಿ ವಿದೇಶಿ ಮೂಲದ 'ಕಾಂಬುಲೇ' ತಳಿಯೊಂದಿಗೆ ಸಂಕಿರಣಗೊಳಿಸಿ ಮಿಶ್ರ ತಳಿ ಟಗರುಗಳನ್ನು ಕುರಿಗಾರರಿಗೆ ನಿಗಧಿತ ರಿಯಾಯಿತಿ ಧರಗಳಲ್ಲಿ ಪೂರೈಸಿದರೆ, ಅಲೆಮಾರಿ ಕಾಡುಗೊಲ್ಲರಿಗೂ ಹಾಗೂ ಉಳಿದ ಕುರಿಗಾರರಿಗೂ ಹೆಚ್ಚು ಅನುಕೂಲವಾಗುತ್ತದೆ. ಇವರು ತಮ್ಮ ಮೂಲದ ತಳಿಯನ್ನು ಬದಲಿಸಲು ಇಷ್ಟಪಡುತ್ತಿಲ್ಲ. ಏಕೆಂದರೆ ಇವುಗಳು ಎಲ್ಲಾ ರೀತಿಯ ವಾತಾವರಣಕ್ಕೂ ಹೊಂದಿಕೊಂಡಿವೆ ಎಂಬುದರಿಂದ.

**೪. ಸಮಗ್ರ ಕುರಿ ಮತ್ತು ಅಭಿವೃದ್ಧಿ ಯೋಜನೆ :** ಕೇಂದ್ರಿಯ ಉಣ್ಣೆ ಅಭಿವೃದ್ಧಿ ಮಂಡಳಿಯ ಸಹಾಯದಿಂದ ಐವತ್ತು ಸಾವಿರ ಕುರಿಪ್ರದೇಶವನ್ನು ಗುರುತಿಸಿ ಆ ಪ್ರದೇಶದಲ್ಲಿ ಐವತ್ತು ಸಾವಿರ ಕುರಿಗಳ ಸಮಗ್ರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುವುದು. ಅಂತಹ ಕಾರ್ಯಕ್ರಮಗಳೆಂದರೆ ಕುರಿಗಳ ಆರೋಗ್ಯ ರಕ್ಷಣೆ, ತಳಿ ಅಭಿವೃದ್ಧಿ, ಮಾರುಕಟ್ಟೆ ಸಹಾಯ ಇತ್ಯಾದಿ.

**೫. ಕುರಿ ಸಂಗೋಪನಾ ಕೇಂದ್ರಗಳ ನಿರ್ವಹಣೆ ಅಥವಾ ಮಿಶ್ರತಳಿಗಳ ವಿತರಣೆ :** ಕುರಿ ಸಾಕಣೆದಾರರಿಗೆ ಉತ್ತಮ ತಳಿಯ ಮಿಶ್ರತಳಿ ಮತ್ತು ಶುದ್ದ ತಳಿಯ ಯೋಗ್ಯ ಟಗರುಗಳನ್ನು ಉತ್ಪಾದಿಸಿ ವಿತರಿಸುವ ಉದ್ದೇಶದಿಂದ ನಿಗಮವು ತನ್ನ ಅಧೀನದಲ್ಲಿ ಆರು ಸಂವರ್ಧನಾ ಕೇಂದ್ರಗಳನ್ನು ಹೊಂದಿವೆ.

೧. ಕುರಿ ಸಂವರ್ಧನಾ ಕೇಂದ್ರ, ಕುದಾಪುರ, ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ
೨. ಕುರಿ ಸಂವರ್ಧನಾ ಕೇಂದ್ರ, ಉಳಾರ್ತಿ, ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ
೩. ಕುರಿ ಸಂವರ್ಧನಾ ಕೇಂದ್ರ, ಗುತ್ತಲ, ಹಾವೇರಿ ತಾ. ಹಾವೇರಿ ಜಿಲ್ಲೆ
೪. ಕುರಿ ಸಂವರ್ಧನಾ ಕೇಂದ್ರ, ಸುತ್ತಟ್ಟಿ, ಅಥಣಿ ತಾ. ಬೆಳಗಾವಿ ಜಿಲ್ಲೆ
೫. ಕುರಿ ಸಂವರ್ಧನಾ ಕೇಂದ್ರ, ಅಗನವಾಡಿ, ಬಿಳಗಿ ತಾ. ಬಾಗಲಕೋಟೆ ಜಿಲ್ಲೆ
೬. ಕುರಿ ಸಂವರ್ಧನಾ ಕೇಂದ್ರ, ಧನಗೂರು, ಮಳವಳ್ಳಿ ತಾ. ಮಂಡ್ಯ ಜಿಲ್ಲೆ

ಕುರಿ ಮತ್ತು ಕುರಿ ಉತ್ಪನ್ನಗಳಿಗೆ ವೈಜ್ಞಾನಿಕ ಮಾರುಕಟ್ಟೆ ಅಭಿವೃದ್ಧಿ ಯೋಜನೆ : ಸದ್ಯದ ಪರಿಸ್ಥಿತಿಯಲ್ಲಿ ಕುರಿಗಾರರು ಎದುರಿಸುತ್ತಿರುವ ಮಾರುಕಟ್ಟೆ ವ್ಯವಸ್ಥೆ ಕೊರತೆಯನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸಲು ೨೦೦೩-ಆನೇ ಸಾಲಿನಲ್ಲಿಯೇ ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಚಳ್ಳಕೆರೆ ತಾಲ್ಲೂಕು, ಕುದಾಪುರ, ಕುರಿ ಸಂವರ್ಧನಾ ಕೇಂದ್ರಗಳಲ್ಲಿ ಕುರಿ ಸಂಗ್ರಹಣಾ ಆಶ್ರಯ ಶೆಡ್ ನಿರ್ಮಿಸಿ, ಇಲ್ಲಿಗೆ ಕುರಿಗಾರರು ಉತ್ಪಾದಿಸುವ ಕುರಿ ಮೇಕೆಗಳನ್ನು ಖರೀದಿಸಿ ನಂತರ ಮಾರುಕಟ್ಟೆಯಲ್ಲಿ ಅವನ್ನು ಮಾಂಸಕ್ಕಾಗಿ ಮಾರಾಟ ಮಾಡುವ ವ್ಯವಸ್ಥೆ ಯೋಜಿಸಲಾಗಿದೆ. ಇಲ್ಲಿ ಪ್ರತಿ ತಿಂಗಳು ಮೂವತ್ತು ಸಾವಿರ ಕುರಿಗಳನ್ನು ಖರೀದಿಸಿ ಮಾರಾಟ ಮಾಡುವ ಗುರಿ ಹೊಂದಲಾಗಿದೆ(ಯರ್ರಪ್ಪ ಡಿ., ೨೦೦೮:೨೨೨).

**೧೨. ಪಡಿತರ ಚೀಟಿ ನೀಡುವುದು :** ಸರ್ಕಾರವು ಇವರಿಗೆ ವಿಶೇಷ ಪಡಿತರ ಚೀಟಿಯನ್ನು ನೀಡಬೇಕು. ಆ ಚೀಟಿಯಿಂದ ಅವರು ಯಾವುದೇ ಪ್ರಾಂತ್ಯದಲ್ಲಾದರೂ ನ್ಯಾಯ ಬೆಲೆ ಅಂಗಡಿಗಳಲ್ಲಿ ದೊರೆಯುವ ಆಹಾರ ಧಾನ್ಯಗಳನ್ನು ಕೊಳ್ಳುವಂತೆ ಅವಕಾಶ ಮಾಡಿಕೊಡಬೇಕು.

## ಪರಿಹಾರೋಪಾಯಗಳು

ಅಲೆಮಾರಿ ಕಾಡುಗೊಲ್ಲರ ಜೀವನ ವಿಧಾನವೇ ವೈಶಿಷ್ಟವಾಗಿದೆ. ಅವರು ಉಳಿದ ಎಲ್ಲಾ ಸಮುದಾಯಗಳಿಗಿಂತ ಭಿನ್ನವಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದುದರಿಂದ ಅವರನ್ನು ಅಭಿವೃದ್ಧಿಪಡಿಸಲು ಬುಡಕಟ್ಟುಗಳಾಗಿರುವ ಇವರಿಗೆ ಯಾವುದೇ ಸರ್ಕಾರದ ಯೋಜನೆಗಳು ದೊರೆಯದೇ ಇರುವುದು ದುರದೃಷ್ಟಕರ. ಆದ್ದರಿಂದ ಕುರಿಗಳ ಅಭಿವೃದ್ಧಿಯ ಜೊತೆಗೆ ಇವರು ಸಹ ಅಭಿವೃದ್ಧಿ ಹೊಂದುವಂತ ಯೋಜನೆಗಳನ್ನು ರೂಪಿಸಬೇಕಾಗಿದೆ.

**೧. ಹುಲ್ಲುಗಾವಲು ಮೀಸಲಿಡುವುದು :** ಇವರು ಹಲವಾರು ಸಮಸ್ಯೆಗಳಲ್ಲಿ ಹುಲ್ಲುಗಾವಲುಗಳ ಸಮಸ್ಯೆಯು ಒಂದು. ರಾಜ್ಯವು ಸತತವಾಗಿ ಅಥವಾ ಆಗಿಂದಾಗ್ಗೆ ಎದುರಿಸುತ್ತಿರುವ ಬರಗಾಲ ಇದಕ್ಕೆ ಕಾರಣವಾಗಿದೆ. ಬರಗಾಲದ ಪರಿಣಾಮಗಳನ್ನು ನಿವಾರಿಸುವ ನಿಟ್ಟಿನಲ್ಲಿ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಇವರು ಅಲೆದಾಡುವ ಗ್ರಾಮಗಳಲ್ಲಿರುವ ಸರ್ಕಾರಿ ಒಡೆತನದ ಅರಣ್ಯ ಭೂಮಿ, ರಾಜಸ್ವ ಭೂಮಿ, ಗೋಮಾಳ, ಮತ್ತು ಇತರ ಭೂ ಪ್ರದೇಶಗಳನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಗುರುತಿಸುವುದು ಹಾಗೂ ಆ ಭೂಮಿಯನ್ನು ಅಲೆಮಾರಿ ಕಾಡುಗೊಲ್ಲ ಕುರಿಗಾರರಿಗೋಸ್ಕರ ಮೀಸಲಿಡುವುದು. ಮೀಸಲಿಟ್ಟ ಭೂಮಿಗೆ ಶಾಶ್ವತ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಕುರಿಗಳಿಗೆ ಹಿತವೆನಿಸುವ ಸುಧಾರಿತ ತಳಿಯ ಮೇಲಿನ ಬೆಳೆಗಳನ್ನು ಬೆಳೆಯುವುದು. ಇದರ ನಿವಾರಣೆಯನ್ನು ಕಾಡುಗೊಲ್ಲರ ಸಹಕಾರದೊಂದಿಗೆ ಸರ್ಕಾರ ಕೈಗೊಳ್ಳುವುದು. ಇದರಿಂದ ಬರಗಾಲದ ಅವಧಿಯಲ್ಲಿ ಮತ್ತು ಕುರಿಗಳಿಗೆ ಮೇವಿನ ಕೊರತೆ ಕಂಡುಬಂದಾಗ ಮೇಲಿನ ಸಮಸ್ಯೆಯನ್ನು ಬಗೆಹರಿಸಬಹುದು.

**೨. ಕುಡಿಯುವ ನೀರಿನ ವ್ಯವಸ್ಥೆ :** ಸದಾ ಊರಿನಿಂದ ದೂರದ ಅರಣ್ಯ, ಹೊಲ, ತೋಟಗಳಲ್ಲಿ ಗುಡಾರ ಅಥವಾ ಗುಡಾರ ಇಲ್ಲದೆ ಜೀವಿಸುವ ಕಾಡುಗೊಲ್ಲರು ಬದುಕಲು ಕುಡಿಯುವ ನೀರು ಇಲ್ಲದೇ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರು ಅಡವಿಯಲ್ಲಿ ಹೆಚ್ಚು ಹೆಚ್ಚು ಬಳಸುವ ನೀರು, ವಡ್ಡು, ಮಡಗು, ಚಕ್‌ಡ್ಯಾಮ್‌ಗಳಲ್ಲಿ ನಿಂತ ನೀರನ್ನೇ ಬಳಸುವುದರಿಂದ ಹಲವಾರು ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಅಲೆಮಾರಿ ಕುರಿಗಾರರು ಅಲೆದಾಡುವ ಮಾರ್ಗದಲ್ಲಿ ಕೊಳವೆ ಬಾವಿ, ನೀರಿನ ತೊಟ್ಟಿಗಳನ್ನು ನಿರ್ಮಿಸಿ ನೀರಿನ ಸೌಲಭ್ಯ ಕಲ್ಪಿಸಬೇಕು. ಇದರಿಂದ ಕುರಿಗಳಿಗೆ ಮತ್ತು ಕುರಿಗಾರರಿಗೆ ಕಾಣಿಸಿಕೊಳ್ಳುವ ರೋಗ-ರುಜಿನಗಳನ್ನು ಕಡಿಮೆಗೊಳಿಸಬಹುದು.

**೩. ರಾಜ್ಯಮಟ್ಟದ ಬಂದೂಕು ಪರವಾನಗಿ :** ಅಲೆಮಾರಿ ಕಾಡುಗೊಲ್ಲರು ಅಡವಿ ಪ್ರದೇಶಗಳಲ್ಲಿ ವಾಸಿಸುವುದರಿಂದ ಅವರು ಮತ್ತು ಕುರಿಗಳ ರಕ್ಷಣೆಯನ್ನು ಕಾಡು ಮೃಗಗಳಿಂದ ಹಾಗೂ ಕಳ್ಳ ಕಾಕರಿಂದ ಜೀವ ಭಯವನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಆತ್ಮರಕ್ಷಣೆಗಾಗಿ ಹೊಂದುವ ಪರವಾನಗಿಯನ್ನು ಸೂಕ್ತ ಪ್ರಾಧಿಕಾರದಿಂದ ನೀಡುವುದು ಹಾಗೂ ಸದರಿ ಬಂದೂಕನ್ನು ಯಾವುದೇ ಜಿಲ್ಲೆಗಳ ಗಡಿ ನಿರ್ಬಧವಿಲ್ಲದೇ ಇಡೀ ರಾಜ್ಯಾದ್ಯಾಂತ ತೆಗೆದುಕೊಂಡು ಹೋಗಲು ಪರವಾನಗಿಯನ್ನು ನೀಡುವುದು ಅವಶ್ಯಕವಾಗಿದೆ.

**೪. ಎಲ್ಲೆಲ್ಲಿ ವಲಸೆಯೋ ಅಲ್ಲಿ ಶಾಲೆ :** ಇಂದು ರಾಜ್ಯಾದ್ಯಂತ ಅಲೆಮಾರಿಗಳಿಗೆ ಬಿಡಾರ ಶಾಲೆಗಳನ್ನು ಆರಂಭಿಸಲಾಗಿದೆ. ಆದರೆ ಈ ಬಿಡಾರ ಶಾಲೆಗಳ ಲಾಭಗಳು ಕಾಡುಗೊಲ್ಲ ಮಕ್ಕಳಿಗೆ ದೊರೆಯುತ್ತಿಲ್ಲ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು, ಎಲ್ಲಿ ವಲಸೆಯೋ ಅಲ್ಲಿ ಶಾಲೆ' ಎಂಬ ಯೋಜನೆಯನ್ನು ಜಾರಿಗೊಳಿಸುವುದು ಅಗತ್ಯವಾಗಿದೆ. ಈ ಯೋಜನೆಯಡಿ ಕ್ಷೇತ್ರ ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಂದ ಅಲೆಮಾರಿ ಕಾಡುಗೊಲ್ಲ ಮಕ್ಕಳಿಗೆ ವರ್ಗಾವಣೆ ಪತ್ರವನ್ನು ವಿತರಿಸುವುದು, ವಲಸೆಯ ಸಮಯದಲ್ಲಿ ನೆಲೆಸಬಹುದಾದ ಗ್ರಾಮದ ಶಾಲೆಯಲ್ಲಿ ಇರುವ ಮಕ್ಕಳಿಗೆ ದಾಖಲಾತಿ ಮತ್ತು ಶಿಕ್ಷಣವನ್ನು ದೂರವಿರಿಸಿಕೊಡುವುದು ಮುಂದಿನ ಗ್ರಾಮದ ಭೂ ಪ್ರದೇಶಕ್ಕೆ ವಲಸೆ ಹೋಗುವ ಮುನ್ನ ವರ್ಗಾವಣೆ ಪತ್ರದಲ್ಲಿ ದಾಖಲಿಸಿ ಮುಂದಿನ ಶಾಲೆಗೆ ವರ್ಗಾಯಿಸುವ ಪದ್ಧತಿಯನ್ನು ಅನುಸರಿಸುವುದು, ಹಾಗೆಯೇ ಮಕ್ಕಳನ್ನು ಕುರಿ ಮಂದೆ ಇರುವ ಸ್ಥಳದಿಂದ ಬೆಳಿಗ್ಗೆ ಶಾಲೆಗೆ ಕರೆತರಲು ಮತ್ತು ಸಂಜೆ ಕುರಿ ಮಂದೆಯ ಸ್ಥಳಕ್ಕೆ ಬಿಟ್ಟು ಬರಲು ವಾಹನದ ವ್ಯವಸ್ಥೆ ಮಾಡಬೇಕು.

ಋತುಮಾನಕ್ಕನುಗುಣವಾಗಿ ಒಂದು ಪ್ರಮುಖ ಊರಿನ ಸುತ್ತಮುತ್ತಲಿನ ಗ್ರಾಮಗಳ ಭೂ ಪ್ರದೇಶದಲ್ಲಿ ಅಲೆದಾಡುವುದರಿಂದ ಆ ಪ್ರದೇಶದಲ್ಲಿ ವಸತಿ ಶಾಲೆಗಳನ್ನು ತೆರೆಯಬೇಕು. ಇಂತಹ ಸ್ಥಳಗಳಲ್ಲಿ ವಸತಿ ಶಾಲೆ ತೆರೆಯುವುದರಿಂದ ಅಥವಾ ತಿಂಗಳಿಗೊಮ್ಮೆ ತಮ್ಮ ಮಕ್ಕಳನ್ನು ನೋಡಿಕೊಂಡು

ಬರಲು ಅಲೆಮಾರಿ ಕಾಡುಗೊಲ್ಲ ತಂದೆ ತಾಯಿಗಳಿಗೆ ಅನುಕೂಲವಾಗುತ್ತದೆ. ಮತ್ತು ಸರ್ಕಾರದ ಸರ್ವರಿಗೂ ಶಿಕ್ಷಣ ಎಂಬ ಯೋಜನೆ ಕಾರ್ಯಗತವಾದಂತಾಗುತ್ತದೆ.

**೫. ಕುರಿ ಮೇಕೆಗಳಿಗೆ ಮಾರುಕಟ್ಟೆ ಸೌಲಭ್ಯ :** ಅಲೆಮಾರಿ ಕಾಡುಗೊಲ್ಲರಲ್ಲಿ ಅಗಾದವಾದ ಕುರಿ-ಮೇಕೆಗಳಿದ್ದು, ಇದು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಮೂಲ ಬಂಡವಾಳವಾಗಿದೆ. ಸದ್ಯದ ಕುರಿ ಮೇಕೆ ಮಾರುಕಟ್ಟೆ ವ್ಯವಸ್ಥೆ ಮಧ್ಯವರ್ತಿಗಳ ಬಿಗಿ ಹಿಡತದಲ್ಲಿರುವುದರಿಂದ ಅಲೆಮಾರಿ ಕಾಡುಗೊಲ್ಲರಿಗೆ ನ್ಯಾಯಯುತವಾದ ಬೆಲೆ ದೊರೆಯುತ್ತಿಲ್ಲ. ಆದ್ದರಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಮಾದರಿಯಲ್ಲಿ ಕುರಿ-ಮೇಕೆ ಉತ್ಪನ್ನಗಳ ಮಾರುಕಟ್ಟೆ ಕಾಯಿದೆ ಜಾರಿಗೆ ಬರಬೇಕು. ಕುರಿಗಳ ನಡುವನ್ನು ಹಿಡಿದು (ಒತ್ತಿ) ಕುರಿ ವ್ಯಾಪಾರ ಮಾಡುವುದನ್ನು ಬಿಟ್ಟು ಕುರಿಗಳ ತೂಕದ ಆಧಾರದ ಮೇಲೆ ನಿರ್ಧಾರವಾಗಬೇಕು. ಮಧ್ಯಸ್ಥಗಾರರಿಂದ ಶೋಷಣೆ ತಪ್ಪಿಸಬೇಕು. ಹಾಗೂ ಶಿರಾ ನಗರದಲ್ಲೇ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸುವ ಸಲುವಾಗಿ ಸುಸಜ್ಜಿತವಾದ ಕಸಾಯಿಖಾನೆಯನ್ನು ಸ್ಥಾಪಿಸಬೇಕು.

**೬. ರೋಗ ನಿರೋಧಕ ಲಸಿಕೆ :** ಅಲೆಮಾರಿ ಕಾಡುಗೊಲ್ಲರ ಕುರಿಗಳ ಬದುಕನ್ನು ಕಾಡುತ್ತಿರುವ ದೊಡ್ಡ ರೋಗಗಳೆಂದರೆ, ದೊಮ್ಮರೋಗ, ನೀಲಿನಾಲಿಗೆ, ಮೈಲಿಬೇನೆ, ಸಿಡುಬು(ಅಮ್ಮ), ಕಾಲು ಬಾಯಿ ಜ್ವರ ಇತ್ಯಾದಿ ರೋಗಗಳನ್ನು ನಿಯಂತ್ರಣ ಮಾಡುವ ಸಲುವಾಗಿ ಪಲ್ಸ್ ಪೋಲಿಯೋ ಅಭಿಯಾನ ಮಾದರಿಯಂತೆ ಇವರ ಕುರಿಗಳಿಗೂ ರೋಗ ನಿರೋಧಕ ಲಸಿಕೆ ಹಾಕುವ ಆಂದೋಲನವನ್ನು ಸರ್ಕಾರ ಕೈಗೊಳ್ಳಲೇಬೇಕು. ರಾಜ್ಯದಲ್ಲಿರುವ ಸಮಸ್ತ ಕುರಿ-ಮೇಕೆಗಳ ಆರೋಗ್ಯ ರಕ್ಷಣೆ ಸರ್ಕಾರ ಜಂತುನಾಶಕ ಔಷಧಗಳನ್ನು ಸರಬರಾಜು ಮಾಡಬೇಕು.

**೭. ಅಲೆಮಾರಿ ಕಾಡುಗೊಲ್ಲರಿಗೆ 'ಜನಶ್ರೀ ವಿಮಾ' ಮತ್ತು ಕುರಿಗಳಿಗೆ 'ಸಮಗ್ರ ವಿಮಾ' ಯೋಜನೆಗಳು ಜಾರಿಗೊಳಿಸುವುದು :** ಅಕಾಲಿಕ ಮಳೆಗಾಲ ಮತ್ತು ಅನಿರ್ದಿಷ್ಟ ವರಮಾನದಿಂದಾಗಿ ತತ್ತರಿಸಿರುವ ಅಲೆಮಾರಿ ಕಾಡುಗೊಲ್ಲರು ಆಕಸ್ಮಿಕ ದುರಂತಗಳಿಗೆ ತುತ್ತಾದ ಸಂದರ್ಭದಲ್ಲಿ ದುಡಿಯುವ ವ್ಯಕ್ತಿ ಇಲ್ಲದ ಕುಟುಂಬಗಳು ಬೀದಿ ಪಾಲಾಗುತ್ತವೆ. ಇಂತಹ ದುರಂತಮಯ ಸನ್ನಿವೇಶಗಳನ್ನು ತಡೆಗಟ್ಟಲು ಕುರಿಗಾರರಿಗೆ "ಜನಶ್ರೀ" ವಿಮಾ ಯೋಜನೆಯನ್ನು ಜಾರಿಗೊಳಿಸುವುದು ಅವಶ್ಯವಿದೆ.

ಅತಿವೃಷ್ಟಿ, ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳಿಗೆ ತುತ್ತಾಗುವ ಕುರಿಗಳಿಗೆ ರಾಜ್ಯಮಟ್ಟದ ಒಂದು "ಸಮಗ್ರ ವಿಮಾ" ಯೋಜನೆಯನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದಲೇ ಜಾರಿಗೊಳಿಸುವುದು ಅವಶ್ಯಕವಾಗಿದೆ. ಏಕೆಂದರೆ ಅಲೆಮಾರಿ ಕಾಡುಗೊಲ್ಲರು ಕ್ಷಣಾರ್ಧದಲ್ಲಿ ತನ್ನದೆನ್ನುವ ಎಲ್ಲವನ್ನು ಕಳೆದುಕೊಂಡು ಬಿಡುತ್ತಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮಾದರಿಯಲ್ಲಿ 'ಜನಶ್ರೀ ವಿಮಾ' ಯೋಜನೆಯನ್ನು ಇತ್ತೀಚೆಗೆ ರಾಜ್ಯ ಸರ್ಕಾರ ಆರಂಭಿಸಿದೆ.

ಈ ವಿಮಾ ಸೌಲಭ್ಯವನ್ನು ನೈಸರ್ಗಿಕ ವಿಕೋಪದ ವೇಳೆ ಮರಣಹೊಂದುವ ಕುರಿಗಳಿಗೆ ಮಾತ್ರ ನೀಡಲಾಗಿದೆ. ಅದರ ಜೀವತಾವಧಿಯ ಪೂರ್ಣಾವಧಿಯಲ್ಲಿ ಮನೆ, ಮಠಗಳನ್ನು ತೊರೆದು ತಮ್ಮ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಕುರಿಯ ರಕ್ಷಣೆಗಾಗಿ ಮೇಯಿಸುತ್ತಾ ಊರೂರು ಅಲೆಯುವ ಕಾಡುಗೊಲ್ಲರಿಗೆ ವಿಮಾ ಸೌಲಭ್ಯ ಪಡೆಯುವುದರಿಂದ ಅನರ್ಹಗೊಳಿಸಲಾಗಿದೆ. ಬಡತನದ ರೇಖೆ ಎಂಬ ಮಾನದಂಡ ಅಳವಡಿಸಿದ್ದರಿಂದ ನೂರರಿಂದ ಐನೂರು ಕುರಿಗಳನ್ನು ಹೊಂದಿರುವ ಅಲೆಮಾರಿ ಕಾಡುಗೊಲ್ಲರಿಗೆ ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಪ್ರತಿ ಕುರಿ ಸಾವಿರ ರೂಪಾಯಿಗಳಿಂದ ಎರಡು ಸಾವಿರ ರೂಪಾಯಿಗಳ ವರೆಗೆ ಬೆಲೆ ಇರುವುದರಿಂದ ನೂರು ಇನ್ನೂರರಿಂದ ಐದುನೂರು ಕುರಿಗಳನ್ನು ಹೊಂದಿರುವ ಆಸ್ತಿಯ ಬೆಲೆ ಲಕ್ಷಾಂತರವಾಗಿರುತ್ತದೆ. ಅಂತಹ ಅಲೆಮಾರಿ ಕಾಡುಗೊಲ್ಲರು ಬಡತನ ರೇಖೆಗಿಂತ ಕೆಳಗಿನ ವರ್ಗಕ್ಕೆ ಸೇರದಿರುವುದರಿಂದ ವಿಮಾ ಸೌಲಭ್ಯದ ವ್ಯಾಪ್ತಿಗೆ ಬರುವುದಿಲ್ಲ. ಕಾಯಿಲೆ, ನೈಸರ್ಗಿಕ ವಿಕೋಪ, ಸಿಡಿಲಿನ ದಾಳಿಗೆ ಒಳಗಾಗಿ ಎಲ್ಲಾ ಕುರಿಗಳು ಸತ್ತು ಹೋದರೆ ಕುರಿಗಾರರು ಬೀದಿ ಪಾಲಾಗುವ ಸಾಧ್ಯತೆಗಳಿವೆ. ಮತ್ತು ಹೆಚ್ಚು ಹೆಚ್ಚು ಕುರಿಗಳನ್ನು ಹೊಂದಿರುವ ಅಲೆಮಾರಿ ಕುರಿಗಾರರು ಕೂಡ ಬೀದಿ ಪಾಲಾಗುವ ಸಾಧ್ಯತೆಗಳು ಜಾಸ್ತಿ ಇರುವುದರಿಂದ ಇವರನ್ನು ಈ ಯೋಜನೆಯ ವ್ಯಾಪ್ತಿಗೆ ಸೇರಿಸಬೇಕು. ನೈಸರ್ಗಿಕ ವಿಕೋಪಗಳಿಂದ ಜೀವ ಕಳೆದುಕೊಳ್ಳುವ ಇವರಿಗೆ ಒಂದು ಲಕ್ಷದಿಂದ ಎರಡು ಲಕ್ಷದವರೆಗೂ ವಿಮಾ ಸೌಲಭ್ಯ ನೀಡಬೇಕು(ಯರ‍್ರಪ್ಪ ಡಿ., ೨೦೦೮:೨೨೭).

**೮. ಅಲೆಮಾರಿ ಕಾಡುಗೊಲ್ಲ ಮಹಿಳೆಯರಿಗೆ ಸ್ತ್ರೀ-ಶಕ್ತಿ ಯೋಜನೆಯಡಿ ಪ್ರಾಮುಖ್ಯತೆ :** ಅಬಲೆಯಾದ ಮಹಿಳೆಯನ್ನು ಸಬಲೆಯನ್ನಾಗಿಸುವ ದೃಷ್ಟಿಯಿಂದ ಸರ್ಕಾರ ಸಣ್ಣ ಉಳಿತಾಯ ಯೋಜನೆಯಡಿಯಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ರೂಪಿಸಿದ್ದು, ಅದೇ ಮಾದರಿಯಲ್ಲಿ ಅಲೆಮಾರಿ ಕಾಡುಗೊಲ್ಲ ಮಹಿಳೆಯರಿಗೂ ಸೂಕ್ತವಾದ ಕುರಿಸಂಗೋಪನೆ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು. ಆಗ ಮಾತ್ರ ಇವರ ಕುಟುಂಬದ ಆರ್ಥಿಕ ಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ(ಯರ‍್ರಪ್ಪ ಡಿ., ೨೦೦೮:೨೨೮).

**೯. ಕುರಿ ಸಾಕಾಣಿಕೆ ಫಾರಂ ಸ್ಥಾಪಿಸಬೇಕು :** ಇವರ ಸ್ವಂತ ನೆಲೆಗಳ ಹತ್ತಿರ ಅಥವಾ ಸುತ್ತಮುತ್ತ ಹಾಗೂ ಇವರು ಅಲೆದಾಡುವ ಪ್ರದೇಶಗಳಲ್ಲಿ ಇಂತಹ ಫಾರಂಗಳನ್ನು ಸ್ಥಾಪಿಸಬೇಕಾಗಿದೆ. ಅಂತಹ ಸ್ಥಳಗಳೆಂದರೆ, ಶಿರಾ, ತಿಪಟೂರು, ಚಿಕ್ಕನಾಯಕನಹಳ್ಳಿ, ಚಿಕ್ಕಮಗಳೂರು, ತರೀಕೆರೆ, ಮಲೆನಾಡು ಪ್ರದೇಶ, ಕೊಡುಗು, ಹಾಸನ, ಮಂಡ್ಯ, ಮೈಸೂರು ಕೆಲ ಆಯ್ದ ಪ್ರದೇಶಗಳಲ್ಲಿ ಮತ್ತು ಅಲೆಮಾರಿ ಪ್ರಯಾಣದಲ್ಲಿದ್ದಾಗ ನಿತ್ಯಕಾರ್ಯಗಳಿಗೆ ನಗರಗಳಿಗೆ ಹೋಗುವಾಗ ಈ ಫಾರಂಗಳನ್ನು ಭೇಟಿ ಮಾಡಲು ಅವಕಾಶವಿರುವಂತಹ ಜಾಗಗಳಲ್ಲಿ ಇದ್ದಾರೆ ಕುರಿಗಾರರು ಅಲ್ಲಿರುವ ತಳಿಗಳನ್ನು ವೀಕ್ಷಿಸಿ, ಸಾಕುವುದರಿಂದ ಲಾಭ-ನಷ್ಟದ ಬಗ್ಗೆ ಅವರೇ ತಿಳುವಳಿಕೆ ಪಡೆದು ತಳಿ ಅಭಿವೃದ್ಧಿ ಪಡಿಸಲು ಮುಂದಾಗುತ್ತಾರೆ.

**೧೦. ಕುರಿ ಸಂಶೋಧನಾ ಕೇಂದ್ರ :** ಕರ್ನಾಟಕದಲ್ಲಿ ಶಿರಾ ತಾಲ್ಲೂಕಿನಲ್ಲಿ ಮೂವತ್ತೆಂಟು ಲಕ್ಷ ಕುರಿಗಳನ್ನು ಸಂಗೋಪನೆ ಮಾಡಲಾಗುತ್ತದೆ. ಅದರಲ್ಲಿ ಬೇವಿನಹಳ್ಳಿ ಎಂಬ ಗ್ರಾಮದಲ್ಲೆ ಐವತ್ತು ಸಾವಿರ ಕುರಿಗಳು ಇದ್ದು ಅದರಲ್ಲಿ ನಲವತ್ತು ಸಾವಿರ ಕುರಿಗಳು ಅಲೆಮಾರಿ ಪಯಣದಲ್ಲಿವೆ. ಆದ್ದರಿಂದ ಈ ಪ್ರದೇಶಕ್ಕೆ ಸಂಬಂಧಪಟ್ಟಂತೆ ಸಂಶೋಧನಾ ಕೇಂದ್ರವನ್ನು ಆರಂಭಿಸಬೇಕು. ಹಾಗೂ ಈ ಪ್ರದೇಶದಲ್ಲಿ ಸಂಪ್ರದಾಯ ಬದ್ದ ಸಂಗೋಪನೆಗೆ ಹೆಚ್ಚು ಮಹತ್ವ ನೀಡುತ್ತಿದ್ದಾರೆ. ಆದ್ದರಿಂದ ಇವರ ಸಾಕಾಣಿಕೆಯಲ್ಲಿ ವೈಜ್ಞಾನಿಕತೆಯ ವಿಧಾನವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು.

**೧೧. ಅರಣ್ಯದೊಳಗೆ ಕುರಿಮೇಯಿಸಲು ಅವಕಾಶ :** ಪ್ರಕೃತಿಯಲ್ಲೆ ಹುಟ್ಟಿ, ಪ್ರಕೃತಿಯಲ್ಲಿ ಬೆಳೆದು, ಅರಣ್ಯ ಅಭಿವೃದ್ಧಿಯಲ್ಲಿ ಪೂರಕ ಪಾತ್ರವಹಿಸಿ ತಮ್ಮ ಪಶುಸಂಪತ್ತಿನೊಂದಿಗೆ ಅರಣ್ಯದಲ್ಲೆ ಇಂದಿನವರೆಗೂ ಜೀವಿಸಿ ಇಂದು ಅವರಿಗೆ ಪ್ರವೇಶವಿಲ್ಲವಾಗಿರುವುದು ದುರದೃಷ್ಟಕರ ಸಂಗತಿ. ಕುರಿಗಳು ಯಾವಾಗಲು ತಲೆ ಬಗ್ಗಿಸಿ ಮೇಯುವ ಜಾತಿ. ಅಂದರೆ ಬರಿ ಹುಲ್ಲನ್ನು ತಿನ್ನುವುದರಿಂದ ಸಸ್ಯಗಳಿಗೆ ಯಾವುದೇ ತೊಂದರೆಯಾಗದು ಎಂಬುದನ್ನು ಅರಿತು ಅರಣ್ಯ ಅಧಿಕಾರಿಗಳು ಅರಣ್ಯದಲ್ಲಿ ಕುರಿ ಮೇಯಿಸಲು ಅವಕಾಶ ನೀಡಬೇಕು.

**೧೨. ವಾಹನ ಸೌಲಭ್ಯ ನೀಡುವುದು :** ಅಲೆಮಾರಿ ಕುರಿಗಾರರು ದಿನವೊಂದಕ್ಕೆ ಐವತ್ತು ಕಿ.ಮೀ.ಯಿಂದ ಎಪ್ಪತ್ತು ಕಿ.ಮೀ.ವರೆಗೆ ಹೋಗುತ್ತಾರೆ. ಇಂತಹ ಸಮಯದಲ್ಲಿ ತಮ್ಮ ಸಾಮಾನು ಸರಕುಗಳನ್ನು ಕತ್ತೆ, ಹಸು(ಉತ್ತರ ಕರ್ನಾಟಕದ ಭಾಗದಲ್ಲಿ ಕುದುರೆ)ಗಳ ಬೆನ್ನ ಮೇಲೆ ಸಾಗಿಸುತ್ತಾರೆ. ಇದರ ಜೊತೆಗೆ ಚಿಕ್ಕ ಚಿಕ್ಕ ಕುರಿಮರಿಗಳು ಮಕ್ಕಳನ್ನು ಹಾಗೂ ವೃದ್ಧರನ್ನು ಸಹ ಜೊತೆಗೆ ಸಾಗಿಸಬೇಕಾಗುತ್ತದೆ. ಅದರಲ್ಲೂ ಸಾಮಾನ್ಯವಾಗಿ ಇವರ ಸರಕು ಸಾಮಾನು ಸರಂಜಾಮು ಸುಮಾರು ಎರಡು ರಿಂದ ಮೂರು ಕ್ವಿಂಟಾಲ್‌ನಷ್ಟು ಭಾರ ಇರುತ್ತದೆ. ಅಲ್ಲದೆ ಮಳೆ, ಗಾಳಿಯಂತಹ ಸಮಯದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಹಾಗೂ ಬೇಗ ಬೇಗ ದಾರಿಸಾಗಿಸಲು ಆಗುವುದಿಲ್ಲವಾದ್ದರಿಂದ ಟ್ರಾಕ್ಟರ್, ಮಿನಿಲಾರಿ, ಟೆಂಪೊದಂತಹ ವಾಹನಗಳನ್ನು ಇವರಿಗೆ ನೀಡುವುದು ಅತ್ಯಂತ ಅನುಕೂಲವಾಗಿದೆ.

**೧೩. ಕುರಿ ಸಂಗೋಪನೆಗೆ ಹೆಚ್ಚು ಹೆಚ್ಚು ಸಾಲ ಸೌಲಭ್ಯವನ್ನು ನೀಡುವುದು :** ಇಂದು ಸರ್ಕಾರದ ನಿಯಮದ ಪ್ರಕಾರ ಕೇವಲ ಹತ್ತರಿಂದ ರಿಂದ ಇಪ್ಪತ್ತು ಕುರಿಗಳಿಗೆ ಮಾತ್ರ ಸಾಲವನ್ನು ನೀಡುತ್ತಿದ್ದಾರೆ. ಆದರೆ ಇಂದು ಹೆಚ್ಚು ಕುರಿಗಳಿರುವವರ ಕುರಿಗಳಲ್ಲಿ ಬರುವ ಆಳುಗಳು (ಸಂಬಂಧದಾಳು) ಎಷ್ಟು ವರ್ಷಗಳಾದರೂ ಕುರಿಗಳು ಹೆಚ್ಚುವುದಿಲ್ಲ. ಆದ್ದರಿಂದ ವರ್ಷಾನುಗಟ್ಟಲೆ ಜೀತ ಮಾಡುವ ಸ್ಥಿತಿ ಬರುತ್ತದೆ. ಆದ್ದರಿಂದ ಅಲ್ಪಸ್ವಲ್ಪ ಕುರಿಗಳನ್ನು ಸಾಕಿಕೊಂಡಿರುವವರಿಗೆ, ಕುರಿಗಳನ್ನು ಹೆಚ್ಚು ಹೆಚ್ಚು ಸಂಗೋಪನೆ ಮಾಡಲು ಇಚ್ಛೆ ಇರುವವರಿಗೆ ಸಾಲದ ಸೌಲಭ್ಯವನ್ನು ನೀಡುವುದು ಪ್ರಮುಖವಾಗಿದೆ.

## ಫಲಿತಗಳು

೧. ಕರ್ನಾಟಕದ ಕಾಡುಗೊಲ್ಲ ಸಮುದಾಯದ ಬಗ್ಗೆ ನೈಜ ಚಿತ್ರಣ ತಿಳಿಯಬೇಕೆಂದರೆ ಚಿತ್ರದುರ್ಗ ತುಮಕೂರು ಜಿಲ್ಲೆಗಳಲ್ಲಿ ನೋಡಿದರೆ ತಿಳಿಯುತ್ತದೆ. ಹಾಗಾದರೆ ಸ್ವಾತಂತ್ರ್ಯ ಬಂದು ೬೨ ವರ್ಷಗಳಾದರೂ ಈ ಸಮುದಾಯ ಇನ್ನು ಅಭಿವೃದ್ಧಿಯ ಮೆಟ್ಟಿಲನ್ನು ಹತ್ತಲು ತೆವಳುತ್ತಿದೆ ಏಕೆ?

೨. ಈ ಸಮುದಾಯ ಯಾವುದೇ ರಂಗದಲ್ಲಿ ಅಭಿವೃದ್ಧಿ ಹೊಂದಿಲ್ಲ, ಆದರೂ ಇತ್ತೀಚಿನ ಸರ್ಕಾರದ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ೧೪ ವರ್ಷದವರೆಗೂ ಕಡ್ಡಾಯ ಹಾಗೂ ಉಚಿತ ಶಿಕ್ಷಣ ನೀಡಲು ಮುಂದಾಗಿರುವುದರಿಂದ ಕಾಡುಗೊಲ್ಲರಿಗೆ ಅನುಕೂಲವಾಗುವಂತೆ ಸಂಪ್ರದಾಯಿಕ ಶಿಕ್ಷಣ ನೀಡುವ ಶಾಲೆಗಳನ್ನು ಆರಂಭಿಸುವುದು.

೩. ಶಿಕ್ಷಣದಿಂದ ಅಲೆಮಾರಿ ಕಾಡುಗೊಲ್ಲರ ಪಾರಂಪರಿಕ ವೃತ್ತಿ, ಸಂಸ್ಕೃತಿ ಮತ್ತು ಆಚರಣೆಗಳನ್ನು ಪೋಷಿಸುವ ಶಿಕ್ಷಣ ನೀಡಬೇಕು.

೪. ಶಿರಾ ತಾಲ್ಲೂಕಿನಲ್ಲಿ ೫೪ ಲಕ್ಷರಷ್ಟು ಜನಸಂಖ್ಯೆ ಹೊಂದಿರುವ ಕಾಡುಗೊಲ್ಲ ಸಮುದಾಯದವರು ಇದ್ದು ಇವರಿಗೆ ಇಂದು ಯಾವುದೇ ಸೌಲಭ್ಯಗಳು ದೊರೆಯದಿಲ್ಲದಿರುವುದು ವಿಷಾದನೀಯ.

೫. ತಾಲ್ಲೂಕಿನಾದ್ಯಂತ ಕ್ಷೇತ್ರ ಕಾರ್ಯದಲ್ಲಿ ಕಂಡಂತೆ ಈ ಸಮುದಾಯ ತನ್ನ ಸ್ವಂತ ಪರಿಶ್ರಮದಿಂದಲೇ ಅಭಿವೃದ್ದಿ ಹೊಂದಿರುವುದೆ ವಿನಃ ಯಾವುದೇ ಸರ್ಕಾರಿ ಯೋಜನೆಗಳಿಂದಲ್ಲ ಎನ್ನುವುದು ಸತ್ಯವಾಗಿದೆ.

೬. ಇಂದು ಎಲ್ಲಾ ತಳಮಟ್ಟದ ಸಮುದಾಯಗಳಿಗೆ ೧೦೦ಕ್ಕೆ ೧೦೦ರಷ್ಟು, ದೊರಕಿರುವ ಸರ್ಕಾರಿ ಯೋಜನೆ ಎಂದರೆ ''ಓಟ್ ಕಾರ್ಡ್'' ಮಾತ್ರ ಅದು ಕಾಡುಗೊಲ್ಲ ಸಮುದಾಯದವರಿಗೂ ಸಹ. ಆದರೆ ಇವರ ಮೂಲಭೂತ ಸಮಸ್ಯೆಗಳು ಮಾತ್ರ ಯಾವ ಸರ್ಕಾರಕ್ಕೆ ಕಂಡುಬಂದಿಲ್ಲ.

೭. ಸಂಪ್ರದಾಯಗಳಿಗೆ ನೀಡಿದಷ್ಟು ಒತ್ತನ್ನು ತಮ್ಮ ಶ್ರಮದಾನಕ್ಕೆ ಸಹ ಅಷ್ಟು ಪ್ರಾದಾನ್ಯತೆಯನ್ನು ನೀಡಿದ್ದಾರೆ. 'ಕಾಯಕವೇ ಕೈಲಾಸ' ಎನ್ನುವುದೇ ಈ ಸಮುದಾಯದ ಮುಖ್ಯ ಧ್ಯೇಯವಾಗಿದೆ.

೮. ತಾಲ್ಲೂಕಿನಾದ್ಯಂತ ಕಂಡುಬಂದಂತೆ ನೂರಕ್ಕೆ ತೊಂಭತ್ತರಷ್ಟು ತೆಂಗಿನ ಗರಿಯಿಂದ ನಿರ್ಮಿಸಿದ ತಡಿಕೆಗಳೇ ಇಂದಿಗೂ ಇವರ ಸ್ನಾನದ ಕೊಠಡಿಗಳು ಹಾಗೂ ಯಾವುದೇ ಕಾಡುಗೊಲ್ಲರ ಹಟ್ಟಿಯಲ್ಲಿ ಶೌಚಾಲಯಗಳಿಲ್ಲ. ಇಂದಿಗೂ ಹಟ್ಟಿ ಪಕ್ಕ ಕೆರೆ-ಕುಂಟೆಗಳೇ ಇವರ ಶೌಚಾಲಯಗಳಾಗಿವೆ. ಇದರಿಂದ ಹಟ್ಟಿಯ ಸುತ್ತಾ ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲಾಗುತ್ತಿಲ್ಲ.

೯. ಪ್ರಸ್ತುತವಾಗಿ ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಲು ಪ್ರಮುಖ ಕಾರಣವೆಂದರೆ ಕಾಡುಗೊಲ್ಲರ ಹಟ್ಟಿಗಳು ಕಂದಾಯ ಗ್ರಾಮಗಳಾಗದೆ ಇರುವುದು. ಕಂದಾಯ ಗ್ರಾಮಗಳಿಂದ ಕನಿಷ್ಟ ಮೂಲಭೂತ

ಸೌಕರ್ಯಗಳನ್ನಾದರೂ ಸರ್ಕಾರದಿಂದ ಒದಗಿಸಬಹುದು. ಇದಕ್ಕೆ ಒಂದು ಉದಾಹರಣೆಯೆಂದರೆ ಕಾಡುಗೊಲ್ಲರ ಹಟ್ಟಿಗಳಲ್ಲಿ ೩೫೦ ಮತದಾರರಿದ್ದರೆ, ಪ್ರಮುಖ ಊರಿನ ಕೇಂದ್ರ ಸ್ಥಾನದಲ್ಲಿ ೧೫೦ ಜನ ಮಾತ್ರ ಮತದಾರರಿರುತ್ತಾರೆ ಇಲ್ಲಿ ೩೫೦ ಮತದಾರರಿಗಿಂತ ೧೫೦ ಮತದಾರರ ಹೆಸರಿಗೆ ಸರ್ಕಾರ ಸೌಲಭ್ಯಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಇಂತಹ ಪ್ರಮುಖ ಸಮಸ್ಯೆಗಳಿಂದ ಗೊಲ್ಲರ ಹಟ್ಟಿಗಳು ಅಭಿವೃದ್ಧಿಯಾಗಲು ಸಾಧ್ಯವೆ?

೧೦. ಸರ್ಕಾರಗಳು ಏನೆಲ್ಲ ಯೋಜನೆಗಳು ಜಾರಿಗೊಳಿಸಿದರೂ ಅವು ಹಾಗೆಯೇ ಉಳಿದಿವೆ ವಿನಃ ಕಾಡುಗೊಲ್ಲರಿಗೆ ಉಪಯೋಗವಾಗಿಲ್ಲ. ಆದ್ದರಿಂದ ಪ್ರತಿ ಹಟ್ಟಿಗಳಲ್ಲಿ ಕೆಲಸ ನಿರ್ವಹಿಸುವ ಅಂಗನವಾಡಿ ಕೇಂದ್ರಗಳನ್ನು ಆರಂಭಿಸುವುದರಿಂದ ಅವರನ್ನು ಮಾನಸಿಕವಾಗಿ ಬದಲಾಯಿಸಲು ಪ್ರಯತ್ನಿಸಬಹುದು.

೧೧. ಜಾಗತೀಕರಣಕ್ಕೆ ಸಿಕ್ಕ ಈ ಸಮುದಾಯ ಆರಕ್ಕೇರದ ಮೂರಕ್ಕಿಳಿಯದ ತ್ರಿಶಂಕು ಸ್ಥಿತಿಯಲ್ಲಿ ತೊಳಲಾಡುತ್ತಿವೆ. ಇದರಿಂದ ಕಾಡುಗೊಲ್ಲರಲ್ಲಿ ಅಡಗಿರುವ ಕಲೆಗಳು ಮೂಲೆ ಗುಂಪಾಗಿವೆ. ಕಲೆ, ಸಂಸ್ಕೃತಿಗೆ ಗಮನಹರಿಸಿದ ಸರ್ಕಾರಗಳು ಸಂಪ್ರದಾಯಗಳನ್ನು ಪ್ರೇರೇಪಿಸುವ ಪ್ರಸೂತಿ ಗೃಹಗಳಿಗೆ ನೀಡಿದಷ್ಟು ಧ್ಯೇಯವನ್ನು ಕಲೆ ಸಂಸ್ಕೃತಿಗೆ ನೀಡಬೇಕಾಗಿದೆ. ಏಕೆಂದರೆ ಈ ಬುಡಕಟ್ಟು ಸಮುದಾಯದಲ್ಲಿರುವ ಜಾನಪದ ಕಲೆ ಮತ್ತು ಸಂಸ್ಕೃತಿಯು ಯಾವುದೇ ಸಮುದಾಯದಲ್ಲಿ ಕಾಣುವುದಿಲ್ಲ.

೧೨. ತಾಲ್ಲೂಕಿನಾದ್ಯಂತ ರಾತ್ರಿಯ ಸಮಯದಲ್ಲಿ ಹಾಡಬಲ್ಲ ಸೋಬಾನ ಪದ, ಕೋಲುಪದ, ಕೋಲುಕುಣಿತ, ಗಣೆ ಊದುವುದು. ಹೀಗೆ ಹಲವಾರು ರೀತಿ ಜಾನಪದ ಕಲೆಗಳನ್ನು ಈ ಸಮುದಾಯಗಳಲ್ಲಿ ಇಂದಿಗೂ ಕಾಣಬಹುದಾಗಿದೆ.

೧೩. ಈ ಸಮುದಾಯದ ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡುವುದು ಅವಶ್ಯಕವಾಗಿದೆ. ಹಾಗೂ ಶಾಲೆಗಳಲ್ಲಿ ಮಕ್ಕಳಿಗೆ ಜಾನಪದ ಕಲೆ, ಸಂಸ್ಕೃತಿಗೆ ಸಂಬಂಧಿಸಿದಂತೆ ವಿಶೇಷ ಪಾಠ, ಪ್ರವಚನಗಳನ್ನು ನಡೆಸುವಂತಾಗಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯು ರಾಜ್ಯಮಟ್ಟ ಹಾಗೂ ರಾಷ್ಟ್ರೀಯ ಮಟ್ಟದವರೆಗೂ ಹೋಗುವಂತೆ ಮಕ್ಕಳನ್ನು ತಯಾರಿ ಮಾಡಡಿದರೆ ಈ ಸಮುದಾಯದ ಮಕ್ಕಳಲ್ಲಿ ನೂರಕ್ಕೆ ನೂರಷ್ಟು ಬದಲಾವಣೆ ತರಲು ಸಾಧ್ಯವಾಗುತ್ತದೆ.

೧೪. ಅಲೆಮಾರಿ ಕಾಡುಗೊಲ್ಲರ ಮಕ್ಕಳಿಗೆ ಶಿಕ್ಷಣ ದೊರೆಯದೆ ಪರಂಪರಾಗತವಾಗಿ ತಂದೆ, ತಾಯಿ, ಮಕ್ಕಳು, ಜೊತೆಜೊತೆಗೆ ಕುರಿಕಾಯುತ್ತಾ ಊರೂರು ಅಲೆಯುವುದರಿಂದ ಶಿಕ್ಷಣ ಹಗಲು ಕನಸಾಗಿಯೇ ಉಳಿಯುತ್ತದೆ. ಆದ್ದರಿಂದ ಅಂತಹ ಮಕ್ಕಳು ಇರುವ ಕುಟುಂಬಗಳನ್ನು ಆರ್ಥಿಕ

ಪರಿಸ್ಥಿತಿಯನ್ನು ಸುಧಾರಿಸುವಂತೆ ಮಾಡುವುದು. ಹಾಗೂ ಅವರ ಕುಟುಂಬಗಳಿಗೆ 'ಪಡಿತರ ಚೀಟಿ'ಯನ್ನು ನೀಡಬೇಕು.

೧೫. ಸಮುದಾಯದಲ್ಲಿನ ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನ, ಅಂಗವಿಕಲರಿಗೆ ಸಹಾಯಧನ ಇಂತಹ ಸೌಲಭ್ಯಗಳು ಇವರು ಪಡೆಯುವ ಹಾಗಿಲ್ಲ. ಏಕೆಂದರೆ ಇವರಲ್ಲಿನ ಶಿಕ್ಷಣದ ಕೊರತೆಯಿಂದ ಇಂತಹ ಯೋಜನೆಗಳನ್ನು ತಿಳಿದುಕೊಳ್ಳುವಲ್ಲಿ ಅಶಕ್ತರಾಗಿದ್ದಾರೆ.

೧೬. ಹುಲ್ಲುಗಾವಲುಗಳ ಜೊತೆಗೆ ಹಾಳೂರು, ಕೆರೆಕುಂಟೆಗಳ ರಕ್ಷಣೆಯ ಜವಾಬ್ದಾರಿ ಅಲೆಮಾರಿ ಕಾಡುಗೊಲ್ಲ ಕುರಿಗಾರರಿಗೆ ನೀಡುವಂತಾಗಬೇಕು.

೧೭. ಇವರು ಸಹ ಕುರಿಕಾಯುವುದರಲ್ಲಿ ತೊಡಗಿ ಕೊಂಡಿದ್ದಾರೆ. ಆದ್ದರಿಂದ ಇಂತಹ ಯೋಜನೆಗಳಿಂದ ಅವರಿಗೆ ತುರ್ತು ಕೆಲಸಗಳಿಗೆ ಹಣದ ಅವಶ್ಯಕತೆಯನ್ನು ಬಗೆಹರಿಸಿಕೊಳ್ಳಲು ಅನುಕೂಲವಾಗುತ್ತದೆ. ಅಲ್ಲದೆ ಇವರು ಮನೆಗಳಲ್ಲಿಯೇ ಉಳಿಯಬಹುದು. ಆದ್ದರಿಂದ ಶಾಲೆಗೆ ಮಕ್ಕಳನ್ನು ಕಳುಹಿಸುವಲ್ಲಿ ಇವರ ಪಾತ್ರ ಪ್ರಮುಖವಾಗುತ್ತದೆ.

೧೮. ಕಾಡುಗೊಲ್ಲ ಸಮುದಾಯದವರು ಇಂದಿಗೂ ಸಹ ನೂರಕ್ಕೆ ಎಪ್ಪತ್ತರಷ್ಟು ಗುಡಿಸಲು, ಜೋಪಡಿ, ಹುಲ್ಲಿನಿಂದ ನಿರ್ಮಿಸಿದ ಮನೆಗಳಲ್ಲಿಯೇ ವಾಸಿಸುತ್ತಿದ್ದಾರೆ.

೧೯. ತಾಲ್ಲೂಕಿನಲ್ಲಿ ಜನಸಂಖ್ಯೆಯ ಎರಡನೇ ಸ್ಥಾನದಲ್ಲಿರುವ ಇವರು ಸರ್ಕಾರದ ಯೋಜನೆಗಳು ಮಾತ್ರ ಇವರಿಗೆ ತಲುಪುತ್ತಿಲ್ಲದಿರುವುದು ದುರದೃಷ್ಟ. ಆದ್ದರಿಂದ ಅವರು ತಮ್ಮ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಕುರಿಯ ಸಂಗೋಪನೆಯನ್ನು ನಡೆಸಿಕೊಂಡು ತಾವು ಅಭಿವೃದ್ಧಿಯಾಗದೆ. ತಮ್ಮ ಮಕ್ಕಳಿಗೂ ಶಿಕ್ಷಣ ದೊರೆಯದಂತೆ ಮಾಡಿದ್ದಾರೆ.

೨೦. ಕೃಷಿಗೆ ನೀಡಿದ ಮಾನ್ಯತೆ ಪಶುಪಾಲನೆಗೆ ವಿಶೇಷವಾಗಿ ಕುರಿಸಂಗೋಪನೆಗೆ ನೀಡಬೇಕು.

೨೧. ಅರಣ್ಯನೀತಿಯಂತೆ ಪಶುಪಾಲನಾ ನೀತಿಯನ್ನು ರಚಿಸುವುದು. ಏಕೆಂದರೆ ಆಯಾ ಪ್ರದೇಶದಲ್ಲಿ ಇರುವ ಅರಣ್ಯ ಪ್ರದೇಶಗಳನ್ನು ಅಲ್ಲಿನ ಪಶುಸಂಪತ್ತಿನ ಪ್ರಮಾಣದ ಮೇಲೆ ಭೂಮಿಯ ಜವಾಬ್ದಾರಿಯನ್ನು ನೀಡುವ ಬಗ್ಗೆ ನೀತಿಯನ್ನು ರೂಪಿಸಬೇಕು.

೨೨. ಅರಣ್ಯ ಇಲಾಖೆಗೆ ನೀಡಿದ ಜವಾಬ್ದಾರಿಯನ್ನು ಅಲೆಮಾರಿ ಪಶುಪಾಲಕರಿಗೆ ನೀಡಿದರೆ ಅರಣ್ಯ ಉಳಿಯುತ್ತದೆ ಹಾಗೂ ಪಶುಪಾಲನೆ ಉಳಿಯುತ್ತದೆ.

ಇಂತಹ ಸೌಲಭ್ಯಗಳೇ ಅಲೆಮಾರಿ ಪಶುಪಾಲಕರ ಮೂಲಭೂತ ಸೌಲಭ್ಯಗಳಾಗಿವೆ. ಇವುಗಳಿಂದಲೇ ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ.

ಅಧ್ಯಾಯ ೬

# ಸಮಾರೋಪ

೬

# ಸಮಾರೋಪ

ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ ಶಿರಾ ತಾಲ್ಲೂಕನ್ನು ಅನುಲಕ್ಷಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕಾಡುಗೊಲ್ಲ ಸಮುದಾಯದಲ್ಲಿ ಅರೆ ಅಲೆಮಾರಿ ಹಾಗೂ ಅಲೆಮಾರಿ ಎರಡು ರೀತಿಯ ಗುಂಪುಗಳಿದ್ದು, ಈ ಅಧ್ಯಯನವು ಅಲೆಮಾರಿ ಕುರಿಗಾರರ ಬಗ್ಗೆ ಸಂಪೂರ್ಣವಾಗಿ ಮೀಸಲಾಗಿದೆ. ಇವರ ಜೀವನದ ಸಮಗ್ರ ಚಿತ್ರಣವನ್ನು ನೀಡುತ್ತ ಅವರ ಅಭಿವೃದ್ಧಿಯ ಪರ ಸರ್ಕಾರದ ಚಿಂತನೆಗಳು, ಯೋಜನೆಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಲಾಗಿದೆ. ಆದರೆ ಈ ಅಧ್ಯಯನ ಪ್ರತಿ ಅಧ್ಯಾಯಗಳ ಬಗ್ಗೆ ಕ್ಲುಪ್ತವಾಗಿ ವಿವರಿಸುವುದು ಅವಶ್ಯಕವಾಗಿದೆ. ಇಲ್ಲಿನ ಅಭಿವೃದ್ಧಿಯ ಪದವು ಹಲವು ರೀತಿಯಲ್ಲಿ ವಿವರಿಸಬಹುದಾಗಿದೆ. ಆದರೆ ಈ ಅಧ್ಯಯನ ಅಲೆಮಾರಿಗಳನ್ನು ಅಭಿವೃದ್ಧಿಯ ಪ್ರಯತ್ನದತ್ತ ಕೊಂಡುಯ್ಯುವ ಮೂಲಕ ಆಶಯವನ್ನಿಟ್ಟುಕೊಂಡರು, ಅಲೆಮಾರಿಗರನ್ನು ಅಭಿವೃದ್ಧಿಪಡಿಸುವ ಬಗೆ ಹೇಗೆ ಎನ್ನುವುದು ಪ್ರಶ್ನಾರ್ಥಕವಾಗುತ್ತದೆ. ಏಕೆಂದರೆ ಇವರು ಸಮಾಜ ಅಭಿವೃದ್ಧಿಯ ಮುಖಿಯಾಗಿ ಬೆಳಯಲು ತಮ್ಮ ಅಲೆಮಾರಿತನವನ್ನು ಮುಖ್ಯಧ್ಯೇಯವಾಗಿಸಿಕೊಂಡಿದ್ದಾರೆ. ಅಂದರೆ ಇವರಿಂದ ನಾಗರಿಕ ಸಮಾಜಕ್ಕೆ ಅನುಕೂಲವೆ ವಿನಃ ಇವರಿಗೇನು ಲಾಭವಿಲ್ಲ. ಇಡಿ ಭೂಮಂಡಲದ ಒಡೆಯನಾಗಿದ್ದ, ಆದರೆ ಇಂದು ಜನಸಂಖ್ಯೆ ಹೆಚ್ಚಾದಂತೆಲ್ಲ, ಭೂಮಿಯ ಪ್ರಮಾಣ ಕಡಿಮೆಯಾಗಿ ತನ್ನ ವೃತ್ತಿಗೆ ನೆಲೆ ಇಲ್ಲದಂತಾಗಿದೆ. ಇರುವ ಅಲ್ಪಪ್ರಮಾಣದ ಭೂಮಿ ಕೃಷಿ, ಜನವಸತಿಯ ಪ್ರದೇಶವಾಗಿ ಪರಿವರ್ತನೆಗೊಂಡು ಇವುಗಳಿಗೆ ಬೇಲಿ ನಿರ್ಮಿಸ ತೊಡಗಿದ್ದರಿಂದ, ಇವರ ಬದುಕು ಸೂತ್ರವಿಲ್ಲದ ಗಾಳಿ ಪಟದಂತಾಯಿತು. ಭೂ ಮಂಡಲದ ಒಡೆಯನಾಗಿದ್ದ ಪಶುಪಾಲಕ ತುತ್ತು ಕೂಳಿಗಾಗಿ ಅಲೆಯುತ್ತಿರುವುದು ದುರಂತವೆ ಸರಿ.

ಸರ್ಕಾರಗಳು ಇವರ ಕಲ್ಯಾಣಕ್ಕೆ ಅನೇಕ ರೀತಿಯ ಅಭಿವೃದ್ಧಿಪರ ಯೋಜನೆಗಳನ್ನು ಹಮ್ಮಿಕೊಂಡರೂ ಅವುಗಳು ಇವರ ಜೀವನ ವಿಧಾನಕ್ಕೆ ವಿರುದ್ಧವಾಗಿಯೇ ಇರುತ್ತವೆ. ಅವುಗಳಲ್ಲಿ ಕೆಲವು ಉದಾಹರಣೆಗಳೆಂದರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಅವುಗಳಲ್ಲಿ ವಸತಿ, ಆಹಾರ, ಶಿಕ್ಷಣ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಅರಣ್ಯಗಳಲ್ಲಿ ನೆಮ್ಮದಿಯಿಂದ ಸ್ವಾಭಿಮಾನಿಗಳಾಗಿ, ಸ್ವಚ್ಛಂದವಾಗಿ ಬದುಕುತ್ತಿದ್ದ ಇವರನ್ನು ಹೊರಹಾಕಿದ ನಂತರ ಇವರಿಗೆ ಸಕಾರ್ಅದ ಯಾವುದೇ ಸೌಲಭ್ಯಗಳು ಸಿಗದಂತಾಗಿ

ಇಂದು ಅವರ ಸ್ಥಿತಿಯನ್ನು ಊಹಿಸಲು ಸಾಧ್ಯವಿಲ್ಲದಾಗಿದೆ. ಸರ್ಕಾರ ಇವರಿಗೆ ವಸತಿ, ಶಿಕ್ಷಣ ನೀಡುತ್ತೇವೆ ಎಂದು ಬರಿ ಭರವಸೆಗಳನ್ನು ಕೊಡುತ್ತಿದೆ. ಆದರೆ ಇವರು ತಮ್ಮ ಕೆಲಸದಲ್ಲಿ ನಿರತರಾಗಿ ಊರೂರು ಅಲೆಯುತ್ತಲೆ ಇದ್ದಾರೆ. ಸರ್ಕಾರದ ಯೋಜನೆಗಳಿಂದ ಅರಣ್ಯ ಇಂದು ಹಂತ ಹಂತವಾಗಿ ಕಡಿಮೆಯಾಗುತ್ತಾ ಬರುತ್ತಿದೆ. ಜೀವ ವೈವಿಧ್ಯತೆಗೆ ಹೆಸರಾಗಿದ್ದ ನಮ್ಮ ಭಾರತ ಇಂದು ಬರಿ ಕುರುಚಲು ಗಿಡಗಳ ಅರಣ್ಯಗಳಾಗಿ ಪರಿವರ್ತಿತವಾಗುತ್ತಿವೆ. ಸರ್ಕಾರ ಪ್ರತಿ ವರ್ಷದ ಆಯವ್ಯಯ ಪಟ್ಟಿಯಲ್ಲಿ ಕೊಟ್ಯಾಂತರ ರೂಪಾಯಿಗಳನ್ನು ಅರಣ್ಯ ಅಭಿವೃದ್ಧಿಗೆ ಮೀಸಲಿಡುತ್ತದೆ. ಆದರೆ ಅರಣ್ಯ ಅಭಿವೃದ್ಧಿ ಮಾತ್ರ ಸ್ವಲ್ಪವೂ ಆಗದಿರುವುದು ದುರದೃಷ್ಟಕರ ಸಂಗತಿ. ಆದರೆ ಅಲೆಮಾರಿಗಳು, ಬುಡಕಟ್ಟುಗಳು ನಿತ್ಯ ಪ್ರಕೃತಿಯಲ್ಲಿ ಉಳಿಯುವ ಕಾರಣದಿಂದ ಇದು ಉಳಿದಿತ್ತು. ಆದರೆ ಇವರನ್ನು ಹೊರಹಾಕಿ ನಂತರ ತಪ್ಪಿನ ಅರಿವಾಗಿ ೨೦೦೭ ೦೮ನೇ ಸಾಲಿನಲ್ಲಿ ಐತಿಹಾಸಿಕ ಶಾಸನವನ್ನು ಮಾಡಿ ಮತ್ತೆ ಬುಡಕಟ್ಟುಗಳ ವಶಕ್ಕೆ ಅರಣ್ಯವನ್ನು ನೀಡಿದೆ. ಆದರೆ ಅಲೆಮಾರಿ ಪಶುಪಾಲಕರಿಗೆ ಎಲ್ಲಿ ಇಂತಹ ಪ್ರದೇಶಗಳಿರುತ್ತವೆಯೋ ಅಂತಹ ಪ್ರದೇಶಗಳಿಗೆ ಪಶುಪಾಲಕರು, ಕುರಿಗಾರರು ಹೊಂದಿರುವ ಸಂಪತ್ತಿನ ಮೇಲೆ ಅವರಿಗೆ ೩೦ ೪೦ ಅಥವಾ ೫೦ ವರ್ಷಗಳಮಟ್ಟಿಗೆ ಅವರ ಹೆಸರಿಗೆ ಖಾತೆ ಮಾಡಿಸಿ ಪಾಣಿ, ಪಟ್ಟೆಗಳನ್ನು ನೀಡುವುದು, ಅಂತಹ ಕಡೆಯಲ್ಲಿ ಅವರಿಗೆ ವಸತಿ, ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದರಿಂದ ಆಗ ಅವರಿಗೆ ಹತ್ತಿರವೆನಿಸುವ ಪ್ರದೇಶಗಳಿಗೆ ಮಕ್ಕಳನ್ನು ಕಳುಹಿಸಿ ವಿದ್ಯೆಯನ್ನು ಕಲಿಸಬಹುದಾಗಿದೆ. ಇಂತಹ ಯೋಜನೆಗಳಿಂದ ಅರಣ್ಯ ಪ್ರದೇಶ, ಗೋಮಾಳ, ಕೆರೆಕುಂಟೆ ಹಾಗೂ ಹಾಳೂರು, ಹುಲ್ಲುಗಾವಲು ಹೀಗೆ ಹಲವಾರು ರೀತಿಯ ಪ್ರದೇಶಗಳನ್ನು ರಕ್ಷಿಸಬಹುದು. ಜೊತೆಗೆ ಭೂಮಿಯ ಫಲವತ್ತತೆಯು ಹೆಚ್ಚುತ್ತದೆ.

ಅಲೆಮಾರಿ ಪಶುಪಾಲಕರು, ಬುಡಕಟ್ಟುಗಳು ನೆಮ್ಮದಿಯಿಂದ ಜೀವನ ನಡೆಸಬಹುದಾಗಿದೆ. ಅಲ್ಲದೆ ಎಲ್ಲರಿಗೂ ಸ್ವಚ್ಛಂದ ಪರಿಸರ ದೊರೆಯುತ್ತದೆ. ಇಂತಹ ಯೋಜನೆಗಳಿಗೆ ಇಂದು ಹೆಚ್ಚು ಒತ್ತು ಕೊಡಬೇಕಾಗಿದೆ. ಉಳಿದಂತೆ ಶಿಕ್ಷಣಕ್ಕೆ ಕೋಟ್ಯಂತರ ಹಣವೆಚ್ಚವನ್ನು ಮಾಡುವುದರ ಜೊತೆಗೆ ೧೪ ವರ್ಷದವರೆಗೆ ಕಡ್ಡಾಯ ಹಾಗೂ ಉಚಿತ ಎಂಬ ನಿಲುವಿನೊಂದಿಗೆ ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲೂ ಎಲ್ಲಾ ವರ್ಗದವರನ್ನು ವಿದ್ಯೆಯಿಂದ ನಿಶ್ಚಿತ ಗುರಿ ತಲುಪಿಸಬೇಕೆಂಬುದು, ಅಲ್ಲದೆ ಶಿಕ್ಷಣದಿಂದಲೇ ಅಭಿವೃದ್ಧಿ ಎಂಬ ಮಂತ್ರದಿಂದ ಸರ್ಕಾರ ಜಾರಿಗೊಳಿಸಿದ ಯೋಜನೆಯಾಗಿದೆ. ಆದರೆ ಇಂದು ಅಲೆಮಾರಿಗಳಿಗೆ ಯಾವ ರೀತಿಯ ಶಿಕ್ಷಣ ಬೇಕಾಗಿದೆ ಎಂಬುದನ್ನು ಯಾರು ಯೋಚಿಸುತ್ತಿಲ್ಲ. ಆದ್ದರಿಂದ ಎಲ್ಲರೂ ಆಧುನಿಕ ಶಿಕ್ಷಣದ ಮುಖ್ಯವಾಹಿನಿಗೆ ಬರಬೇಕು ಎಂಬ ಮಾನದಂಡದಿಂದ ನವ ಸಮಾಜವನ್ನು ನಿರ್ಮಾಣ ಮಾಡಬೇಕೆಂಬುದು ಸರ್ಕಾರದ ನಿಲುವಾಗಿದೆ. ಆದರೆ ಅಲೆಮಾರಿಗಳಿಗೆ ಇದು ಅವರ ಸಂಸ್ಕೃತಿ, ನಂಬಿಕೆಗಳನ್ನು ನಾಶಮಾಡುವುದೆ ಈ ಶಿಕ್ಷಣದ ಪ್ರಮುಖ

ಅಂಶವಾಗಿದೆ. ಇವರು ಪ್ರಕೃತಿಯಲ್ಲಿ ಕಲಿಯುವುದಾದರು ಏನು? ಅವರ ಪರಂಪರಿಕ ವೃತ್ತಿ, ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆಚರಣೆಗಳು ಇವರಿಗೆ ಯಾವುದೇ ರೀತಿಯ ಶಿಕ್ಷಣವಿಲ್ಲದೆ ಕಲಿತಿರುವ ವಿದ್ಯೆಯಾಗಿದೆ. ಇದರಿಂದ ಇವರು ಸಂತೋಷವಾಗಿ ಬದುಕು ಸಾಗಿಸುತ್ತಿದ್ದಾರೆ. ಆದರೆ ಇಂತಹ ಸಾಂಪ್ರದಾಯಿಕ ಶಿಕ್ಷಣದತ್ತ ಯಾರಿಗೂ ಒಲವಿಲ್ಲದಾಗಿದೆ. ಇಂದು ಸಂಪ್ರದಾಯವೆಂದರೆ ಮೂಗು ಮುರಿಯುತ್ತಿದ್ದಾರೆ. ನಂಬಿಕೆ, ವಿಶ್ವಾಸಗಳಿಗೆ ಅರ್ಥವೆ ಇಲ್ಲದಾಗಿದೆ. ತಾನು ತನ್ನದು ಎನ್ನುವ ಸ್ವಾರ್ಥವೆ ತುಂಬಿರುವ ಈ ಆಧುನಿಕ ಸಮಾಜಗಳ ಬದುಕಿಗಿಂತ ಬುಡಕಟ್ಟು ಅಲೆಮಾರಿಗಳ ಸಮುದಾಯದಿಂದ ಕಲಿಯಬೇಕಾದದ್ದು ತುಂಬಾ ಇದೆ. ಆದರೆ ಇಂದು ಅಭಿವೃದ್ಧಿ ಎನ್ನುವ ಹೆಸರಿನಲ್ಲಿ ಎಲ್ಲವನ್ನು ಮೂಲೆಗುಂಪು ಮಾಡುತ್ತಿದ್ದಾರೆ. ಸರ್ಕಾರಗಳು ಇವರ ಜೀವನಕ್ಕೆ ಅನುಕೂಲವಾಗುವಂಥ ಪಾರಂಪರಿಕ ವೃತ್ತಿಗಳು ಉಳಿಸುವಂತಹ ಶಿಕ್ಷಣವನ್ನು ನೀಡಿದಾಗ ಮಾತ್ರ ಈ ಸಮುದಾಯಗಳು ಅಭಿವೃದ್ಧಿಯಾಗಲು ಸಾಧ್ಯ.

ಅಲೆಮಾರಿ ಕುರಿಗಾರರ ದೃಷ್ಟಿಯಲ್ಲಿರಿಸಿಕೊಂಡು ದೇಶದದ್ಯಾಂತ ಹೊಸ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿ ಉಣ್ಣೆ, ಹಾಲಿನ ಉತ್ಪನ್ನಗಳನ್ನು ಹೆಚ್ಚಿಸುವ ಯೋಜನೆಯು ಒಂದು. ಆದರೆ ಭಾರತವು ಒಂದೆ ಪಶುಪಾಲನೆ ಮತ್ತು ಹೈನು ಉತ್ಪನ್ನಗಳ ಉತ್ಪಾನೆದಯಲ್ಲಿ ಇಡೀ ವಿಶ್ವದಲ್ಲೆ ದೊರೆಯದಂತಹ ತಳಿಗಳನ್ನು ಹೊಂದಿರುವ ರಾಷ್ಟ್ರವೆಂದು ಖ್ಯಾತಿಯನ್ನು ಪಡೆದಿತ್ತು. ಆದರೆ ಇಂದು ಮೂಲ ತಳಿಗಳನ್ನೇ ನಾವು ಅಭಿವೃದ್ಧಿಪಡಿಸದೆ ವಿದೇಶಿ ತಳಿಗಳೆಂಬ ತಾತ್ಕಾಲಿಕವಾದದನ್ನು ಪಡೆಯುವಲ್ಲಿ ಪ್ರಯತ್ನಿಸುತ್ತಿದ್ದೇವೆ. ಆದರೆ ಇದರಿಂದ ಮೂಲ ಕುರಿಗಾರರು ಜೀವನ ನಡೆಸುವುದು ದುಸ್ತರವಾಗಿದೆ. ಆದ್ದರಿಂದ ಪಾರಂಪರಿಕವಾಗಿ ಬಂದಂತಹ ತಳಿಗಳನ್ನು ಇಂದು ರಕ್ಷಿಸಬೇಕಾಗಿದೆ.

ಈ ಎಲ್ಲಾ ಅಂಶಗಳಿಂದ ಅಲೆಮಾರಿ ಕುರಿಗಾರರ ಅಧ್ಯಯನ ಆಧುನಿಕ ಸಮಾಜದ ಶಿಕ್ಷಣ ನೀಡುವುದರ ಜೊತೆ ಜೊತೆಗೆ ಇವರ ಮೂಲ ಪರಾಂಪರಿಕ ವೃತ್ತಿ, ನಂಬಿಕೆ, ಆಚರಣೆಗಳನ್ನು ರಕ್ಷಿಸುವಂತಾಗಬೇಕು. ಇದರಿಂದ ಎಲ್ಲಾ ವರ್ಗದವರಿಗೂ ಅನುಕೂಲ ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಅಲ್ಲದೇ ದೇಶದ ಸಂಸ್ಕೃತಿಯನ್ನು, ಅರಣ್ಯ, ಗೋಮಾಳ, ಹಾಳೂರು ಇಂತಹ ಭೂಮಿಯನ್ನು ರಕ್ಷಿಸುವಲ್ಲಿ ಹಾಗೂ ಸ್ವಚ್ಛಂದವಾದ ಪರಿಸರ ದೊರಕಿಸಿಕೊಡುವಲ್ಲಿ ಭೂಮಿಯನ್ನು ಫಲವತ್ತಾಗಿ ಮಾಡುವಲ್ಲಿ ಇಂತಹ ಪಾರಂಪರಿಕ ವೃತ್ತಿಯನ್ನು ಹೊಂದಿರುವ ಸಮುದಾಯಗಳನ್ನು ರಕ್ಷಿಸಿ ಸಮಾಜವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಾರ್ಯವಾಗಬೇಕಿದೆ.

ಗ.ತಿ.ತಿ.

## ಅನುಬಂಧಗಳು

೧. ಕೋಷ್ಟಕಗಳು

೨. ಜನಸಂಖ್ಯೆ ಬೆಳವಣಿಗೆ

೩. ಗ್ರಂಥಋಣ

೪. ಛಾಯಾಚಿತ್ರಗಳು

# ಅಂಕಿ ಅಂಶಗಳು

### ಸಮೀಕ್ಷೆಗೊಳಪಟ್ಟ ಅಲೆಮಾರಿ ಕಾಡುಗೊಲ್ಲರ ಲಿಂಗವಾರು ಪ್ರಮಾಣ

| ಕ್ರ. ಸಂ. | ಗ್ರಾಮಗಳ ಹೆಸರು | ಒಟ್ಟು ಕುಟುಂದ ಸದಸ್ಯರು | ಗಂಡು | ಹೆಣ್ಣು | ಒಟ್ಟು |
|---|---|---|---|---|---|
| ೧ | ಬಂಗಾರಿಹಟ್ಟಿ | ೫ | ೧೮ | ೧೨ | ೩೦ |
| ೨ | ಬೇವಿನಹಳ್ಳಿ | ೬ | ೩೯ | ೩೯ | ೭೮ |
| ೩ | ದೊಡ್ಡಹುಲಿಕುಂಟೆ | ೧೦ | ೩೪ | ೧೯ | ೫೩ |
| ೪ | ಹಾರೋಗೆರೆ | ೬ | ೨೪ | ೧೫ | ೩೯ |
| ೫ | ಹೊಸಕೋಟೆ ಗೊಲ್ಲರಹಟ್ಟಿ | ೨ | ೪ | ೫ | ೯ |
| ೬ | ಮೇಣಿಗನಹಟ್ಟಿ | ೯ | ೨೫ | ೨೦ | ೪೫ |
| ೭ | ಮುದ್ದೇನಹಳ್ಳಿ ಗೊಲ್ಲರಹಟ್ಟಿ | ೬೨ | ೨೨೫ | ೧೯೭ | ೪೨೨ |
| | ಒಟ್ಟು | ೧೦೦ | ೩೬೯ | ೩೦೭ | ೬೭೬ |

### ಸಮೀಕ್ಷೆಗೊಳಪಟ್ಟ ಅಲೆಮಾರಿ ಕಾಡುಗೊಲ್ಲರ ಕುಟುಂಬಗಳ ಗಾತ್ರ

| ಕ್ರ. ಸಂ. | ಗ್ರಾಮಗಳ ಹೆಸರು | ಒಟ್ಟು ಕುಟುಂದ ಸದಸ್ಯರು | ಗಂಡು | ಹೆಣ್ಣು | ಒಟ್ಟು | ಕುಟುಂಬದ ಶೇ.ಪ್ರಮಾಣ |
|---|---|---|---|---|---|---|
| ೧ | ಬಂಗಾರಿಹಟ್ಟಿ | ೫ | ೧೮ | ೧೨ | ೩೦ | ೬ |
| ೨ | ಬೇವಿನಹಳ್ಳಿ | ೬ | ೩೯ | ೩೯ | ೭೮ | ೧೩ |
| ೩ | ದೊಡ್ಡಹುಲಿಕುಂಟೆ | ೧೦ | ೩೪ | ೧೯ | ೫೩ | ೫.೩ |
| ೪ | ಹಾರೋಗೆರೆ | ೬ | ೨೪ | ೧೫ | ೩೯ | ೬.೫ |
| ೫ | ಹೊಸಕೋಟೆ ಗೊಲ್ಲರಹಟ್ಟಿ | ೨ | ೪ | ೫ | ೯ | ೪.೫ |
| ೬ | ಮೇಣಿಗನಹಟ್ಟಿ | ೯ | ೨೫ | ೨೦ | ೪೫ | ೫ |
| ೭ | ಮುದ್ದೇನಹಳ್ಳಿ ಗೊಲ್ಲರಹಟ್ಟಿ | ೬೨ | ೨೨೫ | ೧೯೭ | ೪೨೨ | ೬.೮ |
| | ಒಟ್ಟು | ೧೦೦ | ೩೬೯ | ೩೦೭ | ೬೭೬ | ೬.೭ |

## ಸಮೀಕ್ಷೆಗೊಳಪಟ್ಟ ವಯೋವಾರು ಗುಂಪುಗಳು

| ಕ್ರ. ಸಂ. | ವಯೋವಾರು ಗುಂಪುಗಳು | ಒಟ್ಟು ಕುಟುಂಬ ಗಳು ೧೦೦ | ಗಂಡು ೩೬೯ | ಶೇಕಡ ವಾರು | ಹೆಣ್ಣು ೩೦೭ | ಶೇಕಡ ವಾರು | ಒಟ್ಟು ೬೭೬ | ಶೇಕಡ ವಾರು |
|---|---|---|---|---|---|---|---|---|
| ೧ | ೦-೪ | - | ೨೭ | ೭.೩೧ | ೨೦ | ೬.೫೧ | ೪೭ | ೬.೯೫ |
| ೨ | ೫-೧೭ | - | ೯೭ | ೨೬.೨೮ | ೭೪ | ೨೪.೧ | ೧೭೧ | ೨೫.೨೯ |
| ೩ | ೧೮-೪೦ | - | ೧೭೦ | ೪೬.೧೫ | ೧೫೭ | ೫೧.೧೫ | ೩೨೭ | ೪೮.೩೮ |
| ೪ | ೪೧-೬೦ | - | ೬೨ | ೧೬.೮ | ೪೬ | ೧೪.೯೮ | ೧೦೮ | ೧೫.೯೭ |
| ೫ | ೬೧+ | - | ೧೩ | ೩.೪೬ | ೧೦ | ೩.೨೬ | ೨೩ | ೩.೪೧ |
| ಒಟ್ಟು | | | ೩೬೯ | ೧೦೦ | ೩೦೭ | ೧೦೦ | ೬೭೬ | ೧೦೦ |

## ಸಮೀಕ್ಷೆಗೊಳಪಟ್ಟವರ ವೈವಾಹಿಕ ಸ್ಥಾನಮಾನ

| ಕ್ರ. ಸಂ. | ಒಟ್ಟು ಕುಂಟುಬ ಗಳು ೧೦೦ | ಗಂಡು | ಶೇಕಡ ವಾರು | ಹೆಣ್ಣು | ಶೇಕಡ ವಾರು | ಒಟ್ಟು | ಶೇಕಡ ವಾರು |
|---|---|---|---|---|---|---|---|
| ೧. | ಅವಿವಾಹಿತರು | ೧೯೬ | ೫೩.೧೯ | ೧೨೬ | ೪೧.೦೪ | ೩೨೨ | ೪೭.೬೩ |
| ೨ | ವಿವಾಹಿತರು | ೧೬೩ | ೪೪.೧೭ | ೧೬೩ | ೫೩.೦೯ | ೩೨೬ | ೪೮.೨೨ |
| ೩ | ವಿಧವೆ-ವಿಧುರ | ೧೦ | ೨.೭೨ | ೧೮ | ೫.೮೭ | ೨೮ | ೪.೧೫ |
| ಒಟ್ಟು | | ೩೬೯ | ೧೦೦ | ೩೦೭ | ೧೦೦ | ೬೭೬ | ೧೦೦ |

### ಸಮೀಕ್ಷೆಗೊಳಪಟ್ಟವರ ವಯೋಮಾನಕ್ಕನುಗಣವಾಗಿ ನಿರ್ವಹಿಸುವ ಉದ್ಯೋಗದ ಕೋಷ್ಟಕ

| ಕ್ರ. ಸಂ. | ಒಟ್ಟು ಕುಂಟುಂಬ ಗಳು ೧೦೦ | ಗಂಡು ೩೬೯ | ಶೇಕಡ ವಾರು | ಹೆಣ್ಣು ೩೦೭ | ಶೇಕಡ ವಾರು | ಒಟ್ಟು ೬೨೭ | ಶೇಕಡ ವಾರು |
|---|---|---|---|---|---|---|---|
| ೧ | ೦-೧೭ ವಯೋಗುಂಪಿನವರು | ೧೨೪ | ೩೩.೫೯ | ೯೪ | ೩೦.೬೧ | ೨೧೮ | ೩೨.೨೪ |
| ೨ | ೬೧ ವಯೋಗುಂಪಿನವರು | ೧೩ | ೩.೪೬ | ೧೦ | ೩.೨೬ | ೨೩ | ೩.೪೧ |
| ೩ | ಅವಲಂಬಿತರ ಗುಂಪು | ೧೩೭ | ೩೭.೦೫ | ೧೦೪ | ೩೩.೮೭ | ೨೪೧ | ೩೫.೬೫ |
| ೪ | ೧೮-೬೦ ವಯೋಗುಂಪು | ೨೩೨ | ೬೨.೯೫ | ೨೦೩ | ೬೬.೧೩ | ೪೩೫ | ೬೪.೩೫ |
| ೫ | ಕುರಿ ಸಂಗೋಪನೆ | ೮೭ | ೬೦ | ೪೫ | ೫೮.೪೪ | ೧೩೨ | ೫೯.೪೫ |
| ೬ | ಕೃಷಿ | ೧೨ | ೮.೨೭ | ೭ | ೯.೦೯ | ೧೯ | ೮.೫೫ |
| ೭ | ಕೃಷಿ ಕಾರ್ಮಿಕ | ೨೦ | ೧೩.೭೯ | ೧೫ | ೧೯.೪೫ | ೩೫ | ೧೫.೭೮ |
| ೮ | ಸರ್ಕಾರಿ ನೌಕರರು | ೪ | ೨.೭೬ | | | ೪ | ೧.೮ |
| ೯ | ಇತರೆ ಉದ್ಯೋಗ | ೨೨ | ೧೫.೧೮ | ೧೦ | ೧೨.೯೯ | ೩೨ | ೧೪.೪೨ |
| | ಒಟ್ಟು | ೧೪೫ | ೬೨.೦೫ | ೭೭ | ೩೭.೯೩ | ೨೨೨ | ೫೧.೦೩ |

### ಸಮೀಕ್ಷೆಗೊಳಪಟ್ಟವರ ವಸತಿ ಮಾದರಿಯ ಕೋಷ್ಟಕ

| ಕ್ರ.ಸಂ. | ಮಾದರಿ | ಒಟ್ಟು |
|---|---|---|
| ೧ | ಸ್ವಂತ ನಿವೇಶನ ಹೊಂದಿದವರು | ೧೦೦ |
| ೨ | ಗುಡಾರ | ೨ |
| ೩ | ಗುಡಿಸಲು | ೬೦ |
| ೪ | ಹೆಂಚು | ೩೪ |
| ೫ | ಡಾಬಾ | ೨ |
| ೬ | ಆಶ್ರಯ | ೨ |

### ಸಮೀಕ್ಷೆಗೊಳಪಟ್ಟವರ ಪಶುಸಂಪತ್ತಿನ ವಿವರ

| ಕ್ರ.ಸಂ. | ಪಶುಸಂಪತ್ತು | ಒಟ್ಟು |
|---|---|---|
| ೧ | ಎತ್ತು | ೧೯ |
| ೨ | ಹಸು | ೧೩ |
| ೩ | ಕುರಿ | ೧೨,೮೦೦ |
| ೪ | ಮೇಕೆ | ೪೯೭ |

ಸಮೀಕ್ಷೆಗೊಳಪಟ್ಟವರ ಇತರೆ ಸೌಲಭ್ಯಗಳು

| ಕ್ರ.ಸಂ. | ಇತರೆ ಸೌಲಭ್ಯಗಳು | ಒಟ್ಟು |
|---|---|---|
| ೧ | ಪಡಿತರ ಚೀಟಿ | ೬೦ |
| ೨ | ಸ್ವಂತ ವಿದ್ಯುಚ್ಛಕ್ತಿ | ೩೪ |
| ೩ | ಭಾಗ್ಯಜ್ಯೋತಿ | ೧ |
| ೪ | ಸೈಕಲ್ | ೨ |
| ೫ | ರೇಡಿಯೋ | ೧೩ |
| ೬ | ಟೆಪ್‌ರೆಕಾರ್ಡ್ | ೧೨ |
| ೭ | ಟಿ.ವಿ. | ೮ |

ಶಿರಾ ತಾಲ್ಲೂಕಿನ ಅಲೆಮಾರಿ ಕಾಡುಗೊಲ್ಲ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಈ ಅಧ್ಯಯನ ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಲಾಗಿದೆ. ಈ ಅಧ್ಯಯನದಲ್ಲಿ ಸರಳ ಯಾದ್ರುಚ್ಛಿಕ ಮಾದರಿ ವಿಧಾನವನ್ನು ಅಳವಡಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟು ತಾಲ್ಲೂಕಿನಲ್ಲಿ ನೂರು ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಇದರಲ್ಲಿ ಒಟ್ಟು ೬೭೬ ಸದಸ್ಯರಿದ್ದು, ಪುರುಷರು ೩೬೯, ಮಹಿಳೆಯರ ಸಂಖ್ಯೆ ೩೦೭ ಸದಸ್ಯರಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಸಮುದಾಯದ ಜೀವನ ವಿಧಾನ ಚಿತ್ರಣವನ್ನು ಈ ಕೋಷ್ಠಕಗಳ ಮುಖಾಂತರ ನೀಡಲಾಗಿದೆ.

# ಮಾಹಿತಿದಾರರ ಪಟ್ಟಿ

| ಕ್ರ.ಸಂ. | ಹೆಸರು | ವಯಸ್ಸು | ವಿದ್ಯಾರ್ಹತೆ | ಊರು | ಬೆಡಗು | ವೃತ್ತಿ |
|---|---|---|---|---|---|---|
| ೧. | ಬಸವರಾಜು | ೫೦ | ೭ನೇ ತರಗತಿ | ಬಿಜ್ಜಿಹಳ್ಳಿ ಗೊಲ್ಲರಹಟ್ಟಿ | ಕರಡಿಗೊಲ್ಲ | ಕೃಷಿಕರು |
| ೨ | ಬಡೀರಣ್ಣ | ೬೦ | ೧೦ನೇ ತರಗತಿ | ಬೇವಿನಹಳ್ಳಿ | | ಮುಖಂಡರು |
| ೩ | ಭಾಗ್ಯಮ್ಮ | ೨೮ | ೧೦ನೇ ತರಗತಿ | ಮುದ್ದಕ್ಕನಹಳ್ಳಿ ಗೊಲ್ಲರಹಟ್ಟಿ | | ಅಂಗನವಾಡಿ ಕಾರ್ಯಕರ್ತೆ |
| ೪ | ಚಿಕ್ಕನಾಗಪ್ಪ | ೫೦ | | ದ್ವಾರನಕುಂಟೆ | | ಪೂಜಾರಿಕೆ |
| ೬ | ಪೂಜಾರ್ ಚಿತ್ತಯ್ಯ | ೩೫ | ಎ.ಎಂ. | ಬೇವಿನಹಳ್ಳಿ | | ಕೃಷಿಕರು |
| ೭ | ದಾಸಪ್ಪ | ೫೦ | | ಮೇಣಿಗನಹಟ್ಟಿ | | ಅಲೆಮಾರಿ ಕುರಿಗಾರ |
| ೮ | ಈರಣ್ಣ | ೪೦ | ಪದವಿ | ಎಂ.ದಾಸರಹಳ್ಳಿ | | ಕಾರ್ಯದರ್ಶಿ ಕನಕ ಪತ್ತಿನ ಸಹಕಾರ ಸಂಘ |
| ೯ | ಜುಂಜಣ್ಣ | ೪೫ | | ಕದಿರಿಹಳ್ಳಿ | | ಅಲೆಮಾರಿ ಕುರಿಗಾರ |
| ೧೦ | ಕೂಗಣ್ಣ | ೭೦ | | ದ್ವಾರನಕುಂಟೆ ಗೊಲ್ಲರಹಟ್ಟಿ | | ಎತ್ತಪ್ಪನ ಪೂಜಾರಿಗಳು |
| ೧೧ | ಕೃಷ್ಣಪ್ಪ | ೪೩ | ಪಿಯುಸಿ | ಬಡಮಂಗನಹಟ್ಟಿ | | ಕ.ರಾ.ರ.ಸಾ.ಸಂ., ನೌಕರ |
| ೧೨ | ಶ್ರೀಮತಿ ಲಲಿತಮ್ಮ | ೬೦ | ಟಿ.ಸಿ.ಹೆಚ್. | ಕೆಳಗೋಟೆ | | ನಿವೃತ್ತ ಶಿಕ್ಷಕರು ಚಿತ್ರದುರ್ಗ |
| ೧೩ | ನಾಗರಾಜ್ | ೨೯ | ೧೦ನೇ ತರಗತಿ | ಬೇವಿನಹಳ್ಳಿ | | ಅಲೆಮಾರಿ ಕುರಿಗಾರ |

| | | | | | | |
|---|---|---|---|---|---|---|
| ೧೪ | ನಾಗರಾಜ | ೩೪ | ಟಿ.ಸಿ.ಹೆಚ್ | ಬೇವಿನಹಳ್ಳಿ | | ಶಿಕ್ಷಕರು ಆಶ್ರಮ ಶಾಲೆ |
| ೧೫ | ಶ್ರೀಮತಿ ನೀಲಮ್ಮ | ೪೩ | ಎಂ.ಎ. | ಜೋಗಿಮಟ್ಟೆ ರಸ್ತೆ | | ಉಪನ್ಯಾಸಕರು ಚಿತ್ರದುರ್ಗ |
| ೧೬ | ಪುಟ್ಟೀರಪ್ಪ | ೩೦ | | ಬಂಗಾರಿಹಟ್ಟಿ | | ಕುರಿಮರಿ ವ್ಯಾಪಾರಿಗಳು |
| ೧೭ | ರಂಗನಾಥಪ್ಪ | ೪೦ | | ದೊಡ್ಡಬಾಣಗೆರೆ | | ಅಲೆಮಾರಿ ಕುರಿಗಾರ |
| ೧೮ | ರಂಗಯ್ಯ | ೪೦ | ಟಿ.ಸಿ.ಹೆಚ್. | ಕೆಂತ್ಲಾರಹಟ್ಟಿ | | ಶಿಕ್ಷಕರು |
| ೧೯ | ರಾಮಕೃಷ್ಣಪ್ಪ | ೪೬ | ಪದವಿ | ತಿಮ್ಮನಹಳ್ಳಿ, ಗೊಲ್ಲರಹಟ್ಟಿ | | ಅಲೆಮಾರಿ ಕುರಿಗಾರ |
| ೨೦ | ರಾಮಕೃಷ್ಣಯ್ಯ | ೪೫ | ಎಂ.ಎ. | ತೊಗರಕೊಂಟೆ | | ಉಪನ್ಯಾಸಕರು ಸರ್ಕಾರಿ ಪದವಿಪೂರ್ವ ಕಾಲೇಜ್, ಶಿರಾ |
| ೨೧ | ಸಿಗರಪ್ಪ | ೭೦ | | ಗಂಡಿಹಳ್ಳಿಮಠ | | ದತ್ತಪೀಠ ಪೂಜಾರಿಗಳು |
| ೨೨ | ಶ್ರೀನಿವಾಸ್ | ೪೦ | ೧೦ನೇ ತರಗತಿ | ಮಾರಜ್ಜನಹಳ್ಳಿ, ಗಾಣದಹುಣಸೆ | | ಅಲೆಮಾರಿ ಕುರಿಗಾರ |
| ೨೩ | ಶ್ರೀಮತಿ ಚಿತ್ತಮ್ಮ | ೩೭ | | ಮೇಣಿಗನಹಟ್ಟಿ | ಮರೆಯರು | ಅಲೆಮಾರಿ ಕುರಿಗಾರ |
| ೨೪ | ದಾಸಪ್ಪ | ೫೦ | | ಮೇಣಿಗನಹಟ್ಟಿ | | ಅಲೆಮಾರಿ ಕುರಿಗಾರ |
| ೨೫ | ದ್ಯಾ.ನಾಗಪ್ಪ | ೬೫ | | ಮೇಣಿಗನಹಟ್ಟಿ | | ಅಲೆಮಾರಿ ಕುರಿಗಾರ |
| ೨೬ | ಈರಣ್ಣ ಎನ್. | ೨೯ | | ಪೆನ್ನೋಬನಹಳ್ಳಿ, ಗೊಲ್ಲರಹಟ್ಟಿ | | ಪೂಜಾರಿಗಳು |

| | | | | | |
|---|---|---|---|---|---|
| ೨೭ | ಹೊಟ್ಟೆ ಈರಣ್ಣ | ೩೧ | | ಪೆನ್ನೋಬನಹಳ್ಳಿ, ಗೊಲ್ಲರಹಟ್ಟಿ | ಕೃಷಿಕರು |
| ೨೮ | ಹನುಮಂತರಾಯಪ್ಪ | ೪೫ | ಪದವಿ | ಹುಳಿಗೆರೆ ಗೊಲ್ಲರಹಳ್ಳಿ | ಕೃಷಿಕರು |
| ೨೯ | ಶ್ರೀಮತಿ ಕಮಲಮ್ಮ | ೨೫ | ಪಿಯುಸಿ | ಮೂಗನಹಳ್ಳಿ, ಗೊಲ್ಲರಹಟ್ಟಿ | ಅಂಗನವಾಡಿ ಕಾರ್ಯಕರ್ತೆ |
| ೩೦ | ಕಾಂತರಾಜ್ | ೪೦ | ೭ನೇ ತರಗತಿ | ಕಲಿಗಾನಹಳ್ಳಿ, ಗೊಲ್ಲರಹಟ್ಟಿ | ಅಲೆಮಾರಿ ಕುರಿಗಾರ |
| ೩೧ | ಕುಮಾರ್ | ೧೯ | ಪಿಯುಸಿ | ಕೆ.ರಂಗನಹಳ್ಳಿ | ವಿದ್ಯಾರ್ಥಿ |
| ೩೨ | ಲಿಂಗರಾಜ್ | ೪೨ | ಬಿ.ಎ.ಬಿಇಡಿ | ಮೊದಲೂರು | ಶಿಕ್ಷಕರು, ಪ್ರೌಢಶಾಲೆ |
| ೩೩ | ಮುಕುಂದಪ್ಪ | ೩೬ | ೫ನೇ ತರಗತಿ | ಬ್ರಹ್ಮಸಂದ್ರ, ಗೊಲ್ಲರಹಟ್ಟಿ | ಅಲೆಮಾರಿ ಕುರಿಗಾರ |
| ೩೪ | ಮಾರುತಿ | ೧೯ | ಪಿಯುಸಿ | ಮೆಳೆಕೋಟೆ, ಗೊಲ್ಲರಹಟ್ಟಿ | ವಿದ್ಯಾರ್ಥಿ |
| ೩೫ | ಮಹಾಲಿಂಗಪ್ಪ | ೩೨ | ೧೦ನೇ ತರಗತಿ | ರತ್ನಸಂದ್ರ, ಗೊಲ್ಲರಹಟ್ಟಿ | ದಿನಸಿ ಅಂಗಡಿ ವ್ಯಾಪಾರಿಗಳು |
| ೩೬ | ಪಾಂಡಪ್ಪ | ೩೫ | ೭ನೇ ತರಗತಿ | ಕೆಂಪನಹಳ್ಳಿ, ಗೊಲ್ಲರಹಟ್ಟಿ | ಕುರಿಗಾರರು |
| ೩೭ | ಪಾಂಡುರಂಗಪ್ಪ | | ೧೦ನೇ ತರಗತಿ | ಮಾಗೂಡು | ಮಂಡಲ ಪಂಚಾಯತಿ ಸದಸ್ಯರು |
| ೩೮ | ಪೂಜಾರ್ ಮಾರಣ್ಣ | ೪೪ | | ಹಾರೊಗೆರೆ, ಗೊಲ್ಲರಹಟ್ಟಿ | ಹೂಜಾರಿಕೆ |
| ೩೯ | ರಾಮಣ್ಣ | ೩೭ | ೫ನೇ ತರಗತಿ | ಮುದ್ದೇನಹಳ್ಳಿ, ಗೊಲ್ಲರಹಟ್ಟಿ | ಅಲೆಮಾರಿ ಕುರಿಗಾರ |
| ೪೦ | ರಂಗಜ್ಜ | ೭೦ | ಬೇವಿನಹಳ್ಳಿ | ಕುರುಬ | ಜಾನಪದ ಕಲಾವಿದರು |

| | | | | | |
|---|---|---|---|---|---|
| ೪೧ | ಶ್ರೀಮತಿ ಸಿದ್ಧಗಂಗಮ್ಮ | ೩೦ | ೧೦ನೇ ತರಗತಿ | ಅಗ್ರಹಾರ ಕೆಳಗಳ, ಗೊಲ್ಲರಹಟ್ಟಿ | ಟೈಲರಿಂಗ್ |
| ೪೨ | ಸಿದ್ಧಪ್ಪ | ೪೫ | ಪದವಿ | ಚಿಕ್ಕ ಬಾಣಗೆರೆ | ಊರಿನ ಹಿರಿಯ ಮುಖಂಡರು |
| ೪೩ | ಸಿದ್ದೇಶ್ | ೩೫ | ಪಿಯುಸಿ | ಅಗ್ರಹಾರ ಕೆಳಗಳ, ಗೊಲ್ಲರಹಟ್ಟಿ | ಊರಿನ ಹಿರಿಯರು |
| ೪೪ | ಶ್ರೀಮತಿ ಶಾರದಮ್ಮ | ೩೫ | ೫ನೇ ತರಗತಿ | ವರದಾಪುರ, ಗೊಲ್ಲರಹಟ್ಟಿ | ಗೃಹಿಣಿ |
| ೪೫ | ಶ್ರೀಮತಿ ಶಿವಮ್ಮ | ೪೦ | ೧೦ನೇ ತರಗತಿ | ಲಕ್ಕವ್ವನಹಳ್ಳಿ, ಗೊಲ್ಲರಹಟ್ಟಿ | ಅಂಗನವಾಡಿ ಕಾರ್ಯಕರ್ತೆ |
| ೪೬ | ಶ್ರೀಮತಿ ಶಿವಮ್ಮ | ೪೨ | | ಕರೆರಾಮನಹಳ್ಳಿ, ಗೊಲ್ಲರಹಟ್ಟಿ | ಗೃಹಿಣಿ |
| ೪೭ | ತಿಪ್ಪೇಸ್ವಾಮಿ | ೩೦ | ಪದವಿ | ತಡಕಲೂರು, ದಿಬ್ಬದಹಟ್ಟಿ | ಕೃಷಿಕರು |
| ೫೦ | ಉತ್ತಣ್ಣ | ೫೦ | | ಮೇಣಿಗನಪಟ್ಟಿ | ಅಲೆಮಾರಿ ಕುರಿಗಾರ |
| ೫೧ | ವಸಂತ | ೩೨ | ೧೦ನೇ ತರಗತಿ | ದೇವರಹಳ್ಳಿ, ಗೊಲ್ಲರಹಟ್ಟಿ | ಅಲೆಮಾರಿ ಕುರಿಗಾರ |

೨

# ಜನಸಂಖ್ಯೆ ಹಂಚಿಕೆ ಮತ್ತು ಬೆಳವಣಿಗೆ
# (Population Distribution and Trends)

## ನೆಲೆಗಳು

A Consolidated list of Golla Community from the Censuses and other Sources and their Distribution

GOLA - POI Equivalent : GOLLA /YADAVA

Census years : 1881,1911,1931; earlier distribution : Baroda, Bihar, and Orissa, Bombay Presidency, Mayurbhanj State, Elsewhere; present distribution : ***Andhra Pradesh :*** throughout the state , ***Karnataka:*** Bangalore, Bellary, Bidar, Chitradurga, Gulbarga, Hassan, Raichur, Shimoga, Tumkur,***Maharashtra:*** Aurangabad, Beed, Jalna,Latur, Nanded,Osmanabad, Parbhani, ***Orissa:*** Cuttack, Ganjam, Koraput, Puri

GOLA and KUTA Census Year: 1891; earlier distribution: Baroda, Bombay Presidency, North West Province

GOLA ( GOLLA, GOLLARU), Census Year: 1901; earlier distribution: Andaman and Nicobar Islands, Baroda, Bengal, Bombay Presidency, Central India Agency, Central Provinces and Berar, Coorg, H E H Nizam's Dominion, Madras, Mysore

GOLAR, Census Years: 1881,1931; earlier distribution: Central India Agency, Central Provinces and Berar

GOLLA, Census Years: 1881,1921,1931; earlier distribution: Bombay Presidency,Coorg, H E H Nizam's Dominion, Madras, Mysore, Canarese caste names, Telugu caste names, Tamil caste names

GOLLA or GAOLI, Census Year: 1881; earlier distribution: Central Provinces and Berar, Coorg, H E H Nizam's Dominion

GOLLA (GALAR), Census Year: 1911; earlier distribution: Central Provinces and Berar, H E H Nizam's Dominion, Madras, Mysore, Elsewhere

GOLLAH, Census Year: 1881; earlier distribution: Bengal, Madras, Malayalam caste names (Singh K S : 1996:385-6).

GOLLA - AMANI - subgroup of Golla, reported as Telugu caste name in 1881 census

GOLLA - ANTHO KURAVA - subgroup of Golla, reported as Telugu caste name in 1881 census

GOLLA - BAGIRASA - subgroup of Golla, reported as Telugu caste name in 1881 census

GOLLA - BALABHADRA - subgroup of Golla, reported as Telugu caste name in 1881 census

GOLLA - BANGI - subgroup of Golla, reported as Tamil caste name in 1881 census

GOLLA - BARODI - subgroup of Golla, reported as Telugu caste name in 1881 census

GOLLA - BOGA - subgroup of Golla, reported as Telugu caste name in 1881 census

GOLLA - BOLAYA - subgroup of Golla, reported as Telugu caste name in 1881 census

GOLLA - BORAMA - subgroup of Golla, reported as Telugu caste name in 1881 census

GOLLA - BUNALU - subgroup of Golla, reported as Telugu caste name in 1881 census

GOLLA - CHANJA - subgroup of Golla, reported as Telugu caste name in 1881 census

GOLLA - DODI- subgroup of Golla, reported as Telugu caste name in 1881 census

GOLLA - DONTHA - subgroup of Golla, reported as Telugu caste name in 1881 census

GOLLA - DOULU - subgroup of Golla, reported as Telugu caste name in 1881 census (Singh K S : 1996:387).

GOLLA - ER - POI Equivalent : GOLLA, YERRA GOLLA

reported as Tamil caste name in 1881 census; present distribution : ***Andhra Pradesh :*** East Godavari, Srikakulam, Vizianagaram

GOLLA - ETHUKULA - subgroup of Golla, reported as Tamil caste name in 1881 census

GOLLA - GUGLA - subgroup of Golla, reported as Telugu caste name in 1881 census

GOLLA - HALUBARU - subgroup of Golla, reported as Telugu caste name in 1881 census

GOLLA - IKA - subgroup of Golla, reported as Tamil caste name in 1881 census

GOLLA - IRAM - subgroup of Golla, reported as Tamil caste name in 1881 census

GOLLA - JADIGA - subgroup of Golla, reported as Telugu caste name in 1881 census

GOLLA - JANA - subgroup of Golla, reported as Telugu caste name in 1881 census

GOLLA - KACHARA - subgroup of Golla, reported as Telugu caste name in 1881 census

GOLLA - KADALU - subgroup of Golla, reported as Telugu caste name in 1881 census

GOLLA - KAMATI - subgroup of Golla, reported as Telugu caste name in 1881 census

GOLLA - KAMBALA - subgroup of Golla, reported as Tamil caste name in 1881 census

GOLLA - KAMUSTHA - subgroup of Golla, reported as Telugu caste name in 1881 census

GOLLA - KANAKA - subgroup of Golla, reported as Telugu caste name in 1881 census

GOLLA - KANARI - subgroup of Golla, reported as Telugu caste name in 1881 census

GOLLA - KARADI - subgroup of Golla, reported as Telugu caste name in 1881 census

GOLLA - KARINIGA - subgroup of Golla, reported as Telugu caste name in 1881 census

GOLLA - KARNA - subgroup of Golla, reported as Tamil caste name in 1881 census

GOLLA - KASADI - subgroup of Golla, reported as Telugu caste name in 1881 census

GOLLA - KASILA - subgroup of Golla, reported as Telugu caste name in 1881 census

GOLLA - KUKKALU - subgroup of Golla, reported as Telugu caste name in 1881 census

GOLLA - KUMATU - subgroup of Golla, reported as Telugu caste name in 1881 census

GOLLA - KURATA - subgroup of Golla, reported as Telugu caste name in 1881 census

GOLLA - KURUNA - subgroup of Golla, reported as Telugu caste name in 1881 census

GOLLA - LAKANTI - subgroup of Golla, reported as Telugu caste name in 1881 census

GOLLA - MAJA - subgroup of Golla, reported as Telugu caste name in 1881 census

GOLLA - MANUDU - subgroup of Golla, reported as Telugu caste name in 1881 census

GOLLA - MARRI - subgroup of Golla, reported as Telugu caste name in 1881 census

GOLLA - MATU - subgroup of Golla, reported as Telugu caste name in 1881 census

GOLLA - MEDI - subgroup of Golla, reported as Telugu caste name in 1881 census

GOLLA - MONDA - POI Equivalent : GOLLA, MONDA

reported as Canarese caste name in 1881 census; present distribution : ***Tamil Nadu:*** Chengalpattu, Madras, North Arcot, South Arcot

MONDA, reported as Tamil caste name in 1881 census

GOLLA - MUNAGANTI - subgroup of Golla, reported as Telugu caste name in 1881 census

GOLLA - MUNAGA - subgroup of Golla, reported as Tamil caste name in 1881 census

GOLLA - MUPI - subgroup of Golla, reported as Telugu caste name in 1881 census

GOLLA - MUSALI - subgroup of Golla, reported as Telugu caste name in 1881 census

GOLLA - MUTHRALLA - subgroup of Golla, reported as Telugu caste name in 1881 census

GOLLA - NAGARATA - subgroup of Golla, reported as Telugu caste name in 1881 census

GOLLA - NAPU - subgroup of Golla, reported as Telugu caste name in 1881 census

GOLLA - NARA - subgroup of Golla, reported as Tamil caste name in 1881 census

GOLLA - NUVASU - subgroup of Golla, reported as Telugu caste name in 1881 census

GOLLA - PANTHIKA - subgroup of Golla, reported as Telugu caste name in 1881 census

GOLLA - PASA - subgroup of Golla, reported as Tamil caste name in 1881 census

GOLLA - PEDAMALI - subgroup of Golla, reported as Telugu caste name in 1881 census

GOLLA - PEDAPATI - subgroup of Golla, reported as Telugu caste name in 1881 census

GOLLA - PEDAVATU - subgroup of Golla, reported as Telugu caste name in 1881 census

GOLLA - PEDDARI - subgroup of Golla, reported as Telugu caste name in 1881 census

GOLLA - PEKIRA - subgroup of Golla, reported as Tamil caste name in 1881 census

GOLLA - PEKUNDI - subgroup of Golla, reported as Telugu caste name in 1881 census

GOLLA - PICHI - subgroup of Golla, reported as Tamil caste name in 1881 census

GOLLA - PO - subgroup of Golla, reported as Tamil caste name in 1881 census

GOLLA - POKALI - subgroup of Golla, reported as Tamil caste name in 1881 census

GOLLA - POLIKANDA - subgroup of Golla, reported as Tamil caste name in 1881 census

GOLLA - PUDILI - subgroup of Golla, reported as Telugu caste name in 1881 census

GOLLA - PUGATI - subgroup of Golla, reported as Telugu caste name in 1881 census

GOLLA - PULU - subgroup of Golla, reported as Telugu caste name in 1881 census

GOLLA - PUNATI - subgroup of Golla, reported as Telugu caste name in 1881 census

GOLLA - PUNUGU - subgroup of Golla, reported as Telugu caste name in 1881 census

GOLLA - PUSA - subgroup of Golla, reported as Telugu caste name in 1881 census

GOLLA - RATHNA - subgroup of Golla, reported as Telugu caste name in 1881 census

GOLLA - RENI - subgroup of Golla, reported as Telugu caste name in 1881 census

GOLLA - SABHOSU - subgroup of Golla, reported as Telugu caste name in 1881 census

GOLLA - SADDAMULU - subgroup of Golla, reported as Telugu caste name in 1881 census

GOLLA - SAMARU - subgroup of Golla, reported as Telugu caste name in 1881 census

GOLLA - SANNAVODI - subgroup of Golla, reported as Telugu caste name in 1881 census

GOLLA - SEMOM - subgroup of Golla, reported as Telugu caste name in 1881 census

GOLLA - THIRUMANDLA - subgroup of Golla, reported as Telugu caste name in 1881 census

GOLLA - THOKALA - subgroup of Golla, reported as Telugu caste name in 1881 census

GOLLA - THUKU ROYI - subgroup of Golla, reported as Telugu caste name in 1881 census

GOLLA - THUKUDI - subgroup of Golla, reported as Telugu caste name in 1881 census

GOLLA - THUMA - subgroup of Golla, reported as Telugu caste name in 1881 census

GOLLA - THUMARI - subgroup of Golla, reported as Telugu caste name in 1881 census

GOLLA - THUNDI - subgroup of Golla, reported as Telugu caste name in 1881 census

GOLLA - UGGIRA - subgroup of Golla, reported as Tamil caste name in 1881 census

GOLLA - URUGOLLA - subgroup of Golla, reported as Tamil caste name in 1881 census

GOLLA - VADAMA RAPI - subgroup of Golla, reported as Telugu caste name in 1881 census

GOLLA - VALANA - subgroup of Golla, reported as Telugu caste name in 1881 census

GOLLA - VALAYADA - subgroup of Golla, reported as Tamil caste name in 1881 census

GOLLA - VARIGI - subgroup of Golla, reported as Telugu caste name in 1881 census

GOLLA - VASI - subgroup of Golla, reported as Telugu caste name in 1881 census

GOLLA - VATTI - subgroup of Golla, reported as Telugu caste name in 1881 census

GOLLA - VELADI - subgroup of Golla, reported as Telugu caste name in 1881 census

GOLLA - VORA - subgroup of Golla, reported as Telugu caste name in 1881 census

GOLLA - VOTHA - subgroup of Golla, reported as Telugu caste name in 1881 census

GOLLA - VUDALA - subgroup of Golla, reported as Telugu caste name in 1881 census

GOLLA - YAKALA - subgroup of Golla, reported as Telugu caste name in 1881 census

GOLLA - YAMMASA - subgroup of Golla, reported as Telugu caste name in 1881 census

GOLLA - YEMALA - subgroup of Golla, reported as Telugu caste name in 1881 census

GOLLA - YENNU - subgroup of Golla, reported as Telugu caste name in 1881 census

GOLLA - YAKALA - subgroup of Golla, reported as Telugu caste name in 1881 census

GOLLALLU - VESAKA - subgroup of Golla, reported as Telugu caste name in 1881 census

GOLLAN - BANTHU - subgroup of Golla, reported as Tamil caste name in 1881 census

GOLLAN - KOKKORAL - subgroup of Golla, reported as Tamil caste name in 1881 census

GOLLAN - KOMA - subgroup of Golla, reported as Tamil caste name in 1881 census

GOLLAN - PUKKUDI - subgroup of Golla, reported as Tamil caste name in 1881 census

GOLLAR - PELLA - subgroup of Gollar, reported as Tamil caste name in 1881 census (Singh K S : 1996:388-93).

# ಗ್ರಂಥಋಣ

೧. ಅಜ್ಜಯ್ಯ, **ಹೈದ್ರಾಬಾದ್ ಅಲೆಮಾರಿಗಳ ಸಮಾಜೋ ಆರ್ಥಿಕ ಅಧ್ಯಯನ**, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨. ಚಿಕ್ಕಣ್ಣಯಣ್ಣೆಕಟ್ಟೆ, **ತುಮಕೂರು ಜಿಲ್ಲೆ ಜಾತ್ರೆಗಳು ಗ್ರಾಮ ಸಂಸ್ಕೃತಿ ಮಾಲೆ** ೭, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೩. ಗಂಗಾಧರ ದೈವಜ್ಞ, 'ಆದಿವಾಸಿಗಳ ವೈದ್ಯಪದ್ಧತಿ', **ಬುಡಕಟ್ಟು ಅಧ್ಯಯನ ಪತ್ರಿಕೆ** ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಗಂಗಾಧರ ದೈವಜ್ಞ, **ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫. ಗುರುಲಿಂಗಯ್ಯ ಎಂ. ನಾಗಪ್ಪ ವಿ., **ಕಾಡುಗೊಲ್ಲ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೫. ಗುರುಲಿಂಗಯ್ಯ ಎಂ., **ಕರ್ನಾಟಕದ ಗೊಲ್ಲ ಸಮುದಾಯ ಸಮಾಜೋ ಸಾಂಸ್ಕೃತಿಕ ಅಧ್ಯಯನ**, ಶಕ್ತಿ ಪ್ರಿಂಟರ್ಸ್ ಅ್ಯಂಡ್ ಪಬ್ಲಿಕೇಷನ್ಸ್, ೨೦೦೫

೬. ಹನುಮಂತಪ್ಪ ತಾರೀಹಳ್ಳಿ, **ಪ್ರಜಾಪ್ರಭುತ್ವ ಮತ್ತು ಶಿಕ್ಷಣ**, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೭. ಜಯಪ್ರಕಾಶ ಬಂಜಗೆರೆ, 'ಮುಖ್ಯವಾಹಿನಿಗೆ ಬರಬೇಕಾದ ಯಾದವರು', **ಯದುಚೇತನ**, ಶ್ರೀ ಕೃಷ್ಣ ಯಾದವ ಮಹಾ ಸಂಸ್ಥಾನ, ಚಿತ್ರದುರ್ಗ, ೨೦೦೮

೮. ಕೇಶವನ್ ಪ್ರಸಾದ್, ಮಲೆಮಾಹದೇಶ್ವರ, ಪ್ರಸ್ತಾವನೆ ಭಾಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೯. ಕೃಷ್ಣಮೂರ್ತಿ ಹನೂರು, 'ಕಾಡುಗೊಲ್ಲರು', **ಕರ್ನಾಟಕ ಬುಡಕಟ್ಟುಗಳು**, ಲಕ್ಕಪ್ಪಗೌಡ ಎಚ್.ಜೆ.(ಸಂ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೧೦. ಮೇತ್ರಿ ಕೆ.ಎಂ., **ಬುಡಕಟ್ಟು ಕುಲಕಸುಬುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೧. ಮೇತ್ರಿ ಕೆ.ಎಂ., ಕೃಷ್ಣಗೊಲ್ಲರ ಕಥನ ಕಾವ್ಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೨. ಪ್ರಭಾಕರ ಎ.ಎಸ್.(ಸಂ), 'ಅಭಿವೃದ್ಧಿಯ ಬಹುಮುಖತೆ', **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ**, ಹಿ.ಚಿ.ಬೋರಲಿಂಗಯ್ಯ(ಲೇ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಶಿವಣ್ಣ ಮೀರಾಸಾಬಿಹಳ್ಳಿ, **ಕಾಡುಗೊಲ್ಲ ಬುಡಕಟ್ಟು ವೀರರು**, ಸಿವಿಜಿ ಪ್ರಕಾಶನ, ಬೆಂಗಳೂರು, ೨೦೦೫

೧೪. ಶಂಕರನಾರಾಯಣ ತೀ.ನಂ., **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ಆಚರಣೆಗಳು**, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೧೫. ಶ್ರೀಧರ ಎ., ಪ್ರಶಾಂತ್ ಹೆಚ್.ಡಿ.(ಸಂ), 'ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ', **ಅಭಿವೃದ್ಧಿ ಅಧ್ಯಯನ**, ಚಂದ್ರಶೇಖರ್ ಟಿ.ಆರ್.(ಲೇ) ಸಂ.೫, ಸಂ.೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೬. ತಿಮ್ಮಯ್ಯ ಕೆ., **ಶಿರಾ ತಾಲ್ಲೂಕಿನ ಬಾಣಗೆರೆ ಕರಿಯಮ್ಮ**, ತಳಗವಾದಿ ಪ್ರಕಾಶನ, ಮೈಸೂರು, ೨೦೦೭

೧೭. ತಿಮ್ಮಯ್ಯ ಕೆ., **ನೂಪರಿ ದೇಜಗೌ ಸಾಹಿತ್ಯ ಮಾಲೆ ಕುಸುಮ** ೧೮, ತಳಗವಾದಿ ಪ್ರಕಾಶನ, ಮೈಸೂರು, ೨೦೦೪

೧೮. ಯರ್ರಪ್ಪ, **ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ**, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಲಕ್ಕಪ್ಪಗೌಡ ಜೆ.(ಪ್ರ.ಸಂ), **ಕರ್ನಾಟಕ ಬುಡಕಟ್ಟುಗಳು ಪ್ರಸ್ತಾವನೆ ಭಾಗ**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮


ಕಾಡುಗೊಲ್ಲರ ಪಶುಪಾಲನ ಮೂಲದೈವ ಎತ್ತಪ್ಪ, ದ್ವಾರನಕುಂಟೆ


ಕಾಡುಗೊಲ್ಲರ ಆರಾಧ್ಯದೈವ ಜುಂಜಪ್ಪ, ಕಳವೊರಹಳ್ಳಿ ಶಿರಾ ತಾಲ್ಲೂಕು


ಎತ್ತಪ್ಪನ ಪೆಟ್ಟಿಗೆ, (ಅಲೆಮಾರಿ ದೈವಗಳ ಗುರುತು) ದ್ವಾರನಕುಂಟೆ



ತೋಟದಲ್ಲಿಮಂದೆತಡೆದಿರುವ ಅಲೆಮಾರಿ ಕಾಡುಗೊಲ್ಲಕುರಿಗಾರರು



ಅಲೆಮಾರಿ ಪಯಣದಲ್ಲಿ ನಾಯಿಯೊಂದಿಗೆ ಕುರಿಮರಿ ಹೊಡೆಯುತ್ತಿರುವ ಯುವತಿ



ಮಂದೆಯನ್ನು ಸ್ಥಳಾಂತರಿಸುತ್ತಿರುವ ಕಾಡುಗೊಲ್ಲ ಕುರಿಗಾಹಿಗಳು



ಹೇರುಗಳೊಂದಿಗೆ ಅಲೆಮಾರಿ ಪಯಣಹೊರಟ ಕಾಡುಗೊಲ್ಲ ಕುರಿಗಾರರು



ಅಲೆಮಾರಿ ಪಯಣಹೊರಟಿರುವ ಕುರಿಮರಿಯೊಂದಿಗೆ ಯಜಮಾ



ಅಲೆಮಾರಿಕಾಡುಗೊಲ್ಲರು ಮಂದೆತಡ್ಡೆದಿರುವ ಸ್ಥಳದಲ್ಲಿರುವ ಸರಕುಸರಂಜಾಮುಗಳು



ಹಳ್ಳದದಿಂದ ಕುಡಿಯುವ ನೀರುತರುತ್ತಿರುವ ಕಾಡುಗೊಲ್ಲ ಕುರಿಗಾಹಿ



ಖಾರ ರುಬ್ಬುತ್ತಿರುವ(ನಾಗಮ್ಮ) ಅಲೆಮಾರಿ ಕಾಡುಗೊಲ್ಲಮಹಿಳೆ



[illegible] ಅಡುಗೆಮಾಡುತ್ತಿರುವ ಕಾಡುಗೊಲ್ಲ ಮಹಿಳೆ



ಕುರಿಮಂದೆಯಲ್ಲಿ ಅಡುಗೆ ಮಾಡುತ್ತಿರುವ ಕಾಡುಗೊಲ್ಲ ಮಹಿಳೆಯರು



ಊಟ ಮಾಡುತ್ತಿರುವ ಕಾಡುಗೊಲ್ಲ ಸಂಬಳದಾಳುಗಳು



ಕುರಿಮಂದೆಯಲ್ಲಿ ನಾಯಿಗಳಿಗೆ ಊಟ ಹಾಕುತ್ತಿರುವುದು



ಕೊಳಲನೂದುತ ಕುರಿಕಾಯುತ್ತಿರುವ ಕಾಡುಗೊಲ್ಲ, ಶಾಗದಾಡು



ರಾತ್ರಿ ಕುರಿಮಂದೆ ಕಾವಲ್ಲಿನಲ್ಲಿ ಅಜ್ಜಿಯೊಂದಿಗೆ ಮೊಮ್ಮಗ



ಬಂಡೆಯ ಮೇಲೆ ನಿಂತಿರುವ ಪ್ರಕೃತಿದತ್ತವಾದ ನೀರು



ಈದನಂತರ ಕುರಿಯು ಮರಿಯನ್ನು ಮೂಸುತ್ತಿರುವುದು



ತಬ್ಬಲಿ ಕುರಿಮರಿಗೆ ಮೇಕೆ ಹಾಲುಣಿಸುತ್ತಿರುವ ಕಾಡುಗೊಲ್ಲಕುರಿಗಾಹಿ



ಕುರಿ ಹೆಚ್ಚಿದಂತೆ ಗುರುತುಹಚ್ಚಲು ಕಿವಿಯನ್ನು ಕೊಯ್ಯುತ್ತಿರುವ ಕಾಡುಗೊಲ್ಲ



ಪಾರಂಪರಿಕ ಚಿಕಿತ್ಸೆ ನೀಡುತ್ತಿರುವ ಅಲೆಮಾರಿ ಕಾಡುಗೊಲ್ಲ ಕುರಿಗಾಹಿಗಳು



ಹೆರಿಗೆಸೂತಕ ಅಚೆರಣೆಯಲ್ಲಿ ಕಾಡುಗೊಲ್ಲ ಮಹಿಳೆ, ಬಂದುಕುಂಟೆ



ಕಾಡುಗೊಲ್ಲರ ಮುಟ್ಟಿನ ಅಚರಣೆಯಲ್ಲಿ ಬಾಲಕಿ ದುರ್ಗಜ್ಜನಹಟ್ಟಿ ಶಿರಾ ತಾಲ್ಲೂಕು



ತಮ್ಮನೆಲೆ ನವೀಕರಿಸಿಕೊಳ್ಳುತ್ತಿರುವ ಕಾಡುಗೊಲ್ಲ, ಮೇಣಿಗನಹಟ್ಟಿ ಶಿರಾ ತಾಲ್ಲೂಕು



ಕಾಡುಗೊಲ್ಲರಮನೆಯಲ್ಲಿನ ಸಂಪ್ರದಾಯಿಕ ಕರೆಬಾನು ಹಾಗು ಹಟ್ಟ



ಕಾಡುಗೊಲ್ಲರು ಬಳಸುವ ಬಚ್ಚಲು



ಕಾಡುಗೊಲ್ಲರ ನೆಲೆಗಳು, ಸಾಕ್ಷಿಹಳ್ಳಿ ಗೊಲ್ಲರಹಟ್ಟಿ ಶಿರಾತಾಲ್ಲೂಕು



ಬಗೆಹರಿಯದ ಕಾಡುಗೊಲ್ಲರಹಟ್ಟಿ ಗ್ರಾಮೀಣನೀರಿನಸಮಸ್ಯೆ, ಮೇಣಿಗನಹಟ್ಟಿ



ಅಲೆಮಾರಿವ್ಯಾಪಾರಿಯಿಂದ ಎಣ್ಣೆ ಕೊಂಡುಕೊಳ್ಳುತ್ತಿರುವ ಕಾಡುಗೊಲ್ಲಯುವಕ



ಎತ್ತಪ್ಪನ ಪೂಜಾರಿ ಕೂಗಣ್ಣ, ದ್ವಾರನಕುಂಟೆ



ಕಾಡುಗೊಲ್ಲದೇವಾಲಯದ ಗುಬ್ಬ, ಬಿಜ್ಜಿಹಳ್ಳಿಕಾಡುಗೊಲ್ಲರಹಟ್ಟಿ



ದೇವರಮುಡಿ ಬಿಟ್ಟಿರುವ ಕಾಡುಗೊಲ್ಲ ಶಾಲಾಬಾಲಕ, ಕುಂಟನಹಟ್ಟಿ



ಅಲೆಮಾರಿಕಾಡುಗೊಲ್ಲರ ಪಶುಪಾಲನಾ ರಕ್ಷಕ ಪುರ್ಲೆಹಳ್ಳಿಭೂತಪ್ಪ



ಕಾಡುಗೊಲ್ಲರ ನೆಲೆ, ಮದ್ದಕ್ಕನಹಳ್ಳಿ ಕಾಡುಗೊಲ್ಲರಹಟ್ಟಿ



ಇಳಿವಯಸ್ಸಿನಲ್ಲೂ ಎಮ್ಮೆಕಾಯುತ್ತಿರುವ ಕಾಡುಗೊಲ್ಲ ವಯೋವೃದ್ಧೆ,ಕಲಿಗಾನಹಳ್ಳಿ



ಶಿರಾ ತಾಲ್ಲೂಕು ಬರಗೂರು ಗ್ರಾಮದ ಕಾಡುಗೊಲ್ಲರ ಮೆರೆಯರ ಶ್ರೀ ಸಿದ್ದಯ್ಯ



ಭೂತಪ್ಪನಪೂಜೆಗೆ ಉರಿಮೆ ಬಡಿಯುತ್ತಿರುವ ವಾಲಗದವರು ಪುರ್ಲೆಹಳ್ಳಿ



ಜುಂಜಪ್ಪನ(ಬಡಮ್ಮೈಲ)ಬಸವ


ಕಾಡುಗೊಲ್ಲರ ಧಾನ್ಯ ಸಂಗ್ರಹ ವಾಡೇವು, ದುರ್ಗಜ್ಜನಹಟ್ಟಿ


ಕಲುಷಿತನೀರನ್ನೇ ಬಳಸುತ್ತಿರುವ ಅಲೆಮಾರಿಕಾಡುಗೊಲ್ಲ ಕುರಿಗಾಹಿ


ಬೆಳಗಿನ ಪಾನೀಯವನ್ನು ಸೇವಿಸುತ್ತಿರುವ ಅಲೆಮಾರಿ ಕಾಡುಗೊಲ್ಲ ಕುರಿಗಾಹಿ